ಶ್ರೀಮುಖಿ

ಮಲ್ಲಿಕಾ

ಶ್ರೀಮುಖಿ

ಅನಿತ್ಯಾಣಿ ಶರೀರಾಣಿ
ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ
ಕರ್ತವ್ಯೋ ಧರ್ಮ ಸಂಗ್ರಹಃ ॥

ಶ್ರೀಮುಖಿ ಕಥಾಸಂಕಲನ. ಲೇಖಕರು ಮತ್ತು ಪ್ರಕಾಶಕರು ಮಲ್ಲಿಕಾ.
ಒಂಬತ್ತು ಕಥಾಗುಚ್ಛವನ್ನು ಒಳಗೊಂಡಿದೆ.

ಪ್ರಕಟಣವರ್ಷ ೧೯೯೮

ಬೆಲೆ: ಅರವತ್ತು ರೂಪಾಯಿ

ಲೇಖಕರು ★ ಪ್ರಕಾಶಕರು
ಲಕ್ಷ್ಮೀ ಪ್ರಕಾಶನ, ಕಡಿದಾಳ್ ನಿಲಯ
೧೪ನೇ ಕ್ರಾಸ್, ಸದಾಶಿವ ನಗರ
ಬೆಂಗಳೂರು-೮೦

‘ಶ್ರೀಚಂಡಿಕಾಪಾದಾರ್ಪಣಮಸ್ತು’

ಶ್ರೀಮುಖಿ

ಮಲ್ಲಿಕಾ

ನಿವೇದನೆ

ನನಗೆ ಬರೆಯುವ ಕನಸು ಮೂಡಿದ್ದು ಹದಿಹರೆಯದಲ್ಲಿ ಆಗಿನ್ನೂ ಕಣ್ಣುಬಿಟ್ಟು ಹೊರ ಪ್ರಪಂಚದ ಕಡೆಗೆ ನೋಡಲಾಗದ ಕಾಲ. ನಾವು ನಮ್ಮ ಪರಿಸರ ಮಾತ್ರವೇ ದೃಷ್ಟಿ ಕಕ್ಷೆಯಲ್ಲಿ ಮಿಂಚಿ ಮಿನುಗುವ ದೃಶ್ಯ. ಅದರಿಂದ ಎಷ್ಟು ಪಾಠ ಕಲಿಯುವುದು ಸಾಧ್ಯವೋ ಅಷ್ಟೇ ಲಭ್ಯ. ಹಳ್ಳಿ ಹಳ್ಳಿಗಳಲ್ಲಿ ಶಾಲೆಗಳು ಆಗ ಇರಲೇ ಇಲ್ಲ. ಕಲಿತ ಹಿರಿಯ ಬುದ್ಧಿವಂತರೂ ಇರಲಿಲ್ಲ. ಅಂದಮೇಲೆ ಅಂಥ ಸಂದರ್ಭದಲ್ಲಿ ಸ್ವಂತಿಕೆಯೇ ಹೊರತು ಕಲಿಕೆಗೆ ಬೇರೆ ದಾರಿಯೇ ಇರಲಿಲ್ಲ. 'ಕಲಿಯಲೇ ಬೇಕು' ಎಂಬ ಹಠ ಸಾಧನೆ ಕಾರ್ಯಸಿದ್ಧಿಗೊಳಿಸಿತು. ನಾನು ಬರೀ ಕನ್ನಡ ಭಾಷೆಯನ್ನು ಮಾತ್ರ ಕಲಿಯಲಿಲ್ಲ. ಕನ್ನಡ ಸಾಹಿತ್ಯ ರಚನೆಯನ್ನೂ ಕಲಿತುಕೊಂಡೆ. ಸದಾ ಬರೆಯುವ ಗೀಳು ಸಾಹಿತ್ಯ ಶಿಖರದ ನೆತ್ತಿಯನ್ನು ಸರಾಗವಾಗಿ ಮುಟ್ಟಿಸಿತು. ನನ್ನ ಪರಿಶ್ರಮ ಸಾರ್ಥಕವಾಯಿತು.

ಇದನ್ನು ಏಕೆ ಬರೆಯುತ್ತಿದ್ದೇನೆಂದರೆ, ನನ್ನಂತಹ ಅಭಾಗಿನಿಯರು ನನ್ನಂತೆಯೇ ಇನ್ನೊಬ್ಬರ ನೆರವನ್ನು ಪಡೆಯಲು ಸಾಧ್ಯವಾಗದಿದ್ದಲ್ಲಿ ಸ್ವಸಾಧನೆಯ ಛಲದಿಂದ ಎಂತಹ ಮಹತ್ಕಾರ್ಯವನ್ನಾದರೂ ಸಾಧಿಸಬಹುದು ಎಂಬ ಆಸ್ವಾಸನೆಯನ್ನು ನೀಡಲಿಕ್ಕಾಗಿ.

ಆದ್ದರಿಂದ ಕಾಲಾನುಕಾಲಕ್ಕೂ ಸಾಧನೆ ಎಂಬುದು ಸರ್ವಸಿದ್ಧ!

ಎಲ್ಲರೂ ಹೀಗೆಯೇ ಎಚ್ಚತ್ತುಕೊಳ್ಳುವುದರಲ್ಲಿ ವಿಶೇಷಾರ್ಥವಿದೆ. ಸಾಧನೆಯ ಸಾಧ್ಯತೆಯಿದೆ. ಹಿಂದೆ ಹಿರಿಯರ ಒತ್ತಾಸೆಯಿರಲಿಲ್ಲ. ಮುಂದೆ ಗುರುಗಳ ಭರವಸೆ ಇರಲೇ ಇಲ್ಲ. ಸುಮ್ಮನೆ ಸ್ವಭಾವ ಜನ್ಯವಾದ ಹುರುಪು ಉತ್ಸಾಹಗಳ ಚೋದನೆಯೊಂದಿಗೇ ಸಾಹಿತ್ಯ ಸಂವೃದ್ಧಿಗೆ ಕಾರಣವಾಯ್ತು. ನಾನು ಸ್ವಂತಿಕೆಯಿಂದಲೇ ಸಾಹಿತ್ಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದವಳು. ಒಂದರ ಹಿಂದೆ ಒಂದು ಮತ್ತೊಂದು ಕೃತಿರತ್ನಗಳು ಮೂಡುತ್ತಿರುವಾಗ ಲೇಖನಿ ಸೋಲುವುದುಂಟೇ? ಲೇಖನಿ ಹರಿದೇ ಹರಿಯಿತು ಕಂಗಳಿಗೆ ನಿದ್ದೆ ಕವಿದು ಬರುವನಕ. ನಿದ್ದೆ ಕಳೆದ ಮೇಲೆ ಬೆಳಗಾಗುವುದು ಉಂಟಷ್ಟೆ?

ಬೆಂಗಳೂರು

ಮಲ್ಲಿಕಾ

ಬಹುಧಾನ್ಯ ಸಂವತ್ಸರ
ಕಾರ್ತಿಕ ಅಷ್ಟಮಿ ಶುಕ್ರವಾರ

ಪರಿವಿಡಿ

ಶ್ರೀಮುಖಿ

....ಬ್ರಾಹ್ಮೀ ಮುಹೂರ್ತ....ಅತ್ಯಂತ ಶೀತಲ ವಾತಾವರಣ.

....ನೀಲಾಂಬೋಧಿಯಲ್ಲಿ ತೊಯ್ದ ಮೈ ತೀವ್ರ ತಂಗಾಳಿಯ ಹೊಡೆತಕ್ಕೆ ಚಿಲ್ಲನೆ ನಡುಗಿತು.

ಆ ಅನುಭವ ಮನಸ್ಸಿಗೆ ಸ್ವಲ್ಪ ತಿಳಿವು ಮೂಡಿಸಲು ಸಹಾಯ ಮಾಡಿತೋ......ಏನೋ. ಎಚ್ಚರ ತಪ್ಪಿದ್ದ ಮೈ ನಸು ಚೇತನಗೊಂಡಂತೆ ಲಘುವಾಗಿ ಅಲುಗಿತು; ಊಹಿಸಲು ಆಗದಂತಹ ಅರ್ಧಂಬರ್ಧ ತಿಳಿವು, ಅತೀವ ಮಸುಕು ಮಸುಕು; ಯೋಚಿಸಿದರೂ ಅರ್ಥವಾಗದ-ಪ್ರಯತ್ನಿಸಿದರೂ ತಿಳಿಯಲಾಗದ ಭಯಂಕರ ಪರಿಸ್ಥಿತಿ. ದೇಹದಾದ್ಯಂತ ಭಾರ-ಮಣಭಾರ! ಏನೆಂಬುದೇ ಅರ್ಥವಾಗುತ್ತಿಲ್ಲ. ಒಣಗಿದ ಕಾಷ್ಠದಂತೆ ಬಿಮ್ಮನೆ ಬಿಗಿದುಕೊಂಡ ಕೈಕಾಲು. ಅರ್ಥಾತ್ ಯಾಂತ್ರೀಕೃತ ಉಸಿರಿನ ಚಲನೆ. ಅಪೂರ್ವವೂ ಅಸಹನೀಯವೂ ಆದ ಸಂಕಷ್ಟದ ಅನುಭವ. ಹಿಂಸೆ-ತಾಳಲಾಗದ ಹಿಂಸೆ. ಹೊಟ್ಟೆಯ ತುಂಬ ನೀರು ತುಂಬಿ ಈಗಲೀಗ ಸಿಡಿದೊಡೆಯುವಷ್ಟು ಉಬ್ಬರ. ಯಾವ ಅಪದೇವತೆಯ ಅಧಿಕಾರ ಹಸ್ತವೋ ನನಗೀ ದುರ್ಗತಿ ತಂದಿದೆ ಎಂಬುವಷ್ಟು ತಿಳಿವು ಅಲ್ಪಸ್ವಲ್ಪ ಮೂಡಿತೇನೋ......ಆದರೆ ತಾನೆಲ್ಲಿರುವೆ? ಎಲ್ಲಿಂದ ಬಂದಿರುವೆ ಎಂಬ ಅರಿವಂತೂ ಮೂಡಿರಲಿಲ್ಲ. ಸಾವು-ಬದುಕುಗಳೊಡನೆ ಅವ್ಯಾಹತವಾಗಿ ಹೋರಾಡುತಿತ್ತು ಜೀವ.

ದುರದೃಷ್ಟದ ಕತೆ ಏನೇ ಇರಲಿ. ಅದೃಷ್ಟದ ದಯೆಯೂ ಉಂಟಷ್ಟೆ?

ದೇಹ ಇದ್ದಕ್ಕಿದ್ದಂತೆಯೇ ಯಾರೋ ತಳ್ಳಿದಂತೆ ಹೊರಳಿತು. ಬಹುಶಃ ಭಗವಂತ ಬಿರುಗಾಳಿಯ ರೂಪದಲ್ಲಿ ದಯೆದೋರಿದನೋ ಏನೋ....ಮಗ್ಗುಲಾದಾಗ ಹೊಟ್ಟೆಯಲ್ಲಿ ತುಂಬಿಕೊಂಡಿದ್ದ ನೀರು ಒಂದೇ ಬಾರಿಗೆ ಕಟ್ಟೆಯೊಡೆದ ಕೆರೆಯಂತೆ ಹೊರನುಗ್ಗಿ ಬಂತು. ಜಠರರಸ ಮಿಶ್ರಿತ ನೀರು ಕಂಠಪೂರ್ತಿ ಹೊರಬಿದ್ದ ಮೇಲೆ ಶರೀರಕ್ಕೆ ಎಷ್ಟೋ ಸೌಖ್ಯವುಂಟಾಯಿತು. ಅನಂತರ ಸ್ವಲ್ಪ ಸ್ವಲ್ಪವಾಗಿ ಮನಸ್ಸು ತಿಳಿಯಾಗತೊಡಗಿತು. ಸೈಕತಶಯ್ಯೆಯಲ್ಲಿ ವಮನ ರಾಶಿಯೆಲ್ಲಾ

ಹಿಂಗಿಹೋದುದರಿಂದ ಮೈಗೆ ಅಸಹ್ಯ ಅಂಟಲಿಲ್ಲ. ಕಟವಾಯಿಯಲ್ಲಿ ಜೊಲ್ಲು ಇನ್ನೂ ಸುರಿಯುತ್ತಿದ್ದುದು ಗಮನಕ್ಕೆ ಬಂದಿತು. ಬಾಯಿ ಒರಿಸಿಕೊಳ್ಳೋಣವೆಂಬ ಯೋಚನೆ. ಆದರೆ ಕೈ ಅಲುಗಿಸಲಾದರಷ್ಟೆ? ಎಷ್ಟೆಷ್ಟೋ ಪ್ರಯತ್ನಿಸಿದ. ಬಹಳ ಹೊತ್ತು ಹೆಣಗಿದ ಮೇಲೆ ಬಿದ್ದಲ್ಲಿಂದ ಸ್ವಲ್ಪ ಸರಿಯುವುದು ಮಾತ್ರ ಸಾಧ್ಯವಾಯಿತು.

ಕ್ಷಣಕ್ಷಣಗಳು ಉರುಳಿದಂತೆ-ಘಳಿಗೆಘಳಿಗೆಗಳು ಕಳೆದಂತೆ ಮನಃ ಸಂಪುಟ ಇನ್ನಿಷ್ಟು ತಿಳಿಯಾಯಿತು. ಮುಚ್ಚಿದ ಕಣ್ಣುಗಳು ಮೆಲ್ಲನೆ ತೆರೆದುವು. ಒಡನೆ ಕತ್ತಲೆಯ ಕಾಳಗಪ್ಪು ಕಣ್ಣುಗಳಿಗೆ ತಿವಿದಂತಾಗಿ ಮತ್ತೆ ಮುಚ್ಚಿದ. ಪ್ರಯತ್ನಿಸಿದರೂ ಪುನಃ ತೆರೆಯಲಾಗಲಿಲ್ಲ. ಅಥವಾ ಸ್ವಾಭಾವಿಕ ಚಲನೆ ಮೂಡಲಿಲ್ಲವೇನೋ....

ಆಯಾಸ....ನೋವು....ಹಿಂಸೆ....

ಪ್ರಾಣಾಂತಕ ಸಂಕಟ....

ತಾಳಲಾರ-ಅನುಭವಿಸಲಾರ. ಎಷ್ಟೇ ಪ್ರಯತ್ನಿಸಿದರೂ ಧೈರ್ಯ ಮೂಡದು. 'ತಾನಿನ್ನು ಬದುಕಲಾರೆ' ಎಂಬ ನಿರಾಶಾಭಾವನೆ ಮನವನ್ನು ಮತ್ತೆ ಮತ್ತೆ ಮುತ್ತುತ್ತಿತ್ತು. ಹಾಗೆ ಅದೆಷ್ಟು ಹೊತ್ತು ಉರುಳಿತೋ ಅವನು ಅರಿಯ. ಒಮ್ಮೆ ಕಣ್ತೆರೆದಾಗ ಗಗನಾಂಗಣದಲ್ಲಿ ಮಿನುಮಿನುಗುವ ತಾರಾಗಣ ಸ್ಪಷ್ಟವಾಗಿ ಕಣ್ಣಿಗೆ ಬಿದ್ದುವು. ಆ ದೃಶ್ಯಮಾನ ಸೌಂದರ್ಯ ಸೂಜಿಗಲ್ಲಿನಂತೆ ಮನವನ್ನು ಸೆರೆಹಿಡಿದು ಪ್ರಥಮ ದರ್ಶನದಲ್ಲೇ ವಿನೂತನ ಆಶಾಕಿರಣವನ್ನು ಮೂಡಿಸಿತು. ನಿಶ್ಚಲ ದೃಷ್ಟಿಯನ್ನು ಆ ತೇಜೋರಾಶಿಯಿಂದ ಹಿಂತೆಗೆಯದೆ ಯೋಚಿಸಿದ. ಮನಸ್ಸು ತಿಳಿಯಾಗಿತ್ತು. ಒಮ್ಮೆ ಆಲೋಚನಾ ತರಂಗಗಳು ನಿಚ್ಚಳವಾಗಿ ಹರಿದಾಡಿದುವು. ಕತ್ತಲು ದಟ್ಟವಾಗಿದ್ದರೂ, ಶರೀರ ನಿಶ್ಚೇತನವಾಗಿದ್ದರೂ ಮಂಗಳದೆಡೆಗೊಯ್ಯಲು ಸಂಕಲ್ಪ ಮಾಡಿರುವ ಯಾವುದೋ ಒಂದು ಶಾಶ್ವತ ಸತ್ತೆಯಂತೆ ತೋರಿತು, ಆ ತಾರಾನಿಕಾಯ.

ಕರ್ಣಪಟಲಗಳಿಗೆ ಏನೋ ಒಂದು ರೀತಿಯ, ಅವ್ಯಾಹತವಾಗಿ ಮುತ್ತುವ, ಯೋಚಿಸಿದರೂ ಅರ್ಥವಾಗದ ಜಳಜಳಜಳ ಗಳಗಳಗಳ ಸದ್ದು. ಇಂದ್ರಿಯ ವ್ಯಾಪಾರ ಇನ್ನೂ ಸಂಪೂರ್ಣ ಚೇತನಗೊಳ್ಳದಿರುವುದರಿಂದ ಅದೇನೆಂಬುದು ಅರ್ಥವಾಗುತ್ತಿಲ್ಲ. ಶರೀರದಲ್ಲಿ ಅಗಾಧವಾದ ಬಳಲಿಕೆ ಇದ್ದುದರಿಂದ ಹೊರ ಜಗತ್ತಿನ ಯಾವುದೇ ಸಂಸ್ರವವೂ ಬೇಡವಾಗಿತ್ತು. ಹಾಗೇ ಕೊರಡಿನಂತೆ ಬಿದ್ದುಕೊಂಡ.

ಸ್ವಲ್ಪ ಹೊತ್ತು ನಿರಾತಂಕವಾಗಿ ಉರುಳಿತು.

ಶರೀರ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯಾಗದಿದ್ದರೂ ಮಾನಸಿಕ ಸ್ಥಿತಿ ತಿಳಿಯಾಗಿ ಗತಕಾಲಕ್ಕೆ ಸರಿದು, ಹಡಗಿನ ಪಯಣ ಸ್ಮರಣೆಯ ಹಾ[illegible]ಗಿ ಹೋಯಿತು; ಒಮ್ಮೆ ಸ್ಪಷ್ಟವಾಗಿ-ಇನ್ನೊಮ್ಮೆ ಅಸ್ಪಷ್ಟವಾಗಿ.

ಅನಂತರ....ಅನಂತರ....ಪಯಣದ ತುತ್ತ ತುದಿಯಲ್ಲಿ....ಸಂಭವಿಸಿದ....ಆ ದುರಂತ....!

ಅಯ್ಯೋ ದೇವರೇ!

ಸುಖ ಪಯಣದ ಹಾದಿಯಲ್ಲಿ ದುರ್ವಿಧಿ ಹೊಂಚು ಹಾಕುತ್ತಿದ್ದಾನೆಂದು ಯಾರು ಭಾವಿಸಿದ್ದರು? ಹಾ! ನನಗೊಮ್ಮೆ ಶಂಕೆ-ಕಳವಳ ಆವರಿಸಿತ್ತು. ಆದರೆ ಅದು ಆ ದುರ್ಮುಹೂರ್ತದಲ್ಲೇ, ಅಷ್ಟರೊಳಗಾಗಿ ವಿಧಿ ಖಡ್ಗ ಬೀಸಿತು. ಹಡಗು ಏನಾಯಿತೋ-ಜನ ಏನಾದರೋ. ದೇವರು ಏಕಾಗಿ ನಮ್ಮಮೇಲೆ ಇಷ್ಟೊಂದು ನಿರ್ದಯನಾದನೋ? ನಾವು ಮಾಡಿದ ತಪ್ಪಾದರೂ ಏನೋ?

ಹಾಯ್!....ಹಾಯ್!

ಬಿರುಗಾಳಿ ರೊಯ್ಯನೆ ಬೀಸಿತು.

ಅಹಹಹಹಹ್ಹ! ಅಹಹಹಹಹ್ಹಾ!

ಅಯ್, ಅಯ್ಯಯ್! ತಾಳಲಾರೆ....ಎಂತಹ ಕೊರೆತ?

ನರನರಗಳೂ ಕಿತ್ತು ಬರುವಂತೆ ಮೈ ಬಿಗಿಯುತ್ತಿರುವಾಗಲೇ ಸಮುದ್ರದ ಬೃಹದ್ ಅಲೆಯೊಂದು ಅನಿರೀಕ್ಷಿತವಾಗಿ ಮೈಮೇಲೆ ನುಗ್ಗಿತು. ಮುಖ ಮೈಗಳಿಗೆ ಮರಳೂ, ಕಪ್ಪೆಚಿಪ್ಪುಗಳೂ, ಸಣ್ಣ ಸಣ್ಣ ಶಂಖಗಳೂ ಬಿರುಸಾಗಿ ಕಲ್ಲುಬೀಸಿ ಒಗೆದಂತೆ ತಾಗಿದುವು. ಜಲರಾಶಿ ಮೈಯನ್ನು ಮುದ್ದಿಟ್ಟು ಇಳಿದು ಹೋದಮೇಲೆ ಸಮುದ್ರ ತೀರದಲ್ಲಿ ತಾನು ಬಿದ್ದಿರುವುದರ ಅರಿವುಂಟಾಯಿತು. ಸ್ವಲ್ಪಸ್ವಲ್ಪವಾಗಿ ಆರುತ್ತಿದ್ದ ಮೈ ಪುನಃ ಒದ್ದೆಯಾಗಿ ನೀರಿಳಿಯಲಾರಂಭಿಸಿತು, ಅತ್ತಿತ್ತ ಪ್ರಯತ್ನಪೂರ್ವಕವಾಗಿ ಹೊರಳಿ ಕೈಕಾಲು ಆಡಿಸಲು ಪ್ರಯತ್ನಿಸಿದ; ಆದರೆ ಸಾಧ್ಯವಾಗಲಿಲ್ಲ. ಅಲ್ಲಿಂದ ತೆವಳಿಕೊಂಡಾದರೂ ಮುಂದೆ ಸರಿದರೆ ಇನ್ನೊಮ್ಮೆ ಅಲೆಯ ಹೊಡೆತಕ್ಕೆ ಸಿಕ್ಕುವುದು ತಪ್ಪುತಿತ್ತು ಎಂಬ ಭಾವನೆ. ಆದರೆ ಆ ಕಗ್ಗತ್ತಲೆಯಲ್ಲಿ ದಿಕ್ಕು ದೆಶೆಗಳ ಅರಿವಿಲ್ಲದೆ ತೆವಳುವುದಾದರೂ ಯಾವ ಕಡೆಗೆ? ಒಂದು ವೇಳೆ ತೆವಳುವ ದಿಕ್ಕು ಸಮುದ್ರದೆಡೆಗೆ ಸಾಗಿದರೆ....? ಆ ಯೋಚನೆ ಬಂದಾಗ ಮೈ ಚಿಲ್ಲನೆ ನಡುಗಿತು. ಸಾಗರದಲ್ಲಿ ಈಸುತ್ತ ಹಲಗೆಯ ತುಂಡಿನ ಸಹಾಯದಿಂದ ಮೂರು-ನಾಲ್ಕು ದಿನ ತೇಲಿದುದರ ಪರಿಣಾಮವಾಗಿ ಮೈಗೆ ತಂಡಿಯೇರಿ ಕೈಕಾಲು ಮರಗಟ್ಟಿವೆ. ಬೆಳಗಾಗಿ ಬಿಸಿಲೇರಿದರೆ ಶರೀರ ಸರಿ ಹೋದೀತು ಎಂಬ ಆಲೋಚನೆ ಮನವನ್ನು ಮುತ್ತಿದಾಗ ಹೃದಯ ಹಗುರವಾಯಿತು.

ಆದರೇನು....? ಒದ್ದೆಯಾದ ಮೈ. ಅವ್ಯಾಹತವಾದ ಕುಳಿರ್ಗಾಳಿ. ಕಣ್ತಿವಿಯುವ ಕಗ್ಗತ್ತಲು....

ಏನೋ ಒಂದು ರೀತಿಯ ಭಯ. ಕಣ್ಣು ಬಿಡಲೂ ಭಯ; ಮುಚ್ಚಲೂ ಭಯ. ಜ್ಞಾನವು ತಿಳಿಯಾದ ಆ ನಿಮಿಷಕ್ಕಿಂತ ಪ್ರಜ್ಞೆತಪ್ಪಿ ಕೊರಡಿನಂತೆ ಬಿದ್ದಿದ್ದ ಘಳಿಗೆಯೇ ಹಿತವಾಗಿತ್ತು....ಬೆಳಗಾಗುವ ಮುಂಚೆ ಪ್ರಜ್ಞೆ ಏಕಾದರೂ ಬಂತೋ....ವಿಧಿಯೊಡನೆ ಸೆಣಸಿ ಇಲ್ಲಿಯವರೆಗೆ ಕಾಪಾಡಿದ ಭಗವಂತನ ಇಚ್ಛೆಯಲ್ಲಿ ಒಂದು ಮಹತ್ವ ಅಡಗಿರಲೇಬೇಕು. ಅದನ್ನು ಪೂರೈಸುವಂತೆ ಮಾಡು ದೇವ!

ಆಸೆ-ನಿರಾಸೆಗಳಲ್ಲಿ ಹೊಯ್ದಾಡುತ್ತ ಬೇಡುತಿತ್ತು ಜೀವ.

ತಲೆ ಮುಖ ಮೈಗಳಲ್ಲಿ ಮುತ್ತಿದ ಸಾಗರ ಮೃತ್ತಿಕೆ ಕಸಕಡ್ಡಿಗಳನ್ನು ನಿವಾರಿಸುವ ಇಚ್ಛೆ. ಆದರೆ ಕೈಗಳು ಅಷ್ಟಕ್ಕೂ ಸಹಾಯಕವಾಗಿರಲಿಲ್ಲ. ಮನವನ್ನು ಮುತ್ತಿದ್ದ ಭಯ ಭೀತಿಯೂ ಸರಿಯದು. ಇದ್ದಕ್ಕಿದ್ದಂತೆಯೇ ಸುತ್ತ ಮುತ್ತ ಒಂದಾಗಿ ಹತ್ತಾಗಿ ಹಲವಾರು ಮಾನವ ಛಾಯೆ ಸುಳಿದಾಡಿದಂತೆ ಭಾಸವಾಯಿತು. ಭೂತ-ಪ್ರೇತಗಳ ವಿಚಾರ ಅದೇ ಸಮಯದಲ್ಲಿ ಮನವನ್ನು ಭೋಂಕನೆ ಆಕ್ರಮಿಸಿ ಮೈ ಗಡಗಡ ನಡುಗಿತು.

ನಿಟಿ ನಿಟಿ ನಿಟಿ ಕಟ ಕಟ ಕಟ....!

ಸಣ್ಣ ಸದ್ದು!

ಅತಿ ಸನಿಹದಲ್ಲಿ ಅನೇಕ ಅಸ್ತಿಪಂಜರಗಳ ಉತ್ತಾಲ ನರ್ತನ. ಕಾತರ ಕಂಠಗಳ ಚೀತ್ಕಾರ! ಯಾರೋ ಮೈ ಮೇಲೆ ಹತ್ತಿ ಕುಳಿತು ಕತ್ತನ್ನು ಬಿಗಿಯಾಗಿ ಅದುಮಿ ಹಿಡಿಯುತ್ತಿದ್ದಾರೆ! ಅಲ್ಲ....ಬಾಯಿಯನ್ನು ಅದುಮಿ ಹಿಡಿದಿದ್ದಾರೆ. ಅಲ್ಲ....ಎದೆಯ ಮೇಲೆ ಕಲ್ಲು ಹಾಕಿ ಒತ್ತುತ್ತಿದ್ದಾರೆ....! ಅಲ್ಲ....ಅಲ್ಲವೇ ಅಲ್ಲ! ಕೈಕಾಲುಗಳನ್ನು ಹೆಡೆಮುರಿ ಕಟ್ಟುತ್ತಿದ್ದಾರೆ....! ಅಲ್ಲ....ಇಡೀ ದೇಹವನ್ನೇ ಕಟ್ಟುತ್ತಿದ್ದಾರೆ....! ಅಲುಗದಂತೆ ಕಟ್ಟಿಯೇ ಬಿಟ್ಟರು! ಅಯ್ಯೋ! ನನಗೆ ಹೆಂಡತಿ ಮಕ್ಕಳಿದ್ದಾರೆ! ದಯಮಾಡಿ....

ಆದರೆ, ಕೂಗುತ್ತೇನೆಂದರೂ ಉಸಿರು ಹೊರಡಲಿಲ್ಲ. ನರನರಗಳೂ ಬಿಗಿದುಕೊಳ್ಳುತ್ತಿರುವಂತೆ-ನೆತ್ತರಿನ ಕಣಕಣವೂ ಅಲ್ಲಲ್ಲೆ ಹೆಪ್ಪುಗಟ್ಟುತ್ತಿರುವಂತೆ ಉದ್ಭಾಸವಾಯಿತು. ಇನ್ನು ಒಂದು ಕ್ಷಣವಾದರೂ ಬದುಕುವ ಆಸೆ ಉಳಿಯಲಿಲ್ಲ. ಸಾವು ಸೆಳೆಯುವವರೆಗೆ ಈ ಪ್ರಜ್ಞೆಯಾದರೂ ಹೋದರೆ ಸಾಕು ಎನಿಸಿದಾಗಲೇ ಬೃಹದ್ ಅಲೆಯೊಂದು ಮೈಮೇಲೆ ನುಗ್ಗಿ ಶರೀರ ಮುಂದೆ ಮುಂದೆ ತಳ್ಳಲ್ಪಟ್ಟು ಎಲ್ಲೋ ಗಗನಾಂಗಣದಲ್ಲಿ ತೇಲುತ್ತಿರುವಂತೆ ಭಾಸವಾಯಿತು. ಮರು ಘಳಿಗೆಯಲ್ಲಿ ಅಗಾಧವಾದ ಸಂಕಟ-ಸಂಕಷ್ಟಗಳಿಂದ ಒಡಲು ಪರಿತಪಿಸಿತು.

ಹಾ....!

ಹಡಗಿನ ಕ್ಯಾಪ್ಟನ್ ರುದ್ರ ಭಯಂಕರನಾಗಿ ಮುಂದೆ ನಿಂತಿದ್ದಾನೆ....! ಅಬ್ಬಾ, ಅವಿವೇಕಿ! ನಾನಾಗಲೇ ಅವನಿಗೆ ಸೂಚನೆ ಕೊಟ್ಟಿದ್ದೆ. ಏನಾದರೂ ಯಾಂತ್ರಿಕ ದೋಷವಿದೆಯೇ ಎಂದು ಕೇಳಿದ್ದೆ. ಆಗ ಅವನು ಅಂದದ್ದೇನು? ನನ್ನ ಮಾತನ್ನು ಸ್ವಲ್ಪವಾದರೂ ಲಕ್ಷಿಸಿದನೇ?

ನಾನು ಹೇಳಿದರೂ ಅವನು ನಂಬಲಿಲ್ಲವಲ್ಲಾ? ಧೂರ್ತ ಧೈರ್ಯದಿಂದ ತಿರಸ್ಕಾರದ ನಗೆ ನಕ್ಕ....ಹಹಹಹಹಹಹ್ಹಾ! ಅದು ಅವನಲ್ಲ, ಖಂಡಿತ....ಅಲ್ಲವೇ ಅಲ್ಲ....ವಿಧಿ!....ವಿಧಿ!....ಆ ದುರ್ವಿಧಿ!

ಹತ್ತು ನಿಮಿಷ ಉರುಳಿರಲಿಕ್ಕಿಲ್ಲ. ಮತ್ತೊಂದು ಬೃಹದ್ ಅಲೆ ಮೈ ಮೇಲೆ ನುಗ್ಗಿತು. ಪುನಃ ಅದೇ ಅನುಭವ. ಶರೀರ ಸಂಪುಟ ಲೀಲಾಜಾಲವಾಗಿ ಮುಂದೆ ಮುಂದೆ ತಳ್ಳಲ್ಪಟ್ಟಿತು. ಅಲೆ ಇಳಿದು ಹೋಗುವಾಗ ತಾನೂ ಅದರೊಂದಿಗೆ ಪುನಃ ಸಮುದ್ರಕ್ಕೇನೇ ಬೀಳಬಹುದೆಂಬ ಭಯವೂ ಮೂಡಿತು. ಆದರೆ ದೈವವಶಾತ್ ಹಾಗಾಗಲಿಲ್ಲ. ಮುಖ ಮೈಗಳನ್ನು ಮುತ್ತಿದ ಸಾಗರ ಮೃತ್ತಿಕಾವಿಶೇಷ ವಿಕಟ-ವಿಪ್ಲವ ವೇಶದಲ್ಲಿ ಮೈಯನ್ನು ನೆಲಕ್ಕೆ ಔಂಕಿತು. ವ್ಯಕ್ತಿಯ ನಯನಾಂಬುಧಿಯಲ್ಲಿ ಲವಣಾಶ್ರು ತುಂಬಿ ಬಂದಿತ್ತು. ಗಳಗಳನೆ ಅತ್ತ.

ಬೃಹದ್ ಮೇಘಮಾಲೆಯ ತೆರೆಯಲ್ಲಿ ಅಡಗಿದ್ದ ಕೃಷ್ಣಪಕ್ಷದ ರೇಖಾ ಚಂದ್ರಮ ಬಿಡುಗಡೆ ಹೊಂದಿದ. ನಿತ್ಯವಾದರೂ ಅಪೂರ್ವವೆನಿಸುವಂತೆ ಶಾಂತ ಮುಗ್ಧ ರಜತರೇಖಾ ಪ್ರಭೆ ಗಗನಾಂಗಣದಲ್ಲಿ ಅನಿರೀಕ್ಷಿತವಾಗಿ ಪ್ರಧಾನವಾದಾಗ ಏನೋ ಒಂದು ರೀತಿಯ ಸಮಾಧಾನ ಮೂಡಿತು. ಕದ್ದಿಂಗಳ ಮೃದು ಮಂದಹಾಸ 'ನಿರ್ಭಯವಾಗಿರೆಂದು' ಕೂಗಿ ಹೇಳುವಂತೆ ಆತ್ಮವಿಶ್ವಾಸ ಮೂಡಿಸಿತು. ಒಂದೆರಡು ಕ್ಷಣ ನಿಟ್ಟಿಸಿ ನೋಡಿ ಕಣ್ಮುಚ್ಚಿದಾಗ ಕಣ್ಣಂಚಿನಲ್ಲಿ ತುಂಬಿದ್ದ ಅಶ್ರುಧಾರೆ ಧಾರಾಕಾರವಾಗಿ ಎರಡೂ ಕಡೆ ಇಳಿಯಿತು.

ಎಲ್ಲೋ ಸನಿಹದಲ್ಲಿ ವಿಚಿತ್ರತರವಾದ ಕೂಗು! ನರಿಗಳ ಹುಯಿಲೋ ಭೂತ ಪ್ರೇತಗಳ ಕೇಕೆಯೋ ಯಾರಿಗೆ ಗೊತ್ತು? ಒಮ್ಮೆಲೇ ದೇಹದಾದ್ಯಂತ ಗಡಗಡ ನಡುಗಿತು. ದೇವರೇ! ಈ ಗಂಡಾಂತರದಿಂದ ಹೇಗಾದರೂ ಪಾರು ಮಾಡು! ಎಂದು ಆತ್ಮಪೂರ್ವಕವಾಗಿ ಪ್ರಾರ್ಥಿಸಿಕೊಂಡ. ಸ್ವಲ್ಪ ಹೊತ್ತಿನಲ್ಲಿ ಇದ್ದಕ್ಕಿದ್ದಂತೆಯೇ ನೀಲ ಗಗನ ಮಂಚದಲ್ಲಿ ಧೂಮಕೇತುವಿನ ಅಭ್ಯುದಯವಾಯಿತು! ಆ ಅಪೂರ್ವವಾದ ಗಗನ ಶೋಭೀ ದೀರ್ಘದೀರ್ಘ ಕಿರಣಗಳು ಸ್ವರ್ಣ ಮನೋಹರ ಶೋಭೆಯಿಂದ ವಿಜೃಂಭಿಸಿದುವು. ಆ ಓರಣವಾದ, ಅಲಂಕಾರ ಪೂರ್ಣವಾದ ಮಹಾ

ಮಹಿಮಾಮಯ ಅಖಿಲ ತಾರಾಗಣ. ಕಾಲ್ದೆಸೆಯಲ್ಲಿ ಭೋರ್ಗರೆವ ಬೃಹದ್ ಸಾಗರ....ಆ ಸಾಗರಾನಿಲ....ಆ ಉತ್ಕೀರ್ಣ ಪ್ರಾಕೃತಿಕ ವಶೀಕರಣ ಧರ್ಮ....ಒಂದೊಂದೂ ಆಶ್ಚರ್ಯ ಜನಕವೇ....ಅದ್ಭುತ ವಿಶೇಷವೇ.

ಆದರೆ....ತಾನು?

ಛೇ! ಛೇ! ಎಂತಹ ಅಲ್ಪ ವಸ್ತು? ಜೀವಕ್ಕಾಗಿ ಬದುಕಿಗಾಗಿ ಎಷ್ಟೊಂದು ಘೀಳಿಡುತ್ತಿರುವೆ?

ಹಹಹಹಹ್ಹಾ!

ಹಾ....! ಯಾರು ನಕ್ಕಿದ್ದು?

★ ★ ★ ★ ★

ಪೂರ್ವ ಗಗನರಂಗದಲ್ಲಿ ಉದಯ ರವಿಯ ಶುಭೋದಯ!

ಅರುಣಕಿರಣಗಳು ಎಳೆಎಳೆಯಾಗಿ ಕೋಲುಕೋಲಾಗಿ ಮಿಂಚಿದುವು. ತಣ್ಣನೆಯ ಮೈಗೆ ಬೆಚ್ಚನೆಯ ಮುದ್ರೆಯೊತ್ತಿದಾಗ ಅದೆಷ್ಟು ಆನಂದವೋ....ಆದರೆ ಕೊರಡುಗಟ್ಟಿದ ಕೈಕಾಲುಗಳು ಇನ್ನೂ ಅಲುಗಿಸಲಾಗುತ್ತಲೇ ಇಲ್ಲ. ತೀರದಲ್ಲಿ ತಮ್ಮವರಾದರೂ ಬಿದ್ದಿರಬಹುದೇನೋ ಎಂದು ದೃಷ್ಟಿಯನ್ನು ಹರಿಯುವವರೆಗೂ ಅಟ್ಟಿದ. ಎಲ್ಲಿಯೂ ಯಾರೂ ಕಾಣಿಸಲಿಲ್ಲ. ಅಲ್ಲೇ ಸಮೀಪದಲ್ಲಿ ತನ್ನ ಭಾಗ್ಯದ ದೈವ-ತನಗೆ ಜೀವದಾನ ಮಾಡಿದ ಮರದ ತೊಲೆ ಬಿದ್ದಿತ್ತು. ಅದನ್ನು ನೋಡಿದಾಗ ಹೃದಯದ ಹೊಂಗಡಲು ಉಕ್ಕೇರಿ ಬಂತು. ತನುಮನಗಳು ಸುಖದುಃಖಗಳ ನೆಲೆವೀಡಾದುವು. ಎದ್ದು ಕುಳಿತುಕೊಳ್ಳುವ ಇಚ್ಛೆ. ಆದರೆ ಇನ್ನೂ ಕೈಕಾಲುಗಳು ಸಚೇತನಗೊಂಡಿರಲಿಲ್ಲ. ಹಾಗೇ ಬಿದ್ದುಕೊಂಡ. ಸಾಗರದ ಸಾಮಾನ್ಯ ಅಲೆಗಳು ಹತ್ತಿರ ಹತ್ತಿರಕ್ಕೂ ಬಂದು ಹೋಗುತ್ತವೆ. ದೊಡ್ಡ ದೊಡ್ಡ ಅಲೆಗಳು ಬಂದಲ್ಲಿ ಪುನಃ ತೊಯ್ಯುವ ಸಂಭವವುಂಟು. ಅಲ್ಲಿಂದ ತೆವಳಿಕೊಂಡಾದರೂ ದೂರ ಹೋಗುವುದು ಲೇಸು ಎನಿಸಿ ಹಿಂದ-ಹಿಂದಕ್ಕೆ ಜರುಗಲು ಪ್ರಯತ್ನಿಸಿದ. ಮರಳಿದ ತಡಿಯಲ್ಲಿ ಮೈ ಅಲ್ಲಲ್ಲೆ ಹುಗಿಯುತ್ತಿದ್ದುದರಿಂದ ಸುಮ್ಮನಾಗಬೇಕಾಯಿತು.

ಹೊತ್ತು ನಿರಾತಂಕವಾಗಿ ಉರುಳಿತು; ಬಾಲರವಿ ಬಾನೇರಿದ.

ಸೂರ್ಯರಶ್ಮಿ ಬಾಹ್ಯಾಂತರಗಳನ್ನು ಆಹ್ಲಾದಗೊಳಿಸಿದ್ದರೂ ಆತ್ಮರಂಗಕ್ಕೆ ಇನ್ನೂ ತಟ್ಟಿರಲಿಲ್ಲ. ಹೊಂಬಿಸಿಲು ಮೈಗಟ್ಟಿದಷ್ಟೂ ಸಾಲದು. ತೊಯ್ದ ಬಟ್ಟೆ ಆರುತ್ತಲೂ ಕೈಕಾಲುಗಳು ಚಳಿಯ ಕೊನೆತದಿಂದ ಸ್ವಲ್ಪಸ್ವಲ್ಪವಾಗಿ ಸಡಿಲಗೊಂಡು ಎದ್ದು ಕುಳಿತ.

ಕೀಲುಕೀಲುಗಳನ್ನು ಆಡಿಸಿ ಮಡಿಸಿ ಮೈಗೆ ಲವಲವಿಕೆ ತಂದುಕೊಂಡು. ಸ್ವಲ್ಪ ಆನಂದಿಸಿದರೂ ಇದು ಯಾವ ಭೂಮಿ? ಹೋಗುವುದೆಲ್ಲಿಗೆ? ನನಗೆ ಯಾರು ದಿಕ್ಕು? ಎಂಬ ಪ್ರಸ್ನೆ ಮನದಲೆಯಲ್ಲಿ ಧೀಂಕಿಟ್ಟಿತು-ಭ್ರಾಂತ ಚಿತ್ತ ಭ್ರಾಂತಿಯಿಂದ ತಲ್ಲಣಿಸುವಂತೆ.

ದೃಷ್ಟಿಯ ಕಕ್ಷೆಯಲ್ಲಿ ದಿಗಂತರದಿಂದ ದಿಗಂತರದವರೆಗೂ ಹಬ್ಬಿದ ಸಾಗರ ನೀಲಿ ಗೋಚರಿಸಿದರೂ ಅದರ ಮೇಲೆ ತೇಲುವ ಜಹಜುಗಳಾಗಲೀ ಅಥವಾ ಸಿಡಿದೊಡೆದ ನತದೃಷ್ಟ ಹಡಗಿನ ಅವಶೇಷವಾಗಲೀ ಗೋಚರಿಸುತ್ತಲೇ ಇಲ್ಲ. ಬೃಹದ್ ವಲಯದಲ್ಲಿ ಎಲ್ಲಿಂದ ಎಲ್ಲಿಯವರೆಗೂ ಹಬ್ಬಿದ ಸಾಗರ ತೀರ......ಸೈತಕರಾಶಿಯ ಮಹಾ ಶಯ್ಯಾಪ್ರಾಂತ. ಗಿಡ ಮರಗಳೂ ಕಾಣಿಸುತ್ತಿಲ್ಲ. ಜನ ಜಾಪತ್ತುಗಳಂತೂ ಇಲ್ಲವೇ ಇಲ್ಲ. ಇಂದು ಜೀವದಿಂದ ಉಳಿದರೂ ಇಲ್ಲಿಂದ ಸುರಕ್ಷಿತವಾಗಿ ಊರು ಸೇರುವನೆಂಬ ಭರವಸೆ ಉಳಿಯಲಿಲ್ಲ. ಭಾವ ತಂದಿಲನಾಗಿ ಕೈಗಳನ್ನು ಎತ್ತಿ ಮಹಾ ಪ್ರಕೃತಿಮಾತೆಯೆಡೆಗೆ ಜೋಡಿಸಿದಾಗ ಕಣ್ಣುಗಳಲ್ಲಿ ಬಾಷ್ಪ ಬಿಂದುಗಳು ಮೂಡಿ ಧಾರಾಕಾರವಾಗಿ ಹರಿದುವು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಿತು. ಭಾರಭಾರವಾಗಿದ್ದ ಹೆಜ್ಜೆಗಳನ್ನು ಎಳೆದುಕೊಳ್ಳುತ್ತ ಹೋಗಿ ಸಾಗರ ಜಲದಲ್ಲಿ ಮುಖ ಮಜ್ಜನ ಮಾಡಿ ಮೈಗಂಟಿದ್ದ ಮೃತ್ತಿಕೆಯನ್ನು ಕೊಡವಿ ತೊಳೆದು ದೀಪ್ತಲೋಚನನಾಗಿ ನಮಸ್ಕರಿಸಿ ಹೊರಟ. ಕಣ್ಣುಗಳು ಮರದ ದಿಮ್ಮಿಯೆಡೆಗೆ ಹರಿದುವು. ಅದರ ಮೇಲೆ ಹಸ್ತವನ್ನೂರಿ ಹಣೆಮಣಿದು ಹೆಜ್ಜೆ ತೆಗೆದ. ಅಲ್ಲಿಂದ ಯಾವ ದಿಕ್ಕಿನಲ್ಲಿ ಊರು ಕೇರಿಗಳಿವೆ ಎಂಬುದರ ಕುರುಹು ಎಲ್ಲೂ ಕಾಣಿಸುತ್ತಿಲ್ಲ....ಯಾವ ದಿಕ್ಕು ಹಿಡಿಯಬೇಕೋ ಅರ್ಥವಾಗುತ್ತಿಲ್ಲ. ಬಳಲಿದ ಜೀವ ಹೆಚ್ಚು ದೂರ ನಡೆಯಲಾರದು. ಎಲ್ಲಾದರೂ ಸುರಕ್ಷಿತವಾದ ನೆಲೆ ದೊರೆಯದ ಪಕ್ಷದಲ್ಲಿ ಸಾಗರ ಹೆಣವಾಗುವ ಬದಲು ಕಡಲ ತೀರದ ಹೆಣವಾಗುವೆ ಎಂಬ ಯೋಚನೆಯಲ್ಲಿಯೇ ಮುಂದುವರಿದ. ಕಾಲುಗಳು ನಡೆದತ್ತ ದೇಹ ಸಾಗಿತು. 'ಇಂತಹ ಕಡೆ ಹೋಗು' ಎಂದು ಆದೇಶ ನೀಡಲು ಚಿತ್ತ ಮುಂದಾಗಲಿಲ್ಲ. ದೇಹ ಸಮಸ್ತವೂ ಕಸ್ತೂರಿ ಲೇಪದಂತೆ ಆವರಿಸಿದ ಅನನ್ಯ ಅನುಪಮ ಸಾಗರ ಗಂಧ ಮನಃಪ್ರಾಣಗಳನ್ನು ಶಾಂತ ಸ್ನಿಗ್ಧಗೊಳಿಸುವಂತಿತ್ತು.

ಆದರೆ....

ಮೂರು ದಿನಗಳಿಂದ ಊಟನಿದ್ರಾದಿಗಳಿಲ್ಲದೆ ಈಜಿದ ಬಳಲಿಕೆ. ಖಂಡ ಖಂಡಗಳೂ ತುಂಡುಗಡಿದಂತೆ ನರನರಗಳೂ ಕಿತ್ತುಹೋದಂತೆ ನೋಯುತ್ತಿವೆ.

ಹೆಜ್ಜೆ ಇಟ್ಟಲ್ಲಿ ಕುಸಿಯುವಷ್ಟು ದೇಹ ತೂರಾಡುತಿತ್ತು. ಯಾವುದಾದರೊಂದು ನೆಲೆಯನ್ನು ಸೇರಬೇಕಾದರೆ ಇನ್ನೆಷ್ಟು ದೂರ ನಡೆಯಬೇಕೋ....ಬಿಸಿಲು ಏರುವ ಮುನ್ನ ಎಲ್ಲಾದರೊಂದು ಗೂಡು ಕಂಡುಕೊಂಡರೆ ಜೀವ ಉಳಿಯುತ್ತೆ; ಇಲ್ಲವಾದಲ್ಲಿ ದೇವರೇ ಕಾಪಾಡಬೇಕು......ಆ ಯೋಚನೆ ಬಂದಾಗ ಅಭಿಶಸ್ತ ಹೆಜ್ಜೆಗಳ ಮಂದಗತಿ ತುಸು ತೀವ್ರಗೊಂಡಿತು. ಸ್ವಲ್ಪ ದೂರ ನಡೆದಮೇಲೆ ಮತ್ತೆ ಯಥಾರೀತಿಯೇ....

ಸೋಲು....ಬಳಲಿಕೆ....

ತಾಳಲಾರ....ನಡೆಯಲಾರ....

ಆದರೆ ನಡೆಯದೆ ಗತ್ಯಂತರವಿಲ್ಲ. ಸುತ್ತ ಮುತ್ತ ಯಾರಾದರೂ ಮತ್ಸ್ಯಗಾರರು ಅಥವಾ ನಾವಿಕರು ದೃಷ್ಟಿಗೆ ಬಿದ್ದಾರೆಯೆ ಎಂಬ ಆಶಾಲೋಚನ ಹರಿದಾಡುತ್ತಿದ್ದುವು. ಎಲ್ಲೂ ಅಂತಹ ಸುಯೋಗ ಕಂಡುಬರಲಿಲ್ಲ. ಹಾದಿ ಮಂದಗತಿಯಲ್ಲಿ ಸಾಗುತಿತ್ತು. ಸಾಗರ ತಡಿಯನ್ನು ದಾಟಬೇಕಾದರೆ ಅದೆಷ್ಟು ಹೊತ್ತು ಉರುಳಿತೋ ತಾನರಿಯ. ಶೈತಕರಾಶಿಯ ಸುವಿಶಾಲವಾದ ತಡಿಯನ್ನು ದಾಟಿ ಹಸುರು ಪ್ರಾಂತಕ್ಕೆ ಕಾಲಿಟ್ಟಾಗ ನೇಸರು ಬಾನ್ನೆತ್ತಿಯನ್ನು ಏರಿಯಾಗಿತ್ತು. ಏದುಸಿರು ಬಿಡುತ್ತಾ ಮರದಡಿ ಬಿದ್ದುಕೊಂಡ. ಎಲ್ಲಾದರೂ ಫಲಭರಿತ ಗಿಡ ವೃಕ್ಷಗಳು ಇವೆಯೇ ಎಂಬ ಆಸೆ ಒಂದೆಡೆ....ವನ್ಯಮೃಗಗಳಿರಬಹುದೇ ಎಂಬ ಭಯ ಇನ್ನೊಂದೆಡೆ. ಮೇಲಾಗಿ, ಹಸಿವು-ಬಾಯಾರಿಕೆ ಸಂಕಟ-ಭಯಗಳ ಅವ್ಯಾಹತ ಧಾಳಿಯಲ್ಲಿ ತನುಮನಗಳು ಸೋತು ಸುಣ್ಣವಾದರೂ ಹೃದಯ ಕುಂಡಲಿನಿ ಜಾಗ್ರತವಾಗಿತ್ತು. ಶಕ್ತಿಯಿಲ್ಲದೆ ಸಾಧನೆ ಅಸಾಧ್ಯ....ಕಿಂಚಿತ್ ಶಕ್ತಿಯನ್ನು ಪಡೆಯಬೇಕಾದರೆ ಒಡಲಿಗೆ ಅನ್ನ ನೀಡಲೇಬೇಕು; ಎನಿಸಿ ಅಲ್ಲಿನ ಗಿಡಮರಗಳನ್ನು ಆದ್ಯಂತವಾಗಿ ಅರಸಿದರೂ ಹಣ್ಣು ಹಂಪಲು ಗೋಚರಿಸಲಿಲ್ಲ. ಬೇಸತ್ತು ಸಪ್ಪೆಯಾಗಿ ಕಣ್ಣುಗಳು ತಾವಾಗಿ ಮುಚ್ಚಿಕೊಂಡುವು. ಹೃದಯ ಭಾರವಾಗಿತ್ತು. ಕಣ್ಣುಗಳ ಮೇಲೆ ನಿದ್ದೆಯ ಮಂಪರ ಕವಿದು ಬಂತು. ಅಲ್ಲಿ ಏಕಾಂಗಿಯಾಗಿ ನಿದ್ರಿಸಲು ಭಯ-ಕಳವಳ. ಆದರೆ ಪ್ರಯತ್ನಿಸಿದರೂ ಅವು ತೆರೆಯಲೊಲ್ಲವು. ದೇವರ ಮೇಲೆ ಭಾರ ಹಾಕಿದ.

ಮರುಘಳಿಗೆಯಲ್ಲಿ ಹಣೆಯಮೇಲೆ ಯಾವುದೋ ಅಮೃತ ಹಸ್ತ ಒತ್ತಿ ಹಿಡಿದಂತೆ ಭಾಸವಾಗಿ....ಮೆಲ್ಲನೆ ಕಣ್ತೆರೆದ. ನೋಟ ತನ್ನ ಪರಿಸರದಲ್ಲಿ ಹರಿದಾಡಿತು. ಯಾರೂ ದೃಗ್ಗೋಚರಿಸಲಿಲ್ಲ. ನಿರ್ಭಯದಿಂದ ಹಾಗೇ ಕಣ್ಮುಚ್ಚಿದ. ದೇಹ ಬಹಳವಾಗಿ ಬಳಲಿತ್ತು, ಪುನಃ ಕಣ್ತೆರೆಯಲು ಮನಸ್ಸಾಗಲಿಲ್ಲ; ಅಲ್ಲ, ಸಾಧ್ಯವಾಗಲಿಲ್ಲ.

ಹಸುರು ವಲಯ....ನಿರ್ಜನ ತಾಣ....

ಬಯಸಿದರೂ ಗದ್ದಲ ಮೂಡದು.

ತಿರುವು ಮುರುವಾದ ಕಾಲು ಹಾದಿಯನ್ನು ಹಿಡಿದಾಗ ಆಯಾಸದ ಅಭಿವ್ಯಕ್ತಿ ಎಲ್ಲಿ ಓಡಿತ್ತೋ, ಏನೋ....ಸರ್ವಾಂಗ ಸುಖಿಯಾಗಿ ಮುಂದಡಿ ಇಡತೊಡಗಿದ. ಶಾಂತಿಸಾಗರದಲ್ಲಿ ಉಬ್ಬರ ಬಂದಂತೆ ನರನರಗಳೂ ಉಲ್ಲಸಿತವಾದುವು. ಜೀವ ಆನಂದಸ್ರೋತದಲ್ಲಿ ನಿಮಜ್ಜಿತಗೊಂಡಿತು. ನಾಲ್ಕಾರು ಮಾರು ಕಳೆದು ಎತ್ತರದ ದಿಣ್ಣೆಗೆ ಕಾಲಿಟ್ಟಾಗ ದಿಣ್ಣೆಯಮೇಲೆ ಆನಂದವೇ ಮೂರ್ತಿವೆತ್ತಿ ಬಂದಂತಿದ್ದ ಓರ್ವ ದೇವ ಮಾನಿನಿ ಹೆಮ್ಮರದಡಿ ನಿಂತಿದ್ದುದು ಕಾಣಿಸಿತು. ಬರ್ಮೀರೂಪು, ಬರ್ಮೀತೇಜ, ಬರ್ಮೀ ಉಡುವು. ನೋಡಿದ ತಕ್ಷಣ ಬೆಕ್ಕಸ ಬೆರಗಾಗಿ ಅಲ್ಲೆ ನಿಂತ. ಅವಳು ಕೈಯೆತ್ತಿ ಹರಸುವಂತೆ ಹಸನ್ಮುಖಿಯಾಗಿ ನುಡಿದಳು, 'ಮುಂದೆ ಸಾಗು, ಧೃತಿಗೆಡಬೇಡ ಕುಮಾರ!'

ಬರ್ಮೀಭಾಷೆ...ಬರ್ಮೀನುಡಿ....!

ನಿರ್ಜನ ಪ್ರದೇಶದಲ್ಲಿ ಮಾನವ ದನಿ ಅದೆಷ್ಟು ಆನಂದ ತಂದಿತೋ....ಹಾಗೇ ನೋಡುತ್ತ ಮರವಟ್ಟಂತೆ ನಿಂತ. ಮರುಕ್ಷಣದಲ್ಲಿ ಅವಳೆಲ್ಲಿ? ಕಾಂತಿ ತರಂಗದಲ್ಲಿ ತೇಲಿ ಬಂದಂತಿದ್ದ ಆ ದೇವಮಾನಿನಿ? ಹಾ....! ಎಂತಹ ಆಶ್ಚರ್ಯ!

ಕುಮಾರ ತಟ್ಟನೆ ಕಣ್ತೆರೆದ.

ಅದೇ ವಲಯ. ಅದೇ ನಿರ್ಜನ ಪ್ರದೇಶ. ಆದರೆ ಆ ದಿಣ್ಣೆಯಾಗಲೀ ಆ ದೇವಮಾನಿನಿಯಾಗಲೀ ಕಂಡುಬರಲಿಲ್ಲ. ಆ ನುಡಿ ಮಾತ್ರ ಕಿವಿಯಲ್ಲಿ ಒಂದೇ ಸಮನೆ ಝೇಂಕರಿಸುತಿತ್ತು. ಕಣ್ಣುಜ್ಜಿಕೊಂಡು ನೋಡಿದ, ನಿತಾಂತ ಕಾತರ-ಕಳವಳ ಪೂರಿತ ದೃಷ್ಟಿಗೆ ಎಲ್ಲಿಯೂ ಯಾರೂ ಕಾಣಿಸಲಿಲ್ಲ. ಕೈ ಕಾಲುಗಳಲ್ಲಿ ಮೆಲ್ಲಮೆಲ್ಲನೆ ಶಕ್ತಿಯ ಸಂಚಾರವಾಗತೊಡಗಿತು. ಎದ್ದು ನಿಂತು ಉಚ್ಚಸ್ವರದಲ್ಲಿ ಕೂಗಿ ಹೇಳಿದ,

''ನಾನಿನ್ನು ಹಾದಿ ಹುಡುಕುವ ಗೋಜಿಗೆ ಹೋಗುವುದಿಲ್ಲ, ತಾಯಿ! ಏನಾಗುವುದಿದ್ದರೂ ನಿನ್ನಿಚ್ಛೆಯಂತೆಯೇ ನಡೆಯಲಿ, ಒಳಿತು-ಕೆಡಕುಗಳೆಲ್ಲಾ ನಿನಗೆ ಸೇರಿದ್ದು. ನೀನೇ ನನ್ನ ಮಾರ್ಗದರ್ಶಿನಿ.''

ವನ್ಯ ಪ್ರದೇಶ ಮರುದನಿ ಕೊಟ್ಟಿತು.

ಒಂದೆರಡು ಘಳಿಗೆ ನಿಂತು ಮುಂದುವರಿದ. ದೇಹ ಚಲನೆ ಯಾಂತ್ರಿಕವಾಗಿ ನಡೆಯಿತು. ಅಂದರೆ ಅವನ ಮೈಯಲ್ಲಿ ಆಯಾಸವಿಲ್ಲ ಎಂದೇನಿಲ್ಲ. ದೈಹಿಕ ಬಾಧೆಯನ್ನು ನಿರ್ಲಕ್ಷಿಸಿ ಮುಂದುವರಿಸುತಿತ್ತು ಯಾವುದೋ ಅದಮ್ಯ ಚೇತನ. ದೃಷ್ಟಿಯ ಕಕ್ಷೆಯಲ್ಲಿ ವನ್ಯ ಮೃಗಗಳು ಓಡಾಡಿದಂತೆ ಅಲ್ಲಲ್ಲಿ ಕಾಲು ಹಾದಿ ಕಾಣಿಸಿದರೂ ಎಲ್ಲಿಯೂ ಸ್ಪಷ್ಟವಾಗಿ ಒಂದೆಡೆಗೆ ಹರಿದಂತೆ ತೋರಲಿಲ್ಲ. ಕಾತರ ಚಿತ್ತ ಕಾತರ ದೃಷ್ಟಿ

ಏಕೀಭವಿಸಿ ಅರಸುತ್ತಿದ್ದುವು. ಆದರೂ ಹಾದಿಯ ಜಾಡು ದೊರೆಯಲಿಲ್ಲ. ಹಣೆ ಮುಖ ಮೈಗಳು ಸ್ವೇದಧಾರೆಯಿಂದ ಆರ್ದ್ರವಾಗಿದ್ದುವು. ನಡೆದಷ್ಟೂ ಹಬ್ಬಿದ ಕೊನೆಯಿಲ್ಲದ ಭೂಮಿ. ದೇಹ ಸೋತು ಜೀವ ಇನ್ನು ನಡೆಯಲಾರೆನೆಂದು ಘೀಳಿಡುತಿತ್ತು. ಒಂದು ಕಾಲದಲ್ಲಿ ಆ ನಡಿಗೆ ಲೆಖ್ಖವೇ ಇರಲಿಲ್ಲ. ಯೋಧ ಜೀವನದಲ್ಲಿ ರಕ್ತದ ಕಣಕಣವೂ ಯೋಧ ಗತಿಯಲ್ಲೇ ಚಲಿಸುತಿದ್ದುವು.

ಇಂದು....

★ ★ ★ ★ ★

ಮದರಾಸ್ ಬಂದರನ್ನು ಬಿಟ್ಟ ಜಹಜು ಬರ್ಮಾದೇಶವನ್ನು ಸಮೀಪಿಸುವವರೆಗೂ ಸುರಕ್ಷಿತವಾಗಿ ಪಯಣಿಸಿತ್ತು. ನೂರಾರು ಮಂದಿ ಯೋಧರನ್ನು ಹೊತ್ತು ಪಯಣಿಸುವಾಗ ಆಯಿಲ್ ಟ್ಯಾಂಕ್ ಸಿಡಿದು ಆಸ್ಫೋಟನೆಗೊಂಡು ಪಯಣಿಗರೆಲ್ಲ ದೂರದೂರ ಸಿಡಿದು ಬಿದ್ದರು. ಹಾಗೆ ಬಿದ್ದವರಲ್ಲಿ ಕುಮಾರನೂ ಒಬ್ಬ. ಹಡಗು ಪುಡಿಪುಡಿಯಾಯಿತು. ಅಲ್ಲಿ ಮತ್ತಾವ ಜಹಜುಗಳೂ ಇರಲಿಲ್ಲವಾದುದರಿಂದ ಸಹಾಯವೂ ಸಹ ದೊರೆಯಲಿಲ್ಲ.

ಆ ದುರ್ದಿನ ಹಾಸಿಗೆ ಬಿಟ್ಟೇಳಲು ಮನಸ್ಸೇ ಆಗಲಿಲ್ಲ. ಮನಃಪ್ರಾಣಗಳಲ್ಲಿ ಏನೋ ಒಂದು ಬಗೆಯ ಅಶಾಂತಿ-ಕಳವಳ. ಏನೆಂಬುದೇ ಅರ್ಥವಾಗುತ್ತಿಲ್ಲ. ಸಮುದ್ರ ಹವೆ ಒಗ್ಗದೆ ಶರೀರಕ್ಕೆ ಕಾಹಿಲೆ ಹಿಡಿದಿರಬಹುದು ಎಂಬ ಭಾವನೆ ಒಮ್ಮೆ ಮೂಡಿದರೆ ಇನ್ನೊಮ್ಮೆ ಅದಲ್ಲವೇ ಅಲ್ಲ ಯಾವುದೋ ಗಂಡಾಂತರ ಬಂದೊದಗಲಿದೆ ಎಂಬ ಭೀತಿ ಮನಃಸಂಪುಟವನ್ನು ಆವರಿಸುತಿತ್ತು. ಎದ್ದು ಡೆಕ್ಕಿನಮೇಲೆ ಶತಪಥ ತಿರುಗಿದ; ಗೆಳೆಯರೊಡನೆ ಮಾತುಕತೆ ನಡೆಸಿದ. ಆದರೂ ಅಶಾಂತಿಯ ವಜ್ರಮುಷ್ಟಿಯಿಂದ ಬಿಡಿಸಿಕೊಳ್ಳಲಾಗಲಿಲ್ಲ. ಅಲ್ಲಿಂದ ಒಳಹೋಗಿ ಪುಸ್ತಕ ಪಠಣ ಕೈಕೊಂಡ. ಎಷ್ಟು ಹಾಳೆಗಳನ್ನು ತಿರುವಿಹಾಕಿದರೂ ಪ್ರಕ್ಷುಬ್ಧ ಸ್ಥಿತಿಯಲ್ಲಿ ಮನಸ್ಸು ವಿಷಯಗ್ರಹಣ ಮಾಡದು. ಕೆಲವಾರು ಪುಸ್ತಕಗಳನ್ನು ತಿರುವಿಹಾಕಿ ಬೇಸರದಿಂದ ಎದ್ದು ಹೊರಬಂದ. ಕುಳಿರ್ಗಾಳಿ ಅತ್ಯಂತ ವೇಗದಿಂದ ತೀಡುತಿತ್ತು. ಸಮುದ್ರದ ಅಲೆಗಳು ಅಲ್ಲೋಲ ಕಲ್ಲೋಲವಾಗಿದ್ದುವು. ಬೃಹದ್ ಅಲೆಗಳಲ್ಲಿ ಮಿಂಚುವ ಮೀನಿನ ಚಲನವಲನವನ್ನು ನೋಡುತ್ತ ನಿಂತಂತೆ ಸ್ವಲ್ಪ ಹೊತ್ತು ಉರುಳಿತು. ಆದರೂ ಏನೋ ಒಂದು ರೀತಿಯ ಕಳವಳ....ಇನ್ನೇನೋ ಒಂದು ರೀತಿಯ ಭಯ....ಹೃದಯಾಂತರಾಳದಲ್ಲಿ ಕಂಡರಿಯದ ಗಂಡಾಂತರದ ಮುನ್ಸೂಚನೆ....

ದೇಹದಾದ್ಯಂತ ನಸು ಕಂಪನದ ಅಲೆ ಹರಿದಾಡಹತ್ತಿತು. ಇನ್ನು ತಡೆಯಲಾಗದೆ ಕುಮಾರ್ ಹಡಗಿನ ಕ್ಯಾಪ್ಟನ್ನನಲ್ಲಿಗೆ ಹೋದ. ಹೃದಯ ಮೃದಂಗ ವ್ಯಾಪ್ತಿಗೆ ಮೀರಿ ಮಿಡಿಯುತ್ತಿತ್ತು. ಭಯ-ಭೀತಿ-ಸಂಕೋಚಗಳ ಗಣಿಯಾಗಿ ಮುಂದೆ ನಿಂತ ಯೋಧನನ್ನು ನೋಡುತ್ತಲೂ ಬಾಯಿಯಲ್ಲಿದ್ದ ಸಿಗಾರನ್ನು ಹೊರ ತೆಗೆದು ಹೊಗೆಯನ್ನು ಫುಪ್ಪನೆ ಊದಿ ''ಏನು ಸಮಾಚಾರ?'' ಎಂದ ಕ್ಯಾಪ್ಟನ್, ಮುಖ ಮುದ್ರೆಯಲ್ಲಿ ಧೀರ ಗಾಂಭೀರ್ಯವಿತ್ತು; ತೀಕ್ಷ್ಣವಾದ ಕಣ್ಣುಗಳಲ್ಲಿ ಲಾಲಿಮೆಯುಕ್ಕುತ್ತಿತ್ತು, ಲಘು ಭಾವನೆಯಿಂದ ಹುಬ್ಬುಗಳು ಏರಿ ಇಳಿದುವು.

ತಕ್ಷಣ ಉತ್ತರಿಸುವುದು ಸ್ವಲ್ಪ ಕಷ್ಟವೇ ಆದರೂ ದೃಢವಾಗಿ ನಿಂತ ಕುಮಾರ್. ಏನೆನ್ನಬೇಕೋ ಹೊಳೆಯಲಿಲ್ಲ. ಚಿತ್ತಭಿತ್ತಿಯಲ್ಲಿ ಭಾವೀ ದುರಂತದ ರುದ್ರಛಾಯೆ ತೆರೆತೆರೆಯಾಗಿ ಹರಡುತಿತ್ತು. ಯಾವುದೋ ಕಾಣದ ಕೈ ಕುತ್ತಿಗೆಯನ್ನು ಅದುಮಿ ಹಿಡಿದಂತಾಗಿದೆ. ಪ್ರಯತ್ನಿಸಿದರೂ ಮಾತುಗಳು ಹೊರಡವು. ಒಂದೆರಡು ಕ್ಷಣ ಸಾವರಿಸಿಕೊಳ್ಳುವುದರೊಳಗಾಗಿ ಕ್ಯಾಪ್ಟನ್ ಪುನಃ ಪ್ರಶ್ನಿಸಿದ ''ಏನಯ್ಯಾ? ಏನೋ ಒಂದು ಬಗೆಯಾಗಿದ್ದೀಯಲ್ಲ?''

''ಅದೇ ಈಗ ಕಷ್ಟಕ್ಕೆ ಬಂದಿದೆ.''

''ಅಂದರೆ....?''

''ಮನಸ್ಸಿಗೆ ಏನೋ ಒಂದು ಬಗೆಯ ಕಳವಳ....ಏನೆಂಬುದೇ ಅರ್ಥವಾಗುತ್ತಿಲ್ಲ.''

''ಏನಾದರೂ ವೈದ್ಯಕೀಯ ಸಹಾಯ ಬೇಕಿದ್ದರೆ ಡಾಕ್ಟರ ಬಳಿ ಹೋಗಬಹುದಿತ್ತಲ್ಲ?''

''ಅಂತಾದ್ದೇನೂ ಇಲ್ಲ. ಬರೀ ಕಳವಳ....ಏಕೆಂಬುದೇ ಅರ್ಥವಾಗುತ್ತಿಲ್ಲ. ಹಡಗಿನ ಪರಿಸ್ಥಿತಿ ಸರಿಯಾಗಿದೆಯಷ್ಟೆ?''

ಕ್ಯಾಪ್ಟನ್ ತಕ್ಷಣ ಅಟ್ಟಹಾಸಪೂರ್ವಕವಾಗಿ-ಹಾಸ್ಯಪ್ರಧಾನವಾಗಿ ಫಕಫಕನೆ ನಕ್ಕ. ಹಿಂದೆಯೇ ತುಂಟ ನುಡಿ ಹೊರಬಿತ್ತು.

''ಎದೆಯನ್ನು ಭದ್ರವಾಗಿ ಹಿಡಿದುಕೊ. ಬಹುಶಃ ಹೃದಯಾಘಾತ ಆದರೂ ಆಗಬಹುದು!''

''ನಿನಗೆ ತಮಾಷೆ! ನಿಜವಾಗಿಯೂ ನನಗೆ ಕಳವಳವಾಗುತ್ತಿದೆ.''

''ಚೆನ್ನಾಗಿ ಕುಡಿದಿದ್ದೀಯೇನು?''

''ಸರಿ....ಬಿಡು; ತಮಾಷೆ ಸಾಕು!''

ಹಾಗೆಂದು ನಿರಾಶನಾಗಿ ಡೆಕ್ಕಿನ ಕಡೆಗೆ ಬಂದಾಗ ತನ್ನ ಮಿತ್ರನಾದ ಕೃಷ್ಣಜೋಶಿ ಎದುರಾದ.

''ಜೋಶಿ! ಈದಿನ ಬೆಳಗಿನಿಂದ ನನಗೇನೋ ಒಂದು ಬಗೆಯ ಕಳವಳ-ಚಿಂತೆ. ಏನೆಂಬುದೇ ಅರ್ಥವಾಗುತ್ತಿಲ್ಲ. ಭರಿಸುವುದೇ ಕಷ್ಟವಾಗಿದೆ ನನಗೆ.''

''ಏನಾದರೂ ಕೆಟ್ಟ ಕನಸು ಕಂಡೆಯೇನು?''

''ಇಲ್ಲ....''

''ಏನೂ ಇಲ್ಲ. ಎಲ್ಲ ಸರಿಹೋಗುತ್ತೆ ಬಿಡು.''

ಅಲ್ಲಿಗೆ ಆ ಪ್ರಸ್ತಾಪ ಮುಗಿದರೂ ಅಶಾಂತಿ ಹರಿಯಲಿಲ್ಲ. ಅಂತಃಪ್ರಜ್ಞೆಗೆ ವಿದಿತವಾದ ಯಾವುದೋ ಸಂಕಷ್ಟ ಮನಃಪ್ರಾಣಗಳನ್ನು ಒಂದೇ ಸಮನೆ ಹಿಂಡುತಿತ್ತು. ಅಜ್ಞಾತ ರುದ್ರಭಯಂಕರ ದೃಸ್ಯ ಕಣ್ಣುಗಳನ್ನು ಅವ್ಯಾಹತವಾಗಿ ಮುತ್ತುತ್ತಿತ್ತು. ಸ್ವಪ್ನಾವೇಶದ ಆ ಮಾಯೆ ಆತನ ಸಂಪೂರ್ಣ ಅಸ್ತಿತ್ವವನ್ನೇ ಅಭಿಭೂತಗೊಳಿಸಹತ್ತಿತು. ಕುಮಾರ ಬೆಂಚಿನ ಮೇಲೆ ಕುಲಿತು ನೋಟವನ್ನು ಬೃಹದ್ ಸಾಗರದ ಮೇಲೆ ಹರಿಯಬಿಟ್ಟ. ಆ ಅದ್ಭುತ ಅಲೆಗಳ ಸಂಮೋಹನ ಲೀಲೆಯೂ ಮನಃಪ್ರಾಣಗಳನ್ನು ತಣಿಸಲು ಶಕ್ತವಾಗಲಿಲ್ಲ-ಒಮ್ಮೆ ಇದ್ದಕ್ಕಿದ್ದಂತೆಯೇ ಉದ್ವೇಗಭರಿತವಾದರೆ ಇನ್ನೊಮ್ಮೆ ಅವಶ ಜಡಿಮೆಯಿಂದ ಭಾರಾಕ್ರಾಂತವಾಗುವುವು. ಯೋಚನೆಯಲೆಯಲ್ಲಿ ಸಿಕ್ಕಿ ನಿರ್ವಿಣ್ಣನಾಗಿ ಕುಳಿತ. ಮುಖಮಂಡಲ ಮ್ಲಾನವಾಯಿತು. ಕಾತರ ತುಂಬಿದ ಕಣ್ಣುಗಳು ತಾವಾಗಿಯೇ ಮುಚ್ಚಿಕೊಂಡುವು. ಅನಿರೀಕ್ಷಿತವಾಗಿ ಶಾಂತ ವಾಯುಮಂಡಲದಲ್ಲಿ ಅತ್ಯಂತ ಶೀತಲ ಶೈತ್ಯದ ಸಂಚಾರ ಆರಂಭವಾಯಿತು. ಅದಕ್ಕನುಗುಣವಾಗಿ ಸಾಗರದ ಅಲೆಗಳು ವಿಕಟವಾಗಿ ಭೀಭತ್ಸವಾಗಿ ಮೇಲೇಳತೊಡಗಿದುವು-ಯಾವುದೋ ಮಹೋತ್ಪಾದದ ರುದ್ರ ಭಯಂಕರ ಸೂಚನೆಯನ್ನು ನೀಡುವಂತೆ. ಆ ಕ್ಷಿಪ್ರ ಬದಲಾವಣೆ ಅರ್ಥವಾಗಲಿಲ್ಲ. ಏನೋ ಒಂದು ರೀತಿಯಲ್ಲಿ ಮಂತ್ರಮುಗ್ಧನಂತೆ ನಿಶ್ಚಲ ಭಂಗಿಯಲ್ಲಿ ಸ್ವಲ್ಪ ಹೊತ್ತು ಕುಳಿತ.

ಮದರಾಸನ್ನು ಬಿಡುವ ಮುನ್ನ ಇಳಿ ವಯಸ್ಸಿನ ತನ್ನ ತಾಯಿ ಕರುಣ ಕಾತರ ಕಂಠದಿಂದ ಅಂದದ್ದೇನು?

''ಮಗನೇ, ನೀನು ಹಿಂದಿರುಗುವುದು ಯಾವಾಗಲೋ....ಅಲ್ಲಿಯವರೆಗೆ ನನ್ನ ಕತೆಯೇನಾಗುತ್ತೋ ಅಂತ್ಯಸಮಯದಲ್ಲಿ ನೀನು ನನ್ನ ಬಳಿಯಲ್ಲಿದ್ದರೆ ಸುಖವಾಗಿ ಕಣ್ಣು ಮುಚ್ಚುತಿದ್ದೆ.''

ಕರ್ಣಪಟಲಗಳ ಮೇಲೆ ಅದೇ ಧ್ವನಿ ಪುನಃಪುನಃ ಪ್ರತಿಧ್ವನಿಸಿತು. ಒಂದೆರಡು ಘಳಿಗೆ ಚಿತ್ತಾಲೋಕವೆಲ್ಲ ಉತ್ಕೀರ್ಣವಾದಂತೆ ಉದ್ಭಾಸಿತವಾಯಿತು. ಹಾಗೇ ಮಂಕು

ಬಡಿದವನಂತಾದ. ಆನಂತರ ತಾನು ನೀಡಿದ ಸಮಯೋಚಿತ ಉತ್ತರ ಮನದಲೆಯಲ್ಲಿ ತೇಲಿ ಬಂತು.

''ಇರಲಿ, ಯೋಚಿಸಬೇಡಿ ಅಮ್ಮಾ! ಇನ್ನೈದು ವರ್ಷಗಳ ಒಳಗೆ ಖಂಡಿತಾ ನಿಮಗೆ ಸಾವು ಬರುವುದಿಲ್ಲ. ಅನಂತರ ನಾನಿರುತ್ತೇನಷ್ಟೆ?''

''ಎಷ್ಟು ಸರಾಗವಾಗಿ ಉತ್ತರಿಸಿದೆ ಮಗೂ, ನಾವು ವಿಧಿಯ ಕೈಗೊಂಬೆಗಳು ಎಂಬುದನ್ನು ಎಂದೂ ಮರೆಯಬಾರದು.''

''ಇರಲಿ, ದೇವರಿದ್ದಾನೆ.''

ಆ ಚಿತ್ರಣ ಮನಃಪಟಲದ ಮೇಲೆ ಚಲನ ಚಿತ್ರದಂತೆ ಪುನಃಪುನಃ ಸುಳಿದಳಿಯಿತು. ಈಗ ಆ ತಾಯಿ ಏಕಾಂಗಿ. ವಯಸ್ಸೂ ಆಗಿದೆ. ತನ್ನವರಾರೂ ಹತ್ತಿರವಿಲ್ಲ. ಬಂಧುಗಳ ಮನೆಗೆ ಹೋಗಿ ಇರಲು ಅವರಿಗೆ ಇಷ್ಟವೂ ಇಲ್ಲ. ವಿಧಿಪೂರ್ವಕವಾಗಿ ವಿಶ್ವಸಂಸ್ಥೆಯ ಯುದ್ಧ ಪಡೆಯಲ್ಲಿ ಕೆಲಸ ನಿರ್ವಹಿಸಿ ಜೀವ ಸಹಿತ ಹಿಂದಿರುಗುವ ಭರವಸೆಯಾದರೂ ಏನು? ಅಲ್ಲಿ ಎಂತೆಂತ ಅಸ್ತ್ರಗಳನ್ನು ಎದುರಿಸಬೇಕೋ....ದೇವರಿಗೇ ಗೊತ್ತು. ಅವರ ಅಮೂಲ್ಯವಾದ ಜೀವನ 'ವಸ್ತು'ವನ್ನೆ ವಿಧಿಯ ಕೈಯಲ್ಲಿ ಅಡವಿಟ್ಟಿರುವೆ. ಆದರಿಂದ ಅವರ ತಾಯಿಕರುಳು ಎಷ್ಟು ನೊಂದಿರಬೇಡ?

''ತಾಯಿ'' ಎಂಬುದು ಎಲ್ಲರಿಗೂ ಹಿರಿದಾದ ವಸ್ತು. ಆ ವಸ್ತು ಎಲ್ಲೇ ಇದ್ದರೂ ಹೇಗೆ ಇದ್ದರೂ ಹೃತ್ಪೂರ್ವಕವಾಗಿ ಗೌರವ ಕೊಡು. ಮೇಲಾಗಿ ಈ ಮಾತೃಭೂಮಿ ಮಾತ್ರ ನಿನಗೆ ಜನನಿಯಲ್ಲ; ಯಾವ ಭೂಮಿಯಮೇಲೆ ನೆಲೆ ನಿಲ್ಲುವೆಯೋ ಆ ಭೂಮಿಯೂ ಸಹ ನಿನಗೆ ಜನನಿಯೇ.''

-ಹಾಗೆಂದವರು ಯಾರು?

ಎರಡು ಕಿವಿಗಳೂ ಕಿವುಡಾಗುವಂತೆ ಝೇಂಕರಿಸುತ್ತಿದೆ ಅದೇ ನುಡಿ. ಒಂದು ಘಳಿಗೆ ನಸು ತಲೆಬಾಗಿ ಯೋಚಿಸಿದ. ಹೃದಯ ಮೃದಂಗ ಮಂದ ಮಂದವಾಗಿ ಘೋಷಿಸುತಿದ್ದರೂ ಅದೇ ಮಂತ್ರವನ್ನು ಉದ್ಘೋಷಿಸುತಿತ್ತು-ನರನಾಡಿಗಳಲ್ಲಿ ಆರೋಹಣ ಅವರೋಹಣ ನಡೆಸುವ ನೆತ್ತರಿನೊಡನೆ ಕೂಡಿ, ಅಶಾಶ್ವತ ಶರೀರದಲ್ಲಿ ತುಂಬಿ ಹೋಗಿರುವ ಮಾಯಕತೆ ಜೀವನದ ಯಥಾರ್ಥತೆಯನ್ನು ಸ್ಪರ್ಶಿಸಿದಾಗ ತನಗೆ ತಾನೇ ತಲೆ ತಗ್ಗಿಸುವಂತಾಯಿತು. ಒಂದೆರಡು ಘಳಿಗೆ ಅಭಿಭೂತನಂತೆ ಕಣ್ಮುಚ್ಚಿದ. ಹೃದಯ ಕಲ್ಲು ಹೊತ್ತಂತೆ ಭಾರವಾಯಿತು.

ದೂರದಲ್ಲಿ-ಸೀಮಾ ಕ್ಷೇತ್ರದಲ್ಲಿ ಸಾಗರ ಜಲಪೀಠದಮೇಲೆ ಅವತರಿತ ಸಾಗರ ಜನನಿಯು ಅಭಯ ಹಸ್ತ ನೀಡಿದಳೇನೋ, ಮುಚ್ಚಿದ ಕಣ್ಣುಗಳಿಗೆ ಮಿಂಚಿನಂತಹ

ಪ್ರಕಾಶ ಮುತ್ತಿತು-ಸ್ವಪ್ನಾಲೋಕದ ಘನಪ್ರಭೆಯಂತೆ. ಮರುಕ್ಷಣದಲ್ಲಿ ಮೈವೆ
ಸ್ಫಟಿಕಮಯೀ ದೇವಮಾನಿನಿ ಅಭಯ ಪ್ರಧಾನ ಮಾಡಿ ಅಂತರ್ಧಾನಳಾದಳು. ಬೆ
ತಟ್ಟನೆ ಕಣ್ತೆರೆದ. ಸ್ತ್ರೀಯಾಕಾರದ ಮಂಜಳಮಯೀ ಮಂಜು ಅಲ್ಲಿ ತೇಲುತಿತ್ತು.

ಕದಡಿ ಬಗ್ಗಡವಾದ ಚಿತ್ತಕ್ಕೆ ಏನೋ ಒಂದು ರೀತಿಯ ಸಮಾಧಾನ ಮೂಡಿತು
ಒಡನೆ ಎರಡೂ ಕೈಗಳನ್ನೆತ್ತಿ ಜೋಡಿಸಿದ.

ಅದೇ ಆಗಲೇ ಕರ್ಣಪಟಲ ಹರಿದು ಹೋಗುವಂತಹ ಭಯಂಕರ
ಸ್ಫೋಟದೊಡನೆ ಹಡಗು ಮುಳುಗಿ ಹೋಯಿತು.

ಗುಳು ಗುಳು ಗುಳು ಗುಳು ಗುಳು ಗುಳು

★ ★ ★ ★ ★

ಆ ವನ್ಯ ಪ್ರದೇಶದ ನಿರ್ಜನ ಹಾದಿ ಮಂದಗತಿಯಲ್ಲಿ ಸದ್ದಿಲ್ಲದೆ ಸಾಗುತಿತ್ತು.

ಕುಮಾರ್ ನಡೆಯಲಾರದೆ ನಡೆಯುತ್ತ ಅಲ್ಲಲ್ಲಿ ಕುಳಿತು ಎಷ್ಟೋ ಸಲ
ವಿಶ್ರಮಿಸಿಕೊಂಡ. ಚಿತ್ತಭಿತ್ತಿಯಲ್ಲಿ ದೀಪಧಾರಿಣಿಯಾಗಿ ಅಭಯ ಹಸ್ತ ಸಹಿತ
ಸಾಗರ ಜನನಿ, ಉತ್ಸಾಹಪೂರ್ಣ ಉತ್ತೇಜನ ನೀಡಿದ ಬರ್ಮೀ ಜನನಿ, ಬಾಳಿನ
ಸಂಜೆಯನ್ನು ತನ್ನೊಡನೆ ಶಾಂತಿಯಿಂದ ಕಳೆಯಲು ನಿರ್ಧರಿಸಿದ ಸ್ವಂತ ತಾಯಿ
ಸುಳಿದಳಿದರು. ಹೃದಯ ಕುಂಡಲಿನಿ ಉಕ್ಕೇರಿ ಬಂತು. ಕಣ್ಣುಗಳಲ್ಲಿ ಆನಂದ
ಬಾಷ್ಪಗಳು ಮೂಡಿದುವು. ನಿಜವಾಗಿಯೂ ತಾನು ಬದುಕುಳಿಯುವುದರಲ್ಲಿ ಎಂತಹ
ವಿಶೇಷವಿದೆ ಎನಿಸಿದಾಗ ದೇಹದಾದ್ಯಂತ ರೋಮಾಂಚನವಾಯಿತು. ಅತ್ಯಂತ
ಕಾತರತೃಷಿತ ಲೋಚನಗಳಿಂದ ಸುತ್ತಲೂ ನೋಡುತ್ತ ಮುಂದುವರಿದ.

ನೆತ್ತಿಗೇರಿದ್ದ ನೇಸರು ಇಳಿಮುಖನಾಗಿದ್ದ. ಬಾನಂಗಣದಲ್ಲಿ ದಿವಸ ಲಕ್ಷ್ಮಿಯ
ಅಭಯಹಸ್ತಗಳಿಂದ ಚೆಲ್ಲಿದ ಪದ್ಮರಾಗದಂತೆ ಹೊಂಗಾಂತಿ ಹರಡಿತ್ತು. ಪಕ್ಷಿಗಳು
ಅಂಬರದಲ್ಲಿ ಮಂಡಲಾಕಾರವಾಗಿ ಸುತ್ತುತ್ತಿದ್ದುವು. ಕತ್ತಲಾಗುವುದರೊಳಗಾಗಿ
ವಸತಿಯನ್ನು ಕಂಡುಕೊಳ್ಳದಿದ್ದರೆ ಗತ್ಯಂತರವಿಲ್ಲ. ಹೇಗಾದರೂ ಈ ಜೀವವನ್ನು
ಉಳಿಸಿಕೊಳ್ಳಲೇಬೇಕು ಎನಿಸಿದಾಗ ನಡಿಗೆಯನ್ನು ಪ್ರಯತ್ನಪೂರ್ವಕವಾಗಿ
ಚುರುಕುಗೊಳಿಸಿದ. ಆದರೆ ಹಸಿವು-ಬಾಯಾರಿಕೆ-ಆಯಾಸಗಳಿಂದ ದೇಹ ತರತರ
ನಡುಗುತಿತ್ತು. ಎಷ್ಟೇ ನಡೆದರೂ ಹಾದಿ ಸಾಗಿದಂತೆಯೇ ತೋರುತ್ತಿಲ್ಲ.

ಮುಂದೆ ಕಂಡು ಬಂದದ್ದು ಮಹಾವಿಸ್ತಾರವಾದ ಮೈದಾನ ಪ್ರದೇಶ. ದೂರದಲ್ಲಿ
ಗದ್ದೆ ಹೊಲಗಳ ಹಸುರು ಕಾಣಿಸಿ ಮನ ಮತ್ತೇರಿದರೂ ಅದೇನು ಹತ್ತಿರದಲ್ಲಿದೆಯೆ?

ವೈಲಿಗಟ್ಟಲೆ ನಡೆಯಬೇಕು. ಸಂಜೆಯ ವಾತಾವರಣ ಕಣ್ಣಿಗೆ ತಂಪನ್ನು ಸೂಸುತಿದ್ದುದರಿಂದ ಹಾದಿ ಮೊದಲಿಗಿಂತ ಸುಲಭವಾಗಿ ಸಾಗಬಹುದು ಎಂಬ ಭಾವನೆ ಎಷ್ಟೋ ಹುರುಪು ನೀಡುತಿತ್ತು. ಆದರೂ ಜೀವ ತಡೆಯಲಾಗದ ಸಂಕಟದಿಂದ ತಳಮಳಿಸುತಿತ್ತು.

ಮುಂದೆ ಹಬ್ಬಿದ ಗದ್ದೆಯ ಅಂಚಿನಲ್ಲಿ ಸಣ್ಣ ದಿಬ್ಬದ ಮೇಲೆ ಒಂದು ಹೆಂಚಿನ ಮನೆ....ಅನಂತರ ಅದರಿಂದಾಚೆ ದೂರದೂರದಲ್ಲಿ ಅನೇಕ ಮನೆಗಳು ಕಾಣಿಸಿಕೊಂಡುವು. ಕುಮಾರನಿಗೆ ಹೋದ ಜೀವ ಬಂದಂತಾಯಿತು. ಆ ಮುಂದಿನ ಹಾದಿ ಹೇಗೆ ಸಾಗಿತೋ ತಾನರಿಯ. ಬಾಯೊಣಗುತಿತ್ತು. ದೇಹ ಕುಸಿದು ಬೀಳುವಂತಿತ್ತು. ತರತರ ನಡುಗುತ್ತ ಹೋಗಿ ಮನೆಯ ಜಗುಲಿಯ ಮೇಲೆ ಬಿದ್ದುಕೊಂಡ. ಮೇಲುಸಿರು ಎಡೆ ಬಿಡದೆ ಹೊಮ್ಮುತಿತ್ತು. ಜಠರಾಗ್ನಿಯಿಂದ ದೇಹ ಸಮಸ್ತವೂ ಸುಡುತ್ತಿರುವಂತೆ ಭಾಸವಾಯಿತು. ಕಣ್ಣುಗಳು ತಾವಾಗಿ ಮುಚ್ಚಿಕೊಂಡುವು. ಪ್ರಯತ್ನಿಸಿದರೂ ತೆರೆಯಲಾಗಲಿಲ್ಲ.

''ಮಗೂ....!''

''......''

''ಮಗೂೂ....!

''......''

''ಮಗೂ ಕುಮಾರ್!''

''ಆ್ಞ....!''

ಕುಮಾರ್ ನಿದ್ರ ಮುಗ್ಧ ಕಣ್ಣುಗಳನ್ನು ತೆರೆದು ನಿರಿನಿರಿ ನಿಟ್ಟಿಸಿದ.

ತನ್ನ ಬಳಿಯಲ್ಲಿ ತಾಯಿ!

''ಅಮ್ಮಾ! ಇಲ್ಲಿ ನೀವು?''

''ಹೌದಪ್ಪಾ, ನಾನೇ....!''

''ಇಷ್ಟುದೂರ ಹೇಗೆ ಬಂದಿರಿ? ಇದು ಬರ್ಮೀ ಭೂಮಿ!''

''ಯಾವ ಭೂಮಿಯಾದರೇನು? ನೀನೆಲ್ಲಿರುವೆಯೋ ನಾನಲ್ಲಿರುವೆ.''

''ಹೌದು....ನಿಜ. ಆದರೆ.....ಆದರೆ ನೀವು ಬಂದದ್ದು?''

''ನಿನಗೆಂದೇ ಬಂದೆ. ನಿನ್ನ ಕರ್ತವ್ಯವನ್ನು ಮತ್ತೊಮ್ಮೆ ಅರುಹಲೆಂದೇ ಬಂದೆ.''

''ತುಂಬ ಉಪಕಾರ.'' ಎನ್ನುತ್ತ ಎದ್ದ ಕುಮಾರ್.

ಪರಿಸರ ನಿರ್ಜನವಾಗಿತ್ತು. ಎಳ್ಳುಬೀರಿದರೂ ಕೇಳಿಸುವಂತಹ ನಿಶ್ಶಬ್ದ

ವಾತಾವರಣ. ಆದರೆ ಅದೇನು ಕನಸೋ ನನಸೋ ಅರ್ಥವಾಗಲಿಲ್ಲ. ಸುತ್ತಲು
ಪುನಃ ಪುನಃ ನೋಡಿದ. ಯಾರ ಸುಳಿವೂ ಇರಲಿಲ್ಲ. ಕಡಲೆಲರು ಸುಯ್ಯನೆ ಸುಯ
ಸಾಗಿ ಹೋಯಿತು. ಸೂರ್ಯ ಕಡಲ ತೀರದಲ್ಲಿ ಹೊನ್ನ ರಾಜಿಯಿಂ
ವಿಜೃಂಭಿಸುತಿದ್ದ. ದಿಗ್ಮೋಹಿನಿ ಸಾಯಂ ಪ್ರಭೆಯ ವೈಭವದಲ್ಲಿ ಮೈಮರೆತಿದ್ದಾಳ
ಎಲ್ಲಿಂದ ಎಲ್ಲಿಯವರೆಗೂ ಪ್ರಕೃತಿ ಶಾಂತ ಮನೋಹರೆಯಾಗಿದ್ದಾಳೆ. ಸ್ವಲ್ಪ ಹೊತ
ಹಾಗೇ ಬಿದ್ದುಕೊಂಡ. ಮನಸ್ಸು ತಿಳಿಯಾಗಿದ್ದರೂ ಎದ್ದು ಕುಳಿತುಕೊಳ್ಳುವಷ
ಲವಲವಿಕೆ ಮೈಯ್ಯಲ್ಲಿರಲಿಲ್ಲ. ಸ್ವಲ್ಪಹೊತ್ತಿನ ನಂತರ ಬಲಭಾಗದ ಕಾಲು ಹಾದಿಯ
ಇಬ್ಬರು ಹೆಂಗಳೆಯರು ಬಂದರು. ತುಂಬ ನಿತ್ರಾಣೆಯಾದ ಹಿರಿಯಾಕೆ ಕಿರಿಯ
ತೋಳಾಶ್ರಯದಿಂದ ನಡೆಯುತ್ತಿದ್ದಳು. ಇಬ್ಬರ ಮುಖದಲ್ಲೂ ಚಿಂತೆಯ
ಮುದ್ರೆಯೋ ಅಥವಾ ಇನ್ನಾವ ಕ್ಲೇಶವೋ ಅಚ್ಚೊತ್ತಿದಂತೆ ಅಪ್ರಸನ್ನತೆ ಕಾಣಿಸುತಿತ್ತು
ಅದನ್ನು ನೋಡುತ್ತಲೂ ತಕ್ಷಣ ಭೇಟಿಯಾಗಲು ಮನಸ್ಸು ಅಳುಕಿತು. ತರುಣಿಯ
ಪ್ರೌಢೆಯನ್ನು ಒಳಗಡೆ ಕರೆದೊಯ್ದು ಮಲಗಿಸಿದನಂತರ ಹೊರಬಂದು ಕೇಳಿದಳು

''ನೀನು ಯಾರು?''

ಪ್ರಶ್ನೆ ಬರ್ಮೀಭಾಷೆಯಲ್ಲಿ ಹೊಮ್ಮಿದುದರಿಂದ ಅರ್ಥವಾಗಲಿಲ್ಲ. ಒಂದೆರಡು
ಕ್ಷಣ ನಿಟ್ಟಿಸಿ ನೋಡಿ ಇಂಗ್ಲೀಷಿನಲ್ಲಿ ಅತಿ ದೈನ್ಯತೆಯಿಂದ ಉತ್ತರಿಸಿದ.

''ನಾನು ಭಾರತದ ಯೋಧ. ವಿಶ್ವಸಂಸ್ಥೆಯ ಕರೆಗಾಗಿ ಹೊರಟವ....ಹಡಗು
ಸಿಡಿದು ಮುಳುಗಿದುದರಿಂದ ಎಲ್ಲರೂ ಸಮುದ್ರದ ಪಾಲಾದೆವು. ನನಗೊಂದು
ಮರದ ದಿಮ್ಮಿ ದೊರೆತು ಪುಣ್ಯವಶದಿಂದ ಎರಡು ಮೂರು ದಿನಗಳ ನಂತರ
ತೀರವನ್ನು ಸೇರಿದೆ. ಅಂದಿನಿಂದ ನಿದ್ರಾಹಾರಗಳಿಲ್ಲದೆ ಬಹಳ ಬಳಲಿರುವೆ.
ಇಲ್ಲಿಯವರೆಗೆ ನಡೆದುಕೊಂಡು ಬರಬೇಕಾದರೆ ನನಗೆ ಸಾಕು ಸಾಕಾಯಿತು.''

ಅಕ್ಷರ ಅಕ್ಷರವೂ ಮೇಲುಸಿರಿನೊಡನೆ ಹೊಮ್ಮುವುದನ್ನು ನೋಡಿ ಅವಳ
ಹೆಂಗರುಳು ಕರಗಿ ಕಾರುಣ್ಯರಸದಿಂದ ತುಂಬಿ ಹೋಯಿತು. ತುಂಡು ತುಂಡು
ಇಂಗ್ಲೀಷಿನಲ್ಲಿ ಕೇಳಿದಳು,

''ಈಗೇನು ಮಾಡುತ್ತಿ? ಭಾರತಕ್ಕೆ ಹಿಂದಿರುಗುವೆಯಾ?''

''ಮೊದಲು ಒಂದು ಲೋಟ ನೀರು ಕೊಟ್ಟು ಉಪಕಾರ ಮಾಡು.
ಗಂಟಲೊಣಗುತ್ತಿದೆ. ಮಾತಾಡಲಾರೆ....'' ನುಡಿ ಅತ್ಯಂತ ವಿನಮ್ರತೆಯಿಂದ
ಹೊರಬಿತ್ತು.

ಮಗಳು ಒಳಗೆ ಬಾರದುದನ್ನು ಗಮನಿಸಿದ ತಾಯಿ ಒಳಗಿನಿಂದ ಕರೆದಳು,

"ಇನ್ನೂ ಅಲ್ಲೇನು ಮಾಡುತ್ತಿದ್ದಿ? ಒಳಗೆ ಬರಬಾರದೆ?"

"ಇದೋ ಬಂದೆ!"

ತರುಣಿ ಒಳಹೋಗಿ ಒಂದು ಘಳಿಗೆ ಯೋಚಿಸಿದಳು. ಅವನ ವಿಚಾರದಲ್ಲಿ ಯಾವ ಸಂಶಯವೂ ತೋರಲಿಲ್ಲ. ಅದಕ್ಕೆ ಬದಲಾಗಿ ಹೃದಯ ಕುಂಡಲಿನಿಯಲ್ಲಿ ಮರುಕದ ತೊರೆ ನಿರರ್ಗಳವಾಗಿ ಹರಿದು ಬಂತು. ಒಂದು ಲೋಟ ಹಾಲನ್ನು ತಂದು ಮುಂದೆ ಇಟ್ಟಳು. ಕುಮಾರ ಒಂದೇ ಬಾರಿಗೆ ಅಷ್ಟನ್ನೂ ಹೀರಿ. "ನಿಮ್ಮ ಅನುಮತಿಯಿಲ್ಲದೆ ಜಗಲಿ ಏರಿದ್ದು ಅನುಚಿತವಾಯಿತು. ದಯವಿಟ್ಟು ಕ್ಷಮಿಸಿಬಿಡಿ. ನನ್ನ ಸ್ಥಿತಿ ಪೂರಾ ಕೆಟ್ಟಿದ್ದುದರಿಂದ ಹಾಗೆ ಮಾಡಬೇಕಾಯಿತು." ಎಂದ. ಧ್ವನಿ ಅತ್ಯಂತ ಕಾತರಕಂಠದಿಂದ ಹೊರಬಿತ್ತು. ಒಣಗಿದ ತುಟಿಯನ್ನು ನಾಲಿಗೆಯಿಂದ ಒರಿಸಿಕೊಂಡು- "ಈ ಅಪರಾಧವನ್ನು ಖಂಡಿತ ಮನಸ್ಸಿಗೆ ತಂದುಕೊಳ್ಳಬೇಡಿ."

ಪ್ರಾರ್ಥನೆ ಸ್ವಾಭಾವಿಕ ಸರಳಭಾವದಿಂದ ಹೊಮ್ಮಿದುದನ್ನು ಅವಳ ಚಿತ್ತ ಸೂಕ್ಷ್ಮವಾಗಿ ಗಮನಿಸಿತು. ಜೀವನಾಡಿ ಸ್ತಬ್ಧವಾದಂತೆ ಮೌನದಿಂದ ನಿಂತು ಅವನ ಕರುಣ ಕತೆಯನ್ನ ಕೇಳಿದಳು. ಮೃದು ಮನಸ್ಸು ಬಿಸಿಲಟ್ಟಿದ ಮಂಜಿನಂತೆ ಕರಗಿತು. ಮರುಕ ತುಂಬಿದ ವಾಣಿಯಲ್ಲಿ ಪ್ರಶ್ನಿಸಿದಳು,

"ಮುಂದೇನು ಮಾಡುವೆ?"

"ಭಾರತ ಸರಕಾರಕ್ಕೆ ಬರೆದುಕೊಳ್ಳಬೇಕು. ನನ್ನ ಸರ್ವಸ್ವವೂ ಸಮುದ್ರದ ಪಾಲಾಗಿರುವುದರಿಂದ ಅದೂ ಸಹ ಕಷ್ಟ."

ಅವಳು ಒಂದೆರಡು ಘಳಿಗೆ ನೋಟವನ್ನು ಬೇರೆಡೆಗೆ ಹರಿಸಿ ಚಿಂತಿಸುತಿದ್ದು ಅನಂತರ ಅತ್ಯಂತ ಮಾರ್ಮಿಕವಾಗಿ ನುಡಿದಳು "ನೀನು ಇಲ್ಲೇ ಇರುವೆಯಾದರೆ ಆಗಬಹುದು. ಅದರಿಂದ ನಮಗೂ ಪ್ರಯೋಜನವಿದೆ." ದೃಷ್ಟಿ ಹತ್ತಿರದಲ್ಲಿ ಚಲಿಸಿದರೂ ಏನನ್ನೂ ನೋಡುತ್ತಿರಲಿಲ್ಲ. ವ್ಯಕ್ತಿತ್ವ ಮೂರ್ತಿ ಮತ್ತಾಯಿತು.

ಕುಮಾರನಿಗೆ ಸ್ವಲ್ಪ ಆಶ್ಚರ್ಯವಾಯಿತು. ಅಂತಹ ಪ್ರಯೋಜನವೇನು ಎಂಬುದು ಅರ್ಥವಾಗಲಿಲ್ಲ. ಅದರಲ್ಲೂ ಪರಕೀಯನಾದ ತನ್ನಿಂದ ಪ್ರಯೋಜನವಾದೀತೆಂಬ ನಂಬುಗೆಯೂ ಉಳಿಯಲಿಲ್ಲ. ಏನೆನ್ನಬೇಕೋ ಹೊಳೆಯಲಿಲ್ಲ. ಹೇಗೆ ಕೃತಜ್ಞತೆ ಸಲ್ಲಿಸಬೇಕೋ ತಿಳಿಯಲಿಲ್ಲ. ಆಶ್ಚರ್ಯ ಚಕಿತನಾದ. ಅವಳು ಏನೋ ಒಂದು ರೀತಿಯಲ್ಲಿ ಹೇಳಲಾರದೆ ಹೇಳುವಂತೆ ಅತ್ಯಂತ ನಿರಾಶಾಜನಕ ಧ್ವನಿಯಲ್ಲಿ ಮುಂದುವರಿದಳು,

"ನೋಡು, ನನಗೆ ಇಬ್ಬರು ಅಣ್ಣಂದಿರಿದ್ದರು. ಅವರಲ್ಲಿ ಹಿರಿಯಣ್ಣ ಮೊನ್ನೆ ತಾನೆ ತೀರಿಕೊಂಡ. ಅವನಿಗೆ ಮದುವೆಯಾಗಿ ಮಕ್ಕಳಿದ್ದರು. ಅವನ ದಾಂಪತ್ಯ ಜೀವನದಲ್ಲಿ ಸಾಮರಸ್ಯವಿಲ್ಲದೆ ಅವನ ಪತ್ನಿ ಮಕ್ಕಳ ಸಹಿತ ಮೊದಲೇ ಹೊರಟು ಹೋಗಿದ್ದಳು; ಇಂದು-ನಾಳೆ ಬರಬಹುದೇನೋ....ಎರಡನೆಯವನು ಮಿಲಿಟರಿಯಲ್ಲಿದ್ದಾನೆ. ಅವನಿಲ್ಲಿಗೆ ಒಂದು ವಾರದ ಹಿಂದೆ ಬರಬೇಕಾಗಿತ್ತು. ನಿನ್ನೆ ಮೊನ್ನೆಯ ಸುದ್ದಿಯ ಪ್ರಕಾರ ವಿಯಟ್ನಾಮಿನ ಯುದ್ಧದಲ್ಲಿ ತೀರಿಕೊಂಡನಂತೆ. ಅದು ತಾಯಿಗೆ ತಿಳಿದರೆ ಎದೆಯೊಡೆದು ಸತ್ತಾಳು! ನನಗೀಗ ತುಂಬ ಕಷ್ಟಕ್ಕೆ ಬಂದಿದೆ...." ಕಂಠಸ್ವನ ದುಃಖ ಗದ್ಗದವಾಗಿ ವಾಕ್ಯಸರಣಿ ಅಷ್ಟಕ್ಕೆ ತುಂಡುಗಡಿಯಿತು. ಅನಂತರ ತಾನೇ ತಾನಾಗಿ ಸಾವರಿಸಿಕೊಳ್ಳುತ್ತ ಮುಂದುವರಿದಳು ತರುಣಿ "ಆಗ ನಾವು ಅಣ್ಣನ ಸಮಾಧಿಗೆ ಹೂವೇರಿಸಲು ಹೋಗಿದ್ದೆವು. ತಾಯಿ ಚಿಕ್ಕ ಮಗನಿಗಾಗಿ ಬಹಳ ಕಷ್ಟದಿಂದ ಜೀವ ಹಿಡಿದಿದ್ದಾಳೆ. ಅವನು ಈವರೆಗೂ ಬಾರದಿರುವುದನ್ನು ನೋಡಿದರೆ ನನಗೆ ತುಂಬ ಅನುಮಾನ ಮೂಡುತ್ತಿದೆ. ಕೆಲವರು ಅವನು ಸತ್ತಿಲ್ಲ ಎನ್ನುತ್ತಾರೆ. ಅದು ಯಥಾರ್ಥವಾಗಿರಲಿ ಎಂದು ಬೇಡಿಕೊಳ್ಳುವುದೊಂದೇ ನನಗಿರುವ ದಾರಿ. ಇಂದು ಬರುತ್ತಾನೆ. ನಾಳೆ ಬರುತ್ತಾನೆ ಎಂಬ ಭರವಸೆಯ ಮೇಲೆ ತಾಯಿಯ ಜೀವ ಉಳಿಸಿಕೊಂಡಿದ್ದೇನೆ....ಇನ್ನು...."

ಕುಮಾರ ಮನಗರಗಿದ. ಸಮಯೋಚಿತವಾಗಿ-ಸಾಂತ್ವನ ಪೂರ್ವಕವಾಗಿ ಎರಡು ಮಾತು ಹೇಳೋಣವೆಂದರೂ ತುಟಿಗಳು ಬಿರಿಯದಾದುವು. ಯೋಚನಾಕ್ರಾಂತನಾಗಿ ಮರವಟ್ಟಂತೆ ಕುಳಿತ. ತನ್ನದೇ ಕಷ್ಟ ಎಂದುಕೊಂಡರೆ ಇವರದು ಇನ್ನೂ ಕಷ್ಟ....ಈ ವ್ಯಾಕುಲವಿಶ್ವವನ್ನು ಸಂತೈಸುವವರು ಯಾರು?

ಪ್ರಶ್ನೆ ಮನವನ್ನು ಭೈರಿಗೆಯಂತೆ ಕೊರೆಯಿತು. ತದೇಕ ಚಿತ್ತದಿಂದ ಪ್ರಕೃತಿಸ್ಥನಾದ.

ತರುಣಿಯ ನಯನದ್ವಯಗಳಲ್ಲಿ ಸಣ್ಣಗೆ ಬೆಳ್ಳಿಯ ಗೆರೆಯಂತೆ ನೀರಾಡಿತು. ಲೋಹಿತ ಕಾಂತಿಯ ಮುಖಮಂಡಲ ನಸು ಮ್ಲಾನಗೊಂಡಿತು. ಬಾಷ್ಪ ಗದ್ಗದ ಕಂಠದಿಂದ ಮತ್ತೆ ಮುಂದುವರಿದಳು,

"ನಮ್ಮ ತಂದೆಯು ತೀರಿಕೊಂಡದ್ದೂ ಯುದ್ಧರಂಗದಲ್ಲೇ. ಈಗ ಮಗನೂ ಸಹ ಯುದ್ಧದಲ್ಲಿ ಮಡಿದನೆಂಬ ಸುದ್ದಿ ತಾಯಿಗೆ ಮುಟ್ಟಿದರೆ ಅವರು ಬದುಕುವುದು ಕನಸಿನ ಮಾತು."

"ಹಾಗೆ ಎಷ್ಟು ದಿನ ಸುದ್ದಿಯನ್ನು ಬಚ್ಚಿಡಲಾಗುತ್ತೆ? ನೀವವರಿಗೆ ಧೈರ್ಯವಾಗಿರುವುದನ್ನು ಕಲಿಸುವುದು ಲೇಸು."

"ಕಷ್ಟ....!"

"ಈ ಜಗತ್ತಿನಲ್ಲಿ ಯಾವುದೂ ಸ್ಥಿರವಲ್ಲ....ಬಿಡಿ."

"ಅದವರಿಗೆ ಗೊತ್ತು. ಆದರೆ ಉದ್ದೇಶವೇ ಬೇರೆ."

"ಏನು....?"

"ತಾನು ಮೊದಲಾಗಿ ಜೀವ ಬಿಡಬೇಕೆಂಬ ಇಚ್ಛೆ."

ಕುಮಾರ ಮಾತಾಡಲಿಲ್ಲ. ಎದೆಯಾಳದಿಂದ ಬಿಸಿಯುಸಿರೊಂದು ಹರಿದು ಬಂತು.

★ ★ ★ ★ ★

ದೂರ ದಿಗಂತದಲ್ಲಿ ಸಂಧ್ಯಾ ಪದ್ಮಿನಿ ಬೆಳಗುತಿತ್ತು.

ತಂಪೂರೆವ ತಂಗಾಳಿ ಅಲೆಯಲೆಯಾಗಿ ಬೀಸುತಿತ್ತು.

ನೇರ ನೋಟವನ್ನು ಹೊರಜಗತ್ತಿನಲ್ಲಿ ನೆಟ್ಟ. ಬರ್ಮೀ ಪ್ರಕೃತಿಯ ಉತ್ತಮಾಂಗದಮೇಲೆ ಗಿರಿ ಶಿಖರದ ನೆರಳು ಮೈಚಾಚಿತ್ತು. ಎಡಭಾಗದಲ್ಲಿ ಹೊಂಬಿಸಲು ಸೌಮ್ಯವಾಗಿ ಹರಡಿತ್ತು. ನಾನಾ ಬಗೆಯ ಪಕ್ಷಿಗಳಿಂಚರವನ್ನು ಆಲೈಸುತ್ತ ಒಂದೆರಡು ಘಳಿಗೆ ನೋಟವನ್ನು ಅತ್ತ ಹರಿಸಿದನೇನೋ....ಅಷ್ಟರಲ್ಲಿ ಬರ್ಮೀ ತರುಣಿ ಹೊರ ಬಂದಳು ತುಟಿಗಳಲ್ಲಿ ರಜತರೇಖೆಯಂತಹ ಎಳೆನಗು ಮಿನುಗಿ ಮಾಯವಾಯಿತು. ಅವಳು ನೈರಾಶ್ಯಪೂರ್ಣ ಧ್ವನಿಯಲ್ಲಿ ನುಡಿದಳು,

"ಅಣ್ಣ ಬರುವಂತಿದ್ದರೆ ಇಷ್ಟರೊಳಗಾಗಿಯೇ ಬರಬೇಕಿತ್ತು. ಇನ್ನು ಬರುವುದು ಅಸಂಭವ."

ಹಾದಿಯ ಕಡೆ ಹೊರಳಿದ್ದ ಅವಳ ನೋಟ ಹಿಮ್ಮರಳಿದಾಗ ಕುಮಾರ್ ಅಂದ,

"ಇಂದಲ್ಲದಿದ್ದರೆ ನಾಳೆ ಬಂದಾನು, ಅಷ್ಟೇಕೆ ಚಿಂತೆ? ನೀವೂ ಸಹ ತಲೆಕೆಡಿಸಿಕೊಳ್ಳುವಂತಿದೆ!"

"ಇಲ್ಲ...." ಸ್ವಲ್ಪಹೊತ್ತು ಆಲೋಚನಾಭಂಗಿಯಲ್ಲಿ ಸುಮ್ಮನಿದ್ದು ಪುನಃ ಮುಂದುವರಿದಳು "ತಾಯಿಗಾಗಿ ಕಳವಳ. ಅವರು ಒಂದುವಾರದಿಂದ ಆಹಾರ ಮುಟ್ಟಿಲ್ಲ....ಸ್ಥಿತಿಗತಿ ನೋಡಿದರೆ ಭಯವಾಗುತ್ತದೆ."

"ಪಾಪ...." ನಸು ಕಂಪಿತ ಸ್ವರ ಎದೆಯಾಳದಿಂದ ಹೊರಬಿತ್ತು.

"ಅವನು ಹೋಗಿ ಏಳು ವರ್ಷಗಳಾಗಿವೆ. ಕಳೆದವಾರ ಒಂದು ತಿಂಗಳ ರಜೆಯಮೇಲೆ ಬರುವುದಾಗಿ ಬರೆದಿದ್ದ. ಇದುವರೆಗೂ ಇಲ್ಲ."

''ಸ್ವಲ್ಪ ಹೆಚ್ಚು ಕಡಿಮೆಯಾಗಿರಬಹುದು....ಅದಕ್ಕಾಗಿ....'' ಮಾತನ್ನು ಮುಂದುವರಿಸಗೊಡದಂತೆ ತರುಣಿ ನಡುವೆ ಬಾಯಿ ಹಾಕಿದಳು ''ನನಗೂ ಹಾಗೆನಿಸುತ್ತೆ. ಆದರೆ ತಾಯಿಯದೇ ಕಷ್ಟ. ಅವನನ್ನು ನೋಡುವ ತನಕ ಖಂಡಿತ ಆಹಾರವನ್ನು ಮುಟ್ಟುವುದಿಲ್ಲ.'' ಧ್ವನಿ ಅತ್ಯಂತ ವಿಜಾತೀಯವಾಗಿತ್ತು.

''ಪಾಪ....ಹೆತ್ತೊಡಲು....'' ಮುಂದೆ ಮಾತು ಹೊರಡಲಿಲ್ಲ; ಕುಮಾರ್ ಸುಮ್ಮನಾದ.

''ಈಗ ನೀನೊಂದು ಕೆಲಸ ಮಾಡಬಹುದು. ನಾನು ಆಗಲೇ ಹೇಳಬೇಕೆಂದಿದ್ದೆ. ಆದರೆ ಈ ಒಂದು ದಿನವನ್ನು ಕಾಯುವ ಯೋಚನೆ ಇತ್ತು; ಈಗ ಅದೂ ಕಳೆಯಿತು. ನಮ್ಮ ತಾಯಿಗೆ ಕಿವಿ ಕೇಳುವುದಿಲ್ಲ. ಕಣ್ಣುಗಳೂ ಮಂಜು, ಅವಳ ಬಳಿಗೆ ಹೋಗಿ ನಾನೇ ನಿಮ್ಮ ಮಗ ಎಂದು ಹೇಳಿಕೊಂಡು ಬಿಡು....ಮಗನಂತೆಯೇ ವರ್ತಿಸು. ಅವಳು ಖಂಡಿತವಾಗಿಯೂ ಸಂತುಷ್ಟಳಾಗುತ್ತಾಳೆ.''

''ನಾನು?''

''ಹೌದು! ಅವಳನ್ನುಳಿಸಲು ಇದೊಂದು ಸುಲಭೋಪಾಯ!''

''ಹಾಗಾದರೆ....''

''ಆಕೆ ಖಂಡಿತ ಗುರ್ತು ಹಿಡಿಯುವುದಿಲ್ಲ. ಆಗಲೇ ಹೇಳಿದೆನಲ್ಲ. ಕಣ್ಣು-ಕಿವಿ ಎರಡೂ ಸಕ್ರಿಯವಾಗಿಲ್ಲ. ನೀನು ಅವನಂತೆ ನಟಿಸಿದರೆ ನಂಬುತ್ತಾಳೆ.'' ಧ್ವನಿ ಗಂಭೀರವಾಗಿತ್ತು.

''ಆದರೆ....''

ಕುಮಾರ್ ಒಂದು ಘಳಿಗೆ ಅನುಮಾನಿಸಿದ. ಮುಖಭಾವ ಆಶ್ಚರ್ಯದಿಂದ ಅಂಕಿತವಾಯಿತು.

''ಅನುಮಾನವೇ ಬೇಡ. ನನ್ನ ಹಿಂದೆ ಒಳ ಬಾ.''

ತರುಣಿ ದೂರ ಹಾದಿಯೆಡೆಗೆ ಒಮ್ಮೆ ನೋಟವನ್ನು ಹೊರಳಿಸಿ ತಲೆ ಬಾಗಿಲಿಂದಲೇ ಕೂಗಿ ಹೇಳಿದಳು ''ಅಮ್ಮಾ....! ಅಣ್ಣ ಬಂದಿದ್ದಾನೆ!''

ಮರುಕ್ಷಣದಲ್ಲಿ ಅಪೂರ್ವ ಸಂದರ್ಶನದಿಂದ ಉದ್ಭವಿಸುವ ಆನಂದೋತ್ಸಾಹದಿಂದ ವಿಜೃಂಭಿಸುತ್ತಾ ನಾಟಕೀಯವಾಗಿ ಒಳನುಗ್ಗಿದಳು. ಕುಮಾರ್ ಆಶ್ಚರ್ಯ ಚಕಿತನಾಗಿ ಹಿಂದೆಯೇ ಹೋದ. ಒಳಗಡೆ ಪಲ್ಲಂಕದ ಮೇಲೆ ಮಲಗಿದ್ದ ವೃದ್ಧೆ ಇತ್ತಲೇ ಕುತೂಹಲ ಭರಿತ ದೃಷ್ಟಿಯಿಂದ ನಿಟ್ಟಿಸಿದಳು. ಅಶಕ್ತ ಶರೀರ ಕ್ಷೀಣ ಗತಿಯಲ್ಲಿ ಉಸಿರಾಡುತಿತ್ತು. ಕಣ್ಣುಗಳಲ್ಲಿ ತಟ್ಟನೆ ಆಶಾಭಾವ ಸ್ಫುರಿಸಿತು.

ತರುಣಿ ಮತ್ತೆ ಕೂಗಿ ಹೇಳಿದಳು ''ಅಣ್ಣ ಬಂದಿದ್ದಾನೆ!''

ಈ ಸಲ ವೃದ್ಧೆಯ ಮುಖ ಹೂವಿನಂತರಳಿತು. ಎದ್ದು ಕೂರಲು ಪ್ರಯತ್ನಿಸಿದಳು. ಮಗಳು ಅವಳಿಗೆ ಸಹಾಯ ಮಾಡಲು ಮುಂದಾಗುತಿದ್ದಂತೆ ಕುಮಾರನೂ ಮುಂದಾದ. ಇಬ್ಬರೂ ಹಿಡಿದು ಕೂರಿಸಿದರು. ಅವಳು ಅತ್ಯಂತ ಆನಂದಾತಿರೇಕದಿಂದ ನುಡಿದಳು ''ಬಂದೆಯಾ ಮಗನೇ!'' ಅಕ್ಷರ ಅಕ್ಷರವೂ ಸುಖದುಃಖಗಳ ಸ್ರೋತದಲ್ಲಿ ನಿಮಜ್ಜಿತವಾಗಿದ್ದುವು.

''ಹೌದಮ್ಮಾ ಬಂದೆ.'' ಪ್ರೀತ್ಯಾದರದಿಂದ ಉತ್ತರಿಸಿದ ಕುಮಾರ.

ಜನನಿ ಕ್ಷೀಣಿತ ಹಸ್ತಗಳಿಂದ ಅಪ್ಪಿಕೊಂಡು ಮೈದಡವಿದಳು. ಕುಮಾರ ಅತ್ಯಂತ ಆತ್ಮೀಯತೆಯನ್ನು ತೋರಿ ಆಲಂಗಿಸಿ ಕೆನ್ನೆಗಳಿಗೆ ಹೂಮುತ್ತನ್ನಿಟ್ಟು ಅಭಿವಾದಿಸಿದ. ಆಗ ಆಕೆಗಾದ ಆನಂದ ಅಷ್ಟಿಷ್ಟಲ್ಲ. ಬಳಿಯಲ್ಲಿ ಕೂಡಿಸಿಕೊಂಡು ಕೇಳಿದಳು ''ಹೇಗಿದ್ದೀಯಪ್ಪಾ? ಈಗೀಗ ನನ್ನ ಕಣ್ಣುಗಳೂ ಮಂಜಾಗಿವೆ. ನಿನ್ನನ್ನು ಕಣ್ತುಂಬ ನೋಡುವ ಅದೃಷ್ಟವೂ ನನಗೆ ಇಲ್ಲ.'' ಕಂಪಿತ ಸ್ವರ ಎದೆಯಾಳದಿಂದ ಹರಿದು ಬಂತು.

''ಚೆನ್ನಾಗಿರುವೆ. ದೇವರು ನಿಮ್ಮನ್ನು ನೋಡಲೆಂದೇ ನನ್ನನ್ನು ಬದುಕಿಸಿದ್ದಾನೆ!''

''ನೀನಾದರೂ ಸುಖವಾಗಿರು ಮಗನೆ!'' ಎಂದ ವೃದ್ಧೆ ಮಗಳೆಡೆಗೆ ತಿರುಗಿ ''ಒಂದು ಲೋಟ ಹಾಲು ತಾ ಶ್ರೀಮುಖಿ!''

ಕುಮಾರನಿಗೆ ಆ ಹೆಸರು ಕೇಳಿ ಆದ ಆಶ್ಚರ್ಯಕ್ಕೆ ಮಿತಿಯೇ ಇರಲಿಲ್ಲ. ಆದರೂ ಆಶ್ಚರ್ಯಾತಿರೇಕವನ್ನು ಅದುಮಿ ಹಿಡಿದ. ರಕ್ತದ ಕಣಕಣವೂ ತುಳುಕುತ್ತಿರುವಂತೆ ಭಾಸವಾಯಿತು. ಮನೋದಧಿಯಲ್ಲಿ 'ಶ್ರೀಮುಖಿ' ನಾಮಧೇಯ ಧುಮುಧುಮಿಸಹತ್ತಿತು. ಒಡನೆ ನಿಶ್ಚಲ ದೃಷ್ಟಿಯನ್ನು ಅವಳೆಡೆಗೆ ಹರಿಸಿದ. ಅವಳಾಗಲೇ ಹೊಸ್ತಿಲು ದಾಟಿಯಾಗಿತ್ತು. ಕೆಲವೇ ನಿಮಿಷಗಳಲ್ಲಿ ತುಂಬಿದ ಎರಡು ಲೋಟೆ ಹಾಲಿನೊಡನೆ ಹಿಂದಿರುಗಿದಳು. ಕುಮಾರ ಒಂದು ಲೋಟವನ್ನು ವೃದ್ಧೆಯ ಬಾಯಿಗೆ ಹಿಡಿದು ''ಕುಡಿಯಿರಿ.'' ಎಂದ.

''ನೀನು ತಗೋ. ದೂರದಿಂದ ದಣಿದು ಬಂದಿದ್ದಿ.''

''ನೀವು ಮೊದಲು ತೆಗೆದುಕೊಳ್ಳಿ ಆಮೇಲೆ ನಾನು.''

ವೃದ್ಧೆ ಸ್ವಂತಮಗನೆಂಬಂತೆಯೇ ಪರಿಭಾವಿಸಿ ಹಾಲನ್ನು ನೆಮ್ಮದಿಯಿಂದ ಸೇವಿಸಿದಳು.

ಅನಂತರ,

ಅತ್ಯಂತ ಕಮನೀಯ ಕುತೂಹಲದಿಂದ ಕುಮಾರ ಶ್ರೀಮುಖಿಯನ್ನು ಕೇಳಿ

‘‘ನಿನ್ನ ಹೆಸರು ಭಾರತೀಯವಾಗಿದೆಯಲ್ಲಾ, ಏನು ವಿಶೇಷ?’’

‘‘ನನ್ನ ತಂದೆ ಭಾರತೀಯರು!’’

‘‘ಅವರ ಹೆಸರು?’’

‘‘ಶ್ರೀಕಾಂತ ಸಿದ್ದೂರ್!’’

‘‘ಓ ಅವರು ನಮ್ಮ ದೊಡ್ಡಪ್ಪ!’’

ಅವಳು ಒಂದೆರಡು ಘಳಿಗೆ ಆಶ್ಚರ್ಯಾವೇಗದಿಂದ ಅವಾಕ್ಕಾದರೂ ಅನಂತ ನಗುಮುಖದಿಂದ ಕೇಳಿದಳು,

‘‘ನಿನ್ನ ತಂದೆಯ ಹೆಸರೇನು?’’

‘‘ನಿಶಾನಾಥ ಸಿದ್ದೂರ್!’’

ಆಗ ಇಬ್ಬರ ಮುಖಮಂಡಲಗಳೂ ಅರಳು ಮಲ್ಲಿಗೆಯಾದುವು. ಹೃದಯ ಹೊಂಗಡಲು ತುಂಬಿ, ಉಕ್ಕೇರಿ ಮಿಂಚಿನಂತೆ ಆತ್ಮೀಯ ಲಿಂಗನ ಪಡೆದುಕೊಂಡರು ಬಹುಶಃ ಆ ಮುಹೂರ್ತದಲ್ಲಿ ಜಗತ್ತೇ ಮಧುಮಯವಾಗಿ ತೋರಿತೇನೋ....

ಗೌರಮ್ಮ

ಮಲೆನಾಡಿನ ಸುಂದರ ಮನಮೋಹಕ ಬೀಡು....

ಎಲ್ಲಿಂದ ಎಲ್ಲಿಯವರೆಗೂ ಹಸುರುಕ್ಕುವ ವನಶ್ರೀ!

ಆದರೆ....

ನನ್ನ ಕರ್ಣದೇಶಗಳಿಗೆ ಬಿದ್ದ ವರ್ಣನೆಯಾದರೂ ಎಂತಾದ್ದು....? ಈಗ ಯೋಚಿಸಿಕೊಂಡರೆ ಕೆಲವೊಮ್ಮೆ ನಗು ಬರುತ್ತದೆ. ಮಲೆನಾಡಿನಲ್ಲಿ ಸರ್ವಿಸ್ ಮಾಡಿದವರಾದ ಡಾ॥ ರಾಮು ಕಂಠಪೂರ್ತಿ ಮಲೆನಾಡಿನ ವಿಚಾರವನ್ನು ಬಣ್ಣಿಸುತ್ತ - ನನಗೆ ಅಲ್ಲಿಯ ಆಸ್ಪತ್ರೆಗೆ ವರ್ಗವಾದ ಆರ್ಡರ್ ಕೈಗೆ ಬಂದಾಗ ತಮ್ಮ ಅನುಭವವನ್ನು ಸ್ನೇಹ ಸೌಹಾರ್ದಗಳ ಸ್ವರದಲ್ಲಿ ಈ ರೀತಿ ಹೊರಹಾಕಿದರು,

''ಡಾಕ್ಟರ್! ಮಲೆನಾಡಿನ ಸೌಂದರ್ಯ-ಸೊಗಸು ಎಲ್ಲಾ 'ಕೆಲವು' ದಿನಗಳು ಮಾತ್ರವೇ ಹಿತ. ಅನಂತರ ಬೇಸರ ಬರುತ್ತದೆ. ಖಂಡಿತ ನೀವು ಮೂರು ವರ್ಷ ಕಾಲಾವಧಿ ಒಬ್ಬೊಂಟಿಗರಾಗಿ ಅಲ್ಲಿರುವುದು ಸಾಧ್ಯವೇ ಇಲ್ಲ. ಕಗ್ಗಾಡು, ಸೌಕರ್ಯ ಕಡಿಮೆ; ಜನಜೀವನ ಬಹಳ ಸಪ್ಪೆ. ಜನಸಾಮಾನ್ಯರಿಗೆ ಹಾಗೂ ಹೀಗೂ ಅಲ್ಲಿ ಕಳೆದೀತು. ಬುದ್ಧಿಜೀವಿಗಳು ಅಲ್ಲಿದ್ದು ಮಾಡುವುದೇನು? ಕೊನೆಕೊನೆಗೆ ನಿಮಗೆ ಜೀವನ ಅತ್ಯಂತ 'ನೀರಸ' ಎನಿಸಬಹುದು!''

ನಾನಿಲ್ಲಿಗೆ ಬಂದು ಎರಡು ತಿಂಗಳು ಸಂದುವು. ಆಗಲೇ ಮಳೆ ಗಾಳಿಯ ಬಿರುಸನ್ನೂ ಎಣೆಯಿಲ್ಲದ ಚಳಿಗಾಳಿಯ ಕೊರೆತವನ್ನೂ ಕಂಡಿರುವೆ. ಊರಿನ ಪರಿಸರದ ರೂಪುರೇಷೆಗಳನ್ನೂ ಭಿನ್ನಭಿನ್ನ ಮುಗ್ಧದುಗ್ಧ ಜನಜೀವನದ ಅಲ್ಪ ಪರಿಚಯವನ್ನೂ ಮಾಡಿಕೊಂಡಿದ್ದಾಗಿದೆ. ಇದುವರೆಗೆ ನನಗಿಲ್ಲಿ 'ಅಹಿತ' ಎಂಬುದು ಕಿಂಚಿತ್ತೂ ಕಂಡುಬರಲಿಲ್ಲ-ಪ್ರಕೃತಿಯ ವಿಚಾರದಲ್ಲಿ ಹೇಳುವುದಾದರೆ ಮೂರು ವರ್ಷ ಮಾತ್ರವೇಕೆ ಆರು ವರ್ಷವಾದರೂ ಸರಿಯೇ ಇದ್ದು ಕೆಲಸಮಾಡಬಲ್ಲೆ ಎಂಬ ಪೂರ್ಣವಿಶ್ವಾಸ ಮನೋದಧಿಗೆ ಅಪೂರ್ವ ಬಾವ ಸಂಯೋಜನೆಗೊಳಿಸಿದೆ. ಮೈಯ್ಯಲ್ಲಿ ಉತ್ಸುಕತೆ-ಮನದಲ್ಲಿ ಆಶಾಭಾವನೆ-ಮುಗಿಯದ ಕೆಲಸ ಒಂದಕ್ಕೊಂದು ಸಂಬಂಧ

ಕಲ್ಪಿಸಿರುವುದರಿಂದ ಹೃತ್ಕಮಲ ದಳದಳವಾಗಿ ಅರಳುತ್ತಿದೆ. ಆಸ್ಪತ್ರೆಯ ಆವರಣದಲ್ಲಿ ವಸತಿ ಇರುವುದರಿಂದ ತೊಂದರೆ ಇಲ್ಲ. ಎಡಬಲಗಳಲ್ಲಿ ಇನ್ನಿಬ್ಬರು ಡಾಕ್ಟರುಗಳು ಸಂಸಾರ ಸಹಿತ ಇದ್ದಾರೆ. ಅವರ ಗೃಹಿಣಿಯರು ಸ್ನೇಹ ಸ್ವಭಾವದವರು. ನನಗಿಲ್ಲಿ 'ಏಕಾಕಿನಿ' ಎಂಬ ಭಾವನೆ ಅಂದಿಂದಿಗೂ ಮೂಡಲಿಲ್ಲ. ಹಳ್ಳಿಗಳಿಂದ ಅಥವಾ ಯಾವುದೇ ಮನೆಗಳಿಂದ ಬರುವ ಕರೆಗಳಿಗೆ ನನ್ನೊಂದಿಗೆ ಆಯಾ-ಕಮಲ ಹೊರಡುತ್ತಾಳೆ. ಅವಳು ಸಹಕಾರದ ಜ್ಯೋತ್ಸ್ನಾರೂಪಿಣಿ. ಮಲೆನಾಡಿನ ನಲವತ್ತು ವಸಂತಗಳ ಸೊಂಪನ್ನುಂಡವಳು. ನನ್ನ ಮನೆಗೆಲಸದಲ್ಲಿ ಅವಳದೇ ಪ್ರಮುಖ ಪಾತ್ರ. ರಾತ್ರಿ ತಂಗುವುದು ಸಹ ಇಲ್ಲಿಯೆ. ಈ ಎಲ್ಲಾ ಅನುಕೂಲ ಸಿಂಧು ನನ್ನನ್ನು ಪರಮ ಸುಖಿಯನ್ನಾಗಿ ಮಾಡಿದೆ.

ಅಂದಮೇಲೆ ಇನ್ನೆಲ್ಲಿಯ ಅಹಿತ?

'ಹೌಸ್ ಸರ್ಜನ್ಸಿ' ಮುಗಿಸಿ ಎರಡೂವರೆ ವರ್ಷಗಳು ಸಂದುವೇನೋ....ಈಗ ವೈದ್ಯಕೀಯ ರಂಗದಲ್ಲಿ ಸಾಕಷ್ಟು ಅನುಭವವಾಗಿದೆ. ಅನೇಕ ವೇಳೆ ನಾನೇ 'ಸೀರಿಯಸ್' ಕೇಸುಗಳ ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕಾಗುತ್ತದೆ. ಹಾಗೆ ಯಾವುದೇ ಕೇಸನ್ನು ಮುಟ್ಟುವ ಮುನ್ನ ಚಿಕಿತ್ಸೆಯನ್ನು ಭಗವಂತನಿಗೆ ಅರ್ಪಿಸಿಬಿಡುವೆ. ಅದರ ಒಳ್ಳಿತು ಕೆಡಕು ಅವನಿಗೆ ಸೇರಿದ್ದು ಎಂಬ ಸಂಕಲ್ಪ ಮನಸ್ಸಿಗೆ ಇರುವುದರಿಂದ ಸಾಧನೆ ಸುಲಭವಾಗುತ್ತದೆ. ನನ್ನಲ್ಲಿ ನನ್ನನ್ನೇ ಉತ್ಸರ್ಗಗೊಳಿಸುವ ತೀವ್ರ ಅಭಿಲಾಷೆ ಇರುವುದರಿಂದ ಚಿಕಿತ್ಸಾರಂಗಕ್ಕೆ ಕ್ಷೇಮನಿಧಿ ದೊರೆಯುತ್ತದೆ, ಎಂದರೆ ಅತ್ಯುಕ್ತಿಯಾಗಲಾರದೇನೋ....ಅಂತೂ ಯಾವ ಮಹೋದ್ದೇಶಕ್ಕಾಗಿ ವೈದ್ಯಕೀಯ ಕ್ಷೇತ್ರಕ್ಕೆ ಉತ್ಸುಕತೆಯಿಂದ ಪದಾರ್ಪಣೆ ಮಾಡಿದೆನೋ....ಆ ಉದ್ದೇಶ ಖಂಡಿತಾ ಸಾರ್ಥಕಗೊಳಿಸಲೇಬೇಕು, ಎಂಬುದೇ ನನ್ನ ಇಂದಿನ ಪರಿಜ್ಞಾನ.

ಆಸ್ಪತ್ರೆಯ ಅಪರ ಪ್ರಾಂತದಲ್ಲಿ ತುಂಗಾನದಿಯ ರಮ್ಯ ತಟಾಕ. ಆ ಬೃಹದ್ ಜಲರಾಶಿಯ ಜುಳು ಜುಳು ಮಂಜುಳಗಾನ ನಿಶ್ಶಬ್ಧ ಶಾಂತ ವಾತಾವರಣದಲ್ಲಿ ಕರ್ಣಪಟಲಗಳ ಮೇಲೆ ಮಧುರತರವಾಗಿ ಬೀಳುವಾಗ ಇಲ್ಲೇ, ಈ ದಿಶೆಯಲ್ಲೆ ಹರಿಯುತ್ತಿರುವಂತೆ ಉದ್ಭಾಸಿತವಾಗುತ್ತದೆ. ಆಸ್ಪತ್ರೆಯ ಆವರಣ ಚಿಕ್ಕದೇನೂ ಅಲ್ಲ; ಸುತ್ತ ನಲವತ್ತು-ಐವತ್ತು ಮಾವಿನಮರಗಳಿವೆ. ಬಹುಶಃ ಈ ತೋಟ ಯಾರೋ ಖಾಸಗಿಯವರಿಗೆ ಸೇರಿದ್ದು ಅದನ್ನು ಆಸ್ಪತ್ರೆಗಾಗಿ ಸರಕಾರ ಕೊಂಡಿರಬಹುದು ಎನಿಸುತ್ತೆ. ಆಸ್ಪತ್ರೆಯ ಕಟ್ಟಡವೂ ಅಷ್ಟೇ ಹಳೆಯದು. ಸುತ್ತಮುತ್ತ ಸೇರಿಸಿ ಕಟ್ಟಿರುವುದರಿಂದ 'ಚೌಚೌ' ಆಗಿ ವಿಲಕ್ಷಣವಾಗಿದೆ. ಆಸ್ಪತ್ರೆಯಿಂದ ನಮ್ಮ ಕ್ವಾಟರ್ಸಿಗೆ

ಸೂರಾರು ಮಾರು ಅಂತರವಿದ್ದು ಮಾವಿನ ತೋಪಿನಲ್ಲಿ ಿದ್ಯುದ್ದೀಪಗಳಿಲ್ಲದಿರುವುದರಿಂದ 'ನೈಟ್ ಡ್ಯೂಟಿ' ಇರುವಾಗಲೆಲ್ಲ (ಕ್ವಾಟರ್ಸ್ ಪತ್ತಿರದಲ್ಲಿದ್ದರೂ) ಆಸ್ಪತ್ರೆಯಲ್ಲಿಯೇ ತಂಗುವುದು ವಾಡಿಕೆ.

★ ★ ★ ★ ★

ಸಂಜೆಯ ರೌಂಡು ಮುಗಿಸಿ ಆಸ್ಪತ್ರೆಯ ಮೆಟ್ಟಿಲಿಳಿದಾಗ ಹೊತ್ತು ಇನ್ನೂ ಿದರ ಅಂಚನ್ನು ದಾಟಿರಲಿಲ್ಲ. ಆಸ್ಪತ್ರೆಯ ವೈದ್ಯಾಧಿಕಾರಿ ಡಾ॥ ನಾಗರಾಜ್ ಮೆಟ್ಟಿಲಿನ ಿಳಿ ನಿಂತು ಯಾರೊಂದಿಗೋ ಮಾತಾಡುತ್ತಿದ್ದರು. ಅವರು ನನ್ನನ್ನು ನೋಡುತ್ತಲೂ,

''ಮನೆಯ ಕಡೆಗೋ?'' ಎಂದರು. ತುಟಿಗಳಲ್ಲಿ ಸರಳ ಸ್ನಿಗ್ಧಹಾಸ ಕ್ಷಣಕಾಲ ಮಿನುಗಿ ಮಾಯವಾಯಿತು.

''ಹೌದು ಸರ್.'' ಎಂದೆ, ಮೆಲುದನಿಯಲ್ಲಿ

''ಡಾ॥ ಅಶ್ವತ್ ಎಲ್ಲಿ? ಅವರ ಕೆಲಸ ಮುಗಿಯಿತೇ?''

''ತಿಳಿಯದು.''

''ನಾವಿಬ್ಬರೂ ನದಿಯಕಡೆ ಗಾಳಿ ಸೇವನೆಗೆ ಹೋಗಬೇಕೆಂದಿದ್ದೇವೆ. ನೀವೂ ಬರುತ್ತೀರಾ?''

ನಾನು ಒಂದು ಕ್ಷಣ ಯೋಚಿಸಿ 'ಆಗಲಿ ಸರ್' ಎಂದೆ.

''ಹಾಗಿದ್ದರೆ ಸ್ವಲ್ಪ ತಾಳಿ, ಅಶ್ವತ್ ಬರಲಿ.''

ನಾನು ವರಾಂಡದ ಇನ್ನೊಂದು ಮೂಲೆಗೆ ಹೋಗಿ ನಿಂತೆ. ಅಲ್ಲೇ ಪಕ್ಕದಲ್ಲಿ ದೊಡ್ಡಮರ. ಅದರಲ್ಲಿ ಲೆಖ್ಖವಿಲ್ಲದಷ್ಟು ಕೋತಿಗಳ ಸಂಸಾರ. ಆಹಾರಾರ್ಥವಾಗಿ ಹೊರ ಹೋಗಿದ್ದ ಕೋತಿಗಳ ಹಿಂಡು ಎಲ್ಲೆಡೆಯಿಂದ ಹಿಂದಿರುಗಿ ಬಂದು ಮರವನ್ನೇರುತ್ತಿದ್ದುವು. ಇಲ್ಲಿ ಶ್ರೀರಾಮನ ಭಕ್ತರಿಗೆ ಯಾರೂ ಅಡ್ಡಿ ಮಾಡುವುದಿಲ್ಲವಾದುದರಿಂದ ಅವು ಸ್ವೇಚ್ಛೆಯಿಂದ ಸಂಸಾರ ಹೂಡಿ, ಸ್ವೇಚ್ಛೆಯಿಂದ ಆಸ್ಪತ್ರೆಯ ವಲಯದಲ್ಲಿ ಓಡಾಡಿ ರೋಗಿಗಳ ಆಹಾರ ಪದಾರ್ಥಗಳನ್ನು ಕಸಿದುಕೊಂಡು ಉದರ ಪೋಷಣೆ ಮಾಡಿಕೊಂಡಿವೆ. ಅವುಗಳ ಮಿತಿಮೀರಿದ ಉಪದ್ರದಿಂದ ರೋಗಿಗಳಿಗಾಗಿ ಮನದಲ್ಲಿ ಮರುಕ ಮೂಡುತ್ತದೆ. ಆದರೂ ಹಣ್ಣು-ಹಂಪಲು-ರೊಟ್ಟಿ ಮುಂತಾದುವುಗಳನ್ನು ಬೀರುವಿನೊಳಗಿಟ್ಟುಕೊಳ್ಳಿ ಎಂದು ಹೇಳುವುದೊಂದೇ ದಾರಿ. ಅನೇಕ ವೇಳೆ ಮನದಲ್ಲಿ ಈ ವಿಚಾರವಾಗಿ ತರ್ಕವಿತರ್ಕಗಳೇಳುತ್ತವೆ. ಆದರೂ ವಿಧಿ ಇಲ್ಲ.

ಮರದಲ್ಲಿ ರಾತ್ರಿ ತಂಗಲು ಸರಿಯಾದ ಸ್ಥಳಗಳನ್ನು ಹೊಂದಿಸಿಕೊಳ್ಳುವುದರಲ್ಲಿ ಒಂದಕ್ಕೊಂದು ಕಚ್ಚಾಡುತ್ತ ಚೀರಿಕೊಳ್ಳುತ್ತಿದ್ದುವು. ಒಣಕಡ್ಡಿ-ಹಣ್ಣೆಲೆಗಳು ಅತ್ತಿಂದಿತ್ತ ಜಿಗಿದಾಡುವಿಕೆಯಿಂದ ಬಳಬಳನೆ ಕೆಳಗಡೆ ಉದುರುವ ಸದ್ದಿನೊಂದಿಗೆ ಅವುಗಳ ಗಲಾಟೆ-ಗದ್ದಲ ಕಿವಿಗಳನ್ನು ಕೋರೈಸುವಂತಿತ್ತು.

ಸ್ವಲ್ಪ ಹೊತ್ತಿನೊಳಗಾಗಿ ಡಾ॥ ಅಶ್ವತ್ ಅಲ್ಲಿಗೆ ಬಂದರು. ಅದೇ ಸಮಯಕ್ಕೆ ಡಾ॥ ನಾಗರಾಜ್ ಮಾತಕತೆ ಮುಗಿಸಿ ಪಟ ಪಟ ಹೆಜ್ಜೆ ಹಾಕುತ್ತ ಸನಿಹಕ್ಕೆ ಬಂದು ''ಹೋಗೋಣವೆ, ಡಾಕ್ಟರ್?'' ಎಂದಾಗ ಚಿತ್ತ ಕೋತಿಗಳ ಪ್ರಪಂಚದಿಂದ ವಿಮುಖವಾಯಿತು.

''ಏನು ಬಹಳ ಯೋಚಿಸುತ್ತಿದ್ದಂತಿದೆ?'' ಎಂದರು ಡಾ॥ ನಾಗರಾಜ್.

''ಯೋಚನೆ ಏನಿಲ್ಲ ನಿಮಗಾಗಿ ಕಾದಿದ್ದೆ, ಅಷ್ಟೆ.''

''ಈ ಕೋತಿಗಳಿಂದ ತುಂಬ ತೊಂದರೆ. ಹುಸಿ ಗುಂಡು ಅಥವಾ ಪಟಾಕಿ ಹಾರಿಸಿ ಓಡಿಸುವುದು ಮೇಲು.''

''ಹೌದು....ಹೌದು!''

ಮೂವರೂ ವೈಚಾರಿಕವಾಗಿ ಏಕೀಭವಿಸಿದೆವು.

ವಾಯು ಸೇವನೆಯ ಇಚ್ಛೆ ಅಲ್ಲಿಗೆ ಮಂಗಳಗಾನ ಹಾಡಿತು. ಮೂವರೂ ಸಾಲಾಗಿ ಮೆಟ್ಟಿಲನ್ನು ಇಳಿದೆವು. ಆಸ್ಪತ್ರೆಗೆ ಭೇಟಿ ಈಯುವ ಮಂದಿ ಸಾಲಾಗಿ ಬರುತ್ತಿದ್ದರು. ಹಳ್ಳಿಯ ಸ್ವಚ್ಛವಾತಾವರಣದಲ್ಲಿ ಬೆಳೆದ ಮುಗ್ಧ ಮನೋಬಾವ ಅಪಾದ ಮಸ್ತಕವೂ ಗೋಚರಿಸುತಿತ್ತು. ಎಲ್ಲರೂ ಮುಗ್ಧ ಮನೋಹರ ಭಾವನೆಯಿಂದ ಅಭಿವಾದನೆ ಸಲ್ಲಿಸಿದರು. ನಾವು ಪ್ರತಿ ವಂದನೆಯನ್ನು ಸಲ್ಲಿಸಿ ಮುಂದುವರಿದೆವು. ಅಲ್ಲಲ್ಲಿ ಕಾಣಬರುತ್ತಿದ್ದ ಹಾಲು ಕೊಕ್ಕರೆಗಳು ಮಲ್ಲಿಕಾ ಮಾಲೆಯಂತೆ ಚೇತೋಹಾರಿಯಾಗಿದ್ದುವು. ಕರ್ಣಾನಂದಕರವಾದ ಬಹುಸಂಖ್ಯೆಯ ಸಾರಸಗಳ ಕ್ರೇಂಕಾರ ಕೋಗಿಲೆ ಕಾಜಾಣಗಳ ಇನಿಗಾನ ಆಗಾಗ ಕೇಳಿ ಬರುತಿತ್ತು.

ಚಿದಾಕಾಶದಲ್ಲಿ ಅನುಭೂತವಾದ ಅದ್ಬುತ ಶಾಂತಿಯನ್ನು ನನ್ನಷ್ಟಕ್ಕೆ ನಾನೇ ಆಸ್ವಾದಿಸಿಕೊಳ್ಳುವಾಗ ಡಾ॥ ರಾಮು ಮತ್ತು ಅವರ ಮಲೆನಾಡಿನ ಅನುಭವ ಚಿತ್ತ ಭಿತ್ತಿಯಲ್ಲಿ ಸುಳಿದಳಿದರು. ಈ ಅದ್ಭುತ ಜಗತ್ತಿನಲ್ಲಿ ಉಸಿರಾಡುತ್ತಿರುವ ವಿಭಿನ್ನ ಜೀವನ, ವಿಭಿನ್ನ ಅನುಭವ ವಿಭಿನ್ನ ರುಚಿ ಗಮನೀಯವಾದುದು ಎಂದುಕೊಂಡೆ.

''ನಿಮಗೆ ಇಲ್ಲಿಯ ವಾತಾವರಣ ಹೇಗೆನಿಸುತ್ತೆ?'' ಡಾ॥ ನಾಗರಾಜ್ ಪ್ರಶ್ನೆ ಹಾಕಿದರು.

''ತುಂಬ ಹಿತವಾಗಿದೆ.''

''ಕೆಲವರಿಗೆ ಹಿಡಿಸುವುದಿಲ್ಲ!'' ತುಟಿಗಳಲ್ಲಿ ಮುಗುಳುನಗೆ ಮೂಡಿತು.

ನನಗೆ ತಟ್ಟನೆ ಡಾ॥ ರಾಮುರವರ ನೆನಹು ಮತ್ತೊಮ್ಮೆ ಮೂಡಿತು. ನಾನು ಮಾತಾಡದೆ 'ಹೌದು' ಎಂಬಂತೆ ತಲೆದೂಗಿದೆ. ಡಾ॥ ಅಶ್ವತ್ ಯಾವ ಚಿಂತನೆಯಲ್ಲಿದ್ದರೋ ಅವರು ಏನೂ ಹೇಳಲಿಲ್ಲ. ನನ್ನ ನೋಟ ಒಂದು ಕ್ಷಣ ಅವರೆಡೆಗೆ ಹರಿದು ಬೇರೆಡೆಗೆ ಸಿಡಿಯಿತು.

'ಸಂಧ್ಯಾ ಶಾಂತಿಯ ಸುಂದರ ವಾತಾವರಣದಲ್ಲಿ ಹರಿದ ಅರುಣನ ಹೊಂಗಾಂತಿ ಮುಖ ಮೈಗಳಿಗೆ ಓಕುಳಿಯೆರಚಿತ್ತು. ಮೂವರೂ ಸಾಲಾಗಿ ಹೆಜ್ಜೆ ಹಾಕಿದೆವು. ಮಾವಿನ ತೋಪಿನ ಸುಂದರ ಹಾದಿಯು ಅಂಕುಡೊಂಕಾಗಿ ಹರಿದು ದೂರ ನದೀ ಪಾತ್ರಕ್ಕೆ ಇಳಿದಿತ್ತು. ಸೈಕತರಾಶಿಯ ತಡಿಯೂ ವಿಶಾಲವಾದದ್ದೇ. ಅದನ್ನು ದಾಟಿ ಅಂಚಿನಲ್ಲಿ ಮಲಗಿದ್ದ ಹೆಬ್ಬಂಡೆಗಳ ಮೇಲೆ ಕುಳಿತೆವು. ಬಿರುಸಿನಿಂದ ಸಾಗಿ ಹೋಗುವ ಆ ಸುನೀಲ ಜಲರಾಶಿ....ಮತ್ಸ ಬೇಟೆಗೆಂದು ಅಲ್ಲಲ್ಲಿ ಹಾರಾಡುವ ಬಕಪಕ್ಷಿಗಳ ಹಿಂಡು. ಹಸುರು ಸೂಸುವ ಸುಂದರ ವನರಾಜಿ ಬೆಟ್ಟ ಗುಡ್ಡಗಳ ಮಹಾಶ್ರೇಣಿ....

ಸುತ್ತ ಮುತ್ತಿನ ಆ ಪ್ರಾಂತವೆಲ್ಲ ಅದೆಷ್ಟು ಮನಮೋಹಕವೋ....

ಸಂಧ್ಯಾ ವಾತಾವರಣವಂತೂ ತನುಮನಗಳಿಗೆ ಆನಂದಾಮೃತವನ್ನು ಯಥೇಷ್ಟವಾಗಿ ಉಣಿಸುತಿತ್ತು. ಪಕೃತಿ ಶಕ್ತಿತತ್ತ್ವದ ಒಂದೇ ಒಂದು ಹನಿಯನ್ನೂ ಸಹ ನಾವು ಜೀರ್ಣಿಸಿಕೊಳ್ಳಲಾರೆವು ಎನಿಸಿ-ನಮ್ಮ ವಿದ್ಯೆ ವಿಜ್ಞಾನ ಅತ್ಯಂತ ಬಾಲಿಶವಾಗಿ ತೋರಿ ನನ್ನಷ್ಟಕ್ಕೆ ಮುಗುಳುನಗು ಮೂಡಿತು.

ಆಗ ಡಾ॥ ಅಶ್ವತ್ ನನ್ನ ಗಮನಿಸಿದರೇನೋ ''ಏನ್ರೀ, ವಿಶೇಷ? ನಿಮ್ಮಷ್ಟಕ್ಕೆ ನೀವೇ ನಗುತಿದ್ದೀರಿ!'' ಎಂದರು. ಪ್ರಶ್ನೆ ಹಾಸ್ಯ ಪ್ರಧಾನವಾಗಿ ಹರಿದು ಬಂತು

''ಎಷ್ಟಾದರೂ ನಗುವ ವಯಸ್ಸು ನಗಲಿ ಬಿಡಿ!'' ಎಂದರು ಡಾಕ್ಟರ್ ನಾಗರಾಜ್.

ನನಗೆ ಇಬ್ಬರಿಗೂ ಏನುತ್ತರಿಸಬೇಕೋ ತಿಳಿಯಲಿಲ್ಲ. ಒಂದೆರಡು ಕ್ಷಣ ತಬ್ಬಿಬ್ಬಾದವಳಂತೆ ಸ್ತಬ್ಧಳಾದರೂ ಮತ್ತೆ ನುಡಿದೆ ''ಅಂತಹದ್ದೇನಿಲ್ಲ. ಸಹಜವಾಗಿ ಹೇಳಬೇಕೆಂದರೆ ಪ್ರಕೃತಿಯ ಮುಂದೆ ನಮ್ಮ ಮನೋಜ್ಞಾನವನ್ನು ಹೋಲಿಸಿಕೊಂಡೆ.....ಅದರಿಂದಲೇ ನಗು ಬಂತು.''

''ಸಹಜ'' ತಲೆದೂಗಿದರು ಡಾ॥ ನಾಗರಾಜ್.

ಕಲ್ಲು ಬಂಡೆಗಳ ಮಧ್ಯೆ ನೊರೆನೊರೆಯಾಗಿ ಮುನ್ನುಗುವ ವಾರಿ ರಾಶಿಯನ್ನು ನೋಡುತ್ತ-''ಈಗ ನೀರು ಕಡಿಮೆಯಾಗಿದೆ. ಮಳೆಗಾಲದಲ್ಲಿ ನೋಡಬೇಕು ಇದರ ಅಟ್ಟಹಾಸ!''

''ಗಂಗಾ ಸ್ನಾನ ತುಂಗಾಪಾನ'' ಎನ್ನುತ್ತಾರೆ ನೋಡಿ ಆ ವಾಕ್ಯ ಸರಣಿಯಲ್ಲಿ ಎಂತಹ ಸತ್ವವಡಗಿದೆ ಎಂಬುದನ್ನು ಸ್ವತಃ ಅನುಭವಿಸಿದರೇನೇ ವಿನಃ ಸುಮ್ಮನೆ ತಿಳಿಯಲಾರದು.''

ನನಗೂ ಅದು ಹೌದೆನಿಸಿತು.

ಹಳೆಯ ವಿಚಾರವನ್ನು ತಮ್ಮಲ್ಲೇ ಮೆಲಕು ಹಾಕುತಿದ್ದ ಡಾ॥ ಅಶ್ವತ್ ''ಇಲ್ಲಿ ನರ್ಸ್ ಗೌರಮ್ಮ ಬಿದ್ದು ಪ್ರಾಣ ಬಿಟ್ಟಿದ್ದು ನೆನೆಸಿಕೊಂಡರೆ ಈಗಲೂ ಆಶ್ಚರ್ಯವೆನಿಸುತ್ತೆ. ಈ ಸ್ಥಳದಲ್ಲಿ ಆಳವಾದ ಗುಂಡಿಗಳೇ ಇಲ್ಲ.....ರಾಮತೀರ್ಥದಲ್ಲಿ ಹೆಂಗಸರು ಮಕ್ಕಳು ಸರಾಗವಾಗಿ ದಾಟುತ್ತಾರೆ. ಅಂತೂ, ಇದೊಂದು ನಿಗೂಢ!''

ನನ್ನ ಚಿತ್ತ ಜಾಗ್ರತಗೊಂಡಿತು. ಏನಿರಬಹುದೆಂಬ ಕುತೂಹಲ ತೃಷಿತ ನೋಟ ಅವರತ್ತ ನಿಟ್ಟಿಸಿತು.

''ಯಾರೋ ಕೊಲೆ ಮಾಡಿರಬಹುದು.''

''ಹೌದು; ಕಾಲು ಜಾರಿದ್ದರೆ ಇಲ್ಲಿ ಸುಖವಾಗಿ ಹತ್ತಿ ಬರಬಹುದಾಗಿತ್ತು. ಖಂಡಿತ ಆಕಸ್ಮಿಕ ಅಲ್ಲವೇ ಅಲ್ಲ.''

ನಾನು ಮಾತಾಡದೆ ಕಿವಿಗಳನ್ನು ನಿಮಿರಿಸಿದೆ.

''ನಿಮಗೆ ಆ ವಿಚಾರ ತಿಳಿಯದು ಅಲ್ಲವೇ?'' ಎಂದರು ಡಾಕ್ಟರ್ ನಾಗರಾಜ್.

''ಇಲ್ಲ.''

ಅವರು ಮುಂದುವರಿದರು,

''ಗೌರಮ್ಮ ಬಹಳ ಕಾಲದಿಂದ ಇಲ್ಲಿ ಮನಸೇಚ್ಛೆ ಸರ್ವಿಸ್ ಮಾಡಿದ್ದಾಳೆ. 'ಇಂತಹ ಸಣ್ಣಪುಟ್ಟ ಊರುಗಳಿಗೆ ದೂರದೂರುಗಳಿಂದ ನರ್ಸ್‌ಗಳು ಬರಲು ಒಪ್ಪುವುದಿಲ್ಲ ನೋಡಿ....ಆದ್ದರಿಂದ ಎಲ್ಲಕಡೆಯೂ ಬಹುತೇಕವಾಗಿ ಸ್ಥಳೀಕರಿಗೆ ಹೆಚ್ಚಿನ ಪ್ರಾಧಾನ್ಯ ಸಿಗುತ್ತದೆ. ಗೌರಮ್ಮ ಇದೇ ಆಸ್ಪತ್ರೆಯಲ್ಲಿ ನರ್ಸಾಗಿ ಉದ್ಯೋಗ ಆರಂಭಿಸಿದ್ದು; ಬಹುಶಃ ಇಲ್ಲಿಯೇ ನಿವೃತ್ತಿ ಹೊಂದುತಿದ್ದಳೇನೋ....ಅಷ್ಟರೊಳಗಾಗಿ ಯಾರೋ ಕ್ರೂರದೃಷ್ಟಿ ಹರಿಸಿದರು. ಒಳ್ಳೆಯ ಅನುಭವ ಕೆಲಸ ಮಾಡುವ ಹುರುಪು ಎರಡೂ ಅವಳಲ್ಲಿ ಸಮೃದ್ಧಿಯಾಗಿತ್ತು. ಈಚೆಗೆ ವಿಧವೆಯಾದ ಅವಳಲ್ಲಿ ದುಡ್ಡು ಕಾಸು ಧಾರಾಳವಾಗಿ ಇದ್ದುದನ್ನು ಕಂಡು ಕೊಂಡವರಾರೋ ಉಪಾಯವಾಗಿ ಆಳವಾದ ಕಡೆ ತಳ್ಳಿದ್ದಾರೆ......ಹಣಕ್ಕಾಗಿ ಕೊಲೆ.''

''ಪೋಸ್ಟ್ ಮಾರ್ಟಂ ಮಾಡಲಿಲ್ಲವೇ?''

''ಮಾಡಿದರೇನು? ಅವಳು ಜೀವ ಬಿಟ್ಟಿದ್ದು ನದಿಯಲ್ಲೇ; ಅದೂ ಸಹ ಬೇಸಿಗೆಯಲ್ಲಿ. ನದಿಯನ್ನು ದಾಟುವಾಗ ಕಾಲುಜಾರಿದಳು ಎಂದು ಸುದ್ದಿ ಹರಡಿದರು. ಕಣ್ಣೀರು ಕರೆದು ನಾಟಕ ಆಡಿದರು. ಅವಳಿಲ್ಲಿ ದಿನಕ್ಕೆ ಒಂದೆರಡು ಬಾರಿಯಾದರೂ ಒಡಾಡುತಿದ್ದಳೇನೋ.....ಈ ಹಾದಿ ನೀರು ಕುಡಿದಷ್ಟು ಸರಾಗ ಅವಳಿಗೆ! ಒಂದು ವೇಳೆ ಇಲ್ಲಿ ಕಾಲು ಜಾರಿದರೂ ಸಾಯುವುದು ಅಸಂಭವ. ಅಂತೂ ಬಹಳ ಆಶ್ಚರ್ಯ! ಪಾಪ, ಒಳ್ಳೆ ಕೆಲಸಗಾತಿ. ತುಂಬ ಅನ್ಯಾಯ!''

''ಕೇಸು ಪತ್ತೆಯಾಗಲಿಲ್ಲವೇ?''

''ಇಲ್ಲವೇ ಇಲ್ಲ''

''ಆತ್ಮಹತ್ಯೆ ಮಾಡಿಕೊಂಡಿರಬಹುದೇ?''

''ಛೀ! ಛೀ!''

''ಆ ಸುದ್ದಿಯನ್ನು ಹರಡಿದರು ಕೂಡ. ಆದರೆ ಅಲ್ಲವೇ ಅಲ್ಲ. ಬಹಳ ಧೈರ್ಯಗಾತಿ. ಅಂತಹ ಪ್ರಸಂಗ ಅವಳಿಗೆ ಇನ್ನೊಂದು ಜನ್ಮಕ್ಕೂ ಸಹ ಬರುತ್ತಿರಲಿಲ್ಲವೇನೋ.''

''ಮಕ್ಕಳಿಲ್ಲವೇ?''

''ಇಲ್ಲ.....ಪಾಪ! ಆದ್ದರಿಂದಲೇ ಕೊಲೆ ಮಾಡಿದ್ದು. ಈಗ ನೋಡಿ, ಅವಳ ತೌರು ಮನೆಯುವರೂ ಅವಳ ಗಂಡನ ಮನೆಯುವರೂ ಆಸ್ತಿಗಾಗಿ ಕುಸ್ತಿಯಾಡುತಿದ್ದಾರೆ!''

''ಈ ಜಗತ್ತು.....ಇಷ್ಟೆ!''

''ಅವಳು ತುಂಬ ಗಟ್ಟಿಮುಟ್ಟಾದ ಸ್ತ್ರೀ. ಕೊಲೆಗೀಡಾದುದೂ ಸಹ ಆಶ್ಚರ್ಯವೇ.''

ಈ ಪ್ರಕಾರ ಸಾಗಿದ ಮಾತುಕತೆ ಅವಳ ವ್ಯಕ್ತಿತ್ವವನ್ನು ನನ್ನ ಚಿತ್ತಕಲ್ಪದ ಮೇಲೆ ಮೂಡಿಸಿತು. ಅದೇ ವಿಚಾರವನ್ನು ಮನದಲ್ಲಿ ಮೆಲಕು ಹಾಕುತ್ತ ನೋಟವನ್ನು ತುಂಗಾ ಸಲಿಲದ ಮೇಲೆ ಹರಿಯ ಬಿಟ್ಟೆ.

★ ★ ★ ★ ★

ಬೆಳಿಗ್ಗೆ ಆಸ್ಪತ್ರೆಯ ಮೆಟ್ಟಲು ಹತ್ತಿದಾಗ ಎದುರಾದ ಆಸ್ಪತ್ರೆಯ ಜವಾನ,

''ಡಾಕ್ಟರ್ ನಿಮಗಾಗಿ ಕಾಯುತಿದ್ದಾರೆ. ಲೇಬರ್ ಬೋರ್ಡಿನ ಮೇಲೆ ತುಂಬ ಸೀರಿಯಸ್ ಕೇಸಿದೆ'' ಎಂದ.

ನಾನು ತಕ್ಷಣ ನೋಟವನ್ನು ಗಡಿಯಾರದ ಮೇಲೆ ಹೊರಳಿಸಿದೆ. ಮುಳ್ಳು ಎಂಟರ ಅಂಚನ್ನು ದಾಟುವುದರಲ್ಲಿತ್ತು. ರಿಜಿಸ್ಟ್ರಿಗೆ ಸಹಿಹಾಕಿ ನೇರವಾಗಿ ಲೇಬರ್ ವಾರ್ಡಿಗೆ ಹೋದೆ. ಮೂಗು ಕೊರೆಯುವಂತಹ ಅತೀವ ದುರ್ಗಂಧ ಕೊಠಡಿಯನ್ನು ಆವರಿಸಿತ್ತು. ಡಾ||ನಾಗರಾಜ್ ಡಾ||ಅಶ್ವತ್ ಇಬ್ಬರೂ ಅಲ್ಲಿದ್ದರು. ಅವರು ಮೂಗು ಬಾಯಿ ಮತ್ತು ತಲೆಗಳನ್ನು ಶುಭ್ರಮುಖವಾಡ ಮತ್ತು ಟೋಪಿಗಳು ಅಲಂಕರಿಸಿದ್ದವು. ಮುಖ ಮಂಡಲದಲ್ಲಿ ಅರಳಿದ ಕಣ್ಣುಗಳು ಮಾತ್ರ ಸಜೀವವಾಗಿ ನನ್ನೆಡೆಗೆ ಚಲಿಸಿದವು.

ಡಾ|| ನಾಗರಾಜ್ ಅತ್ಯಂತ ಅಸಮಾಧಾನದಿಂದ ಅಂದರು,

''ಈ ಸ್ಥಿತಿಯಾಗುವವರೆಗೆ ಮನೆಯಲ್ಲಿಟ್ಟುಕೊಂಡು ನಮಗೆ ಕೆಟ್ಟ ಹೆಸರು ತರುತ್ತಾರೆ. ಈ ಜನರಿಗೆ ಸ್ವಲ್ಪವೂ ಅರ್ಥವಾಗುವುದಿಲ್ಲ.

ಮೇಜಿನಮೇಲೆ ನರಳುತ್ತ ಮಲಗಿದ್ದ ಮಾಪಿಳ್ಳೆ ಹೆಣ್ಣು ಕ್ಷೀಣಿತ ಧ್ವನಿಯಲ್ಲಿ-

''ಇದುವರೆಗಿನ ಹೆರಿಗೆಗಳೆಲ್ಲ ಮನೆಯಲ್ಲಿ ಗೌರಮ್ಮನಿಂದಲೇ ಸುಖವಾಗಿ ನಡೆದಿದೆ. ಈ ಸಲ ಬೇರೆ ಸೂಲಗಿತ್ತಿ ಕರೆಸಿಕೊಂಡು ತಾಪತ್ರಯ ಪಟ್ಟಿದ್ದಾಯ್ತು. ಏನೇನೋ ಸಾಹಸ ಮಾಡಿದಳು. ಆದರೂ ಅವಳಿಂದ ಆಗಲಿಲ್ಲ. ನನಗೆ ಸಣ್ಣ ಸಣ್ಣ ಮಕ್ಕಳಿದ್ದಾರೆ. ಹೇಗಾದರೂ ಕಾಪಾಡಿ. ''ಎಂದಳು ಕೈಮುಗಿದುಕೊಂಡು; ಕಣ್ಣುಗಳಲ್ಲಿ ಗಂಗೆ ಯಮುನೆಯರು ಹರಿದರು. ಸ್ಥಿತಿ ಅತ್ಯಂತ ನಿರಾಶಾಜನಕವಾಗಿತ್ತು.

ಆ ಹಳದಿಗಟ್ಟಿದ ಮುಖ, ಉಬ್ಬಿದ ಹೊಟ್ಟೆ, ಮುಪ್ಪು ಆವರಿಸಲು ವಯಸ್ಸೇ ಆಗಬೇಕೆಂಬ ಸಿದ್ಧಾಂತವನ್ನು ಪ್ರತಿಭಟಿಸುವ ಸುಕ್ಕು ಸುಕ್ಕಾದ ಮೈ. ಕೊಳಕು ಬಟ್ಟೆ. ಅಜ್ಞಾನದ ಕೀಟವೆಂಬತಿದ್ದ ಅವಳ ಸ್ಥಿತಿ ಅತ್ಯಂತ ಕರುಣಾ ಜನಕವಾಗಿತ್ತು. ರೋಗಲಕ್ಷಣದ ಪೂರ್ವಾರ್ಧ ಸಮೀಕ್ಷೆಯನ್ನು ಆಗಲೇ ನಡೆಸಿದ್ದಾರೆ. ಇನ್ನು ಮುಂದಿನ ಉತ್ತರಾರ್ಧಕ್ಕೆ ನಾನು ಸಿದ್ಧಳಾದೆ.

ಆದರೆ....!

ಸಾವು ಬದುಕುಗಳೊಡನೆ ಜೀವ ಜ್ಯೋತಿ ಹೋರಾಡುತಿತ್ತು. ಅವಳನ್ನು ಉಳಿಸುವ ಪ್ರಯತ್ನದೊಂದಿಗೆ ಕಿಂಚಿತ್ತಾದರೂ ಭರವಸೆಯುಳಿದಿದ್ದಲ್ಲಿ ನನ್ನ ದೈಹಿಕ ಶ್ರಮಕ್ಕೆ ಬೆಲೆ ಇರುತಿತ್ತೇನೋ ಭೀತ ಪ್ರಕಂಪಿತ ಚಿತ್ತ ಕರ್ತವ್ಯಕ್ಕೆ ಉತ್ಸಾಹವನ್ನು ನೀಡುತ್ತಲೇ ಇಲ್ಲ. ಕೈಕಾಲುಗಳಿಗೆ ಪ್ರಯತ್ನ ಪೂರ್ವಕವಾಗಿ ಯಾಂತ್ರಿಕ ಚಲನೆ ನೀಡಿ ಮುಂದಾದೆ. ಅವಳ ಹೊಟ್ಟೆಯಲ್ಲಿ ಸತ್ತು ಕೊಳೆತು ಹೋದ ಭ್ರೂಣದ ದುರ್ಗಂಧ ಮೂಗು ಬಾಯಿಗಳನ್ನು ಅವ್ಯಾಹತವಾಗಿ ಮುತ್ತುತಿತ್ತು-ಒಡಲನ್ನು ವಿಚಿತ್ರರೀತಿಯಲ್ಲಿ ತೊಳೆಸುವಂತೆ.

ಡಾ॥ ಅಶ್ವತ್ ಮಾರ್ಫಿಯಾ ಆ್ಯಂಪೂಲ್‌ಗಾಗಿ ಕಾದಿದ್ದರೇನೋ. ಸ್ಟೋರಿನ ಕಡೆಗೆ ಹೋಗಿದ್ದ ಜವಾನ ಬಂದು ಅವು ಮುಗಿದು ಹೋಗಿರುವ ವಿಚಾರ ವರದಿ ಮಾಡಿದಾಗ ಅವರು ಕಿಂಚಿತ್ತೂ ವಿಚಲಿತರಾಗದೆ ಏಕನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ಇನ್ನೊಂದು ರೀತಿಯಲ್ಲಿ ಕೈಕೊಂಡರು. ಉರಿಯುತ್ತಿದ್ದ ಸ್ಪಿರಿಟ್ ಲ್ಯಾಂಪಿನ ಮೇಲೆ ಒಂದು ಚಮಚ ನೀರಿಟ್ಟು ಅದರಲ್ಲಿ ಒಂದು ಮಾರ್ಫಿಯಾ ಮಾತ್ರೆಯನ್ನು ಪುಡಿಮಾಡಿ ಹಾಕಿ ಕುದಿಸಿ ಅದು ತಣ್ಣಗಾದಮೇಲೆ ಸಿರಿಂಜಿನಲ್ಲಿ ಎಳೆದುಕೊಂಡು ಅವಳಿಗೆ ಚುಚ್ಚಿದರು ಸಮಯೋಚಿತವಾದ ಅವರ ಪರಿಜ್ಞಾನವನ್ನು ನನ್ನ ಬುದ್ಧಿ ಮೆಚ್ಚಿಕೊಂಡಿತು. ಈ ವಿಧಾನವನ್ನು ನಾನು ಹಿಂದೆ ನೋಡಿರಲಿಲ್ಲ-ಎನ್ನುವುದಕ್ಕಿಂತ ಬಹಳ ಮಟ್ಟಿಗೆ ಇಂತಹ ಕೊರತೆ ಹಿರಿಯ ಆಸ್ಪತ್ರೆಗಳಲ್ಲಿ ಬರುವುದಿಲ್ಲ ಎನ್ನಬಹುದು. ನಾನು ಸಮಾಧಾನದ ಉಸಿರನ್ನು ಬಿಟ್ಟೆ. ರೋಗಿಯ ಎಚ್ಚರ ತಪ್ಪಿ, ನರಳುವಿಕೆ ನಿಂತಿತು. ಪಾಪ, ಅಷ್ಟಾದರೂ ಆ ಬಳಲಿದ ದೇಹಕ್ಕೆ ಒದಗಿದ ಉಪಕಾರ ಉಪೇಕ್ಷಿಸುವಂತಾದ್ದಲ್ಲ. ಜೀವ ಸ್ವಸ್ಥವಾಗಿ ಉಸಿರಾಡುತಿತ್ತು. ದೈಹಿಕ ಬಾಧೆಯಾಗಲೀ ದುರ್ಗಂಧದ ಕಡು ಹಿಂಸೆಯಾಗಲೀ ಈಗ ಅವಳನ್ನು ಬಾಧಿಸುತಿಲ್ಲ. ಅಂತಹ ಚೇತನ ವಿಹೀನತೆ ನನಗೂ ಉಂಟಾಗಿದ್ದಲ್ಲಿ ನಿಶ್ಚಿಂತೆಯಿಂದ ಕೆಲಸಮಾಡಬಹುದಾಗಿತ್ತು......ಈ ದುರ್ಗಂಧವನ್ನು ಸಹಿಸಲಾಗುತ್ತಿಲ್ಲ ಸದ್ಯ, ತಲೆ ಸುತ್ತಿ ಕೆಳಗೆ ಬೀಳದಿದ್ದರೆ ಸಾಕು, ಎಂಬ ಚಿಂತನೆಯಲ್ಲಿ ಕೆಲಸ ಮುಂದುವರಿಸಿದೆ.

ಡಾ॥ ನಾಗರಾಜ್ ರೋಗಿಯ ತಲೆದೆಶೆಯಲ್ಲಿದ್ದರು. ರೋಗಿಯ ಉಸಿರಾಟಕ್ಕನುಗುಣವಾಗಿ ಎಚ್ಚರ ತಡೆಯುವ ಯಂತ್ರದ ಕಪ್ಪುರಬ್ಬರಿನ ಚೀಲ ಒಮ್ಮೆ ಉಬ್ಬಿ ಇನ್ನೊಮ್ಮೆ ಸಂಕುಚಿತಗೊಳ್ಳುತಿತ್ತು. ದಂತಪಂಕ್ತಿಗಳು ಕಚ್ಚಿಕೊಳ್ಳದಂತೆ ಮರದ ಚಿಕ್ಕ ಗೂಟವೊಂದನ್ನು ಮಧ್ಯೆ ಅಳವಡಿಸಲಾಯಿತು. ಡಾಕ್ಟರು ಎಲ್ಲ ವ್ಯವಸ್ಥೆಯನ್ನು ಗಮನಿಸಿದನಂತ ''ಗೊ ಅಹೆಡ್! ಎಲ್ಲ ಸರಿಯಾಗಿದೆ.'' ಎಂದರು.

''ಈ ಸ್ಥಿತಿಗಿಳಿದು ಒಂಭತ್ತು ದಿನಗಳಾಗಿವೆಯಂತೆ! ಅಂದಿನಿಂದ ಆಕೆ ಹೇಗೆ ಸಹಿಸಿರಬೇಡ? ಬದುಕಿರುವುದೂ ಸಹ ವಿಶೇಷವೇ!'' ಎನ್ನುತ್ತ ಮುಖವನ್ನು ವಿಕೃತಗೊಳಿಸಿದರು ಡಾ॥ ಅಶ್ವತ್.

''ಶತ ಮೂರ್ಖರು!'' ಉದ್ಗಾರ ಕರ್ಣಪಟಲಗಳನ್ನು ತಾಗಿತು.

''ಎಷ್ಟೆಷ್ಟು ಅಧ್ವಾನ ಮಾಡಬೇಕೋ ಅಷ್ಟೂ ಮಾಡಿ ಸಾಗಿಸಿದ್ದಾರೆ ಬದುಕಿದರೆ ಅವಳ ಪುಣ್ಯ!''

''ಅಲ್ಲ; ಆ ಏಳು ಮಕ್ಕಳ ಪುಣ್ಯ!''

ನನ್ನ ಆಪಾದಮಸ್ತಕವೂ ನವಿರು ಮೆಲ್ಲನೆ ನಿಮಿರಿ ನಿಂತಿತು. ಆ ಮಕ್ಕಳಿ
ಮನದಲ್ಲೇ ದೇವರನ್ನು ಪ್ರಾರ್ಥಿಸಿಕೊಂಡೆ. ಹೃದಯ ಕುಂಡಲಿನಿ ಕಾರುಣ್ಯ ದ್ರವ್ಯ
ತುಂಬಿ ಹೋಯಿತು.

ತೆರೆದ ಕಿಟಕಿಯ ನೇರಕ್ಕೆ ಪ್ರಾತಃಸೂರ್ಯ ಬಾನೇರುತಿದ್ದ. ಪೂರ್ವರಂಗ
ದಟ್ಟವಾದ ಮಂಜಿನ ತೆರೆ ಸಮುದ್ರದೋಪಾದಿಯಲ್ಲಿ ಹರಡಿ ವಿನೂತನ ಶೋಭೆಯ
ಬಿಂಬಿಸುತ್ತಿತ್ತು. ಕತ್ತರಿಗೆ ಕೈ ಹಚ್ಚುವ ಮುನ್ನ ಒಂದೆರಡು ಕ್ಷಣ ನೋಟ
ಹೊರಳಿತು. ಅರುಣರಾಗ ತನುಮನಗಳಿಗೆ ಮುದ್ರೆಯೊತ್ತಿದರೂ ದುರ್ಗ
ಮನಃಪ್ರಾಣಗಳನ್ನು ಭೈರಿಗೆಯಂತೆ ಕೊರೆಯುತಿತ್ತು.

ನರ್ಸು ಗಾಲಿಟ್ರೇಯನ್ನು ಎಳೆದಾಗ ದೂರ ದಿಂಗತದಲ್ಲಿ ಚಲಿಸುತಿದ್ದ ಗ
ಇತ್ತ ಸರ‍್ರನೆ ಹರಿದು ಬಂತು. ಮರುಕ್ಷಣದಲ್ಲಿ ಉಬ್ಬಿದ ಹೊಟ್ಟೆಯ ರೋಗಿ
ಕರುಣಾಜನಕ ಸ್ಥಿತಿ ದೃಷ್ಟಿಗೆ ಬೀಳಬೇಕೆ? ಎದೆಯಾಳದಿಂದ ನಿಟ್ಟುಸಿರೊಂದ
ಹೊರಹಾಕಿ ಕರ್ತವ್ಯಕ್ಕೆ ಶರಣಾದೆ. ಎರಡು ಗಂಟೆಗಳ ಕಾಲ ಹೆಣಗಿ ಮೃತ ಶಿಶುವ
ಭಾಗಭಾಗವಾಗಿ ತೆಗೆದ ಹೃದಯವಿದ್ರಾಯಕ ವಿಚಾರವನ್ನು ಬರೆಯುವುದಾದರ
ಒಂದು ಬೃಹದ್ ಪ್ರಕರಣವೇ ಆದೀತು ಆದರೆ ಏಕೋ ಮನಸ್ಸೇ ಬರುತ್ತಿಲ್ಲ.

★ ★ ★ ★ ★

ದೇವರು ದಯಾಮಯ.

ಮಾಪಿಳ್ಳೆ ಸ್ತ್ರೀ ಬದುಕಿಕೊಂಡಳು. ಅವಳ ಹಾಸಿಗೆಯ ಸುತ್ತ ನಿಂತುಕೊಂ
ಏಳುಮಂದಿ ಮಕ್ಕಳನ್ನು ನೋಡಿ ಅವರಿಗೆ ಖಂಡಿವಾಗಿಯೂ ಸ್ವಂತ ತಾಯಿ ಬೇಕ
ಎಂದುಕೊಂಡೆ. ಹೃದಯ ನಿಕುಂಜ ಆನಂದಾಮೃತದಿಂದ ಸಿಕ್ತವಾಯಿತು.

ಗರ್ಭಕೋಶದ ದುರ್ಗಂಧ ಇನ್ನೂ ಅಡಗಿರಲಿಲ್ಲ. ಕೊಳಕು ಶರೀ
ಮುಗುಟು ವಾಸನೆಯೂ ಅದರೊಂದಿಗೆ ವಸರುತಿತ್ತು. ಆಕೆ ತನ್ನ ಒಡಲ ಸಂಕಟವನ್ನ
ಗದ್ಗದ ಕಂಠದಲ್ಲಿ ತೋಡಿಕೊಂಡಳು. ಅವಳಿಗಿಷ್ಟು ಸಮಾಧಾನ ಹೇಳಿ ನನ್ನ ಕೆಲಸವ
ಮುಂದುವರಿಸಿದೆ. ಲೇಬರ್ ವಾರ್ಡಿನಿಂದ ಸ್ತ್ರೀಕಂಠದ ಆರ್ತನಾದ ಆಗಾಗ ಕ
ಬರುತಿತ್ತು. ಇಂದಿನ ಕೆಲಸ ಮುಗಿಯುವಾಗ ಹೊತ್ತು ಏಳರ ಅಂಚನ್ನು ದಾಟ
ಮೇಲಾಗಿ ಲೇಬರ್ ವಾರ್ಡಿನಲ್ಲಿ ಕೇಸು ಇದ್ದುದರಿಂದ ರಾತ್ರಿ ಇಲ್ಲಿ ತಂಗ
ಬೇಕಾಗಿತ್ತು. ಹೊರಗಡೆ ನನಗಾಗಿ ಕಮಲ ಕಾದಿದ್ದಳು. ನಾನು ಸುತ್ತಮ
ನೋಡುತ್ತಲೇ ಮೆಟ್ಟಲಿಳಿದೆ. ಕೈಯಲ್ಲಿ ಟಾರ್ಚ್ ಇತ್ತು. ಕೃಷ್ಣಪಕ್ಷದ ನಸು ಕದ್ದಿಂಗ

ಾರಡಿದ್ದುದರಿಂದ ಟಾರ್ಚ್ ಉರಿಸುವ ಪ್ರಮೇಯ ಬೀಳಲಿಲ್ಲ. ಹಾದಿ ನಡೆಯುತ್ತ ಮಲ ಹೇಳಿದಳು, ದನಿಯಲ್ಲಿ ಉತ್ಸುಕತೆ ಹರಿದು ಬಂತು.

" ಡಾಕ್ಟರ್, ಮಾಪಿಳ್ಳೆ ಹೆಂಗಸಿಗೆ ಏಳು ಹೆರಿಗೆಯನ್ನೂ ಗೌರಮ್ಮನೇ ಮಾಡಿಸಿದ್ದಳಂತೆ. ಹಸ್ತ ಗುಣ ತುಂಬ ಒಳ್ಳೆಯದು ಎನ್ನುತಿದ್ದಳು ಅವಳು. ಅಷ್ಟೇ ಅಲ್ಲ; ಆಸ್ಪತ್ರೆಯಲ್ಲೂ ಗೌರಮ್ಮನ ಹೆಸರು ಜನಜನಿತವಾಗಿತ್ತು. ರಾತ್ರಿಯ ಕೇಸುಗಳನ್ನು ನನ್ನ ಡ್ಯೂಟಿ ಇದ್ದಾಗಲೆಲ್ಲ ತಾನೇ ನೋಡಿಕೊಳ್ಳುತಿದ್ದಳು. ಡಾಕ್ಟರಿಗೆ ಕರೆ ಕಳುಹಿಸುತಿದ್ದುದೇ ಕಡಿಮೆ....."

"ಹಾಗಿದ್ದರೆ ಆಗಿನ ಲೇಡಿ ಡಾಕ್ಟರಿಗೆ ಅವಳಿಂದ ಅನುಕೂಲವಿತ್ತು ಅಲ್ಲವೇ?"

"ಹೌದು. ಈಗ ಪ್ರತಿಯೊಂದಕ್ಕೂ ನೀವೇ ತಲೆ ಹಾಕಬೇಕು."

ನಾನು ಮಾತಾಡದೆ ಅದೇ ವಿಚಾರವನ್ನು ಮನದಲ್ಲಿ ಮೆಲಕು ಹಾಕಿದೆ.

"ಅವಳಿಗೆ ಅವಸಾನಕಾಲ ಖಂಡಿತ ಬಂದಿರಲಿಲ್ಲ. ಆಯಸ್ಸು ಮುಗಿಯದ ಸಾವು. ಅಂದಮೇಲೆ ಹೇಳುವುದೇನು? ಅವಳ ಪ್ರೇತ ಇಲ್ಲೇ ಅಡ್ಡಾಡುತ್ತಿರಬಹುದು! ಪಾಪ, ಬಹಳ ಅನ್ಯಾಯ ಡಾಕ್ಟರ್!"

ನಾನು ಮಾತಾಡಲಿಲ್ಲ ನನ್ನ ಚಿತ್ತ ಗಾಢವಾಗಿ ಚಿಂತಿಸಿತು. ಆ ಕೊಲೆಯ ರಹಸ್ಯ ಹೊಳೆಯದಿದ್ದರೂ ಅಂತಹ ಪರೋಪಕಾರಿಯನ್ನು ಉಳಿಸಿಕೊಳ್ಳಬೇಕೆಂಬ ಆಶಾಭಾವನೆ' ಇಲ್ಲವಾದುದು ಆಶ್ಚರ್ಯವೆನಿಸಿತು.....ಮಾವಿನ ತೋಟದ ನಿರ್ಜನ ಹಾದಿಯನ್ನು ಕಳೆದು ನಮ್ಮ ಮನೆ ಮುಟ್ಟಿದೆವು. ಕಮಲ ಯಾವ ಯಾವ ಕೆಲಸಕ್ಕೋ ಹಚ್ಚಿದಳು. ನಾನು ನೇರವಾಗಿ ನೀರು ಮನೆಗೆ ಹೋದೆ. ಅನಂತರ ನಿತ್ಯ ಕರ್ಮವನ್ನು ಮುಗಿಸಿ ಆಸ್ಪತ್ರೆಗೆ ಪುನರಪಿ ಹೊರಡುವಷ್ಟರಲ್ಲಿ ಒಂಭತ್ತು ಗಂಟೆಯಾಗಿತ್ತು ಎನ್ನಬಹುದು.

ಅಲ್ಲಿಯ ಔಷಧಿ-ಲೋಷನ್ಗಳ ಕಟುವಾಸನೆ ಘ್ರಾಣೇಂದ್ರಿಯವನ್ನು ಸುತ್ತುತ್ತಿತ್ತು. ಅನೇಕ ವೇಳೆ ಅಲ್ಲಿ ನಿದ್ದೆಯೇ ಬರುತಿರಲಿಲ್ಲ. ಎಲ್ಲರಿಗೂ ಕ್ರಮವಾಗಿ ನೈಟ್ ಡ್ಯೂಟಿ ಬರುವುದು ವಾರಕ್ಕೆ ಒಮ್ಮೆಯಾದರೆ ಲೇಬರ್ ಕೇಸುಗಳ ನಿಮಿತ್ತ ನನಗೆ ನಾಲ್ಕು ಬಾರಿಯಾದರೂ ಇರುತ್ತದೆ. ನನ್ನ ದುರಾದೃಷ್ಟಕ್ಕೆ ಆ 'ಗೌರಮ್ಮ'ನೂ ಇಲ್ಲವಲ್ಲಾ ಎಂಬ ಯೋಚನೆ ಬರದೆ ಇರಲಿಲ್ಲ. ನೇರವಾಗಿ ಲೇಬರ್‌ವಾರ್ಡಿಗೆ ಹೋಗಿ ಕೇಸನ್ನು ನೋಡಿ "ಹೆರಿಗೆಯ ಸಮಯಕ್ಕೆ ಬಂದು ಕರೆಯಿರಿ." ಎಂದೆ.

ಹೆಡ್ ನರ್ಸ್ "ಆಗಲಿ ಡಾಕ್ಟರ್!" ಎಂದರು ಸೌಜನ್ಯಪೂರ್ವಕವಾಗಿ.

"ಬಹಳ 'ವೀಕ್ ಕಂಡಿಷನ್' ಸ್ವಲ್ಪ ಮುಂಚಿತವಾಗಿಯೇ ಹೇಳಿ ಕಳುಹಿಸಿ."

"ಆಗಲಿ.....ಆಗಲಿ"

ನಾನು ಹೊರಬಿದ್ದೆ. ಊದಾಬಣ್ಣದ ಉದ್ದನೆಯ ಕಾರಿಡಾರಿನ ಸಾ ಕಂಬಗಳು ಅಲ್ಲಿ ಪ್ರಾಣ ತೆತ್ತವರ ಪ್ರೇತಾತ್ಮಗಳಂತೆ ತೋರಿ ಬಂದುವು....ಅವುಗಳಲ್ಲಿ ಇಲ್ಲಿ ಇನ್ನಾರು ಆಧಾರ ಸ್ತಂಭವಾಗಿರಬಲ್ಲರು? ಎಂಬ ಪ್ರಶ್ನೆಯೊಂದಿಗೆ ಗೌರಮ್ ಕಲ್ಪನಾ ಚಿತ್ರವೂ ಚಿತ್ತ ಭಿತ್ತಿಯಲ್ಲಿ ಸುಳಿದಳಿಯಿತು. ಒಮ್ಮೆಲೇ ತೀವ್ರ ಚಳಿಗಾ ಬೀಸಿದಂತೆ ಮೈನವಿರೆದ್ದು ಮನಸ್ಸು ನಸು ತಳಮಳಗೊಂಡಿತು. ಯಾಂತ್ರಿಕವಾಗಿ ಹೆ ತೆಗೆದೆ. ನಿರ್ಜನವಾದ ಕಾರಿಡಾರು; ದೂರ ದೂರಕ್ಕೊಂದು ಮಂದ ಮಂದವಾ ದೀಪಮಾಲೆ, ಪಕ್ಕದಲ್ಲಿ ಅನುಸರಿಸುವ ದೀರ್ಘವಾದ ನೆರಳು; ತಂಗಾಳಿ ರೊಯ್ ತೀಡಿದಾಗ ಮರ್ಮರಿಸುವ ಹೆಮ್ಮರಗಳ ಮರ್ಮರ ಲೀಲೆ. ಸರ್ಜಿಕಲ್ ವಾರ್ಡಿನ ನರಳುವವರ ನರಳು ದನಿ...ಒಂದೊಂದೂ ಒಂದೊಂದು ದಿಶೆಗೆ ಎಳೆಯುತ್ತಿರುವ ಭಾಸವಾಯಿತು. ಏನೋ ಒಂದು ರೀತಿಯಲ್ಲಿ-ಯೋಚಿಸಿದರೂ ಅರ್ಥವಾಗ ಪ್ರಜ್ಞೆಯಲ್ಲಿ ನಡಿಗೆ ಮೆಲ್ಲನೆ ಸಾಗಿದರೂ ಹಾದಿ ಕರಗಿತು. ಕಾರಿಡಾರಿನ ಬ ಮಗ್ಗುಲಿಗಿದ್ದ ಡಾಕ್ಟರ ಕೊಠಡಿಗೆ ಕಾಲಿಟ್ಟೆ. ಖಾಲಿ ಕೊಠಡಿ ಮೌನ ಶೋಕದಿಂ ಸ್ವಾಗತಿಸಿತು. ಒಳ ಹೊಕ್ಕನಂತರ ಒಮ್ಮೆ ಸುತ್ತಲೂ ಕಣ್ಣಾಡಿಸಿದೆ. ನಾಲ್ಕುಗೋಡೆಗಳ ನನ್ನನ್ನು ಅಣಕಿಸಿದಂತೆ ಭಾಸವಾಯಿತು. ಸ್ಟೆತಸ್ಕೋಪನ್ನು ಮೇಜಿನ ಮೇಲಿಟ್ಟು ಪಲ್ಲಂಕ ಮೇಲೆ ಕುಳಿತೆ. ನನ್ನ ವಿಶ್ರಾಂತಿ ಕೊಠಡಿಯನ್ನು ಕುರಿತು ಹೇಳುವುದು ಸೂಕ್ತ ಎರಡು ತಿಂಗಳ ಹಿಂದೆ ನಾನು ಈ ಊರಿಗೆ ಬಂದಾಗಲೇ ಕ್ರಿಮಿನಾಶಕ ಸ್ ಮಾಡಿಸಲಾಗಿತ್ತು. ಕಟ್ಟಡ ತುಂಬ ಹಳೆಯದಾದುದರಿಂದ ಅದರ ಒಳ ವ್ಯವಸ್ಥೆಯು ಪ್ರಾಚೀನವಾದುದು. ಆಗಾಗ ಹೊಸರೂಪು ಕೊಡುವ ವ್ಯವಸ್ಥೆಯೂ ನಡೆದಿ ಆದರೂ ಪ್ರಯೋಜನವೇನೂ ಆಗಿಲ್ಲ. ಸೆಜ್ಜೆಯೂ ಹಳೆಯದೆ. ನಿದ್ರಾದೇವಿ ಅನೇ ವೇಳೆ ಸಂಪು ಹೂಡುವುದರಿಂದ ಅಲ್ಲಿ ಮಲಗುವುದಕ್ಕೂ ಮನಸ್ಸು ಬರುವುದಿಲ್ಲ ಆದರೆ ಇಂದು ಈಗಲೇ ಕಣ್ಣುಗಳಿಗೆ ನಿದ್ದೆ ತುಂಬಿ ಬಂದಿದ್ದುರಿಂದ ನನಗೆ ಮಲಗಿದ ಸಾಕಾಗಿತ್ತು.

ಮೇಲಂಗಿ ಕಳಚಿ ಕದ ಮುಚ್ಚಿದೆ. ಕೆಳಗಿನ ಕಿಟಿಕಿಯ ಕದಗಳನ್ನು ಮುಚ್ಚಿ ದೀ ನಂದಿಸಿದೆ. ವರಾಂಡದ ದೀಪ ಕಿಟಕಿಗೆದುರಾಗಿದ್ದುದರಿಂದ ಸಾಕಾದಷ್ಟು ಬೆಳ ಒಳಗಡೆ ಬರುತ್ತದೆ. ನಿತ್ಯವೂ ಅರ್ಧಶಯನಾವಸ್ಥೆಯಲ್ಲಿ ಒರಗಿ ಪುಸ್ತಕ ಪಠ ಕೈಕೊಳ್ಳುತಿದ್ದೆ. ಇಂದು ಆ ಪ್ರಮೇಯ ಬೀಳಲಿಲ್ಲ. ಸೊಳ್ಳೆಯ ಪರದೆಯನ್ನು ಇಳಿಬಿಟ ಹೊದ್ದಿಕೆಯನ್ನು ಎಳೆದುಕೊಂಡೆ. ನಾಲ್ಕು ಗೋಡೆಯೊಳಗಿನ ಸಮಸ್ತ ಪ್ರಪಂಚವ

ದೃಷ್ಟಿಗೆ ಅವಿರಳವಾಗಿ ಬೀಳುತಿತ್ತು. ಲೇಬರ್ ವಾರ್ಡಿನ ಆರ್ತನಾದ, ಸರ್ಜಿಕಲ್ ವಾರ್ಡಿನ ಚೀತ್ಕಾರ ಆಗಾಗ ಕೇಳಿ ಬರುವುದರೊಂದಿಗೆ ಶಾಂತ ವಾತಾವರಣವನ್ನು ಪ್ರಕಂಪಿತಗೊಳಿಸುವಂತಿತ್ತು. ಕೆಲವೊಮ್ಮೆ ಗೂಬೆಗಳ ವಿಕಟ ಧ್ವನಿಯೂ ನಾಯಿಗಳ ಬೊಗಳಾಟವೂ ಕರ್ಣಪಟಲಗಳಿಗೆ ತಾಗುತಿತ್ತು-ವಿಧಿಯ ಸಂಕಲ್ಪ ವಾಕ್ಯವನ್ನು ಸಾರಿ ಹೇಳುವಂತೆ.

ನಿಜಕ್ಕೂ ಹೇಳುವುದಾದರೆ ಈ ಉದ್ಯೋಗದಿಂದ ಎಷ್ಟೋ ಬಾರಿ ಜಿಗುಪ್ಸೆಗೊಂಡಿರುವೆ. ಆದರೂ ಆದಕ್ಕಿಂತ ಮಿಗಿಲಾಗಿ ಆಕರ್ಷಿತಳಾಗುತ್ತಿರುವುದೂ ಒಂದು ವಿಷೇಶವೇ ಬಹುಶಃ ಅದಕ್ಕೆ ಸ್ತ್ರೀ ಜಗತ್ತಿನ ಭಯಂಕರ ಕರ್ಮಕಾಂಡವೇ ಇರಬಹುದು.

ಏನೇ ಇರಲಿ,

ಹೆಜ್ಜೆ ಮುಂದಿಟ್ಟಮೇಲೆ ಹಿಂತೆಗೆಯುವ ಪ್ರಶ್ನೆಯೇ ಇಲ್ಲ. ಇಲ್ಲಿಂದ ಹಿಂತೆಗೆದರೆ ಬೇರೆ ಮೋಕ್ಷಾಗಾರ ಇನ್ನೆಲ್ಲಾದರೂ ಇದೆಯೇ? ಬಯಸಿದರೂ ಬೇಡಿದರೂ ಇದಕ್ಕಿಂತ ಸುಲಭವಾದ ಹಾದಿ ಕಾಣಿಸುತ್ತಲೇ ಇಲ್ಲ. ಬಿಟ್ಟರೆ ಮತ್ತೆ ಅದೇ ಸ್ತ್ರೀ ಜನ್ಮದ....ಮುಗ್ಧ ದುಗ್ಧ ನರಕ ಕುಂಡ!

ಯೋಚನೆ ಬಂದೊಡನೇ ನಖಶಿಖಾಂತ ನಸುಕಂಪನದ ಅಲೆ ಹರಿದಾಡಿಹೋಯಿತು. ಒರಟು ತಲ್ಪದಮೇಲೆ ಕಾಷ್ಠ ಪ್ರತಿಮೆಯಂತೆ ದೇಹವನ್ನು ಕೆಡಗಿ, ನಿಶ್ಚಲವಾಗಿ ಕಣ್ಮುಚ್ಚಿದೆ. ಸ್ವಲ್ಪ ಹೊತ್ತು ಉರುಳಿರಲಿಕ್ಕಿಲ್ಲ. ಅಷ್ಟರಲ್ಲಿ ಬಾಗಿಲ ಬಳಿ ಬೂಟ್ಸಿನ ಸದ್ದು. ಹಿಂದೆಯೇ ಡಾ॥ ಅಶ್ವತ್ಥರ ಧ್ವನಿ,

''ಡಾಕ್ಟರ್....''

ನಾನು ಎದ್ದು ಹೊರಬಂದೆ.

''ಒಂದು ಸೀರಿಯಸ್ ಕೇಸ್ ಈಗ ಅಡ್ಮಿಟ್ಟಾಗಿದೆ ಡಾಕ್ಟರ್!....ಬನ್ನಿ.''

''ಅದೇನು? ನೀವು ಕರೆಯ ಬಂದಿರಲ್ಲ?''

''O.T. ಗೆ ಹೋಗುವ ದಾರಿ ನಿಮ್ಮನ್ನು ಕೂಗಿದೆ ಅಷ್ಟೆ. ಕ್ಷಮಿಸಿ; ನಿಮ್ಮ ನಿದ್ದೆಗೆಡಿಸಿದೆನೇನೋ.....''

''ಈಗಷ್ಟೇ ಮಲಗಿದೆ. ಇನ್ನೂ ನಿದ್ದೆ ಹತ್ತಿರಲಿಲ್ಲ.''

''ಫೀಮೇಲ್ ಕೇಸು. ಎದೆ ಬೆನ್ನುಗಳಮೇಲೆ ಚೂರಿ ಹೊಡೆತ ಬಿದ್ದಿದೆ. ಅವಳಿಗೆ ಪ್ರಜ್ಞೆಯೇ ಇಲ್ಲ.''

''ಪಾಪ.....''

“ಅವಳ ಗಂಡ ಈ ಕೆಲಸ ಮಾಡಿದ್ದಾನೆ!”

“ಛೆಃ! ಛೆಃ!”

ಮುಂದಿನ ಹಾದಿ ನಿಶ್ಶಬ್ದವಾಗಿ ಕಳೆಯಿತು. ಹೆಜ್ಜೆಗಳ ಪಟಪಟಾತ್ಕಾರ ಶಾಂತ ಸಾಮ್ರಾಜ್ಯದಲ್ಲಿ ಭಾವನಾ ಮಂದಿರವನ್ನು ಅಪವಿತ್ರಗೊಳಿಸುವಂತೆ ವಿಕಾರವಾಗಿ ಕೇಳಿಸುತ್ತಿತ್ತು. ಒಂದೆರಡು ನಿಮಿಷ ಕಳೆಯುವುದರೊಳಗಾಗಿ O.T.ಗೆ ಕಾಲಿಟ್ಟೆವು. ಪ್ರಜ್ಞಾಹೀನ ಸ್ತ್ರೀಯನ್ನು ಮೇಜಿನಮೇಲೆ ಮಲಗಿಸಲಾಗಿತ್ತು. ಉಟ್ಟ ಬಟ್ಟೆ ರಕ್ತದಿಂದ ತೊಯ್ದು ದೃಶ್ಯ ಭಯಂಕರವೂ ಕರುಣಾಜನಕವೂ ಆಗಿತ್ತು. ನಾಡಿ ಹಿಡಿದೆ. ಕ್ಷೀಣಿಸುತ್ತಿತ್ತು. ಆಕೆ ಉಳಿಯುವ ಸಂಭವವಿರಲಿಲ್ಲ. ಈಗಲೋ ಆಗಲೋ ಪಯಣಿಸುಲು ಸಿದ್ಧವಾಗುತ್ತಿದ್ದ ಜೀವ ಸಾವು ಬದುಕಿನನೊಡನೆ ಹೋರಾಡುತ್ತಿತ್ತು. ಆ ಸಂದರ್ಭದಲ್ಲಿ ನಮ್ಮಿಂದ ಸಲ್ಲ ಬಹುದಾದ ಕರ್ತವ್ಯಕ್ಕೆ ನಾನು ಶರಣಾದೆ.

“ಇನ್ನು ಪ್ರಯೋಜನವಿಲ್ಲ. ಗಾಯಗಳನ್ನಷ್ಟು ಹೊಲಿದು ಬ್ಯಾಂಡೇಜ್ ಬಿಗಿದರೆ ಸಾಕು.” ಎಂದರು ಅಶ್ವತ್. ಅವರ ದನಿ ನಿರಾಶೆಯ ಕುಂಡದಲ್ಲಿ ಹರಿದು ಬಂದಿತ್ತು.

ಅಂತೂ,

ಅಲ್ಲಿ ಕೊನೆಯ ಸೇವೆಯನ್ನು ಸಲ್ಲಿಸಿ ಹಿಂದಿರುಗಿದಾಗ ಹೊತ್ತು ಹನ್ನೊಂದರ ಅಂಚನ್ನು ಮುಟ್ಟಿತ್ತು.

★ ★ ★ ★ ★

“ಡಾಕ್ಟರ್......!”

“..........”

“ಡಾಕ್ಟರ್.....!”

“..........”

“ಡಾಕ್ಟರ್........!”

“ಹಾ....!”

ನಿತ್ಯನೂತನ ಅಡೆ ತಡೆಗಳಿಗೆಲ್ಲಾ ಸೊಳ್ಳೆ ಪರದೆಯು ತಡೆ ಹಾಕಿ ರಕ್ಷಣೆ ನೀಡಿತ್ತೋ ಏನೋ....ಎಂತಹ ಸುಖನಿದ್ರೆ? ಎಂದೂ ಇಲ್ಲದುದು ಇಂದೇನು? ಪ್ರಯತ್ನಿಸಿದರೂ ಕಣ್ಣುಗಳು ತೆರೆಯಲೊಲ್ಲವು. ಕಣ್ಣುಜ್ಜಿಕೊಳ್ಳತೊಡಗಿದೆ. ಅಷ್ಟರಲ್ಲಿ ಅದೇ ಧ್ವನಿ ಮತ್ತೆ ಮೊಳಗಿತು.

“ಡಾ.....ಕ್!”

“ಊ್ಞ....ಏನು?”

''ಸುಲ್ತಾನ ಬೇಗಂ-ಗೆ ಆಸ್ತಮ ಬಂದು ತುಂಬ ಸೀರಿಯಸ್ ಆಗಿದ್ದಾಳೆ.''

''ಯಾವ ಸುಲ್ತಾನ ಬೇಗಂ?''

''ಅದೇ ಆ ಮಾಪಿಳ್ಳೆ ಹೆಂಗಸು......ಡಿಲಿವರಿ ಕೇಸ್.....ನೀವೇ ಮಾಡಿದ್ದೀರಿ. ನಾಲ್ಕನೇ ವಾರ್ಡ್!''

ನಾನು ಲೇಬರ್ ವಾರ್ಡಿನಿಂದಲೇ ಕರೆ ಬಂದಿರಬಹುದು ಎಂದುಕೊಂಡಿದ್ದೆ. ಈ ಅನಿರೀಕ್ಷಿತ ಕರೆಗಾಗಿ ಎದ್ದು ಆಕೆಯ ಹಿಂದೆ ಸ್ಟೆತಸ್ಕೋಪಿನ ಸಹಿತ ಹೊರಟೆ. ನಾಲ್ಕನೆಯ ವಾರ್ಡಿರುವುದು ಹೊಸವಿಭಾಗದಲ್ಲಿ-ಹಿಂದಣ ವರಾಂಡದ ಮೂಲಕ ಕಟ್ಟಡದುದ್ದಕ್ಕೂ ಸಾಗಿದಮೇಲೆ ಬಲಗಡೆಗೆ ತಿರುಗಿಕೊಳ್ಳಬೇಕು; ಕಡಿಮೆಯೆಂದರೆ ಐದಾರು ನಿಮಿಷಗಳ ಹಾದಿ. ಉದ್ದಕ್ಕೂ ವಾರ್ಡ್‌ವಾರ್ಡ್‌ಗಳ ಬದಿಯಲ್ಲೇ ಹರಿದ ಆ ಉದ್ದನೆಯ ಓಪನ್ ವರಾಂಡದಲ್ಲಿ ದೂರದೂರಕ್ಕೊಂದು ದೀಪಗಳಿದ್ದು, ಕ್ಷೀಣಿತ ಕಿರಣ ಲೋಕದಲ್ಲಿ ಜಗತ್ತು ಮಸುಕು ಮಸುಕಾಗಿ ಕಾಣಿಸುತಿತ್ತು.

ನರ್ಸಳ ನಡಿಗೆಯಲ್ಲಿ ಬಿರುಸಿತ್ತು; ಮುಖಭಾವದಲ್ಲಿ ಕಾತರತೆ ತುಂಬಿತ್ತು.

ನಾನೂ ಸಹ ಅವಳನ್ನು ಸರಿಗಟ್ಟುವಂತೆ ಹೆಜ್ಜೆ ಹಾಕಿದೆ.

ವಾರ್ಡನ್ನು ತಲುಪಿದಾಗ ಅವಳ ಸ್ಥಿತಿ ಉತ್ಕಾಟಾವಸ್ಥೆಗೇರಿತ್ತು. ಉಸಿರಿನನಾಳ ಕಟ್ಟುತ್ತಿದ್ದುದರಿಂದ ಉಸಿರಾಟ ಕಷ್ಟವಾಗಿ ಒದ್ದಾಡುತಿದ್ದಳು. ಎದೆಯ ಗೂಡು ಏರಿಳಿಯುತಿತ್ತು. ಅತ್ಯಂತ ನಿಶ್ಶಕ್ತ ಸ್ಥಿತಿಯಲ್ಲಿದ್ದ ಅವಳಿಗೆ ತಾಳಿ ಕೊಳ್ಳುವ ಚೈತನ್ಯವಿರಲಿಲ್ಲ. ನನ್ನ ಮನವನ್ನು ಪ್ರಥಮ ನೋಟಕ್ಕೆ ನಿರಾಸೆಯು ಆವರಿಸಿತು. ನಾನು ನರ್ಸಿಗೆ ಆಕ್ಸಿಜನ್ ತರಿಸಲು ಹೇಳಿ, ಅವಸರ ಅವಸರವಾಗಿ ರೋಗಿಯ ನಾಡಿ ಹಿಡಿದೆ.

ಅವಳು ಏನೋ ಹೇಳಲು ಪ್ರಯತ್ನಿಸಿದಳು. ಆದರೆ ಉಸಿರು ಹೊರಡಲಿಲ್ಲ. ಎರಡೂ ಕಣ್ಣುಗಳಲ್ಲಿ ನೀರು ಧಾರಾಕಾರವಾಗಿ ಹರಿಯುತಿತ್ತು. ಬಳಿಯಲ್ಲಿ ಅವಳ ಕಡೆಯವರಾರೂ ಇರಲಿಲ್ಲ-ಹಿಂದಿನ ದಿನ ರಾತ್ರಿ ಸಾಕಷ್ಟು ಚೆನ್ನಾಗಿದ್ದುದರಿಂದ ಅವರಿಗೆ ಇಲ್ಲಿ ಉಳಿಯುವ ಪ್ರಮೇಯ ತೋರಲಿಲ್ಲವೇನೋ....

ನಿರೀಕ್ಷಿತ ಸಹಾಯ ತಕ್ಷಣ ಒದಗಲಿಲ್ಲವಾದುದರಿಂದ ಮತ್ತೆ ಮತ್ತೆ ಕಾಲಿಂಗ್ ಬೆಲ್ ಒತ್ತಿದೆ.

ದಾದಿಯರೂ ಜವಾನರೂ ಓಡಿ ಬಂದರು.

''ಹೋಗಿ ಡಾ|| ಅಶ್ವತ್ಥರನ್ನು ಬರಹೇಳು....ಈಗಲೇ ಕರೆದುಕೊಂಡು ಬಾ.''

ಕೆಂಪಯ್ಯ ದಡದಡನೆ ಓಡಿ ಆ ಕತ್ತಲೆಯ ಸಾಮ್ರಾಜ್ಯದಲ್ಲಿ ಕರಗಿಹೋದ. ಇನ್ನಷ್ಟು ಹೊತ್ತಿನೊಳಗಾಗಿ ಆಕ್ಸಿಜನ್ ಬಂತು. ಅದನ್ನು ಪಕ್ಕದಲ್ಲಿ ಅಳವಡಿಸಿದೆ.

ಆಕ್ಸಿಜನ್ ಯಂತ್ರ ಕೆಲಸ ಮಾಡುತಿತ್ತು. ಅವಳ ಪ್ರಾಣ ಪಕ್ಷಿಯೂ ಅಷ್ಟೇ ಚಡಪಡಿಸುತಿತ್ತು. ಅಶಕ್ತ ಶರೀರ ಆ ದರ್ದಾಂತ ಬಾಧೆಯನ್ನು ಅನುಭವಿಸುವುದನ್ನು ನೋಡುವುದು ಸಾಧ್ಯವಾಗುತ್ತಿರಲಿಲ್ಲ.

ಅವಳು ತಡೆಯಲಾಗದೆ ಚೀರಿಕೊಳ್ಳುತಿದ್ದಳು. ಆ ಪ್ರಾಣಾಂತಕ ಆರ್ತನಾದ ಕಿವಿಯನ್ನು ಕೋರೈಸುತಿತ್ತು. ಆವಳ ಮನೆಗೆ ಸುದ್ದಿ ಮುಟ್ಟಿಸುವುದಗತ್ಯವಾಗಿದ್ದರೂ ವಿಳಾಸ ಸರಿಯಾಗಿ ತಿಳಿದವರಿರಲಿಲ್ಲ.

ನೋಟವನ್ನು ಗಡಿಯಾರದ ಕಡೆ ಹೊರಳಿಸಿದೆ. ಮುಳ್ಳು ಎರಡರ ಅಂಕೆಯನ್ನು ಅದೇ ತಾನೆ ದಾಟಿತ್ತು. ಮನದಲ್ಲಿ ಕೊನೆಯಪಕ್ಷ ಮಕ್ಕಳ ದರ್ಶನವಾಗುವವರೆಗಾದರೂ ಆಕೆಯ ಜೀವ ಉಳಿಯಲಿ ಎಂದು ಧ್ಯಾನ ಗದ್ಗದಳಾಗಿ ಭಗವಂತನನ್ನು ಪ್ರಾರ್ಥಿಸಿಕೊಂಡೆ. ಅದೇ ಮುಹೂರ್ತದಲ್ಲಿ ಡಾ॥ ಅಶ್ವತ್ ಒಳ ಹೆಜ್ಜೆಯಿಟ್ಟರು. ರೋಗಿಯನ್ನು ಪರೀಕ್ಷಿಸಿ 'ಕಾರ್ಡಿಯಾಕ್ ಆಸ್ತಮ' ಎಂದರು.

'ಈ ಕಷ್ಟ ನೋಡುವುದಕ್ಕಾಗುವುದಿಲ್ಲ.'' ಎಂದೆ.

ಅವರು ಇಂಜಕ್ಷನ್ ಸಿಂರಜಿಗೆ ಕೈ ಹಚ್ಚಿದಾಗಲೇ ನನಗೆ ಲೇಬರ್ ವಾರ್ಡಿಂದ ಕರೆ ಬಂದಿತು.

''ನೀವು ಹೋಗಿ ಡಾಕ್ಟರ್!'' ಎಂದರು ಅಶ್ವತ್.

ಆ ಅತೀವ ಸಂಕಷ್ಟವನ್ನು ನೋಡುವುದೂ ಸಹ ಬೇಡವಾಗಿತ್ತು; ನಾನು ಹೊರಟೆ.

★ ★ ★ ★ ★

ಲೇಬರ್ ಬೋರ್ಡಿನ ಮೇಲೆ ಮಲಗಿದ್ದ ಹೆಣ್ಣು ಇನ್ನೂ ಹದಿನೆಂಟರ ಎಳಸು ಜೀವ. ಅನುಭವ ಸಾಲದೆ ಮೊದಲ ಹೆರಿಗೆಯ ಅವಾಂತರದಲ್ಲಿ ಸಿಕ್ಕಿ ನರಳುತಿತ್ತು. ನಿನ್ನೆಯಿಂದ ನೋವುಂಡು ತುಂಬ ಸುಸ್ತಾಗಿಯೂ ಇದ್ದಳು. ಆ ಮುಗ್ಧ ಮುಖಬಾವವನ್ನು ನೋಡುತ್ತ ನಾನೆಂದೆ,

''ಆಗಲೇ ತುಂಬ ಸುಸ್ತಾಗಿ ಬಿಟ್ಟಿದ್ದೀಯಲಮ್ಮ.''

''ತಾಳಲಾರೆ.....ಡಾಕ್ಟರ್.''

''ಚಿಂತೆ ಮಾಡಬೇಡಮ್ಮಾ...ಇನ್ನು ಹೆಚ್ಚು ಹೊತ್ತಿಲ್ಲ. ಧೈರ್ಯವಾಗಿರು.''

ಅಂತೆಯೇ ಐದು ನಿಮಿಷಗಳ ಒಳಗಾಗಿ ಈ ಪಾಪಪೂರಿತ ಜಗತ್ತಿಗೆ ಅಕಳಂಕ ಶಿಶುವೊಂದು ಆಗಮಿಸಿತು. ಸುಮ ಸದೃಶವಾದ ಮಗುವನ್ನು ಬಟ್ಟೆಯಲ್ಲಿ ಸುತ್ತಿ ಮೇಜಿನ ಮೇಲೆ ಮಲಗಿಸಿ, ಅವಳಿಗೆ ಸಮಯೋಚಿತವಾಗಿ 'ಮೆಥರ್ಜಿನ್' ಕೊಟ್ಟೆ.

ಅನಂತರ ಉತ್ತರಾರ್ಧವನ್ನು ಮುಗಿಸುವಾಗ ಬೇಗಂ-ಳ ನೆನಪು ಮನವನ್ನು ಉದ್ದಂಡವಾಗಿ ಆವರಿಸಿತು. ಏಳು ಮಂದಿ ಮಕ್ಕಳು ಮನದಲೆಯಲ್ಲಿ ಮೂಡಿನಿಂತರು. ದಾರಿದ್ರ್ಯದೇವತೆಯ ಕೃಪಾಕಟಾಕ್ಷದಲ್ಲಿ ಜೀವ ಹಿಡಿದ ಆ ಘೋರ ದೃಶ್ಯ ಎದೆಯನ್ನು ಮಂಜಿನಂತೆ ಕರಗಿಸಿತು. ಇನ್ನೂ ಪ್ರಾಯವಿಳಿಯದ ಆಕೆಯ ಗಂಡ....ಮಕ್ಕಳಿಗೆ ಮಲತಾಯಿಯನ್ನು ತಂದಿರಿಸಬಹುದಾದ ಧೂರ್ತ ಜೀವನದೃಶ್ಯ ಹಂತಹಂತವಾಗಿ ಮೂಡಿಬಂದಿತು. ಮನದಲ್ಲಿ ಮರುಕ ತುಂಬಿ ನನ್ನಷ್ಟಕ್ಕೆ 'ಪಾಪ' ಎಂದುಕೊಂಡೆ. ಹೃದಯ ಕುಂಡ ಕಾರುಣ್ಯದ್ರವದಿಂದ ತುಂಬಿ ಕೋಡಿ ಹರಿಯಿತು.

ನಾನು ಕೈಗಳನ್ನು ಸೋಪು ಹಚ್ಚಿ ತೊಳೆದುಕೊಳ್ಳುತ್ತಿರುವಾಗ ಮೇರಿ ಕೇಳಿದಳು,

''ಅಷ್ಟು ದೂರದಲ್ಲಿ ಮಲಗಿದ್ದ ನಿಮಗೆ ಬೇಗಂ-ಗೆ ಅಸ್ತಮಾ ತಗಲಿದ ವಿಚಾರ ಹೇಗೆ ತಿಳಿಯಿತು?''

ಅವಳ ಪ್ರಶ್ನೆಯಲ್ಲಿ ವಾಸ್ತವಿಕತೆ ತುಂಬಿ ತುಳುಕುತಿತ್ತು.

ಇಂದು ಲೇಬರ್ ವಾರ್ಡಿಗೆ ಸೇರಿದವರು ಮೂರು ಮಂದಿ. ಅವರವರ ಕೆಲಸಕಾರ್ಯದಲ್ಲಿ ಎಲ್ಲರೂ ಈ ಕಡೆಯೇ ಇದ್ದುದರಿಂದ ನರ್ಸಿಗೆ ಆಶ್ಚರ್ಯವಾಯಿತೇನೋ.....ಅಂತಲೇ ಅವಳು ನಾನು ಉತ್ತರಿಸುವುದರೊಳಗಾಗಿ ಮತ್ತೆ ಕೇಳಿದಳು,

''ನಿಜವಾಗಿಯೂ ನಿಮಗೆ ಹೇಗೆ ತಿಳಿಯಿತು ಡಾಕ್ಟರ್?''

ಅರೆ......!

''ಇದೇನು? ಹೀಗೆ ಕೇಳುತಿದ್ದಿ? ಆಗ ನೀನೇ ಅಲ್ಲವೇ ಬಂದು ಕರೆದದ್ದು.....?''

ನನ್ನ ಆಶ್ಚರ್ಯತೃಷಿತ ಲೋಚನಗಳು ಅವಳನ್ನೇ ನಿಟ್ಟಿಸಿದವು ಒಂದು ಕ್ಷಣ ಆಕೆ ಒಂದು ವಿಧವಾದ ಒಗಟಾಗಿ ತೋರಿದಳು.

''ನಾನು ಬಂದು ಕರೆದೆನೇ?'' ಆಶ್ಚರ್ಯಭರಿತಳಾಗಿ ಕೇಳಿದಳು ಮೇರಿ.

''ನೀನಲ್ಲದೆ ಇನ್ಯಾರು? ನಿನಗೆ ನಿದ್ದೆಗಣ್ಣೊ.....ಏನೋ.''

''ನನಗೆ....?''

ಒಂದು ಘಳಿಗೆ ನಾನು ತಬ್ಬಿಬ್ಬಾದೆ. ಸ್ಮರಣೆಯು ಗತಕಾಲಕ್ಕೆ ಸರಿಯಿತು....ಮೇರಿಯಲ್ಲದೆ ಇನ್ನಾರು ಬಂದಿರಲು ಸಾಧ್ಯ? ಈಕೆ ಬೇಕೆಂತಲೇ ನನ್ನೊಡನೆ ಕುಚೋದ್ಯವಾಡುತಿದ್ದಾಳೆ ಎನಿಸಿತು. ನಾನು ಸಹಜವಾಗಿ ಬಿರುನುಡಿದೆ ''ಆಹಾ.....! ಸುಳ್ಳು ಹೇಳಬೇಡ. ಈ ತಮಾಷೆಯೆಲ್ಲಾ ಸಾಕು!''

“ಖಂಡಿತವಾಗಿಯೂ ನಾನು ಬಂದಿಲ್ಲ. ಮೂರು ಕೇಸುಗಳನ್ನು ನೋಡಿಕೊಳ್ಳುವುದೇ ಆಗಿದೆ. ನಮಗೆ ಆ ಕಡೆ ಹೋಗಲು ಒಂದು ನಿಮಿಷವೂ ಬಿಡುವಾಗಲಿಲ್ಲ. ಇಷ್ಟಕ್ಕೂ ಆಕೆ ನಿನ್ನೆ ಚೆನ್ನಾಗಿದ್ದಳಲ್ಲ? ನಮಗೇನಾದರೂ ಅನುಮಾನವಾಗಿದ್ದರೆ ಹೋಗಿ ನೋಡಿಕೊಂಡು ಬರಬಹುದಾಗಿತ್ತು.”

ಅರೆ....! ಇದೆಂತಹ ಆಶ್ಚರ್ಯ?

“ನಿಜ ಹೇಳು!”

“ಪ್ರಮಾಣವಾಗಿಯೂ ಬಂದಿಲ್ಲ.....ಡಾಕ್ಟರ್!”

ನನಗೀಗ ವಿಷಯ ಗಂಟಲಗಾಳವಾಯಿತು. ಅಷ್ಟು ಮಾತ್ರವಲ್ಲ ನನ್ನ ದೌರ್ಬಲ್ಯವನ್ನು ತೋರಿಸಿಕೊಳ್ಳುವುದೂ ಸಹ ಲಜ್ಜೆಯೆನಿಸಿತು. ಒಂದು ಘಳಿಗೆ ಮೂರ್ತಿಮತ್ತಾಗಿ ನಿಂತೆ. ಅಲ್ಲೇ ನೆಲವನ್ನು ಶುದ್ಧಿಗೊಳಿಸುತಿದ್ದ ದಾದಿ ಈ ಕಡೆ ತಿರುಗಿ “ಮೇರಿಯಮ್ಮ ಇಲ್ಲೇ ಇದ್ದರು ಅಮ್ಮಾ! ಅವರೆಲ್ಲೂ ಹೋಗಿಯೇ ಇಲ್ಲ.” ಎಂದಳು-ತುಂಬುಲಭರಿತ ಕೆಂಪು ಹಲ್ಲುಗಳನ್ನು ಆಕರ್ಣಾಂತವಾಗಿ ಪ್ರದರ್ಶಿಸಿ.

“ಹಾಗಾದರೆ.....!”

“ಇಲ್ಲ; ನಾವ್ಯಾರೂ ಆಕಡೆ ಹೋಗಿಯೇ ಇಲ್ಲ.”

ಮೇರಿ ಭ್ರಮಿತ ದೃಷ್ಟಿ ಬೀರಿದಳು.

“ಒಂದುವೇಳೆ ರಾಧಿ ಬಂದಿದ್ದಳೇ?” ಎಂದೆ, ಮನೋವೇಗವನ್ನು ತಾಳಿಕೊಳ್ಳಲಾರದೆ. ಆದರೆ, ರಾಧಿ ಎಂದೂ ಬಿಳಿಯ ಸೀರೆ ಉಡುವುದೇ ಇಲ್ಲ ಹಾಗಿದ್ದರೆ ಯಾರಿರಬಹುದು? ಪ್ರಶ್ನೆ ಮನದಲೆಯಲ್ಲಿ ನಿಮಿರಿ ನಿಂತಿತು. ಕೈ ತುಂಬಿದ ಸೋಪಿನ ನೊರೆಯನ್ನು ತೊಳೆಯುವುದೂ ಸಹ ಮರೆತು ಹೋಗಿತ್ತು, ಸಿಂಕಿನಲ್ಲಿ ಕೈ ತೊಳೆದುಕೊಂಡೆ. ಅದೇ ಸಮಯಕ್ಕೆ ರಾಧಿ ಒಳ ಬಂದಳು. ನೋಟ ತಟ್ಟನೆ ಅವಳೆಡೆಗೆ ಹರಿದು, ಅಸ್ತವ್ಯಸ್ತವಾಗಿ ಅವಳನ್ನು ಬಳಸಿಸುತ್ತಿದ್ದ ಸೀರೆಯು ಅಣಕವನ್ನು ಗ್ರಹಿಸಿತು. ಮೇರಿ ದೃಢಕಂಠದಿಂದ ಹೇಳಿದಳು “ಬಹುಶಃ, ಆಗ ನಿಮಗೂ ನಿದ್ದೆಗಣ್ಣಿದ್ದಿರಬಹುದು. ಸರಿಯಾಗಿ ಜ್ಞಾಪಿಸಿಕೊಳ್ಳಿ ಡಾಕ್ಟರ್!”

ಬಿಳಿಯ ಸೀರೆ....ಬಿಳಿಯ ರವಿಕೆ....ತಲೆಯ ಮೇಲೆ ಬಿಳಿಯ....ವಸ್ತ್ರ....ಕಟ್ಟಿದ ಮುಡಿ.....ಒಂದೊಂದನ್ನು ಜ್ಞಾಪಿಸಿಕೊಂಡರೆ ಖಾಸಗಿಯವರಂತೂ ಅಲ್ಲವೇ ಅಲ್ಲ. ಏನೆಂಬುದೇ ಅರ್ಥವಾಗಲಿಲ್ಲ. ಮೈಯ್ಯಲ್ಲಿ ನಸು ಕಂಪನದ ಅಲೆ ಹರಿದಾಡಿ ಹೋಯಿತು. ಕೈಗಳನ್ನು ಟವಲ್ಲಿನಿಂದ ಒರೆಸಿಕೊಂಡು ಹೊರ ಬರುತ್ತಲೂ ಹೊಸ್ತಿಲಿನ ಬಳಿ ಎದುರಾದ ಡಾ॥ ಅಶ್ವತ್ ಕೇಳಿದರು,

''ಆಯಿತೇ ಡಾಕ್ಟರ್?''

''ಆಯಿತು. ನಿಮ್ಮ ಪೇಶಂಟ್ ಹೇಗಿದ್ದಾಳೆ?''

''ಪರವಾಯಿಲ್ಲ; ಅಪಾಯದ ಗಡುವನ್ನು ದಾಟಿದಳು.''

''ಥ್ಯಾಂಕ್ ಗಾಡ್!''

''ನಾನೂ ಸಹ ಬದುಕುತ್ತಾಳೆಂದು ಭಾವಿಸಿರಲಿಲ್ಲ.''

ಅದೇ ವಿಚಾರವನ್ನು ಮೆಲಕು ಹಾಕುತ್ತ ನನಗಾದ ಹೊಸ ಅನುಭವನ್ನು ಅವರ ಮುಂದಿಟ್ಟು ''ಇವರ್‍ಯಾರೂ ನನ್ನನ್ನು ಕರೆಯಲು ಬಂದೇ ಇಲ್ಲ ಎನ್ನುತ್ತಾರೆ. ಇದು ಹೇಗೆ ಸಾಧ್ಯ ಡಾಕ್ಟರ್?'' ಎಂದೆ. ಮನೋವೇಗದಿಂದ ದನಿ ಕಂಪಿಸಿದುದನ್ನು ಬಹುಶಃ ಅವರು ಗಮನಿಸಲಿಲ್ಲವೇನೋ.....ನನ್ನನ್ನೆ ನಿಟ್ಟಿಸಿ ನೋಡುತ್ತ ಹಾಸ್ಯಪ್ರದವಾಗಿ ದೊಡ್ಡ ಬಾಯಿ ತೆಗೆದು ಗಹಗಹಿಸಿ ನಕ್ಕುಬಿಟ್ಟರು.

ನನಗೆ ಏಕೆಂಬುದೇ ಅರ್ಥವಾಗಲಿಲ್ಲ. ಅಂತಹ ಪ್ರಮಾದ ಅಥವಾ ತಮಾಷೆ ನಡೆದದ್ದಾರೂ ಏನು?

ನಾನು ಭಯ ಚಕಿತ ಶಿಶುವಿನಂತೆ ಅವರನ್ನೆ ಮಿಕಿ ಮಿಕಿ ನೋಡಿದೆ.

ತಟ್ಟನೆ ಅವರೆಂದರು ''ಯಾರು ಅಂದುಕೊಂಡಿದ್ದಿರಿ ನೀವು?''

ನಾನು ಹೇಗೆ ಹೇಳಲಿ? ಆ ಮೂಹೂರ್ತದಲ್ಲಿ ಮನಸ್ಸೆಲ್ಲ ರೋಗಿಯ ಮೇಲಿತ್ತು. ಮೇಲಾಗಿ ಹೆಚ್ಚು ಬೆಳಕು ಇರಲಿಲ್ಲ. ಮೇರಿಯೇ ಕರೆದ ಹಾಗಾಯ್ತು; ಹೊರಟೆ.''

''ನೋಡಿ, ಕಮಲ, ರಾಧಿ, ಪಾಪಮ್ಮ, ಮೇರಿ ಇಷ್ಟೇ ಮಂದಿ ತಾನೆ ಇಲ್ಲಿದ್ದುದು? ಅಂದಮೇಲೆ ನಿಮ್ಮ ಎದೆಯನ್ನು ಕೊಂಚ ದೃಢಪಡಿಸಿಕೊಳ್ಳಿ ಯಾರೆಂಬುದನ್ನು ಹೇಳಿ ಬಿಡುವೆ!''

''ಒಡನೆ ಸುತ್ತು ಮುತ್ತಿನ ಮುಖಗಳೆಲ್ಲ ಗಹಗಹಿಸಿ ನಕ್ಕುವು. ನಾನು ತಬ್ಬಿಬ್ಬಾಗಿ ಎಲ್ಲರ ಮುಖವನ್ನೂ ನೋಡಿದೆ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು. ಕತ್ತಿನ ನರಗಳೆಲ್ಲ ಪಟ ಪಟ ಸಿಡಿಯುವಂತೆ.

ಅದೇ ವೇಳೆಗೆ ಅಲ್ಲಿ ಇನ್ನಿಬ್ಬರು ಜವಾನರೂ ಕಮಲಳೂ ಬಂದು ನೆರೆದರು. ಎಲ್ಲರ ಮುಖದಲ್ಲೂ ಆಶ್ಚರ್ಯದ ಚಿನ್ಹೆ ಅಚ್ಚೊತ್ತಿತು.

ಡಾ|| ಅಶ್ವತ್ ಮುಂದುವರಿದರು ''ಸುಲ್ತಾನಬೇಗಂ-ಗೆ ಏಳು ಹೆರಿಗೆ ಮಾಡಿಸಿದ್ದೂ ಗೌರಮ್ಮನೇ! ಆಕೆಗೆ ಮಾಪಿಳ್ಳೆಯ ಸ್ಥಿತಿಗತಿಯೂ ಮಕ್ಕಳ ಪರಿಸ್ಥಿತಿಯೂ ಗೊತ್ತು. ಆ ಮಕ್ಕಳ ಮೇಲಿನ ಕರುಣೆಯಿಂದಲೇ 'ಗೌರಮ್ಮ' ನಿಮ್ಮನ್ನು ಕರೆಯ ಬಂದಿದ್ದಾಳೆ! ನೀವು ಅವಳೊಂದಿಗೆ ನಡೆದಿದ್ದೀರಿ!''

''ಹಾ....! ಗೌರಮ್ಮ?!'' ಧ್ವನಿ ಹೊರ ಬಿತ್ತು. ಶರೀರ ಒಂದೆರಡು ಕ್ಷಣ ಸ್ತಬ್ಧವಾಯಿತು.

''ಹೌದು ಗೌರಮ್ಮನೇ! ಇನ್ನಾರು ಅಲ್ಲ!'' ಅನೇಕ ಧ್ವನಿಗಳು ಮೊಳಗಿದುವು.

ಮೃದಂಗ ಘೋಷವನ್ನು ಮೀರಿ ಮಿಡಿಯುತಿದ್ದ ಹೃದಯವನ್ನು ಎರಡು ಕೈಗಳಿಂದಲೂ ಅದುಮಿ ಹಿಡಿದುಕೊಂಡೆ. ಏನು ಹೇಳಬೇಕೋ ಬಗೆ ಹರಿಯಲಿಲ್ಲ.

ಆಕಾಶರೂಪೀ ನೀಲ ಸರೋವರದಲ್ಲಿ ಅಧೋಮುಖಿಯಾದ ಕೃಷ್ಣಪಕ್ಷದ ಚಂದ್ರಮ ತೇಲುತ್ತ ಸ್ವರ್ಣ ಕಮಲದ ಶೋಭೆಯನ್ನು ಸುತ್ತ ಮುತ್ತ ಅಳವಡಿಸಿಕೊಂಡಿದ್ದ. ನನ್ನ ಚಿತ್ತ ಚಿಂತಾಪರಾಯಣವಾಗಿದ್ದರೂ ಆತನನ್ನು ಸಂದರ್ಶಿಸಿ ಸಾನಂದದಿಂದ ಹಿಮ್ಮರಳಿದಾಗ ವರಾಂಡದಲ್ಲಿ ಸುತ್ತುವರಿದ ಅನೇಕ ಮಂದಿಯ ವ್ಯಕ್ತಿತ್ವದಲ್ಲಿ ದರ್ಶಿಸಿದುದು ಗೌರಮ್ಮನ ಪ್ರತಿರೂಪ!

ಗೌ....ರ....ಮ್ಮ!

ನಾನು ಹೋಗುವುದು ಅರ್ಧಗಂಟೆ ತಡವಾಗಿದ್ದರೆ ಸುಲ್ತಾನ ಬೇಗಂ ಅಷ್ಟರೊಳಗಾಗಿ ಸಗ್ಗವನ್ನು ಅಡರಿರಬೇಕಿತ್ತು. ಆ ಏಳು ಮಕ್ಕಳು?

ಹಾ.....! ನಿಜವಾಗಿಯೂ ಆಕೆ ಗೌರಮ್ಮನೇ ಸರಿ......!

ಎದೆಯಾಳದಿಂದ ಬಿಸಿಯುಸಿರೊಂದು ಮೆಲ್ಲನೆ ತಪ್ಪಿಸಿಕೊಂಡಿತು.

ಗುರುದೇವ

ಪ್ರಸನ್ನ ಮನೋಹರ ವಾತಾವರಣ.....

ಮಧು ಮತ್ತ ಭ್ರಮಂತ ಭ್ರಮರಾವಳಿಗಳ ಝೇಂಕಾರ!

ವಸಂತ ವೈಖರಿಯಲ್ಲಿ ಪುಷ್ಪ ಸೌರಭವನ್ನು ಪೂಸಿಕೊಂಡ ಮಂದ ಮಂದಾನಿಲ!

ತರಗತಿ ಆರಂಭವಾಗಲು ಇನ್ನೂ ಐದು ನಿಮಿಷಗಳು ಇದ್ದುವಾದುದರಿಂದ ವಿದ್ಯಾರ್ಥಿಗಳು ಅಲ್ಲಲ್ಲಿ ಗುಂಪು ಕಟ್ಟಿ ಹರಟೆಯಲ್ಲಿ ತೊಡಗಿದ್ದರು. ಮೆಟ್ಟಿಲಿನ ಬಳಿಯಲ್ಲಿ ಕೂಡಿದ್ದ ಹುಡುಗಿಯರ ದಳ ವರ್ಣರಂಜಿತವಾಗಿತ್ತು.

''ಇಂದು ಮೊದಲ ಪೀರಿಯಡ್ ಕನ್ನಡ, ಪ್ರೊ॥ ಶರ್ಮ ಪ್ರಾಣ ಹಿಂಡಿ ಬಿಡುತ್ತಾರೆ.'' ಎನ್ನುವುದಕ್ಕೂ ಪ್ರೊ॥ ಶರ್ಮ ಮೆಟ್ಟಿಲು ಹತ್ತುವುದಕ್ಕೂ ಸರಿಹೋಯಿತು. ಆ ಗುಜುಗುಂಪಲಿನಲ್ಲಿ ಅವರಿಗೆ ಕೇಳಿಸಿರಲಾರದೇನೋ ಎಂಬಷ್ಟು ನಂಬುಗೆ, ಆದರೂ ನಾಲಿಗೆ ಕಚ್ಚಿದ ಪುಂಡರೀಕ. ಹಾದಿಯ ನೇರಕ್ಕೆ ಪದವಿಕ್ಷೇಪ ನಡೆಸಿದ್ದ ಪ್ರೊಫೆಸರು ಇತ್ತ ತಿರುಗದೆ ಗಂಭೀರಗತಿಯಲ್ಲಿ ಒಳಹೋದರು. ಎಲ್ಲರೂ ಹಿಂಬಾಲಿಸಿ ತಮ್ಮ ತಮ್ಮ ಆಸನಗಳಲ್ಲಿ ಮಂಡಿಸಿದರು. ಪುಂಡರೀಕ ನಾಲ್ಕನೆಯ ಸಾಲಿನಲ್ಲಿ ಗೆಳೆಯನೊಂದಿಗೆ ಕುಳಿತ.

ಅಟೆಂಡೆನ್ಸ್ ಮುಗಿಸಿ ಪ್ರೊ॥ ಶರ್ಮ ಪಾಠ ಆರಂಭಿಸಿದರು, ಶ್ರೀಕಂಠಶಾಸ್ತ್ರಿಗಳ ಲಂಕಾದಹನ ನಾಟಕ...ಅಶೋಕ ವನದಲ್ಲಿ ಬಂಧಿತಳಾದ ಸೀತೆಯ ದುಃಖವನ್ನೂ ರಾಕ್ಷಸ ಸ್ತ್ರೀಯರ ಭರ್ತ್ಸನೆಯನ್ನೂ ಹೃದಯಂಗಮವಾಗಿ ವರ್ಣಿಸಿದರು.

ಪುಂಡರೀಕ ಎಲ್ಲರಂತೆಯೇ ಪುಸ್ತಕ ತೆರೆದಿಟ್ಟ. ಬೆರಳುಗಳ ಮಧ್ಯೆ ಲೇಖನಿ ಸಿದ್ಧವಾಗಿತ್ತು.

ಅತ್ಯಂತ ದುಷ್ಟೆಯರಾದ ರಾಕ್ಷಸಿಯರ ಮಧ್ಯೆ ದುಃಖದಿಂದ ಮ್ಲಾನ ಮುಖಿಯಾಗಿ ಕುಳಿತ ಸೀತೆ ಪುಣ್ಯಶ್ಲೋಕನಾದ ಶ್ರೀರಾಮನನ್ನು ಕುರಿತು ಪ್ರಲಾಪಿಸುತಿದ್ದುದನ್ನು ಕಾರುಣ್ಯಗದ್ಗದ ಕಂಠದಿಂದ ರಸವತ್ತಾಗಿ ಸ್ವತಃ ತಮ್ಮ ಎದೆಯಳಲನ್ನೇ ತೋಡಿಕೊಳ್ಳುವ ರೀತಿಯಲ್ಲಿ ವಿವರಿಸಿತೊಡಗಿದರು, ಶರ್ಮ.

ಹನುಮಂತ ಅನಿರೀಕ್ಷಿತವಾಗಿ ಪ್ರತ್ಯಕ್ಷನಾಗಿ ಶ್ರೀರಾಮನಾಮೋಚ್ಚಾರಣೆ ಮಾಡಿದಾಗ ಅವಳಿಗೆ ಉಂಟಾವ ಆನಂದೋನ್ಮಾದವನ್ನೂ ಅನಂತರ ಹನುಮಂತ ಸೀತೆಯರ ಸಂಭಾಷಣೆಯನ್ನೂ ವಿವರಿಸುತ್ತ ರಾಮಚಂದ್ರನ ಕ್ಷೇಮವನ್ನು ಕೇಳಿದಾಗ ಅವಳ ಮುಖಮಂಡಲ ಹೇಗೆ ಅರಳಿ ಪ್ರಸನ್ನವಾಯಿತೆಂಬುದನ್ನು ಪಾರಿಭಾಷಿಕ ಶಬ್ದಗಳಿಂದ ವಿವರಿಸತೊಡಗಿದರು. 'ಎಂತು ಕಳವಳವಾಂತುದೆನ್ನೆರ್ದೆ ಶ್ರೀರಾಮಚಂದ್ರನಂ ಆಗಲಿ' ಎಂದುದರ ವಿವರಣೆ ಕೊಡುತ್ತ ಆ ದಂಪತಿಗಳ ಪ್ರೇಮಕ್ಕೆ ಸೀಮೆಯೇ ಇರಲಿಲ್ಲ ಎಂದರು.

ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲ ತಲೆಬಾಗಿ ನೋಟ್ಸ್ ಬರೆದುಕೊಳ್ಳ ತೊಡಗಿದರು.

ಪುಂಡರೀಕ ತನ್ನಲ್ಲೇ ಮುಸಿ ಮುಸಿ ನಗುತ್ತ ಬರೆದ ''ಉಗ್ರ ವಿಷಕಂಠ ಶಾಸ್ತ್ರಿಗಳ ಸದ್ಭಕ್ತ ಪ್ರೊ।। ಶರ್ಮ ಉರುಫ್ ಶಾರ್ದೂಲ ಇಂದು ಆವೇಶ ಪೂರ್ಣವಾಗಿ ಲೆಕ್ಚರ್ ಹೊಡೆಯುತಿದ್ದಾರೆ. ಬಹುಶಃ ತಮ್ಮ ದಾಂಪತ್ಯ ಜೀವನದಲ್ಲಿ ಛಲಾಯಿಸಿದ ಅಧಿಕಾರ ಹುರುಪುಗೊಟ್ಟಿರಬಹುದು.''

ಪಕ್ಕದಲ್ಲಿ ಕುಳಿತಿದ್ದ ಗೆಳೆಯ ಶ್ಯಾಮು ತನ್ನ ಕೊಕ್ಕರೆ ಕತ್ತನ್ನು ಅನಿಸಿ ಇತ್ತ ನೋಡುತ್ತಲೂ ಕಣ್ಣು ಮಿಟುಕಿಸಿ ತುಂಟ ನಗೆ ಬೀರಿ ಪುಸ್ತಕವನ್ನು ಅವನ ಮುಂದೆ ಚಾಚಿದ. ಒಂದು ಕ್ಷಣದಲ್ಲಿ ಅದನ್ನು ಓದಿ ನೋಡಿ ಅದರಡಿಯಲ್ಲಿ ತನ್ನ ಲೇಖನಿಯನ್ನೂ ಹರಿ ಹಾಯಿಸಿದ ಶ್ಯಾಮು...ಪ್ರಾಯಶಃ ಶಾರ್ದೂಲನಿಗೆ ಗೋಮಾಂಸ ಭಕ್ಷ್ಯವನ್ನು ನೀಡಿರಬಹುದು ಸತಿ ಸುಮಂಗಳೆ!

ಪ್ರೊ।। ಶರ್ಮ ಸೀತಾ ಹನುಮಂತರ ಸಂಭಾಷಣೆಯ ವ್ಯಾಖ್ಯಾನವನ್ನು ಅದೆಷ್ಟು ಹೊತ್ತು ನಡೆಸಿದರೋ....ಅಕ್ಷರ ಅಕ್ಷರವೂ ಗಂಭೀರತರವಾಗಿ ಹೊಮ್ಮುತಿತ್ತು. ಬಹುತೇಕ ವಿದ್ಯಾರ್ಥಿಗಳು ತದೇಕಚಿತ್ತರಾಗಿ ಕೇಳುತ್ತ ಪ್ರತಿಯೊಂದು ವಾಕ್ಯವನ್ನೂ ಬರೆದು ಕೊಳ್ಳುತಿದ್ದರು.

''ಸೀತಾದೇವಿಯು ಪತಿದೇವನಿಗಾಗಿ ಪ್ರಲಾಪಿಸುವುದನ್ನು ಕಂಡು ಹನುಮಂತ....''

ಪುಂಡರೀಕ ತಲೆ ಬಾಗಿ ಬರೆದ ''ಸೀತಾ ಪ್ರಲಾಪ ಸಂಕಟ ಜನ್ಯವಾದುದು. ಆದರೆ ಪ್ರೊ।। ಶಾರ್ದೂಲನ ವಿಲಾಪ ಬುದ್ಧಿ ಲೋಪದಿಂದಾದುದು.''

''ಸಾಕ್ಷಾತ್ ಪಾರ್ವತೀ ಸಮಾನಳೂ ಮೃದು ಸ್ವಭಾವ ಶಾಲಿನಿಯೂ ಆದ ಸೀತಾದೇವಿಯು.......''

ಪ್ರೊಫೆಸರ ಮಾತು ಮುಗಿಯುವುದರೊಳಗಾಗಿ ಪುಂಡರೀಕ ತನ್ನ ನೋಟ್ಸ್ ಪುಸ್ತಕವನ್ನು ಶ್ಯಾಮುವಿನ ಮುಂದಿಟ್ಟು ಕಿಸಕ್ಕನೆ ನಕ್ಕುದುದು ಅವರ ದೃಷ್ಟಿಗೆ ಬಿತ್ತು. ಪ್ರೊ॥ ಶರ್ಮ ಲೆಕ್ಚರನ್ನು ಅಲ್ಲಿಗೆ ನಿಲ್ಲಿಸಿ ದೀಪ್ತಕಂಠದಿಂದ ನುಡಿದರು ''ಪುಂಡರೀಕ....! ದಯವಿಟ್ಟು ಎದ್ದು ನಿಲ್ಲಿ.''

ಪುಂಡರೀಕ ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲವಾದುದರಿಂದ ತುಸು ಭಯ ಭರಿತನಾದ. ಕಣ್ಣುಗಳಲ್ಲಿ ಭಾವಪೂರ್ಣ ಸಮುಜ್ಜಲ ಛಾಯೆ ತಾಂಡವವಾಡಿತು. ತಟ್ಟನೆ ಎದ್ದು ನಿಂತರೂ ನಸು ತಲೆ ಬಾಗಿದ.

''ಪಾಠವನ್ನು ಸರಿಯಾಗಿ ಗಮನಿಸುತಿದ್ದೀರಾ? ಅಥವಾ......''

''ಗಮನಿಸುತ್ತಿರುವೆ.....ಸರ್!''

''ನಿಜವಾಗಿ......?''

''ಹೌದು.....ಸರ್!''

''ನೋಟ್ಸ್ ಬರೆದಿದ್ದೀರಾ?''

''ಹೂಂ!''

''ಸರಿ.''

ಅನಂತರ ಅವರ ಪ್ರವಚನ ಮುಂದುವರಿಯಿತು. ಪುಂಡರೀಕ ಅವರನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿದ. ಭಾವೋದ್ವೇಗದಿಂದ ಕಂಠಶ್ರೀ ಮೊಳಗುತಿತ್ತು. ಅವರ ನೋಟ ಪುನಃ ಇತ್ತ ಹರಿಯಲಿಲ್ಲ. ಒಂದೆರಡು ಘಳಿಗೆ ಸ್ತಬ್ಧವಾಗಿದ್ದ ಮರ್ಕಟ ಚಿತ್ತ ಮತ್ತೆ ತನ್ನ ಭೂಮಿಕೆಯನ್ನು ಸ್ಥಾಪಿಸಿತು.

''ಹನುಮಂತನ ವಿಚಾರಣೆ ಮಾಡಿದನಂತರ ಬಾಲಕ್ಕೆ ಎಣ್ಣೆ ಬತ್ತಿಯನ್ನು ಸುತ್ತಿ ಬೆಂಕಿಯನ್ನು ಹತ್ತಿಸಲು ಅಪ್ಪಣೆ ಮಾಡಿದ ರಾವಣ......''

''ಹನುಮಂತನ ಬಾಲಕ್ಕೆ ಬೆಂಕಿ ಹಚ್ಚಿ ಲಂಕೆಯನ್ನೇ ಸುಟ್ಟುಕೊಂಡ ರಾವಣ ಎಂಬುದನ್ನರಿತರೂ ತನ್ನ ಬಾಲಕ್ಕೆ ಬೆಂಕಿ ಹಚ್ಚಿದರೆ ಏನಾಗಬಹುದು ಎಂಬುದನ್ನು ಸ್ವತಃ ಅರಿಯರು ಪ್ರೊ॥ ಶರ್ಮ ಉರುಫ್ ಶಾರ್ದೂಲ.''

ಪ್ರವಚನ ಮುಗಿದಾಗ ಪ್ರೊಫೆಸರ ಕಣ್ಣು ಇತ್ತಲೇ ಹರಿದುವು. ಪುಂಡರೀಕ ಏನೂ ಅರಿಯದವನಂತೆ ತಲೆ ಬಾಗಿ ಲೇಖನಿಯನ್ನು ಹಿಡಿದ ''ಮರ್ಕಟ ಮಯಂ ಶರ್ಮಾಜಿಯ ಮಸ್ತಿಷ್ಕಂ''

ತುಟಿಗಳಲ್ಲಿ ತುಂಟನಗೆ ಮಿನುಗಿ ಮಾಯವಾಯಿತು.

ಶ್ಯಾಮು ಕಡೆಗಣ್ಣಿಂದ ನೋಡಿ ವಿಷಯವನ್ನು ಮನದುಂಬಿಕೊಂಡ. ಹೃದಯಗಳು ಪರಸ್ಪರ ಮೌನ ಸಂಭಾಷಣೆ ನಡೆಸಿದುವು. ತುಟಿಗಳು ಬಹಿರಂಗವಾಗಿ ಬಿರಿಯಲಿಲ್ಲ.

ಎಲ್ಲರೂ ಪುಸ್ತಕವನ್ನು ಮಡಿಸುವುದರೊಳಗಾಗಿ ವೇದಿಕೆಯಿಂದ ಪ್ರೊ॥ ಶರ್ಮರ ಕಂಠಾಘೋಷ ಮೊಳಗಿತು,

''ಪುಂಡರೀಕ! ದಯವಿಟ್ಟು ಪುಸ್ತಕ ತನ್ನಿ!''

ಪುಂಡರೀಕ ತಬ್ಬಿಬ್ಬಾದ. ಎದ್ದು ನಿಂತರೂ ಹೆಜ್ಜೆ ತೆಗೆಯಲಾಗಲಿಲ್ಲ. ಮುಖವರ್ಣ ರಂಗೊರೆದಂತೆ ಕೆಂಪು ತಳೆಯಿತು. ಬಾಗಿದ ತಲೆಯೆತ್ತಲಿಲ್ಲ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಹತ್ತಿತು.

''ತರುತ್ತೀರೋ? ಅಥವಾ ನಾನೇ ಅಲ್ಲಿಗೆ ಬರಲೋ?''

''.......''

''ಒಂದು ನಿಮಿಷ ಅವಧಿ ಕೊಡುವೆ.''

ಎದೆಯ ಹಕ್ಕಿ ಹಲವಾರು ದೇವರನ್ನು ನೆನೆಯಿತು.

ಮುಂದಿನ ಪರಿಣಾಮವನ್ನು ನೆನೆದು ಮುಖ ಬೆಳ್ಳನೆ ಬಿಳಿಚಿಕೊಂಡಿತು. ದೇಹದಾದ್ಯಂತ ಭಯ ಭೀತಿಯ ಝುರಿ ಹರಿದಾಡಿತು. ಆದರೂ ವಿಧಿ ಇರಲಿಲ್ಲ. ನಿರುಪಾಯವಾಗಿ ಪುಸ್ತಕವನ್ನು ಕೊಂಡೊಯ್ದು ಅವರ ಕೈಗಿಟ್ಟ. ಇನ್ನು ಕಾಲೇಜಿಗೂ ನನಗೂ ಋಣ ತೀರಿತು. ಎಂಬ ದೃಢಭಾವನೆ ಆಕ್ಷಣದಲ್ಲಿ ಮೂಡಿ ಆಪಾದಮಸ್ತಕವೂ ಮೈನವಿರೆದ್ದಿತು. ಅತ್ಯಂತ ಸಂಕೋಚದಿಂದ ಪುಂಡರೀಕ ತಲೆಬಾಗಿದ. ಹೃದಯ ತಂತುಗಳು ಕಟ್‌ಕಟ್ಟನೆ ತುಂಡು ಗಡಿಯುತ್ತಿರುವಂತೆ ಭಾಸವಾಯಿತು.

ಪ್ರೊ॥ ಶರ್ಮ ತುಂಬ ನಿಷ್ಠುರರೆಂದು ಕಾಲೇಜಿನಲ್ಲಿ ಖ್ಯಾತಿ ಹೊಂದಿದ್ದರು. ಒಮ್ಮೆ ಕುಪಿತರಾದರೆಂದರೆ 'ಕ್ಷಮೆ' ಎಂಬುದು ಅವರ ಬಳಿ ಸುಳಿಯುವುದಿಲ್ಲವೆಂಬುದು ಪುಂಡರೀಕನಿಗೆ ತಿಳಿದಿತ್ತು. ಎಷ್ಟೋ ಬಾರಿ ಸ್ವಂತ ಅನುಭವಕ್ಕೂ ಬಂದಿದೆ.

ಪ್ರೊ॥ ಶರ್ಮ ಓದಿದರು.....ಆದ್ಯಂತವಾಗಿ ಓದಿದರು. ತುಟಿಗಳಲ್ಲಿ ಊಹಿಸಲೂ ಆಗದಂತಹ ಸಣ್ಣ ನಗೆ ಅರಳಿ ಮಾಯವಾಯಿತು. ಪುಸ್ತಕವನ್ನು ಮಡಿಸಿ ಹಾಗೇ ಹಿಂದಿರುಗಿಸಿದರು, ಯಾವ ಪ್ರತಿಕ್ರಿಯೆಯನ್ನೂ ವ್ಯಕ್ತಪಡಿಸಲಿಲ್ಲ.

''ದೈವವಶಾತ್ ಬದುಕಿದೆ. ದೇವರು ದೊಡ್ಡವನು'' ಎಂದುಕೊಳ್ಳುತ್ತ ಹಿಂದಿರುಗಿದ-ಪುಂಡರೀಕ.

ಪ್ರೊ॥ ಶರ್ಮರ ಕಂಠ ಕಂಚು ಮಿಡಿದಂತೆ ಮೊಳಗಿತು,

''ಎಲ್ಲರೂ ಪಾಠವನ್ನು ಶ್ರದ್ಧೆಯಿಂದ ಕೇಳಿದ್ದೀರಾ?''

''ಹೌದು.....ಸರ್!'' ಅನೇಕ ಕಂಠಗಳು ಗೆಜ್ಜೆ ಸರವನ್ನು ಒಂದೇ ಬಾರಿಗೆ ಅಲುಗಿಸಿದಂತೆ ಮೊಳಗಿದುವು. ಮುಖದ ಮೇಲೆ ವಿಶ್ವಾಸ-ಸಮಾಧಾನಗಳ ಛಾಯೆ ಸುಳಿಸುಳಿದಳಿಯಿತು.

''ಸರಿಯಾಗಿ ಅರ್ಥವಾಯಿತೇ?''

''ಹೌದು ಸರ್.''

ಪುಂಡರೀಕ ಬಾಗಿದ ತಲೆಯೆತ್ತದುದನ್ನು ನೋಡಿಯೋ ಏನೋ, ಕೇಳಿದರು ಪ್ರೊ॥ ಶರ್ಮ,

''ನಿಮಗೆ ಅರ್ಥವಾಯಿತೇ ಪುಂಡರೀಕ?''

''ಹೌದು ಸರ್.''

''ಹಾಗಾದರೆ, ಎಲ್ಲರೂ ಇಲ್ಲಿ ಕೇಳಿ. ಈ ವಿಷಯದ ಮೇಲೆ ನಿಮ್ಮ ನಿಮ್ಮ ಮನೋಬಾವವನ್ನು ಪ್ರಬಂಧ ರೂಪದಲ್ಲಿ ಬರೆದು ಬುಧವಾರ ತೆಗೆದುಕೊಂಡು ಬನ್ನಿ. ಚೆನ್ನಾಗಿ ಬರೆಯದವರನ್ನು ಪರೀಕ್ಷೆಗೆ ಆರಿಸಲಾಗುವುದಿಲ್ಲ.'' ನುಡಿ ಲೋಕಾಭಿರಾಮವಾಗಿ ಹೊರ ಬಿತ್ತು. ಅದರಲ್ಲಿ ಯಾವ ಕುಹುಕವೂ ಕಂಡು ಬರಲಿಲ್ಲ.

ಅಷ್ಟರಲ್ಲಿ ಗಂಟೆ ಬಾರಿಸಿತು.

ಪ್ರೊ॥ ಶರ್ಮ ತಮ್ಮ ದಸ್ಕತ್ತುಗಳೊಡನೆ ಹೊರಬಿದ್ದರು.

★ ★ ★ ★ ★

ಕಾಲೇಜು ಬಿಟ್ಟಾಗ ಶ್ಯಾಮು ಅಂದ

''ಇಂದು ನಿನ್ನ ಮೇಲೆ ಪ್ರೊ॥ ಶರ್ಮ ಕುಪಿತರಾಗದುದು ಬಹಳ ಆಶ್ಚರ್ಯ!''

''ಅದೇ ಮತ್ತೆ. ಇಂದಿಗೆ ನನಗೂ ಕಾಲೇಜಿಗೂ ಋಣಾನುಬಂಧ ಕಡಿಯಿತು ಎಂದುಕೊಂಡಿದ್ದೆ! ದೇವರೇ ಕಾಪಾಡಿದ!'' ಮುಖದಲ್ಲಿ ಸಮಾಧಾನವನ್ನು ಸೂಸಿ ''ಈಗ ಪ್ರಬಂಧ ರಚನೆ.....?''

''ಅದಿರಲಿ, ಪ್ರೊ॥ ಶರ್ಮ ನಿನ್ನನ್ನು ಕ್ಷಮಿಸಿದುದರ ಕಾರಣ ಗೊತ್ತೇನು?''

ಪುಂಡರೀಕ ಮಾತಾಡದೆ ಕಾಷ್ಠ ಪ್ರತಿಮೆಯಂತೆ ನಿಂತು ಮಿಕಿಮಿಕಿ ನೋಡಿದ. ಏನಿರಬಹುದು? ಎಂಬ ಪ್ರಶ್ನೆ ಮನೋವ್ಯಾಪ್ತವಾಗಿದ್ದರೂ ಅರ್ಥವಾಗಲಿಲ್ಲ.

''ಅವರು ಬಹಳ ಬುದ್ಧಿವಂತರು! ನಿನ್ನನ್ನು ಹೊರ ಹಾಕಿದ್ದರೆ ನಿನ್ನ ಒಕ್ಕಣೆಯ ವಿಚಾರ ಹೊರಬಿದ್ದು ತರಗತಿಯಲ್ಲಿ ಅವರೇ ನಗೆಪಾಟಲಿಗೊಳಗಾಗುತಿದ್ದರು! ಈಗ

ನೋಡು, ಅವರ ಮರ್ಯಾದೆಯು ಉಳಿಯಿತು. ಪ್ರಬಂಧ ರಚನೆಯಲ್ಲಿ ನಿನ್ನನ್ನು ಹಿಂಡಿಯೂ ಬಿಡುತ್ತಾರೆ!''

'ಅದು ನಿಜ' ಎನಿಸಿತು ಪುಂಡರೀಕನಿಗೆ. ಒಂದು ಘಳಿಗೆ ಯೋಚಿಸಿ ''ಪ್ರಬಂಧ ರಚನೆಗೆ ಏನು ಮಾಡೋಣ ಹೇಳು?'' ಎಂದ. ಅಪ್ರಬುದ್ಧ ಬುದ್ಧಿ ಚಿಂತಾಕುಲವಾಯಿತು.

'ಅದು ನಿಜ' ಎನಿಸಿತು ಪುಂಡರೀಕನಿಗೆ. ಒಂದು ಘಳಿಗೆ ಯೋಚಿಸಿ ''ಪ್ರಬಂಧ ಗಚನೆಗೆ ಏನು ಮಾಡೋಣ ಹೇಳು?'' ಎಂದ. ಅಪ್ರಬುದ್ಧ ಬುದ್ಧಿ ಚಿಂತಾಕುಲವಾಯಿತು.

''ನಡೆ, ಲೈಬ್ರರಿಯ ಕಡೆ ಹೋಗಿ ಬರೋಣ.''

''ಹೌದಪ್ಪ, ಏನಾದರೂ ಮಾಡಲೇ ಬೇಕಲ್ಲ. ಪರೀಕ್ಷೆಗೆ ಕೂರಗೊಡಿಸದಿದ್ದರೆ ಏನುಗತಿ?''

ಇಬ್ಬರೂ ಲೈಬ್ರರಿಗಭಿಮುಖವಾಗಿ ಹೊರಟರು.

ಕಾಲೇಜಿನ ಲೈಬ್ರರಿಯು ಸಣ್ಣದೇನೂ ಅಲ್ಲ. ದೇಶ ವಿದೇಶಗಳ ಹೊತ್ತಗೆಗಳೆಲ್ಲ ಅಲ್ಲಿ ಸಂಗ್ರಹೀತವಾಗಿವೆ. ಹೊಸ ಮಾಸಿಕ ಮತ್ತು ಸಾಪ್ತಾಹಿಕಗಳೂ ಬಂದಿವೆ. ಮೊದಲು ಮಾಸಿಕ, ಸಪ್ತಾಹಿಕಗಳನ್ನು ನೋಡಿದನಂತರ ಇಬ್ಬರೂ ಗಮನವನ್ನು ವಿಚಾರ ಸಾಹಿತ್ಯಗಳ ಕಡೆ ಹರಿಯ ಬಿಟ್ಟರು. ಕಾಶೀ ವಿಶ್ವವಿದ್ಯಾಲಯದ ಪ್ರೊ|| ನಾಡಕರ್ಣಿಯವರ ಹತ್ತು ಪ್ರಬಂಧಗಳ ಸಂಕಲನವೊಂದನ್ನು ತೆಗೆದುಕೊಂಡರು. ಆ ವಿದ್ವತ್ಪೂರ್ಣ ಲೇಖನಗಳು ಎಷ್ಟೊಂದು ಸರಳ ಭಾಷೆಯಲ್ಲಿ ರೂಪಿತವಾಗಿವೆ ಎಂಬುದು ಅರ್ಥವಾದಾಗ ಮತ್ತೆ ಮತ್ತೆ ತಿರಿವಿ ಹಾಕಿದರು. ಲೇಖನದ ಕೊನೆಯಲ್ಲಿ ''ಹೆಚ್ಚಿನ ಅಧ್ಯಯನಕ್ಕೆ ಇದೇ ಲೇಖಕರ 'ವಿಚಾರಾತ್ಮಕ ಪ್ರಬಂಧಗಳು' ಎಂಬ ಲೇಖನವನ್ನು ನೋಡಿ'' ಎಂದು ಟಿಪ್ಪಣಿಯಿತ್ತು. ಎಷ್ಟೇ ಪುಸ್ತಕಗಳನ್ನು ತಿರಿವಿಹಾಕಿದರೂ ಅದರ ಸುಳಿವು ಹತ್ತಲಿಲ್ಲ. ಕೊನೆಗೆ ಇಡೀ ಪುಸ್ತಕಾಗಾರವನ್ನೇ ಪರಿಶೀಲಿಸಿದ್ದಾಯ್ತು. ಇಬ್ಬರೂ ಅದನ್ನು ಶ್ರಮವಹಿಸಿ ಹುಡುಕುತಿದ್ದುದನ್ನು ಕಂಡು ವ್ಯವಸ್ಥಾಪಕರೆಂದರು,

''ಅದು ನಿಮಗೆ ಬೇಕೇ ಆಗಿದ್ದರೆ ಪ್ರೊ|| ಶರ್ಮರವರ ಬಳಿ ಇದೆ. ಅವರಿಂದ ಪಡೆದುಕೊಳ್ಳಿ. ಅದರಲ್ಲಿ ರಾಮಾಯಣದ ಬಗ್ಗೆ ಅನೇಕ ಪ್ರಬಂಧಗಳಿವೆ.''

ತಟ್ಟನೆ ಗೆಳೆಯರಿಬ್ಬರೂ ಮುಖ ಮುಖ ನೋಡಿಕೊಂಡರು. ತುಟಿಗಳು ಚಲಿಸಲಿಲ್ಲ. ಮನಃಪ್ರಾಣಗಳು ಮೌನ ಸಂಭಾಷಣೆ ನಡೆಸಿದುವು. ಅನಂತರ ಪುಂಡರೀಕ ಪ್ರಶ್ನಿಸಿಸಿದ,

''ಒಂದು ವೇಳೆ ಪಬ್ಲಿಕ್ ಲೈಬ್ರರಿಯಲ್ಲಿ ದೊರೆಯಬಹುದೇ?''

''ಅಲ್ಲಿಯೂ ಇಲ್ಲ. ನನಗೆ ತಿಳಿದ ಮಟ್ಟಿಗೆ ಪ್ರೊ॥ ಶರ್ಮರವರಲ್ಲಿ ಮಾತ್ರ ಇದೆ.

ಇಷ್ಟು ಹೇಳಿ ಅವರು ನಿರ್ಗಮಿಸಿದರು.

''ಈಗ ಏನು ಮಾಡೋಣ?''

''ಇಲ್ಲಿ ಇನ್ನೂ ಬೇಕಾದಷ್ಟು ಕಾವ್ಯ ವಿಮರ್ಶೆಗಳಿವೆ.....ಬಹಳ ಕ್ಲಿಷ್ಟತರ. ಅರ್ಥವಾಗುವುದೇ ಕಷ್ಟ.''

''ಅದಕ್ಕೆಂದೇ ಕೇಳುತಿದ್ದೇನೆ. ಈಗ ಏನು ಮಾಡೋಣ?''

''ಶರ್ಮರ ಕಾಲಿಗೆ ಬಿದ್ದು ಕ್ಷಮಾಪಣೆ ಬೇಡು.''

ಇಬ್ಬರ ತುಟಿಗಳಲ್ಲೂ ಮಂದಹಾಸ ಮಿನುಗಿ ಮಾಯವಾಯಿತು.

''ಈ ಸಲ ಸೆಲೆಕ್ಷನ್ ಸಿಗುವುದು ಅಸಂಭವ ಶ್ಯಾಮು.'' ಪುಂಡರೀಕ ಅಳಲನ್ನು ತೋಡಿಕೊಂಡ.

''ಒಂದುವೇಳೆ ಅವರನ್ನೇ ಕೇಳಿದರೆ?''

''ಸೆಲೆಕ್ಷನ್ ಪರೀಕ್ಷೆ ಅವರೇ ನೀಡಿರುವಾಗ ಅವರನ್ನು ಕೇಳುವುದಾದರೂ ಎಂತು? ಅದಲ್ಲದೆ ನಾವು........''

''ನಿಜ ಅದೂ ಕಷ್ಟವೇ. ಬೇರೆ ದಿನಗಳಾಲ್ಲಾಗಿದ್ದರೆ ಕೇಳಬಹುದಾಗಿತ್ತು.''

ಈ ಪ್ರಕಾರ ಸಾಗಿತು ಅವರ ಮಾತುಕತೆ.

ಆದರೆ ಎಷ್ಟೊತ್ತಾದರೂ ಪರಿಹಾರ ಮೂಡಲಿಲ್ಲ.

ದೂರ ದಿಗಂತದಲ್ಲಿ ಅಸ್ತಮಾನ ಪ್ರಭೆ ತುಂಬಿ ಹರಡಿತ್ತು. ನೇಸರು ಮುಳುಗುವುದರಲ್ಲಿದ್ದ. ಸಂಧ್ಯಾಸ್ಫೂರ್ತಿ ನರನಾಡಿಗಳಲ್ಲಿ ಹರಿದಾಡಿ ಸಾಂತ್ವನ ನೀಡಿತು-ಕಲುಷ ಮಾನಸವನ್ನು ಶುಭ್ರಗೊಳಿಸುವಂತೆ.

ಇಬ್ಬರೂ ಕಾರ್ಯಾಸಕ್ತರಾಗಿ ಮೆಟ್ಟಿಲಿಳಿದರು.

ಮರುದಿನ ಇನ್ನೆಲ್ಲ ಲೈಬ್ರರಿಗಳನ್ನಲೆದರೂ ಪ್ರೊ॥ ನಾಡಕರ್ಣಿಯವರ ಲೇಖನ ದೊರೆಯಲಿಲ್ಲ.

''ಇನ್ನು ಅದರ ಯೋಚನೆಯನ್ನೇ ಬಿಟ್ಟು ಸ್ವಂತ ರಚನೆಯಲ್ಲಿ ತೊಡುಗುವುದು ಲೇಸು'' ಎಂದ ಶ್ಯಾಮು. ಸ್ನೇಹಾನುರಾಗದೊಂದಿಗೆ ಸಹಾನುಭೂತಿಯ ವರ್ಷಣವೂ ಹರಿದು ಬಂತು.

''ಆದರೆ ಬುದ್ಧಿ ಓಡಬೇಕಲ್ಲ? ಕಾವ್ಯ ವಿಮರ್ಶೆ ಅಷ್ಟು ಸುಲಭವಲ್ಲ.''

''ಅವರು ಕೇಳಿರುವುದು ಕಾವ್ಯ ವಿಮರ್ಶೆಯಲ್ಲ. ನಮ್ಮ ಅಭಿಪ್ರಾಯ ಪ್ರಬಂಧ.''

ಪುಂಡರೀಕ ತಲೆ ಕೆರೆದುಕೊಳ್ಳುತ್ತ ಅಂದ,

''ಇಂದು ನಮ್ಮಲ್ಲಿಗೆ ಬಂದು ಬಿಡು. ಇಬ್ಬರೂ ಕೂಡಿಯೇ ಪ್ರಬಂಧ ಬರೆಯೋಣ. ದೇವರು ಸಹಾಯ ಮಾಡುತ್ತಾನೆ.''

ಶ್ಯಾಮು ನಕ್ಕುಬಿಟ್ಟ.

''ಇದರಲ್ಲಿ ಹನುಮಂತನ ಪಾತ್ರ ಎಷ್ಟು ಪ್ರಮುಖವೋ ಲಂಕಾಧೀಶ್ವರ ಮತ್ತು ಆತನ ಸೇನೆಯ ಪಾತ್ರವೂ ಅಷ್ಟೇ ಪ್ರಾಮುಖ್ಯ....ಪಾತ್ರಗಳ ಹೆಸರೇ ತಿಳಿಯದ ನಾವು ಪ್ರಬಂಧ ಬರೆಯುವುದೆಂದರೆ ಹೇಗೆ?''

ಶ್ಯಾಮುವಿನ ಪ್ರಶ್ನೆ ಮನದ ಅಂತರಾಳಕ್ಕಿಳಿದಾಗ ಮೊದಲು ಏಕೆ ನಕ್ಕನೆಂಬುದು ಈಗ ಅರ್ಥವಾಯಿತು. ವಿಚಾರವಾಹಿನಿಯಲ್ಲಿ ತರ್ಕ ಹೀನ ಬುದ್ಧಿಯು ಸಿಕ್ಕಿ ತತ್ತರಿಸಿ ಮುಖ ಮಂಡಲ ನಸು ಬಾಡಿತು. ಸೆಲೆಕ್ಷನ್ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆಯದಿದ್ದಲ್ಲಿ ಪರೀಕ್ಷೆಗೆ ಆಯ್ಕೆಯಾಗುವುದು ಕನಸಿನ ಮಾತು.....ಯೋಚಿಸುತ್ತ ಅಂದ,

''ರಾಮಾಯಣವನ್ನೇ ಓದಿ ನೋಡೋಣವೆ?''

''ಬರೀ ರಾಮಾಯಣ ಓದುವುದರಿಂದ ಪ್ರಬಂಧ ರಚನೆ ಸಾಧ್ಯವಾಗದು. ಮುಖ್ಯವಾಗಿ ಅಂತಹ ಪ್ರಬಂಧಗಳನ್ನು ಓದಿ ನೋಡಿಯೇ ಕೈ ಹೆಚ್ಚಬೇಕು.''

ಪುಂಡರೀಕ ಮಾತಾಡಲಿಲ್ಲ. ವಿಷಯಮಂಥನದಲ್ಲಿ ತೊಡಗಿತು ಚಿತ್ತ.

''ರಾಮಾಯಣ ಓದಿ ಪಾತ್ರ ಪರಿಚಯ ಮಾಡಿಕೊಂಡು ಸ್ವಂತ ಪ್ರಬಂಧ ರಚನೆ ಮಾಡುವುದೆಂದರೆ ನಮ್ಮ ಬುದ್ಧಿಯೂ ಅಷ್ಟೇ ಹರಿತವಾಗಿರಬೇಕು. ಬರೆದು-ಅಳಿಸಿ ಬರೆದು-ಅಳಿಸಿ ಮತ್ತೆಮತ್ತೆ ಬರೆಯುವುದೆಂದರೆ ಹೆಚ್ಚು ಕಾಲಾವಕಾಶವಾದರೂ ಬೇಕು. ನಮಗೆ ಅದೂ ಇಲ್ಲ.''

ಅಪ್ರಬುದ್ಧ ಬುದ್ಧಿ ಅತ್ಯಂತ ಚಿಂತೆಗೀಡಾಯಿತು. ಏನು ಮಾಡಬೇಕೆಂಬುದು ಬಗೆ ಹರಿಯದು. ಯೋಚಿಸುತ್ತ ಇಬ್ಬರೂ ಹೊರಟರು. ಜನ ಭರಿತ ಹಾದಿ ಗದ್ದಲಮಯವಾಗಿತ್ತು.

ಪುಂಡರೀಕ ಶ್ಯಾಮುವಿನ ಭುಜದದಮೇಲೆ ಕೈಹಾಕಿ ಅಂದ,

''ಯಾರನ್ನಾದರೂ ಕಳುಹಿಸಿ ಪ್ರೊ॥ ಶರ್ಮರನ್ನೇ ಕೇಳಿ ತನ್ನಿರೆಂದರೆ....?''

''ಆಗಬಹುದು.... ಆದರೆ ಅವರು ಕೊಟ್ಟಾರೆಯೆ? ಅದರಲ್ಲೂ ಅವರೇ ಪ್ರಬಂಧರಚನೆಗೆ ಆದೇಶವಿತ್ತಿರುವಾಗ....? ''

ವಾಸ್ತವ್ಯ....!

ಹಾದಿ ಸದ್ದಿಲ್ಲದೆ ಸಾಗುವಾಗ ಭವಿಷ್ಯದ ಚಿಂತೆ ಚಿದಾಕಾಶದಲ್ಲಿ ಕಾರ್ಮೋಡದಂತೆ ತುಂಬಿ ಹೋಗಿತ್ತು. ಹೆಜ್ಜೆಹೆಜ್ಜೆಯೂ ಮಂಗಳದ ಕಡೆ ಸರಿದು ಅದ್ಭುತ ಶಾಂತಿ ಅನುಭೂತವಾಗುವ ಸಂಸ್ಥಿತಿಯಲ್ಲಿ ತನ್ನ ಮೇಲೆ ತಾನೇ ಕಲ್ಲು ಹಾಕಿ ಕೊಂಡ ಬಗ್ಗೆ ಹೃದಯವನ್ನು ಗಾಣಕ್ಕೆ ಕೊಟ್ಟಂತೆ ಹಿಂಡುತಿತ್ತು.

★ ★ ★ ★ ★

ಮಂಗಳವಾರ ಕೊನೆಯ ಪೀರಿಯಡ್ಡನ್ನು ಮುಗಿಸಿ ಹೊರ ಬಿದ್ದಾಗ ಮನಸ್ಸಿಗೆ ಶಾಂತಿಯೇ ಇರಲಿಲ್ಲ. ನಾಳೆ ಮೊದಲ ಪೀರಿಯಡ್ ಪ್ರೊ||ಶರ್ಮ ಅವರದು. ಈ ಸಂಜೆಯೇ ಪ್ರಬಂಧ ತಯಾರಾಗಬೇಕು. ಏನು ಮಾಡುವುದು ಎಂಬ ಚಿಂತೆಯನ್ನು ತುಂಬಿಕೊಂಡೇ ಹೆಜ್ಜೆ ತೆಗೆದ ಪುಂಡರೀಕ.

ಸೂರ್ಯನ ಅರುಣ ಕಿರಣಗಳು ಭೂ ಗ್ರಹಕ್ಕೆ ತಗುಲಿ ಕೋಟಿ ಕೋಟಿ ವರ್ಣಗಳಲ್ಲಿ ವಿಭಜಿತವಾದಂತೆ ತೋರುತಿದ್ದುವು. ಕಾಲೇಜಿನ ಆವರಣದಲ್ಲಿದ್ದ ಹೆಮ್ಮರಗಳ ಮೇಲೆ ಕಲೆತ ಬಗೆ ಬಗೆಯ ಪಕ್ಷಿಗಳ ಚಿಲಿಪಿಲಿ ಮಧುರ ಸ್ವರ ಕೇಳಿ ಬರುತಿತ್ತು. ವಾತಾವರಣ ತಂಪು ತಳೆದ ಸಂಧ್ಯಾ ಸೊಬಗು ಕ್ಷಣ ಕ್ಷಣಕ್ಕೂ ಹೆಚ್ಚುತಿತ್ತು.

ಆದರೆ.....!

ತನ್ನ ಅಸ್ತಿತ್ವಕ್ಕೆ ತಳಪಾಯವೇ ಇಲ್ಲದಂತೆ ಭಾಸವಾಯಿತು. ಆದರೂ ಸಹ ತನ್ನ ವರ್ತನೆ.....?

ಆ ಯೋಚನೆ ಬಂದಾಗ ತಾನು ಎಷ್ಟೊಂದು ಬುದ್ಧಿಹೀನ ಎಂದುಕೊಂಡ. ಮನದಲೆಗಳು ಏರುಪೇರಾದುವು. ಹಾಗೇ ವಿಚಾರ ಮಗ್ನನಾಗಿ ಮುಂದುವರಿದ. ಇದುವರೆವಿಗೂ ಕಾಣೆಯಾಗಿದ್ದ ಶ್ಯಾಮು ವಿದ್ಯಾರ್ಥಿಗಳ ಗುಂಪಿನ ಮಧ್ಯೆ ತಟ್ಟನೆ ಕಾಣಿಸಿಕೊಂಡು ಕೂಗಿ ಹೇಳಿದ,

"ಲೇ.... ಹೋಗಬೇಡವೋ! ಸ್ವಲ್ಪ ಹೊತ್ತಿರು ನಾನೂ ಬರುವೆ."

ಪುಂಡರೀಕ ಅವನಿಗಾಗಿ ಕಾದು ನಿಂತ. ಅನೇಕ ಹುಡುಗರ ಮಧ್ಯೆ ಮಾತಿನ ಮಳೆಗರೆಯುತಿದ್ದ ಅವನಲ್ಲಿ 'ಲಂಕಾದಹನ'ದ ಹನುಮಂತನ ಪಾತ್ರವನ್ನು ತಾನೇ ವಹಿಸಿದಷ್ಟು ಪಟುತ್ವ ಕಾಣಿಸುತಿತ್ತು. ಸಧ್ಯಕ್ಕೆ ಅದು ಮುಗಿಯುವುದಿಲ್ಲವೇನೋ ಎಂಬಷ್ಟು ತ್ವರಿತಗತಿಯಲ್ಲಿ ಮುಂದುವರಿಯುತಿತ್ತು. ಪುಂಡರೀಕ ಅಲ್ಲಿಂದಲ್ಲೆ ಪದಚಾರಣ ಮಾಡುತ್ತ ಗೆಳೆಯನಿಗಾಗಿ ಕಾದ.

ಶ್ಯಾಮು ತನ್ನ ಮಾತುಕತೆ ಮುಗಿಸಿ ಬಂದವನೇ ಅಂದ,

“ಇಲ್ಲಿ ಕೇಳು ! ನಾನು ಒಂದು ಒಳ್ಳೆ ಉಪಾಯ ಹೂಡಿ ಬಂದೆ. ನಾಳೆ ಶರ್ಮರಿಗೆ ಸರಿಯಾಗಿ ಮಣ್ಣು ಮುಕ್ಕಿಸದಿದ್ದರೆ ಮತ್ತೇಕೆ?”

“ಅಂದರೆ....?”

“ಊಹಿಸಿ ನೋಡು!”

“ಈಗ ಅಷ್ಟೊಂದು ಸಹನೆಯಾಗಲೀ ಸಮಯವಾಗಲೀ ನನಗೆ ಇಲ್ಲವೇ ಇಲ್ಲ. ಏನಿದ್ದರೂ ನೀನೇ ಹೇಳಿಬಿಡು!” ಕಾತರ-ಕುತೂಹಲ ಮಿಶ್ರಿತ ದನಿಯಿಂದ ನುಡಿದ ಪುಂಡರೀಕ.

“ನನ್ನ ತಂಗೀಯೂ ಶರ್ಮರ ಮಗಳೂ ಆತ್ಮೀಯ ಗೆಳತಿಯರು. ಇವಳನ್ನು ಕಳುಹಿಸಿ ಶರ್ಮರಿಗೆ ತಿಳಿಯದಂತೆ ಪುಸ್ತಕವನ್ನು ಉಪಾಯವಾಗಿ ತರಿಸಿಕೊಳ್ಳುವೆ. ನಮ್ಮ ಮನೆಯಲ್ಲೇ ಕುಳಿತು ಪ್ರಬಂಧ ಬರೆಯೋಣ.”

“ಅಹಾ....!”

“ಹೌದು.”

“ಸರಿ; ದೇವರ ದಯದಿಂದ ಸಿಕ್ಕಿದರೆ ಸಾಕು.” ಪುಂಡರೀಕ ಸಮಾಧಾನದಿಂದ ನುಡಿದ.

“ಪರವಾಯಿಲ್ಲ. ದೇವರನ್ನು ನೆನೆಯುವಷ್ಟು ಮನಸ್ಸು ಹಣ್ಣಾಯಿತಲ್ಲ. ದೇವರಿಂದು ಖಂಡಿತ ಧನ್ಯನಾದ!”

ಇಬ್ಬರೂ ಗಹಗಹಿಸಿ ನಕ್ಕರು.

“ಹೇಗಾದರೂ ಪರೀಕ್ಷೆಗೆ ಸೆಲೆಕ್ಟಾದರೆ ಸಾಕಾಗಿದೆ. ಇಲ್ಲದಿದ್ದರೆ ಅಪ್ಪನ ಎದುರಿಗೆ ಹೋಗುವುದೆಂತು?....ನನಗೀಗಲೇ ಚಳಿ ಹಿಡಿದಂತಾಗಿದೆ.”

“ನೋಡೋಣ, ಅಷ್ಟೇಕೆ ಅಳುಕು?”

ಇಬ್ಬರೂ ಪುಸ್ತಕಗಳನ್ನು ಎದೆಗಾಂತು ಹಿಡಿದು ಹೆಜ್ಜೆ ತೆಗೆದರು. ಮೇಘಮುಕ್ತ ಗಗನದಂತೆ ಚಿತ್ತ ಪ್ರಸನ್ನವಾಗಿತ್ತು. ಭಗವಾನ್ ಮರೀಚಿಮಾಲಿಯು ಪಶ್ಚಿಮ ಪ್ರಾಂತಕ್ಕೆ ಪಯಣಿಸುತಿದ್ದ. ಅಪರಾಂಬುಧಿಯ ತೀರದಲ್ಲಿ ಸಂಧ್ಯಾರಾಗ ಉದಿತವಾಗುವುದೊಂದು ಬಾಕಿ. ಆ ಅದೃಶ್ಯ ಸೌಂದರ್ಯವನ್ನು ಗಮನಿಸಿದಾಗ ಪುಂಡರೀಕ ಅಂದ “ನಾವು ಎಷ್ಟೊತ್ತು ಇಲ್ಲೇ ಕಳೆದುಬಿಟ್ಟದ್ದೇವೆ....? ಇನ್ನು ಮನೆಗೆ ಹೋಗಿ ನಿರ್ಮಲೆಯನ್ನು ಅವರ ಮನೆಗೆ ಕಳುಹಿಸಿ ಪುಸ್ತಕ ತರಿಸುವಷ್ಟರಲ್ಲಿ ಆರು ಗಂಟೆಯಾಗಿರುತ್ತದೆ. ಅದು ಸಿಕ್ಕಿದರೆ ಆಯಿತು. ಇಲ್ಲದಿದ್ದರೆ ಕಷ್ಟ.”

ಅದೇ ವೇಳೆಗೆ ಆಫೀಸಿನಿಂದ ಹೊರಗಡೆ ಬರುತಿದ್ದ ಪ್ರೊ॥ ಶರ್ಮ ದೃಷ್ಟಿಗೆ ಬಿದ್ದರು. ಸ್ವಲ್ಪ ಹೊತ್ತಿನೊಳಗಾಗಿ ಅವರು ಸಮೀಪಿಸುತ್ತಲೂ ಇಬ್ಬರ ಕಂಠಗಳೂ ಏಕ ಕಾಲದಲ್ಲಿ ಮೊಳಗಿದುವು “ನಮಸ್ಕಾರ ಸರ್!”

“ಏನ್ರಯ್ಯಾ, ಏನು ವಿಶೇಷ?”

“ಏನೂ ಇಲ್ಲ ಸರ್!”

“ಪ್ರಬಂಧ ಬರೆದಿದ್ದೀರಾ?”

“ಇನ್ನೂ ಇಲ್ಲ.”

“ಬರೆಯುವ ಅಭ್ಯಾಸವಿದೆಯೆ?......ಯಾವಾಗಲಾದರೂ ಬರೆದಿದ್ದೀರಾ?”

“ಕ್ಲಾಸಿನಲ್ಲಿ ಬರೆದುದಷ್ಟೆ?”

“ಮನೆಯಲ್ಲಿ ಬರೆಯುವ ಅಭ್ಯಾಸ ಬೆಳೆಸಿಕೊಂಡಿದ್ದರೆ ಈಗ ಅಷ್ಟು ಕಷ್ಟವಾಗುತ್ತಿರಲಿಲ್ಲ.”

“......”

ಹುಡುಗರು ವಿನೀತರಾಗಿ ತಲೆಬಾಗಿದರು.

“ನಿಮಗೆ ಬರೆಯಲು ತೋರದಿದ್ದಲ್ಲಿ ಮನೆಗೆ ಬನ್ನಿರಿ. ಬರೆಯುವ ವಿಧಾನ ನಾನೇ ತಿಳಿಸುವೆ. ನನ್ನ ಬಳಿ ಪ್ರೊ॥ ನಾಡಕರ್ಣಿಯವರ ‘ವಿಚಾರಾತ್ಮಕ ಪ್ರಬಂಧಗಳು’ ಎಂಬ ಅತ್ಯಂತ ಉಪಯುಕ್ತವಾದ ಗ್ರಂಥವಿದೆ. ಅದನ್ನು ಒಮ್ಮೆ ನೋಡಿಕೊಂಡರೆ ಒಳ್ಳೆಯದು. ಅದು ತೀರ ಸರಳವಾದ ಭಾಷೆಯಲ್ಲಿದೆ.”

ಹಾ....!

ಆ ಬೃಹದ್ ಮೇಘವರ್ಷಿತ ಶೈತ್ಯವಾರಿಯಿಂದ ದೈಹಿಕ ಉಷ್ಣೋಷ್ಣವೆಲ್ಲ ಕರಗಿ ನೀರಾಗಿ ಹರಿದು ಹೋಯಿತು. ಏನೆನ್ನಬೇಕೋ ಹೊಳೆಯಲಿಲ್ಲ. ಪ್ರಾಸಂಗಿಕವಾಗಿ-ಸಮಯೋಚಿತವಾಗಿ ಒಂದೆರಡು ಮಾತು ಹೇಳೋಣವೆಂದರೂ ನಾಲಿಗೆ ಹೊರಳದು. ಯೋಚಿಸುವುದರೊಳಗಾಗಿ ಅವರು,

“ಚಿಂತೆಯೇಕೆ ಬಂದು ಬಿಡಿ.”

“ಆಗಲಿ ಸರ್!” ದೀನ ವಾಣಿ ಮೊಳಗಿತು.

“ಇನ್ನು ಹುಡುಗಾಟ ಸಾಕು; ಎಲ್ಲರ ಜೀವನಕ್ಕೂ ಒಂದು ಉದ್ದೇಶವಿರಬೇಕು ತಿಳಿಯಿತೆ?”

“ಹೌದು ಸರ್!”

“ಖಂಡಿತ ಸರ್!”

ಲಜ್ಜಾವೃತವಾದ ಮುಖ ಮಂಡಲಗಳು ಅನಿರೀಕ್ಷಿತವಾಗಿ ನಸುಗೆಂಪು ತಳೆದುವು. ಹುಡುಗರು ದೀನಾದೀನರಾಗಿ ಹಿಂಬಾಲಿಸಿದರು. ದೀಕ್ಷಾಬದ್ಧ ಗುರುದೇವನ ಚಿತ್ತ ಅಂಬರ ವಿಹಾರಿಯಾಗಿತ್ತು.

ಮೇಸ್ಕಾ-ಚಿ

....ಮಧ್ಯಾಹ್ನ ಕಾಲೀನ ಅತ್ಯಂತ ಪ್ರಖರವಾದ ಬಿಸಿಲು.

....ಬೆಟ್ಟ ಪ್ರದೇಶವಾದರೂ ವೃಕ್ಷರಹಿತ ತಾಣ.

ಆ ನೆರಳಿಲ್ಲದ ನೆಲೆಯಲ್ಲಿ ಬೆಳಗಿನಿಂದ ಒಂದೇ ಸಮನೆ ಸುತ್ತುವಾಗ ಬಸಿಯುತಿದ್ದ ಅತೀವ ಸ್ವೇದ ವರ್ಷಣದಿಂದ ಕಾಕಿಯುಡುಪು ಎಣೆಯಿಲ್ಲದೆ ತೊಯ್ಯುತಿತ್ತು. ಮುಖದಮೇಲೆ ಧಾರೆಧಾರೆಯಾಗಿಳಿದು ಕರವಸ್ತ್ರಕ್ಕೆ ಕಾಯಕ ಒದಗಿಸುತಿತ್ತು. ಶಿವಾಜಿ ಬಿಸಿಲನ್ನು ಇನಿತೂ ಲೆಕ್ಕಿಸದೆ ನಡೆಯುತಿದ್ದ. ಕೈಯಲ್ಲಿ ರೈಫಲ್, ಸೊಂಟದಲ್ಲಿ ಬುಲೆಟ್, ಮೇಲಾಗಿ ತೀಕ್ಷ್ಣ ನೋಟದೊಡನೆ ಸಹಕರಿಸುವ ಸೂಕ್ಷ್ಮ ಬುದ್ಧಿ. ರಣರಂಗದಲ್ಲಿ ಶಿವಾಜಿಯಂತಹ ಧೀರ ಪಟು ದುರ್ಲಭ. ಅವನೊಂದಿಗಿರುವುದಾದರೆ ಯಾರಿಗಾದರೂ ಭದ್ರ ಭುಜ ಬಲ ಬಂದೀತು.

ಅಂದು ಈಶಾನ್ಯ ದಿಕ್ಕಿನ ಚೀನೀ ಗಡಿ ಕಾವಲು ನಮ್ಮ ಪಾಲಿಗೆ ಬಂದಿತ್ತು. ಐವತ್ತು ಮಂದಿಯ ತಂಡ ಅಲ್ಲಲ್ಲೇ ಸುತ್ತುತ್ತ ಗಡಿ ರಕ್ಷಣೆಯಲ್ಲಿ ತೊಡಗಿದ್ದಾಗ ನಮಗೊದಗಿದ ಒಂದು ಗಂಡಾಂತರವನ್ನು ಈಗ ನಿಮ್ಮ ಮುಂದೆ ಸಂಕ್ಷಿಪ್ತವಾಗಿ ಇಡುತ್ತಿರುವೆ.

ನಿರ್ಮಾನುಷ ವಲಯದಲ್ಲಿ ನಮ್ಮ ಹಾದಿ ನಿರಾತಂಕವಾಗಿ ಸಾಗುತಿತ್ತು.

ಹಳ್ಳ-ತಿಟ್ಟು, ಕಲ್ಲು-ಮುಳ್ಳು, ಗಿಡ-ಗಂಟೆಗಳ ಗುಡ್ಡಗಾಡನ್ನು ಹತ್ತಿ ಇಳಿಯುವ ಶ್ರಮವು ಅಲ್ಪವೇನಲ್ಲ. ದಿನವೂ ಓಡಿಯಾಡುವುದರಿಂದ ಅಲ್ಲಿಯ ಸರ್ವಸ್ವವೂ ಸುಪರಿಚಿತ....ಸಕಲವೂ ಆತ್ಮಗತ. ಸುತ್ತಾಡಿಬರಲು ಹಾದಿ ಹುಡುಕಬೇಕಾಗಿಲ್ಲ. ಆದರೂ ನಮ್ಮ ತಂಡದವರೆಲ್ಲಾ ಚದುರಿಹೋಗಿ ಅಲ್ಲಿ ನಾವಿಬ್ಬರೇ ಉಳಿದೆವು. ಸುಮಾರಾಗಿ ಹೀಗಾಗುವುದು ಕಡಿಮೆ. ಶಿವಾಜಿ ಧೀರ ಪ್ರಸನ್ನಭಾವದಿಂದ ಮುನ್ನಡೆಯುತ್ತಲೇ ಇದ್ದ. ಅವನ ದೃಢಗತಿಗೆ ಸಮನಿಲ್ಲದಿದ್ದರೂ ನಾನು ಬಾಲಿಶವಾಗಿ-ಯಾಂತ್ರಿಕವಾಗಿ ಹಿಂಬಾಲಿಸುತ್ತ ಆಯಾಸ ಆತಂಕಗಳ ಒಕ್ಕೂಟವಾಗಿ ನುಡಿದೆ,

''ನಮ್ಮ ತಂಡದವರು ಹಿಂದುಳಿದಿದ್ದಾರೆ. ನಾವು ಹಿಂದಿರುಗುವ.''

ಶಿವಾಜಿ ಅಸ್ಖಲಿತ ವಾಣಿಯಲ್ಲಿ ಉತ್ತರಿಸಿದ ''ತಾಳಪ್ಪಾ, ಇನ್ನೂ ಹೊತ್ತಿದೆಯಲ್ಲ.''

ನಾನು ಸುಮ್ಮನಾದೆ. ಆತನ ವೀರೋಚಿತವಾದ ಮನಗತಿ ವನಕೇಸರಿಯನ್ನು ನೆನಪಿಗೆ ತಂದಿತು. ಅವನ ಚಿತ್ತ ಸೂಕ್ಷ್ಮವಾಗಿತ್ತು. ಸುತ್ತ ಮುತ್ತಣ ಯಾವ ಅಂಶವನ್ನೂ ಅವನು ಲಕ್ಷ್ಯಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಶತ್ರುಗಳ ಸುಳಿವನ್ನು ಹೊರತು. ತಂಡದಿಂದ ಅಗಲಿ ದೂರ ಬಂದಿದ್ದುದರಿಂದ ನನ್ನ ಚಿತ್ತ ಉದ್ವಿಗ್ನವಾಗಿತ್ತು. ಆದರೂ ಅದನ್ನು ತೋರಗೊಡದಿರುವಷ್ಟು ಚಿತ್ತ ಸ್ವಾಸ್ಥ್ಯವನ್ನು ಉಳಿಸಿಕೊಂಡಿದ್ದೆ. ಇಲ್ಲದಿದ್ದಲ್ಲಿ ಅವನ ಮುಂದೆ ಖಂಡಿತ ನಗೆಪಾಟಲಿಗೊಳಗಾಗುತಿದ್ದೆ.

ಇತ್ತೀಚೆಗೆ ಚೀನೀ ದೈತ್ಯರ ಉಪಟಳ ಹೆಚ್ಚುತಿತ್ತು. ವಿನಾಕಾರಣ ಗಡಿಯೊಳಗೆ ನುಗ್ಗಿ ಬರುವುದು....ಕಣ್ಣಿಗೆ ಬಿದ್ದವರನ್ನು ಛೇಡಿಸುವುದು....ಕೈಗೆ ಸಿಕ್ಕಿದವರನ್ನು ಎಳೆದೊಯ್ದು ಚಿತ್ರ ಹಿಂಸೆ ಕೊಡುವುದು ಇತ್ಯಾದಿ ಅಕೃತ್ಯಗಳು ಎಣೆಯಿಲ್ಲದೆ ನಡೆಯುತಿದ್ದುವು. ಕಾವಲುಗಾರರು ಕಣ್ಣಿನಮೇಲೆ ಕಣ್ಣಿಟ್ಟರೂ ಸಾಲದು. ಕ್ಷಣ ಕ್ಷಣಕ್ಕೂ ಗಡಿ ಕಾವಲು ಪ್ರಕ್ಷುಬ್ಧವಾಗುತಿತ್ತು.

ಪ್ರಸ್ತುತ,

ಯುದ್ಧಕಾಲವೂ ಅಲ್ಲ; ಘರ್ಷಣೆಯ ಕಾಲವೂ ಅಲ್ಲ. ಆದರೂ ಆಗೊಮ್ಮೆ ಈಗೊಮ್ಮೆ ಸಂಭವಿಸಬಹುದಾದ ದುರ್ಘಟನೆಗಳಿಗೆ ಕೊರತೆಯೇನೂ ಇರಲಿಲ್ಲ. ಈ ಅವಿರಲ ಘಟನೆಗಳೇ ಭಾವೀ ಘರ್ಷಣೆಗೆ ನಾಂದಿ ಎಂಬುದು ಮನದಟ್ಟಾಗಿತ್ತು. ಅಂತಲೇ ಗಡಿ ರಕ್ಷಣೆಯ ಕಾರ್ಯವನ್ನು ಬಿಗಿಗೊಳಿಸಲಾಗಿತ್ತು. ಸೈನಿಕರ ಸಂಖ್ಯೆಯನ್ನು ಇಮ್ಮಡಿಗೊಳಿಸಲಾಗಿತ್ತು.

ಈಗ ಶಿವಾಜಿಯ ವಿಚಾರವನ್ನು ಪ್ರಾಸಂಗಿಕವಾಗಿ ಹೇಳುವುದು ಸಹ ಸೂಕ್ತ.

ಅವನು ಅತ್ಯಂತ ನುರಿತ ವ್ಯಕ್ತಿ, ಮಹಾ ಚಾಣಾಕ್ಷ, ಸೂಕ್ಷ್ಮಬುದ್ಧಿ, ಕೆಚ್ಚೆದೆಯ ವೀರ, ಮೇಲಾಗಿ ಭವ ಬಂಧನದಿಂದ ಬಿಡುಗಡೆ ಹೊಂದಿದ ಪರಿವ್ರಾಜಕ ಸಂನ್ಯಾಸಿ; ಅಂದಮೇಲೆ ಇನ್ನು ಹೇಳುವುದಾದರೂ ಏನಿದೆ? ಶತ್ರುಗಳನ್ನು ಸದೆ ಬಡಿಯುವುದೊಂದೇ ಆತನ ಉದ್ದಾಮ ಗುರಿ. ಭಾರತ ಗಣ್ಯವರೇಣ್ಯರ ಶ್ರೇಣಿಯಲ್ಲಿ ಶೋಭಿಸಬಹುದಾದಂತಹ ಬುದ್ಧಿಜೀವಿ ದರಿದ್ರಲಕ್ಷ್ಮಿಯ ವರಕಟಾಕ್ಷದಿಂದ ಸಿಪಾಯಿಯಾಗಿ ಸೈನ್ಯವನ್ನು ಸೇರಿಕೊಂಡಿದ್ದ. ಸುಮಾರು ನಲವತ್ತರ ಹರೆಯ, ಅಜಾನುಬಾಹು, ತೀಕ್ಷ್ಣವಾದ ಕಣ್ಣುಗಳು, ಯಾರಾದರೂ ನೋಡಿದ ಪ್ರಥಮ

ನೋಟಕ್ಕೆ ಮೆಚ್ಚಿಕೊಳ್ಳಬಹುದಾದಂತಹ ಮುಖಭಾವ. ಅವನು ಛತ್ರಪತಿ ಶಿವಾಜಿ ಮಹಾರಾಜರ ಸಂತತಿಯವನೆಂದು ಯಾರೋ ಹೇಳಿದಾಗ ನಾನು ನಂಬಿರಲಿಲ್ಲ. ಈಗ ಇದ್ದರೂ ಇರಬಹುದೆಂದು ಅನಿಸುತ್ತದೆ.....

ಅವನ ಅಭಿಶಸ್ತ ಹೆಜ್ಜೆಗಳ ದೃಢಗತಿಗೆ ನಿಲುಗಡೆಯೇ ಇಲ್ಲದಿರುವುದನ್ನು ನೋಡಿ ನಾನೆಂದೆ,

''ಗುಂಪನ್ನಗಲಿ ಇಬ್ಬರೇ ಮುಂದೆ ಬರುವುದು ಅಪಾಯ ಶಿವಾಜಿ!''

ಅವನ ಮುಖದಲ್ಲಿ ಅನಿರೀಕ್ಷಿತ ಮುಗುಳುನಗು ಮೂಡಿತು. ಹಾಸ್ಯ ಪ್ರಧಾನಾವಾಗಿ ನುಡಿದ,

''ಮರಣಯೋಗ ಎಲ್ಲಿದ್ದರೆ ತಾನೆ ಬಿಡುತ್ತೆ ಬಾಳಾ?''

''ಅದು ಸರಿ; ಒಪ್ಪುವೆ......ಶತ್ರುಗಳ ಕೈಗೆ ಸಿಕ್ಕಿ ಚಿತ್ರ ಹಿಂಸೆಗೊಳಗಾದರೆ.......?''

''ಕೈಯಲ್ಲಿ ರೈಫಲ್ ಇದೆ. ಸೊಂಟದಲ್ಲಿ ಬುಲೆಟ್‌ಗಳಿವೆ. ಮತ್ತೇಕೆ ಭಯ?''

''ಅವರು ನಮ್ಮಂತೆ ಒಬ್ಬಿಬ್ಬರು ಬರುವುದಿಲ್ಲವಲ್ಲಾ?''

ಅವನ ಲಕ್ಷ್ಯ ಎಲ್ಲೋ ಹರಿದಾಡುತಿತ್ತು. ನನ್ನ ಮಾತು ಅವನ ಕಿವಿಗಳ ಮೇಲೆ ಬೀಳಲೇ ಇಲ್ಲ. ಸುತ್ತಮುತ್ತ ನೋಡುತ್ತ ಮುಂದುವರಿಯುತ್ತಲೇ ಇದ್ದ. ಬಿಸಿಲ ಬೇಗೆ ತಡೆಯುವಂತಿರಲಿಲ್ಲ. ನಾಲಿಗೆ ಒಣಗಿ ಬಂದಿತ್ತು. ಒಂದಿಷ್ಟು ನಿಂತು ನೀರು ಕುಡಿಯೋಣವೆಂದರೆ ಅವನು ನಡಿಗೆಯನ್ನು ನಿಧಾನಗೊಳಿಸಿದರಷ್ಟೆ? ನಾನು ನಿಂತೆ ಅಂದರೆ ಅವನು ಮುಂದೆ ಹೋಗಿ ಬಿಡುವ....ಅನಂತರ ನನಗೆ ನಾನೇ ಗತಿ!

''ಸ್ವಲ್ಪ ನಿಲ್ಲಪ್ಪಾ; ನಾನಿಷ್ಟು ನೀರು ಕುಡಿಯಬೇಕು, ಬಹಳ ಬಾಯಾರಿಕೆ.''

ಅವನು ಹಿಂದಿರುಗಿ ನಿಂತು ಬೆವರಿನ ಹನಿಗಳನ್ನು ತೀಡಿಕೊಳ್ಳುತ್ತ ಅಂದ,

''ನಾನೂ ಕುಡಿಯಬೇಕು.....ಬಹಳ ಬಿಸಿಲು.''

''ಆದರೂ ಮುಂದೆ ಮುಂದೆ ಹೋಗುತ್ತಲೇ ಇದ್ದಿ?''

''ಆದಷ್ಟು ಬೇಗನೆ ಆ ಕೊನೆಯವರೆಗೂ ಹೋಗಿ ನೋಡಿಕೊಂಡು ಬರೋಣ ಅಂತ.''

ಸೂರ್ಯ ನಡುನೆತ್ತಿಗೇರಲು ಇನ್ನೂ ಅರ್ಧತಾಸು ಉಳಿದಿತ್ತು. ನಿರ್ಜಲ ನಿರ್ಮಲ ಮೋಡಗಳ ವೃಂದ ದೂರ ಪಯಣ ಕೈಕೊಂಡಿವೆ. ಈ ದಿಶೆಯಲ್ಲಿ ಮಂದಾನಿಲನಸುಳಿವೇ ಇಲ್ಲ. ಇದ್ದಿದ್ದರೆ ಬಿಸಿಲಿನ ತಾಪ ಸ್ವಲ್ಪ ಕಡಿಮೆಯಾಗುತಿತ್ತೇನೋ.....ಸ್ವಲ್ಪ ಹೊತ್ತು ನಿಂತು ಕಂಠಪೂರ್ತಿ ನೀರು ಕುಡಿದೆವು.

ನಿಶ್ಶಬ್ದ ವಾತಾವರಣದಲ್ಲಿ 'ಲರಲರ' ಸದ್ದುಗೈವ ದರುಗೆಲೆಗಳ ಶೃತಿ ಯಾವುದೋ ವೀರಗೀತೆಯನ್ನು ಬಿತ್ತರಿಸುವಂತಿತ್ತು. ಹಿಂದಿನವರು ಬರಬಹುದೆಂಬ ನಮ್ಮ ನಿರೀಕ್ಷೆ ಕ್ಷಣಕ್ಷಣಕ್ಕೂ ನಿರಾಸೆಯ ಹಾದಿ ಹಿಡಿಯುತಿತ್ತು. ಆದರೂ ಸ್ವಲ್ಪದೂರ ಮುಂದುವರಿದೆವು. ಎಷ್ಟೊತ್ತಾದರೂ ನಮ್ಮವರ ಸುಳಿವೇ ಇಲ್ಲ. ನಮ್ಮನ್ನು ಹುಡುಕಿಕೊಂಡು ಬೇರೆ ದಿಕ್ಕು ಹಿಡಿದಿರಬಹುದೇನೋ ಎಂಬ ಯೋಚನೆ ಮೂಡಿತು. ಒಡನೆ ನಾನೆಂದೆ.

"ನಮ್ಮವರು ಬೇರೆ ದಿಕ್ಕು ಹಿಡಿದಿರಬಹುದು. ನಾವಿನ್ನು ಹಿಂದಿರುಗೋಣ, ಆಯಿತೇ ಶಿವಾಜಿ?"

ಅವನು ಒಂದೆರಡು ಕ್ಷಮ ಯೋಚಿಸಿ ಮರುನುಡಿದ "ಆಗಲಿ ಬಾಳಾ!"

"ನಿನ್ನಿಂದಾಗಿ ಇಷ್ಟು ದೂರ ಬಂದೆ. ನಾನೊಬ್ಬನೇ ಆಗಿದ್ದಿದ್ದರೆ ಸಾಧ್ಯವಿರಲಿಲ್ಲ."

"ಇಲ್ಲೆಲ್ಲಾ ನಾನೊಬ್ಬನೇ ಎಷ್ಟು ಬಾರಿ ಓಡಾಡಿದ್ದೇನೋ....." ದನಿ ಸರಾಗವಾಗಿ ಹರಿದು ಬಂತು. ತುಟಿಗಳಲ್ಲಿ ಅಮಾಯಕ ನಗು ಕ್ಷಣ ಕಾಲ ಮಿನುಗಿ ಮಾಯವಾಯಿತು.

"ನೀನು....."

ಅಷ್ಟರೊಳಗಾಗಿ ಎಲ್ಲೋ ಸಣ್ಣ ಸದ್ದು ಕೇಳಿಸಿತು.

ಲಟ. ಲಟ. ಲಟ. ಲಟ. ನಿಟಿ. ನಿಟಿ. ನಿಟಿ. ನಿಟಿ.

ಮಾತು ತುಂಡುಗಡಿಯಿತು; ಕಿವಿಗಳು ನಿಮಿರಿದುವು.

ಸದ್ದು ಸನಿಹದಲ್ಲೇ ಕೇಳಿಬರುವಂತಿತ್ತು. ಶಿವಾಜಿ ಮೈಯೆಲ್ಲಾ ಮನಸ್ಸಾಗಿ ನಿಂತ. ನಾನು ಚಕಿತ ಮೃಗಶಾಬಕದಂತೆ ಅವನ ಮಗ್ಗಲಲ್ಲಿ ನಿಂತೆ. ಅನಿರೀಕ್ಷಿತವಾಗಿ ಮೆಲ್ಲನೆ ಭೀತಭಾವ ಮನವನ್ನು ಆವರಿಸಿತು.

"ಚೀನಿಯರೋ.....ಏನೋ!"

"ಹೆದರಬೇಡ ಬಾಳಾ!"

ಶಿವಾಜಿಯ ದನಿಯೂ ಅಷ್ಟೇ ಮೆಲ್ಲನೆ ಹೊರಬಿತ್ತು.

"ಅವರು ಬಂದಲ್ಲಿ ಒಬ್ಬಿಬ್ಬರು ಬರುವುದಿಲ್ಲ ಶಿವಾಜಿ!"

"ಬರಲಿ....." ಎಂದ. ಅವನ ಧೈಯವೇ ಧೈರ್ಯ. ಅರೆದೆರೆದ ಕಣ್ಣುಗಳು ಮುಗುಳುನಗೆ ಬೀರಿದುವು.

"ಸದ್ದು ಮಾಡಬೇಡ."

ದೃಷ್ಟಿಯ ಕಕ್ಷೆಯೊಳಗಿನ ವಸ್ತುವಸ್ತುವನ್ನೂ ಆತಂಕಪೂರ್ಣವಾಗಿ ತಡುಕುತಿತ್ತು ನೋಟ. ಸದ್ದು ಪುನಃಪುನಃ ಕೇಳಿಬರುತಿತ್ತು. ದೃಷ್ಟಿಗೆ ಏನೂ ಗೋಚರಿಸಲಿಲ್ಲ. ಇಬ್ಬರೂ ಮೂರ್ತಿಮತ್ತಾಗಿ ನಿಂತೆವು. ರೈಫಲ್ ಅಣಿಯಾಗಿದ್ದುವು. ಸಿಡಿಯುವುದೊಂದು ಬಾಕಿ.

''ಸರಿಯಾಗಿ ಕಾಣಿಸದ ಹೊರತು ಟ್ರಿಗ್ಗರ್ ಒತ್ತಬೇಡ; ನಮ್ಮವರೇ ಬರುತ್ತಿರಬಹುದು.''

''ಇರಲಿ....ಚಿಂತಿಸಬೇಡ ಬಾಳಾ!''

''ಸದ್ದು ಎದುರುಗಡೆಯಿಂದ ಕೇಳಿಸುತ್ತಿದೆ. ಬಹುಶಃ ಚೀನೀಯರೇ ಇರಬೇಕು!''

ಶಾಂತ ವಾತಾವರಣದಲ್ಲಿ ಸಮಸ್ತ ಚೇತನದಮೇಲೆ ಸುತ್ತಿಗೆಯ ಪೆಟ್ಟಿನಂತೆ ಬೀಳುತಿತ್ತು-ಆ ಕ್ರಮವಿಹೀನ ಸದ್ದು. ನಾವು ಆಲೈಸುತಿದ್ದಂತೆಯೇ ಅನೇಕಾವರ್ತಿ ಕೇಳಿಸಿತು. ಅನಂತರ ಅಲ್ಲಿಂದಲ್ಲೇ ನಿಂತುಹೋಯಿತು. ಸ್ವಲ್ಪ ಹೊತ್ತು ನೋಡಿ ಇನ್ನು ಹಿಂದಿರುಗೋಣವೆಂಬುವಷ್ಟರಲ್ಲಿ ಸದ್ದು ಪುನಃ ಕೇಳಿಸಿತು. ಹಿಂದಿರುಗುವ ಯೋಚನೆಯನ್ನು ಬಿಟ್ಟು ಅಡಗಿಕೊಳ್ಳಬಹುದಾದ ತಾವಿಗಾಗಿ ಹುಡುಕಿದೆವು. ಕೆಳಮುಗ್ಗುಲಲ್ಲಿ ಒಂದು ಗುಂಡಿಯೇನೋ ಕಾಣಿಸಿತು. ಆದರೆ ಅದರಲ್ಲಿ ಮುಳ್ಳುಗೆಂಟೆಗಳು ತುಂಬಿದ್ದುವು. ಅವುಗಳನ್ನು ಸರಿಸಿ ಒಳಗಡೆ ಇಳಿಯುವಾಗ 'ಲಟಲಟ' ಸದ್ದು ಮೂಡಿತು. ಆದರೂ ಹೇಗೆ ಹೇಗೋ ಅಶಾಂತ ಶಾಂತಿಯನ್ನು ಪಡೆದುಕೊಳ್ಳುತ್ತ ಗುಣಿಯೊಳಗೆ ಇಳಿದೆವು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿದ್ದುದು ಸಹ ಗಮನಕ್ಕೆ ಬಾರದಷ್ಟು ಮನಸ್ಸು ವಿವಶವಾಗಿತ್ತು. ಕಾತರ-ಕುತೂಹಲ-ಭಯ-ಉದ್ವೇಗಗಳ ಖಡ್ಗದಲುಗಿನ ಮೇಲೆ ಮನಸ್ಸು ಬಲು ಸೂಕ್ಷ್ಮವಾಗಿ ಹರಿದಾಡುತಿತ್ತು. ರೈಫಲ್ ಸರಿಪಡಿಸಿಕೊಂಡೆವು.

ಬೆಟ್ಟದ ಮೇಲಿಂದ ಸದ್ದು ಕೇಳಿಸಿ ದೃಷ್ಟಿಯನ್ನು ಮೇಲೆ ಹರಿಸಿದೆವು. ಬೆಟ್ಟದ ಮೇಗಡೆ ನೀಲಗಗನದ ಹಿನ್ನೆಲೆಯಲ್ಲಿ ತೇಲುವ ಅಮೃತ ಫೇನಮಯೀ ಶುಭ್ರಮೋಡಗಳ ಮೇಳ ದೃಷ್ಟಿಗೆ ಬಿದ್ದುವು. ಮನುಷ್ಯರ ಸುಳಿವಿಲ್ಲ. ನಿರ್ನಿಮೇಶ ನಯನಗಳು ಅಲ್ಲಿಂದ ಚಲಿಸಲಿಲ್ಲ. ಚಿತ್ತಭಿತ್ತಿಯ ಮೇಲೆ ಯುದ್ಧ ಭೀತಿಯ ಛಾಯೆ ಸುಳಿಯದಿದ್ದಲ್ಲಿ ಶುಭ್ರಮೋಡಗಳ ಸಂಮ್ಮೋಹನಾಕಾರವನ್ನು ಸವಿದು ಭಾವನಾಲೋಕದಲ್ಲಿ ಮುಳುಗಬಹುದಾಗಿತ್ತೇನೋ.....ಆದರೆ ಕ್ಷಣ ಕ್ಷಣ ಪ್ರತಿಕ್ಷಣ ಯಮಗಂಡವನ್ನು ನಾವು ಎದುರು ನೋಡಬೇಕಾಯಿತು.

ನಾವಿದ್ದುದು ಬೆಟ್ಟದ ಕಿಬ್ಬದಿಯಲ್ಲಿ. ಸವಿಸ್ತಾರವಾದ ಸಾನು ಪ್ರದೇಶದಾಚೆಯ ಬೆಟ್ಟದಾಣವೆಲ್ಲ ಚೀನಿಯರಿಗೆ ಸೇರಿದ್ದು. ಬೆಟ್ಟದ ಬುಡದಲ್ಲಿ ಅಂಕುಡೊಂಕಾಗಿ ಹರಿದ ಕಾಲು ಹಾದಿಯ ಕಡೆ ಕಾತರ ಯುಕ್ತದೃಷ್ಟಿ ಆಗಾಗ ಹರಿದರೂ, ಶತ್ರಗಳಾಗಿದ್ದ ಪಕ್ಷದಲ್ಲಿ ಕಾಲುಹಾದಿಯಲ್ಲಿ ಬರುವುದು ಅಸಂಭವ ಎಂಬುದು ನಮ್ಮ ಸಿದ್ಧಾಂತ.... ಅವರು ಬೆಟ್ಟದ ಮೇಗಡೆಯಿಂದ ಬಂದಲ್ಲಿ ಅವರಿಗೆ ಮರಣ ಭಯವಿಲ್ಲ; ಮೇಲಾಗಿ ನಮ್ಮ ಕಡೆ ಗುಂಡು ಹಾರಿಸುವುದೂ ಸಹ ಸುಲಭ.

ಲಟ. ಲಟ. ಲಟ. ಲಟ.

ಚಟ. ಚಟ. ಚಟ. ಚಟ.

ಒಣ ಕಡ್ಡಿಗಳನ್ನು ಮುರಿದುಕೊಳ್ಳುತ್ತ ಮುನ್ನುಗ್ಗುವ ಶಬ್ದ ವಿಶೇಷ ಇದ್ದಕ್ಕಿಂದಂತೆಯೇ ಜೋರಾಗಿ ಕೇಳಿಸಿತು. ನಮ್ಮ ಬುದ್ಧಿ-ದೃಷ್ಟಿಗಳೆರಡೂ ತಟ್ಟನೆ ಏಕೀಭವಿಸಿದುವು. ಮತ್ತೆ ಸ್ವಲ್ಪ ಹೊತ್ತಿನನಂತರ ಸದ್ದು ಅಲ್ಲಿಂದಲ್ಲೆ ಅಡಗಿಹೋಯಿತು. ಶಿವಾಜಿ ಮುಖದಮೇಲಿನ ಬೆವರಿನ ತುಂತುರುಗಳನ್ನು ಒರಿಸಿಕೊಳ್ಳುತ್ತ ಪಿಸುದನಿಯಲ್ಲಿ ಅಂದ,

''ಸದ್ದು ಕೇಳಿಸುವ ದಿಕ್ಕನ್ನು ಗಮನಿಸಿದರೆ ಶತ್ರುಗಳೇ ಸೈ. ಎಚ್ಚರಿರು ಬಾಳಾ!''

''ನಾವಿಬ್ಬರೆ ಸಿಕ್ಕಿದೆವಲ್ಲಾ.....?'' ಹೃದಯ ನಿಷ್ಕ್ರಿಯವಾದಂತೆ ಪ್ರಶ್ನೆ ಕ್ಷೀಣಗತಿಯಲ್ಲಿ ಹೊರಬಿತ್ತು.

''ದೇವರಿದ್ದಾನೆ!''

.....ಶಿವ....ಶಿವ....ಶಿವ....ಶಿವ.....

ಪ್ರಾಣವಾಹಿನಿ ನಸು ಕಂಪಿಸಿತು. ಹೃದ್ದೇಶದಲ್ಲಿ ನೆಲೆನಿಂತ ಮೃದಂಗ ತೀವ್ರಗತಿಯಲ್ಲಿ ಮಿಡಿಯುತಿತ್ತು. ಬಾನಂಚಿನಿಂದ ಪಯಣ ಹೂಡಿದ ಮಂದಪವನ ಎಚ್ಚರಿಸುವಂತೆ ಸುಯ್ದು ಬೀಸುತ್ತ ಬಂದ. ಆಗ ಅಲ್ಲಲ್ಲಿ ಭುಗಿಲೆದ್ದ ಧೂಳು ವಿನೂತನ ಸ್ವರ್ಣ ನಿಕ್ಷೇಪದ ಬೃಹದ್ ಹೊಂಧೂಳಿನ ಜಾಲದಂತೆ ಮೇಲೆದ್ದು ಹರಡಿ ಅಲ್ಲಲ್ಲೇ ಲಯ ಹೊಂದುತಿತ್ತು. ಆ ಭವ್ಯ ತರಂಗತರಂಗಗಳನ್ನು ನೋಡುತಿದ್ದಂತೆ ದೇಹದಲ್ಲಿ ವಿದ್ಯುತ್ ಸಂಚಾರ ಹೊಂದಿ, ನೆತ್ತರಿನ ಕಣ ಕಣವೂ ತುಳುಕುತ್ತಿರುವಂತೆ ಭಾಸವಾಯಿತು. ಬಿಸಿಯುಸಿರು ಎದೆಯಾಳದಲ್ಲಿ ಎಣೆಯಿಲ್ಲದೆ ಹರಿದಾಡಿ ಉತ್ತೇಜನ ನೀಡುತಿತ್ತು.

.....ಶಿವಾಜಿಯನ್ನು ನೆಚ್ಚಿ ಬಂದದ್ದು ತಪ್ಪಾಯಿತು. ಆತನಿಗೆ ಯಾವ ತಾಪತ್ರಯವೂ ಇಲ್ಲ, ಏಕಾಂಗಿ. ನನಗಾದರೆ ಹಿರಿಯ ಕುಟುಂಬ.....ಹೆಂಡತಿ ಮಕ್ಕಳು

ಎಲ್ಲಾ ಇದ್ದಾರೆ. ದೇವರು ನಮ್ಮನ್ನು ಪಾರು ಮಾಡಿದರೆ ಸಾಕು.... ಎಂದು ಮುಂತಾಗಿ ಯೋಚನೆಯ ಕರಾವಳಿಯಲ್ಲಿ ಓಡುತಿತ್ತು ಮನಸ್ಸು. ನೋಟ ಶಿವಾಜಿಯ ಕಡೆ ಹರಿಯಿತು. ಆತನ ದೀಪ್ತ ಲಲಾಟದ ಮೇಲೆ ಮೂಡಿದ ಧನುಷಾಯಿತ ಗೆರೆಗಳು ಸರಳವಾಗಿದ್ದುವು. ಲೋಹಿತ ನೇತ್ರಗಳಲ್ಲಿ ಮಿಂಚಿನಂತಹ ಕಾಂತಿ ಬೆಳಗುತಿತ್ತು. ಅವನು ದೃಢ ಕಂಠದಿಂದ ನುಡಿದ,

''ಆಪತ್ತು ಸನ್ನಿಹಿತವಾದಾಗ ಧೈರ್ಯಗೆಟ್ಟರೆ ರಕ್ಷೆಯೇ ಇಲ್ಲವಾಗುತ್ತದೆ. ಧೈರ್ಯವಾಗಿದ್ದರೆ ನಿನಗೆ ನೀನೇ ರಕ್ಷೆ!'

''ಕೆಳಗಿನ ಹಾದಿಯಲ್ಲಿ ಅವರು ಎಷ್ಟೇ ಜನ ಬಂದರೂ ಅಲ್ಲಿಂದಲ್ಲೇ ಮಲಗಿಸಿ ಬಿಡಬಹುದು. ಮೇಲಿಂದ ಬಂದರೆ ನಮಗೇ ಕಷ್ಟ.''

''ಹೀಗೇ ಅಂತ ಹೇಳುವುದು ಕಷ್ಟ. ಎಷ್ಟೆಷ್ಟು ಕಳ್ಳಗಂಡಿಗಳನ್ನು ಹೊಂಚಿಕೊಂಡಿದ್ದಾರೋ.......''

''ಅದು......ನಿಜ.''

''ಏನೇ ಇರಲಿ, ದೈವಬಲ ನಮಗಿದ್ದರೆ ಸಾಕು.''

ಮೇಲೆ ಸುಡು ಬಿಸಿಲು; ಕೆಳಗೆ ಕಾದ ನೆಲ.

ರುದ್ರ ಗಂಭೀರ ಸನ್ನಿವೇಶದಲ್ಲಿ ಭಗವಂತನನ್ನು ಅಪಾರವಾದ ಭಕ್ತಿಯಿಂದ ನೆನೆಯಿತು ಚಿತ್ತ. ಹೃದಯದ ನೆಲೆಯಲ್ಲಿ ಹರಿದಾಡುವ ಬಿಸಿಯುಸಿರು ಶಿವನ ಪದತಲದಲ್ಲಿ ಹರಿದಾಡುವಷ್ಟು ಸೂಕ್ಷ್ಮತಮವಾಗಿತ್ತು.

ಒಂದೆರಡು ಘಳಿಗೆ ಸದ್ದಿಲ್ಲದೆ ಉರುಳಿತೇನೋ....ಮತ್ತೆ ಸದ್ದು ಕೇಳಿಸಿತು. ಒಮ್ಮೆ ಸ್ಫುಟವಾಗಿ ಮತ್ತೊಮ್ಮೆ ಅರ್ಧ ಸ್ಫುಟವಾಗಿ......ಮಗದೊಮ್ಮೆ ಪರಸ್ಪರ ಮಾತುಕತೆಗಳ ಮರ್ಮರ ಸದ್ದಾಗಿ......!

ಆದರೂ ಎಲ್ಲಿಯ ಭಾಷೆ? ಎಲ್ಲಿಯ ಜನ? ಎಂಬುದು ಮಾತ್ರ ತಿಳಿಯುತ್ತಲೇ ಇಲ್ಲ. ಸದ್ದಿಲ್ಲದ ಶಾಂತಿಯಲ್ಲಿ ನುಗ್ಗಿ ಬರುವ ನಿಟಿ ನಿಟಿಲ್ ಸದ್ದು ನೂರು ಎಚ್ಚರಿಕೆಗಳನ್ನು ಸಾರಿ ಸಾರಿ ಹೇಳುತಿತ್ತು. ಖಂಡಿತ ಚೀನೀ ದೈತ್ಯರ ಅತಿಕ್ರಮಣ ಮಾಡದೆ ಹಿಂದಿರುಗುವವರಲ್ಲ. ಪರಪೀಡನೆಯೇ ಅವರ ಗುರಿ.....

ಶಿವಾಜಿ ಧೈರ್ಯದಿಂದ ಹೇಳಿದ 'ಹೆದರ ಬೇಡ ಬಾಳಾ!'

ನನಗೆ ಮರು ನುಡಿಯುವಷ್ಟು ಸಮಯ, ಸಹನೆ ಎರಡೂ ಇರಲಿಲ್ಲ; ಉಸಿರಿಡಿದು ನಿಂತೆ.

ಸ್ವಲ್ಪ ಹೊತ್ತು ಸದ್ದಿಲ್ಲದೆ ಉರುಳಿತು.

ಅನಂತರ ಪುನಃ ನಿಟಿ ನಿಟಿ ಸದ್ದು ಮಾತಿನ ಮೊರೆತ. ಭರ್ಚಿ ಸಲಾಕಿಗಳ ಠಳಾರ್! ಠಳಾರ್! ಠಂಕಾರ! ನೂರಾರು ಮಂದಿಯ ಬೂಟ್ಸಿನ ಶಬ್ದ. ಮನಸ್ಸನ್ನು ದೃಢಪಡಿಸಿಕೊಳ್ಳುವುದರೊಳಗಾಗಿ ಬೆಟ್ಟದ ನೆತ್ತಿಯ ಮೇಲೆ ಚೀನೀ ದೈತ್ಯರು ಕಾಣಿಸಿಕೊಂಡರು. ಆಕ್ಷಣ ಜಂಗಾಬಲ ಉಡುಗಿಹೋದಂತಾಯಿತು. ನಮ್ಮ ಗುಂಡುಗಳು ಅಲ್ಲಿಗೆ ತಗುಲುವುದು ಎಷ್ಟು ಅಸಮಂಜಸವೋ ಅಷ್ಟೇ ಸುಲಭವಾಗಿ ಅವರ ಗುಂಡುಗಳಿಗೆ ನಾವು ಬಲಿಯಾಗುವುದು ಸಮಂಜಸ. ಇದುವರೆಗೆ ಪದೇ ಪದೇ ''ಹೆದರ ಬೇಡ ಬಾಳಾ!' ಎನ್ನುತಿದ್ದ ಶಿವಾಜಿ ಆಗ ಉಸಿರೆತ್ತಲಿಲ್ಲ. ಅವರ ಬಳಿ ಕಾದುವುದಕ್ಕಿಂತ ಅವರ ಕಣ್ಣಿಗೆ ಬೀಳದಿರುವುದು ಲೇಸು ಎಂಬದು ಇಬ್ಬರಿಗೂ ಖಚಿತವಾಯಿತು. ಮಂಡಿಯೂರಿ ಅವರಿಗೆ ಕಾಣಿಸದಂತೆ ಕುಳಿತೆವು ಹೃದಯದ ನೆತ್ತರು ಹೆಪ್ಪುಗಟ್ಟಿರುವಂತೆ ಭಾಸವಾಯಿತು.

ಚೀನೀಯರಿಗೂ ನಮ್ಮ ಗಡಿರೇಖೆಗೂ ಹೆಚ್ಚಿನ ಅಂತರವೇನೋ ಇತ್ತು. ಆದರೆ ಅವರ ಮುನ್ನಡೆಗೆ ನಿಲುಗಡೆಯೇ ಇಲ್ಲ. ಚಕ ಚಕ ಮುಂದುವರಿಯುತ್ತಲೇ ಇದ್ದಾರೆ. ಅವರು ನೆತ್ತಿಯ ಮೇಲ್ಗಡೆ ಇದ್ದಾಗ ಅವರ ಕ್ರೂರ ದೃಷ್ಟಿಗೆ ನಾವು ಉನ್ಮತ್ತ ಪ್ರಲಾಪದಲ್ಲಿ ಕೊಚ್ಚಿಹೋಗುವ ಬುದ್ಧಿ ಶೂನ್ಯರಂತೆ ತಮ್ಮ ಸ್ವರೂಪ ದರ್ಶನ ಮಾಡಿಸಿದರು.

ಅಸಹ್ಯರೂಪ......ಅಸಹ್ಯ ಬುದ್ಧಿ......

ಈಗೀಗ ಅವರಿಗೂ ನಮ್ಮ ಗಡಿರೇಖೆಗೂ ಹತ್ತು ಗಜಗಳ ಅಂತರ. ಅಲ್ಲಲ್ಲೇ ಅಡ್ಡಾಡಲು ಬಂದಿರಬಹುದೆಂದರೆ ಮುಂದೆ ಮುಂದೆ ಬರುತ್ತಲೇ ಇದ್ದಾರೆ. ಇನ್ನಷ್ಟು ಹೊತ್ತಿನೊಳಗಾಗಿ ಗಡಿರೇಖೆಯನ್ನು ದಾಟಿ ಬಂದೇ ಬಿಟ್ಟರು. ಅವರಿರುವುದು ಐವತ್ತರ ಮೇಲೆ. ಮೇಲಾಗಿ ಎಲ್ಲರೂ ಶಸ್ತ್ರ ಸಜ್ಜಿತರು. ನಮ್ಮನ್ನು ನೋಡಿದರೋ ಇಲ್ಲವೋ ಗೊತ್ತಾಗಿ ಹೇಳುವುದು ಕಷ್ಟ. ಆದರೆ ನಮ್ಮ ನೇರಕ್ಕೆ ಬಂದೇ ಬಿಟ್ಟರು. ಇನ್ನು ಟ್ರಿಗರ್ ಒತ್ತದೆ ಬೇರೆ ದಾರಿಯೇ ಇರಲಿಲ್ಲ. ಶಿವಾಜಿ 'ಹೊಡಿ!' ಎನ್ನುತ್ತ ಟ್ರಿಗ್ಗರ್ ಒತ್ತಿದ. ಢಂ! ಢಂ! ಢಂ!

ಢಂ! ಢಂ! ಢಂ! ಢಂ!

ಚೀನೀ ದೈತ್ಯರನೇಕರು ಬಿದ್ದರು. ಹಿಂದೆಯೇ ಅವರ ಕೋವಿಗಳು ಸಿಡಿದುವು. ನಾವು ಗುಡಿಯೋಳಗಿದ್ದುದರಿಂದ ಗುಂಡುಗಳು ತಾಗಲಿಲ್ಲ. ಹತ್ತು ನಿಮಿಷಗಳ ಕಾಳಗದಲ್ಲಿ ಅವರಲ್ಲಿ ಅನೇಕರನ್ನು ಧರೆಗುರುಳಿಸಿದರೂ ನಾವು ಅವರ ಕೈಸೆರೆಯಾದೆವು. ನೆಲಕ್ಕೆ ಬಡಿದು ಮೈಗೆ ತಾಗಿದ ಸಣ್ಣ ಸಣ್ಣ ಗುಂಡುಗಳೊಂದಿಗೆ ಭರ್ಜಿಯ ಇರಿತವೂ

ನಮಗೆ ದೊರೆತಿತ್ತು. ಆದರೆ ಆ ಭೀಷಣ ಸನ್ನಿವೇಶದಲ್ಲಿ ಏನೇನಾಯಿತು ಎಂಬುದನ್ನು ವಿವರಿಸಿ ಹೇಳುವುದು ಕಷ್ಟ. ಅನಂತರ ನಮ್ಮನ್ನು ಚೆನ್ನಾಗಿ ಥಳಿಸಿ ಎಳೆದುಕೊಂಡುಹೋದರೆಂದು ತೋರುತ್ತದೆ. ಬಹುಶಃ ನನಗೆ ಕೈಸೆರೆಯಾದಾಗಲೇ ಪ್ರಜ್ಞೆ ತಪ್ಪಿರಬಹುದು. ಅನಂತರ ಏನಾಯಿತೆಂಬುದು ನನಗೆ ಸ್ಪಷ್ಟ ನೆನಪಿಲ್ಲ. ಶಿವಾಜಿ ಮತ್ತು ನಾನು ಹೇಗೆ ಅಗಲಿದೆವು ಎಂಬುದು ಸಹ ನನಗೆ ತಿಳಿಯದು.

ನನಗೆ ತಿಳಿವು ಮೂಡಿದಾಗ ಹೃದ್ದೇಶದಲ್ಲಿ ಕಳವಳವಿರಲಿಲ್ಲ. ಪರಿಸರದಲ್ಲಿದ್ದ ಕಗ್ಗತಲು ಕಣ್ಣುಗಳನ್ನು ಮುತ್ತುತ್ತಿತ್ತು. ನಾನು ಎಲ್ಲಿದ್ದೇನೆ ಎಂಬುದನ್ನು ತಿಳಿದುಕೊಳ್ಳುವ ಕುತೂಹಲ. ಭಾರತೀಯ ಶಿಬಿರದಲ್ಲಿ ಇದ್ದಿದ್ದರೆ ಎಂದು ಅನೇಕ ಬಾರಿ ಯೋಚಿಸಿದೆ. ಶಿವಾಜಿ ಬಳಿಯಲ್ಲಿರಬಹುದೇನೋ ಎಂಬ ಭಾವನೆಯಿಂದ ಸುತ್ತಮುತ್ತ ಕಣ್ಣಾಡಿಸಿದೆ. ಆ ಮಸುಗತ್ತಲೆಯಲ್ಲಿ ಏನೂ ಕಾಣಿಸಲಿಲ್ಲ. ಕರೆಯಲು ಪ್ರಯತ್ನಿಸಿದೆ. ಒಣಗಿದ್ದ ಬಾಯಿಯಿಂದ ಉಸಿರು ಹೊರಡಲಿಲ್ಲ. ಒಣಗಿದ ತುಟಿಯನ್ನು ನಾಲಿಗೆಯಿಂದ ಒರಿಸಿ ಒರಿಸಿ ತುಟಿಗಳನ್ನು ಮಿದು ಮಾಡಿಕೊಂಡು ಕರೆದೆ ''ಶಿವಾಜಿ....!''

ಉತ್ತರವೇ ಇಲ್ಲ; ಕರುಳಿರಿವಂತಹ ನಿಶ್ಶಬ್ಧ.

ಮನಸ್ಸು ಇನ್ನೂ ತಿಳಿಯಾಗಿರಲಿಲ್ಲ. ಒಮ್ಮೆ ಸ್ಪಷ್ಟವಾದರೆ ಇನ್ನೊಮ್ಮೆ ಮಸುಕು.

ಉರಿ.... ಉರಿ. ಮೈಯ್ಯೆಲ್ಲಾ ಉರಿ. ಗಾಯಗಳ ಮೇಲೆ ಉಪ್ಪು ಸುರಿದಂತೆ-ಖಾರ ಲೇಪಿಸಿದಂತೆ ಉರಿಯುತ್ತಿವೆ. ಕೈ ಕಾಲು ಮರವಟ್ಟಂತಾಗಿವೆ; ಚಲಿಸಲೂ ಆಗುತ್ತಿಲ್ಲ. ಕಣ್ಣು ಮುಚ್ಚಿದೆ.....ತಾಳಲಾಗದೆ ಕಣ್ಣು ಮುಚ್ಚಿದೆ. ಹಾಗೆ ಎಷ್ಟು ಹೊತ್ತು ಉರುಳಿತೋ ನಾನು ಊಹಿಸಲಾರೆ. ಕೆಲವೊಮ್ಮೆ ಮೈ ಉರಿ ಗಮನಕ್ಕೆ ಬರುತಿತ್ತು. ಕೆಲವೊಮ್ಮೆ ಇಲ್ಲ. ಬಾಯಾರಿಕೆ ಕ್ಷಣೇ ಕ್ಷಣೇ ಹೆಚ್ಚುತ್ತಿತ್ತು. ಗಂಟಲಾರಿ ಜೀವ ಪರಿತಪಿಸುತಿತ್ತು. ಯಾರಾದರೂ ನದಿಯೊಳಗೆ ಒಗೆಯುವಷ್ಟು ಕೃಪೆದೋರಿದ್ದಿದ್ದರೆ ತಣ್ಣಗೆ ಜೀವ ಬಿಡುತಿದ್ದೆ.

ನೀರು.....ನೀರು!

ಓ ಸ್ನೇಹಿತರೇ, ದಯವಿಟ್ಟು ನೀರು ತನ್ನಿ!

ಶಿವಾಜೀ!

....ಎಲ್ಲಿದ್ದರೂ ಬಾಪ್ಪಾ! ನಾನಿನ್ನೂ ಜೀವ ಹಿಡಿದಿರುವೆ. ದೇಶಕ್ಕಾಗಿ ಪ್ರಾಣವನ್ನು ಪಣವಾಗಿಟ್ಟವನಿಗೆ ಒಂದು ತೊಟ್ಟು ನೀರೂ ಇಲ್ಲವೇ? ಹಾ...ತಾಳಲಾರೆ!.......ನೀರು......ನೀರು!......ಉರಿ.... ಉರಿ! ಯಾರಿದ್ದೀರಿ ಇಲ್ಲಿ? ಒಂದು ಕಂದೀಲೂ ಇಲ್ಲವೇ? ಒಂದು ನರಪ್ರಾಣಿಯೂ ಇಲ್ಲವೆ? ಓ! ದಯಾವಂತರೇ, ನನ್ನ ಸಹಾಯಕ್ಕೆ ಬನ್ನಿ! ನಾನು ತಾಳಲಾರೆ!

ನೀರು....ನೀರು!

ಮಗ್ಗುಲಾಗಿ ಮಲಗಲು ಪ್ರಯತ್ನಿಸಿದೆ. ಒರಟು ನೆಲ ಮೈ ಕೈಗೆ ಕಲ್ಲಿನಂತೆ ತ್ತಿತು. ಹಾ....! ನೋವು.....ಪ್ರಾಣಾಂತಕ ನೋವು!

ಎದ್ದು ಕೂಡುವ ಹಂಬಲ. ಆದರೆ ಕೈಕಾಲು ಅಲುಗಿಸುವ ಶಕ್ತಿ ಇದ್ದರಷ್ಟೆ? ನಿಶ್ಶಕ್ತಿ-ನೋವು-ಉರಿ-ಸಂಕಟ.

ಹಾ....! ತಾಳಲಾರೆ!

ನಿದ್ದೆಯಾದರೂ ಬರಲಿ ಎಂದು ಕಣ್ಮುಚ್ಚಿದೆ. ಮನಃಪ್ರಾಣಗಳು ಅಶಾಂತಿಯಿಂದ ಂಬಿಹೋಗಿದ್ದುವು. ಶರೀರ ದಳ್ಳುರಿಯಲ್ಲಿ ಬೇಯುತಿತ್ತು. ತಲೆ ಸಿಡಿಯುವಂತಿತ್ತು. ಕ್ತದ ಒತ್ತಡವನ್ನು ತಾಳಲಾಗದೆ ನರನಾಡಿಗಳು ಸೀಳಿ ಹೋಗುತ್ತಿರುವಂತೆ ಾಸವಾಯಿತು. ಕಣ್ಣುಗಳಿಗೆ ನಿದ್ದೆಯ ಮಂಪರವೋ ಮಂಜೋ ಯಾವುದೋ ವಿಯುತ್ತಿರುವುದು ಸ್ಪಷ್ಟವಾಗಿ ಅನುಭವಕ್ಕೆ ಬಂದಿತು. 'ಏನಾದರೂ ಆಗಲಿ' ಎಂದು ನ್ನನ್ನು ನಾನು ಭಗವಂತನಿಗೆ ಅರ್ಪಿಸಿಕೊಂಡೆ. ಸ್ವಲ್ಪ ಹೊತ್ತಿನನಂತರ ಕಣ್ತೆರೆದು ೋಡಿದಾಗ ಕೊಠಡಿಯನ್ನು ಮಸುಕು ಬೆಳಕು ಆವರಿಸಿತ್ತು. ಅದು ಸಂಜೆಯ ುಸುಕೋ ಬೆಳಗಿನ ಮುಂಬೆಳಕೋ ಅರ್ಥವಾಗಲಿಲ್ಲ. ಕುತೂಹಲ ತೃಷಿತ ನೋಟ ುತ್ತಲೂ ಹರಿದಾಡಿತು.

ಇನ್ನೂ ಬೆಳಕು ತಿಳಿಯಾಗಿರಲಿಲ್ಲವಾದ್ದರಿಂದ ಏನೂ ತಿಳಿಯಲಿಲ್ಲ.

ಭೀತಭೀತ ಪ್ರಕಾಂಡದಲ್ಲಿ ಒಂದೆರಡು ಘಳಿಗೆ ವಿಕಟ ವಿಪ್ಲವದಂತೆ ುರುಳಿದನಂತರ ನಸು ದೂರದಲ್ಲಿ ಯಾರೋ ನಡೆದು ಬರುತ್ತಿರುವ ಸದ್ದು ರ್ಣಪಟಲಗಳಿಗೆ ತಾಗಿತು. ಸಧ್ಯ ಯಾರೇ ಆಗಿರಲಿ, ಮನುಷ್ಯರಾದರೆ ಸಾಕು. ುನಂತೂ ರಣಭೂಮಿಯಲ್ಲಿಲ್ಲ; ಯೂವುದೋ ಶಿಬಿರದಲ್ಲಿರುವೆ ಎಂಬುದನ್ನು ಚಿತಮಾಡಿಕೊಂಡೆ. ಆದರೆ ಶತ್ರು ಶಿಬಿರವೋ ಭಾರತ ಶಿಬಿರವೋ ದೇವರಿಗೇ ೊತ್ತು.....ಕಳೆದುಳಿದ ಶಕ್ತಿಯನ್ನು ಒಟ್ಟುಗೂಡಿಸಿ ಚೀರಿದೆ "ನೀರು!"

ಯಾರೋ ಹರಕು ಮುರುಕು ಹಿಂದಿಯಲ್ಲಿ ಗಟ್ಟಿಯಾಗಿ ಗದರಿಕೊಂಡರು, "ಏಯ್! ಸುಮ್ಮನೆ ಬಿದ್ದುಕೊ...ಎಷ್ಟು ಒದರುತ್ತಿ?"

.....ಹಾ....! ಯಾರ ಧ್ವನಿ ಅದು? ಭಾರತೀಯರದಂತೂ ಅಲ್ಲವೇ ಅಲ್ಲ. ುಗತಿ? ನಾನೇಕೆ ಬದುಕುಳಿದೆ? ಶಿವಾಜಿ! ನನ್ನನ್ನು ಬಿಟ್ಟು ಎಲ್ಲಿಗೆ ಹೋದೆ! ುಯ್! ಹಾಯ್......! ಜಗದೀಶ್ವರಾ! ಕೊನೆಗೂ ನನ್ನನ್ನು ಶತ್ರುಗಳ ಪಾಲು

ಮಾಡಿದೆಯಾ? ರಣರಂಗದಲ್ಲಿ ಅಸುನೀಗಿದ್ದಿದ್ದರೆ ವೀರ ಸ್ವರ್ಗವನ್ನು ಸೇರಬಹುದಾಗಿತ್ತು. ನಿಜವಾಗಿಯೂ ನನಗೀ ಪರಿಪಾಡು ಬೇಡವೇ ಬೇಡ!

ಯೋಚಿಸುತ್ತಲೇ ಚೀರಿದೆ 'ನೀರು!'

''ಏಯ್! ಅರಚಬೇಡ!'' ಅಧಿಕಾರೋಕ್ತಿ ಕಟುವಾಗಿ ಹರಿದು ಬಂತು.

''ಅರಚುತ್ತಿಲ್ಲ. ನೀರು ಬೇಡುತ್ತಿರುವೆ!''

''ಮುಚ್ಚು ಬಾಯಿ!''

-ಯಾರ ಧ್ವನಿ ಅದು?

-ಯಾವ ಭಾಷೆ ಅದು?

ಹಿಂದಿಯೆ? ಉರ್ದುವೆ? ಹಿಂದಿಯೂ ಅಲ್ಲ; ಉರ್ದುವೂ ಅಲ್ಲ. ಚೀನೀ ದೈತ್ಯರ ಹರಕು ಮುರುಕು ಇಂಗ್ಲಿಷ್! ಅಂದಮೇಲೆ ಚೀನೀ ಠಾಣ್ಯವೇ ಖಂಡಿತ!

ಹಾ....!

ನಾಲ್ಕಾರು ಮಂದಿ ಮಂದ ಬೆಳಕಿನ ಕಂದೀಲಿನೊಡನೆ ಬಂದು ನಿಂತರು. ಆ ಮಂದಮಂದ ಪ್ರಕಾಶದಲ್ಲಿ ದೈತ್ಯರೂಪೀ ಮಾನವರನ್ನು ಬೆರಗುಗಣ್ಣುಗಳಿಂದ ನೋಡಿದೆ. ಅಸಹ್ಯವಾದ ಉಡುಪು; ಅಸಹ್ಯವಾದ ಮುಖ; ಅಸಹ್ಯವಾದ ರೂಪುರೇಷೆ ನೋಡಲಾಗದೆ ಕಣ್ಣು ಮುಚ್ಚಿಕೊಂಡೆ. ಎದೆಯ ನೆಲೆಯಲ್ಲಿ ಭೀತಹೃದಯ ಮದ್ದಲೆಯ ಘೋಷದಂತೆ ಮಿಡಿಯುತಿತ್ತು. ನನ್ನನ್ನು ನಾನು ಸಾವರಿಸಿಕೊಳ್ಳಲು ಒಂದೆರಡು ಕ್ಷಣ ಬೇಕಾಯಿತು.

''ಏಕೆ ಅರಚಿಕೊಂಡೆ?'' ಅದೇ ಕರ್ಕಶ ಧ್ವನಿ ಮೊಳಗಿತು.

''ನೀರು!''

''ಗದ್ದಲ ಮಾಡದೇ ಬಿದ್ದುಕೊ.''

ಎದ್ದು ಒಂದೇ ಬಾರಿಗೆ ಅಪ್ಪಳಿಸಿ ಕತ್ತು ತಿರುಚಿ ಹಾಕಲೇ? ಎನ್ನಿಸಿ ನರನಾಡಿಗಳಲ್ಲಿ ಕೋಪದ ಜ್ವಾಲೆ 'ಝಿಲ್ಲನೆ' ಹರಿದಾಡಿತು. ಆದರೆ ಅಲಗುವ ತ್ರಾಣವಿದ್ದರಷ್ಟೆ? ಪ್ರಾಣಪಕ್ಷಿ ಒಳಗಿಂದೊಳಗೇ ನರಳಿತು. ಕಣ್ಣುಗಳಂಚಿನಲ್ಲಿ ಹನಿಗಳು ತುಂಬಿಕೊಂಡುವು. ಒಬ್ಬಾತ ತಂಬಿಗೆಯಲ್ಲಿ ನೀರನ್ನು ತಂದು ಬಾಯಿಗೆ ಸುರಿದ. ನೀರೋ ತಂಬಿಗೆಯೋ ದುರ್ಗಂಧ ಪೂರಿತವಾಗಿತ್ತು. ತೆರೆದ ತಕ್ಷಣ ನಾನು ಬಾಯಿ ಮುಚ್ಚುವುದಕ್ಕೂ ಅವನು ನೀರು ಸುರಿಯುವುದಕ್ಕೂ ಸರಿಹೋಯಿತು. ಚೆಲ್ಲಿದ ನೀರು ಮುಖ ಬಾಯಿಗಳನ್ನೆಲ್ಲಾ ಆವರಿಸಿತು. ಬಾಯಿ ತುಂಬಿದ ಸ್ವಲ್ಪ ನೀರನ್ನು ಗುಟಕಿಸಲಾರದೆ ಗುಟುಕಿಸಿದೆ. ಜೀವ ಒಳಗಡೆ ಮಿಲಿಮಿಲಿ ಒದ್ದಾಡಿತು.

''ಈ ನೀರು ಬೇಡ; ಶುದ್ಧವಾದ ನೀರು ಕೊಡು.'' ನಾನು ಚೀರಿದೆ.

''ಶುದ್ಧವಾದ ನೀರು ನಿನ್ನಪ್ಪನ ಮನೆಯಲ್ಲಿದೆ!'' ಗರ್ವೋಕ್ತಿ ಕಿವಿಯನ್ನು ಕೊರೈಸುವಂತೆ ಮೊಳಗಿತು.

ಆ ಧೂರ್ತ ಅದೇ ನೀರನ್ನು ಮತ್ತೆ ಬಾಯೊಳಗೆ ಸುರಿದ. ನೀರಿಲ್ಲದೆ ಸತ್ತಿದ್ದರೂ ಚಿಂತೆ ಇರಲಿಲ್ಲ, ಎನಿಸಿದರೂ ಆ ಘಳಿಗೆಯಲ್ಲಿ ಬಾಯಾರಿಕೆಯನ್ನು ತಡೆದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಹೇಗೆ ನುಂಗಿದೆನೋ ದೇವರಿಗೇ ಗೊತ್ತು. ಸಂಕಟದಿಂದ ನೇತ್ರದ್ವಯಗಳು ಮುಚ್ಚಿಕೊಂಡುವು. ಹೃದಯ-ಮಸ್ತಿಷ್ಕಗಳೆರಡೂ ನಿಷ್ಕ್ರಿಯವಾದಂತೆ ನಿಶ್ಚೇಷ್ಟವಾದುವು. ಕಣ್ಣುಗಳಿಗೆ ಮಂಜು ಕವಿದು ಬಂತು.

ಆ ಧರ್ಮಹೀನ ಮಾನವರು ತಮ್ಮತಮ್ಮೊಳಗೆ ಚಿಮು ಚಿಮು ಮಾತನಾಡಿ ವಿನೋದವಾಡುತ್ತ ಹಲವು ಜಾಗಟೆಗಳನ್ನು ಒಂದೇ ಬಾರಿಗೆ ಬಾರಿಸಿದಂತೆ ನಕ್ಕರು-ನನ್ನ ಗಾಯ ಗಾಯಗಳಿಗೂ ಕಿಚ್ಚು ಹಚ್ಚುವಂತೆ. ಸಧ್ಯ ಅವರಲ್ಲಿಂದ ತೊಲಗಿದ್ದರೆ ಸಾಕಾಗಿತ್ತು; ಹಾಗೆಂದು ಬಾಯ್ದೆರೆಯಲು ಧೈರ್ಯವಾಗಲಿಲ್ಲ. ಅವರು ಅಲ್ಲಿ ಸ್ವಲ್ಪ ಹೊತ್ತು ಹರಟಿದನಂತರ ಕಂದೀಲಿನೊಡನೆ ಹೊರಟರು. ಆ ಕೊನೆಯವರೆಗೂ ಅವರು ಚಲಿಸಿದುದು ಕಾಣಿಸುತ್ತಿದ್ದುದರಿಂದ ಇದೊಂದು ದೊಡ್ಡ ವಠಾರ ಎನಿಸಿತು. ಇಲ್ಲಿ ಶಿವಾಜಿಯಾಗಲೀ ಇತರ ಭಾರತೀಯ ಸೈನಿಕರಾಗಲೀ ಇರಬಹುದೇನೋ ಎಂಬ ಯೋಚನೆ, ಆದರೆ ಹೇಳುವವರಾರು?

ಚೀನೀ ದೈತ್ಯರು ನನಗೇನನ್ನೂ ಹೇಳದೆ, ಯಾವ ಸಹಾಯವನ್ನೂ ಮಾಡದೆ ಹೊರಟುದುದನ್ನು ನೋಡಿ ನನ್ನ ಸಂಕಟ ಇಮ್ಮಡಿಯಾಯಿತು. ಹಸಿವು-ಬಾಯಾರಿಕೆ-ಸಂಕಟ-ಉರಿ ತಡೆಯುವಂತಿರಲಿಲ್ಲ. ತಿಳಿವು ಹೆಚ್ಚಿದಷ್ಟೂ ಉರಿ-ನೋವು ಹೆಚ್ಚು ತಿಳಿಯುತಿತ್ತು; ಸಂಕಟ ಅಗಾಧವಾಗುತಿತ್ತು. ನರನರಗಳೂ ಸೇದಿ ಹಿಡಿದಂತೆ ಪ್ರಾಣವನ್ನು ಹಿಂಡುತಿದ್ದುವು. ಈ ಯಾತನೆಗಿಂತ ಮರಣವು ಲೇಸು ಎನಿಸಿತು. ಆದರೆ ಮರುಕ್ಷಣದಲ್ಲಿ ಹೆಂಡತಿ-ಮಕ್ಕಳು-ಕುಟುಂಬಿಗರು ಸುತ್ತಮುತ್ತ ಸುಳಿದಳಿದರು. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯಿತು. ಎರಡೂ ಕೈಗಳಿಂದ ಒತ್ತಿ ಹಿಡಿದುಕೊಂಡು ದೇವರನ್ನು ಪ್ರಾರ್ಥಿಸಿಕೊಂಡೆ. ತೋಳುಗಳಿಗೆ ಪೆಟ್ಟು ತಾಗಿದ್ದುದರಿಂದ ಹೆಚ್ಚು ಹೊತ್ತು ಹಾಗೆ ಇಟ್ಟುಕೊಳ್ಳಲಾಗಲಿಲ್ಲ. ನೆಲದಮೇಲೆ ಚಾಚಿ ವಿಶ್ರಾಂತಿಯನ್ನು ನೀಡಿದೆ. ನೆತ್ತರಿನ ಆಸೆಗೆ ಕ್ರಿಮಿ ಕೀಟಗಳು ಮೈಯ್ಯನ್ನು ಮುತ್ತಿ ಕಡಿದು ಹಿಂಸಿಸುತಿದ್ದುದು ಈಗೀಗ ಅನುಭವಕ್ಕೆ ಬಂದಿತು. ಅವುಗಳನ್ನು ನಿವಾರಿಸುವ ಶಕ್ತಿಯೂ ಇರಲಿಲ್ಲ.

ಹಾ....! ತಾಳಲಾರೆ; ನೋಯಲಾರೆ.

ಬೆಳಕು ಕ್ಷಣೇ ಕ್ಷಣೇ ಹೆಚ್ಚ ತೊಡಗಿತು. ಭಗವಂತ ಅಷ್ಟಾದರೂ ದಯೆ ತೋರಿದನಲ್ಲ.....ಎಂದು ಕೊಂಡೆ ಶಿಬಿರ ಸ್ಪಷ್ಟವಾಗಿ ಕಾಣಿಸಿತು. 'ಜಿಂಕ್ ಶೀಟ್ಸ್' ಜೋಡಿಸಿ ಕೊಠಡಿಗಳನ್ನು ನಿರ್ಮಿಸಲಾಗಿತ್ತು. ನೆಲಕ್ಕೆ ಸೀಮೆಂಟು ಹಾಕಿರಲಿಲ್ಲವಾದುದರಿಂದ ಕ್ರಿಮಿಕೀಟಗಳ ಕಾಟ. ಗಾಳಿ ಬೆಳಕುಗಳಿಗಾಗಿ ಕಿಟಿಕಿಗಳಿರಲಿಲ್ಲ. ಅಲ್ಲಲ್ಲಿ ತೂತು ಬಿದ್ದ ಜಿಂಕ್‌ಶೀಟ್ಸ್‌ಗಳಿಂದ ಬೆಳಕು ಒಳಬರುತಿತ್ತು. ಹೊತ್ತೇರಿದರೂ ಒಳಗಡೆ ಮಸುಗತ್ತಲೆಯೇ.....

''ಉರಿ.....ಉರಿ!''

''ಏಯ್........!'' ದರ್ಪೋದ್ಧತ ಕಂಠ ಮೊಳಗಿತು.

ಜಿಂಕ್‌ಶೀಟ್ಸಿನ ಆಚೆಯಿಂದ ಕರ್ಕಶ ದನಿಯಲ್ಲಿ ಪುನಃ ಯಾರೋ ಗದರಿಕೊಂಡರು. ನಖಶಿಖಾಂತ 'ಜುಂ' ಎಂದಿತು. ನೋವು ಸಂಕಟಗಳನ್ನೆಲ್ಲಾ ನನ್ನಲ್ಲೇ ಅದುಮಿ ಹಿಡಿದುಕೊಂಡೆ. ಮದ್ದು ಬಳಿಯದ ಗಾಯಗಳು ಹಿಂಸ್ರ ಪಶುವಿನಂತೆ ಕಾಡುತಿದ್ದುವು. ಯಾತನೆ......ತಾಳಲಾಗದ ಯಾತನೆ. ಪಾಪ, ಶಿವಾಜಿಯ ಗತಿ ಏನಾಯಿತೋ? ಜೀವದಿಂದ ಇದ್ದಾನೋ, ಇಲ್ಲವೋ....ಆ ಯೋಚನೆ ಬಂದೊಡನೆಯೇ ಕಣ್ಣುಗಳಲ್ಲಿ ಫಳಕ್ಕನೆ ನೀರಾಡಿತು. ಒಂದೆರಡು ಘಳಿಗೆಕಾಲ ನನ್ನ ಮನೋದಧಿಯಲ್ಲಿ ಅತೀವ ವಿಕ್ಷೋಭೆಯ ಪ್ರಭಂಜನ ನಡೆದು ಹೋಯಿತು. ಏನೋ ಒಂದು ರೀತಿಯ ಮಂಪರ.....ಇನ್ನೇನೋ ಒಂದು ಬಗೆಯ ಸಂಕಟ.....ಮತ್ತೇನೋ ಒಂದು ಬಗೆಯ ನುಲಿತ.....ಅನುಭವಿಸಲಾಗದೆ ಆಗ್ರಹಪೂರ್ವಕವಾಗಿ ಚೀರಿದೆ......ಶಿವಾಜೀ!

ಹೊರಗಿದ್ದ ಚೀನೀಯವ ಒಂದೇ ಬಾರಿಗೆ ತುಳಿದು ಹೊಸಗಿ ಸಾಯಿಸಿ ಬಿಡುವವನಂತೆ ಒಳನುಗ್ಗಿ ಬಂದ. ಅವನು ನಡೆದು ಬಂದರೀತಿ ಮೈ ನಡುಗಿಸಿತು. ಬೂಟಿನ ಕಾಲನ್ನು ನನ್ನ ಎದೆಯ ಮೇಲಿಟ್ಟು ''ಈಗಲೇ ಸಾಯಿಸಿ ಬಿಡುವೆ ಗೊತ್ತೆ?'' ಎಂದು ಅರಚಿದ. ತೆರೆದ ಬಾಯಿಯಲ್ಲಿ ಉಬ್ಬಿದ ಹಲ್ಲುಗಳು ಪೈಶಾಚಿಕವಾಗಿ ಮೈದೋರಿದುವು. ಅತ್ಯಂತ ಅಸಹ್ಯವಾದ ಮುಖದಿಂದ ಹೊರಬಿದ್ದ ಮಾತುಗಳು ಕಿವಿಗೆ ಕರ್ಕಶವಾಗಿ ತಾಗಿದುವು. ಅವನು ಕಣ್ಣುಗಳನ್ನು ಅರಳಿಸಿ ಬಾಯಿ ಕಿಸಿದ ರೀತಿ ಭಯಂಕರವಾಗಿತ್ತು. ಎದೆಯನ್ನು ಅಮುಕಿ ಹೊಸಕಿದಾಗ ಪ್ರಾಣ ಚಿಮ್ಮುವಂತೆ ಭಾಸವಾಯಿತು. ಬೆನ್ನಿನಮೇಲೆ ಭರ್ಚಿ ಇರಿತದ ಗಾಯದಿಂದ ನೆತ್ತರು ಶ್ರವಿಸಿತು. ಪ್ರಾಣಾಂತಕ ನೋವಿನಿಂದ ಮಕ್ಕಳಂತೆ ಚೀರಿಕೊಂಡೆ. ಅನಂತರ ಏನಾಯಿತೋ

ತಿಳಿಯದು. ಮತ್ತೆ ಕಣ್ತೆರೆದಾಗ ಆ ಯಮ ಯಾತನೆಯಿಂದ ಒಂದೊಂದು ಘಳಿಗೆಯನ್ನು ಕಳೆಯುವುದೂ ಸಹ ಘೋರ ಘೋರವಾಗಿತ್ತು. ನಿದ್ದೆಯಾದರೂ ಬಂದಿದ್ದರೆ ಎಂಬ ಹಾರೈಕೆ. ಆದರೆ ಭೀಕರ ಬಾಧೆ ನಿದ್ದೆ ಮಾಡಗೊಡಿಸಬೇಕಲ್ಲ? ಶಿವಾಜಿಗಾಗಿ ಸುತ್ತಮುತ್ತ ಕಣ್ಣುಗಳು ತಡುಕಿದುವು. ಎಲ್ಲಿಯೂ ಆತನ ಸುಳಿವಿಲ್ಲ. ಶಿಬಿರದಾಚೆ ಚೀನೀಯರ ಮಾತುಕತೆಯ ಗುಲ್ಲು ಕೇಳಿಸುತಿತ್ತು. ಭಾರತೀಯರ ಸೊಲ್ಲು ಮಾತ್ರ ಇಲ್ಲವೇ ಇಲ್ಲ. ಸಂಕಟಭರಿತ ಚಿತ್ತ ಕ್ಷಣ ಕ್ಷಣಕ್ಕೂ ನಿರಾಸೆಗೊಳ್ಳುತಿತ್ತು. ಭಾರತ ಸರಕಾರಕ್ಕೆ ನಾವಿಲ್ಲಿ ಸೆರೆ ಸಿಕ್ಕಿರುವುದು ತಿಳಿದಿದೆಯೋ ಇಲ್ಲವೋ......ನಮ್ಮ ಬಿಡುಗಡೆ ಎಂಬುದು ಕನಸಿನ ಮಾತು. ಇಲ್ಲಿ ಈ ದೈತ್ಯರ ಶಿಬಿರದಲ್ಲಿ ಸಾಯುವುದಕ್ಕಿಂತ ಯುದ್ಧರಂಗದಲ್ಲೇ ಸತ್ತಿದ್ದರೆ ಎಷ್ಟೋ ಮೇಲಾಗಿತ್ತು......

ಎದ್ದು ಕುಳಿತುಕೊಳ್ಳಲು ಹವಣಿಸಿದೆ. ಆದರೆ ನರನರಗಳೂ ಕಿತ್ತು ಬರುವಂತೆ ನೋಯುತಿದ್ದುದರಿಂದ ಮೈ ಕೈ ಅಲುಗಿಸುವುದೂ ಸಾಧ್ಯವಾಗಲಿಲ್ಲ ಅಲ್ಲಲ್ಲೇ ಶೇಖರವಾದ ಮಲಮೂತ್ರಗಳಿಂದ ವಾತಾವರಣ ಅತ್ಯಂತ ದುರ್ಗಂಧಯುಕ್ತವಾಗಿದ್ದಂತೆ ಮೂಗಿಗೆ ತಾಗುತಿತ್ತು. ನಿರ್ಮಲವಾದ ಗಾಳಿ ಇದ್ದಿದ್ದರೆ ಎಷ್ಟೋ ಸುಖವಾಗಿರುತಿತ್ತು. ಆದರೆ ಅದೂ ಸಹ ಹಿಂಸ್ರಗತಿಯಲ್ಲಿ ಕಾಡುತ್ತಿದೆ. ಎದೆಯಾಳದಲ್ಲಿ ಸಂಕಟಪೂರ್ಣವಾದ ಉಸಿರು ಕ್ರಮರಹಿತವಾಗಿ ಹರಿದಾಡುತಿತ್ತು. ಮಸುಕು ಬೆಳಕಿನಲ್ಲಿ ಗಾಯ ಗಾಯಗಳನ್ನೂ ನೋಡಿಕೊಂಡೆ. 'ಚರೆ' ಎರಡುಕಡೆ ತಾಗಿತ್ತು. ಉಳಿದುದೆಲ್ಲ ಹೊಡೆತ-ಬಡಿತ-ಒದೆತಗಳಿಂದಾದ ಗಾಯಗಳೇ. ಕೆಲವಡೆ ನೆಲದಮೇಲೆ ಎಳೆದಾಡಿ ತೆರಚಿದ ಗಾಯಗಳೂ ಇವೆ. ಅವು ಹೇಗಾದರೂ ಆಗಲಿ, ಇಲ್ಲಿಂದ ಬಿಡುಗಡೆಗೆ ದಾರಿ ಸಿಕ್ಕಿದ್ದರೆ.....?

ಅತೀವ ಹಸಿವು-ಬಾಯಾರಿಕೆ-ಸಂಕಟಗಳಿಂದ ಮೈ ಥರಥರ ನಡುಗುತಿತ್ತು. ಹೃದಯ ಕಲ್ಲು ಹೊತ್ತಂತೆ ಭಾರವಾಗುತಿತ್ತು. ದುಃಖದಗ್ಧ ಉಸಿರು ಅಲ್ಲಲ್ಲಿ ಸಿಕ್ಕಿಕೊಂಡಂತೆ ಕ್ಷೀಣವಾಗಿ ಹರಿದಾಡುತಿತ್ತು. ನಿಶ್ಚಲವಾಗಿ ಶವಾವಸ್ಥೆಯಲ್ಲಿ ಬಿದ್ದುಕೊಂಡಿದ್ದೆ. ಮಗ್ಗುಲು ಕೋಣೆಯಲ್ಲಿ ಚೀನೀ ಪರಿವಾರ ಮಾತುಕತೆಯಾಡುತಿದ್ದುದು ಕೇಳಿ ಬರುತಿತ್ತು. ಆ ಹಾಳು ಭಾಷೆ ಕಿವಿಗೆ ಬೀಳುವುದೂ ಸಹ ಬೇಡವಾಗಿತ್ತು. ಆರ್ತ ಚಿತ್ತ ಉದ್ವಿಗ್ನತೆಯಿಂದ ಭಗವಂತನನ್ನು ಪ್ರಾರ್ಥಿಸಿಕೊಳ್ಳುತಿತ್ತು......ಭಾರತ ಭೂಮಿಯ ಮಧುರ ಸಂಸ್ರವವಿಲ್ಲ. ಈ ಚೀನಾ ನೆಲೆಯಲ್ಲಿ ಮಾಡಿದ ಪ್ರಾರ್ಥನೆ ಭಗವಂತನಿಗೆ ಮುಟ್ಟುವುದೋ ಇಲ್ಲವೋ ಎಂಬ ಗಭೀರ ಅನುಮಾನ. ಅದೇ ಮರುಘಳಿಗೆಯಲ್ಲಿ ಭಗವಂತ ಎಲ್ಲೆಲ್ಲೂ ಇದ್ದಾನೆ.

ಯೋಚಿಸಬೇಡ; ಎನ್ನುತಿತ್ತು ಭಕ್ತಿಪ್ರೀತಿ ಅಂತರಂಗ. ಭಾವವಿಭಾವಗಳ ದಾಂಧಲೆಯಲ್ಲಿ ಹೃದಯ ದಣಿಯಿತು. ಪ್ರಾಣಪಕ್ಷಿ ಈಗಲೀಗ ಚಿಮ್ಮುವುದೇನೋ ಎಂಬಷ್ಟು ಕಳವಳ ಭರಿತ ಚಿತ್ತ. ಮದ್ದು ಬಳಿಯದ ಗಾಯ. ನಂಜೊತ್ತಿದ ಮೈ.......

.....ಹಿಂಸೆ.....ಭಯಂಕರ ಹಿಂಸೆ!

.....ಪ್ರಾಣಾಂತಕ ನೋವು.......!

......ಕಣ್ಮುಚ್ಚಿದೆ-ನೋವುನ್ನು ಜೀರ್ಣಿಸಿಕೊಳ್ಳಲೆಂದೇ ಕಣ್ಮುಚ್ಚಿದೆ.

ಈಗಿಂದೀಗಲೇ ಪ್ರಾಣ ಹೋಗಲಿ, ಎಂಬ ವಿಚಾರದೋಹನ ಮನದಲೆಯಲ್ಲಿ ತೇಲಿ ನಲಿಯುತಿತ್ತು. ಆದರೆ.......ನನ್ನನ್ನು ಅವಲಂಭಿಸಿದವರು ನನಗಾಗಿ ನಿರೀಕ್ಷಿಸುವವರು ಎಷ್ಟು ಮಂದಿ ಇದ್ದಾರೆ......? ಅವರಿಗೆಲ್ಲಾ ಏನುತ್ತರ ಹೇಳಲಿ? ಕಷ್ಟ ಸುಖಗಳು ಬರುತ್ತವೆ-ಹೋಗುತ್ತವೆ. ಇಷ್ಟಕ್ಕೇಕೆ ಎದೆಗೆಡಬೇಕು? ಏನೇ ಬಂದರೂ ಜೀರ್ಣಿಸಿಕೊಳ್ಳುವುದೇ ಮಾನವ ಧರ್ಮ.

ಸ್ವಾರ್ಥ.......ಸ್ವಾರ್ಥ!

ಪ್ರತಿದ್ವಂದೀ ಸ್ವಾರ್ಥಿಗಳ ತಾಕಲಾಟ......ದುರ್ದಮನೀಯ ದ್ವೈದೀ ಭಾವನೆಗಳ ಸಂಘಾತ.....ಅಚಲ ನಿಷ್ಠುರ ವಿಭ್ರಮ ವೀಚಿಗಳ ಪ್ರತ್ಯಾಘಾತ......ಈರ್ಷ್ಯೆ.....ಸಂಘರ್ಷ.....ಹಾಯ್! ಪ್ರಾಣಹಾನಿ..... ಮಾನಹಾನಿ!.....ಅರ್ಥಹಾನಿ!....ಈ ಪಾಪಕ್ಕೆ ಎಣೆಯೆಂಬುದೇ ಇಲ್ಲ. ಕಲಿತು ನುರಿತು ನಾಗರೀಕರೆನಿಸಿದವರಿಗೆ ಜಯಾಜಯಗಳ ವೀರಪೂಜೆಯಲ್ಲಿ ನಡೆಸುವ ಮಾನವ ಬಲಿಯನ್ನು ಅತೀವ ಸಾಮಾನ್ಯವೆಂದು ಈ ಯುಗಧರ್ಮ ಭೋದಿಸುತ್ತದೆಯೇ?

ಹಾ.....!

ಕಠೋರ-ಕಾತರ-ಕರ್ಕಶಯುತ ಮಾನಸಿಕ ಸಂಘರ್ಷಣೆಯಲ್ಲಿ ಘಳಿಗೆಗಳು ಶಾಂತ ಗಂಭೀರವಾಗಿ ನಿಷ್ಕ್ರಮಿಸುವಾಗ ಅಂತಃಸ್ಥಲ ದೀರ್ಣವಿದೀರ್ಣ ವಾಗುತ್ತಿರುವಂತೆ ಭಾಸವಾಯಿತು. ನಿಶ್ವಾಸ-ಉಚ್ಛ್ವಾಸಗಳ ಕ್ರಿಯೆ ವಿಕ್ಷಿಪ್ತವಾಗುತ್ತಿರುವಂತೆ, ಮನಸ್ಸು ಹತೋಟಿ ತಪ್ಪಿ ವಿವಶವಾಗುತ್ತಿರುವಂತೆ ತೋರಿ, ಭಯ ಭ್ರಾಂತಿಯಿಂದ ಕಣ್ಣುಗಳನ್ನು ಅಗಲವಾಗಿ ತೆರೆದು ಬಿರುಬಿರು ನಿಟ್ಟಿಸಿ ಮಾನಸಿಕ-ದೈಹಿಕ ಕ್ರಿಯೆಗಳನ್ನು ಸೂಕ್ಷ್ಮವಾಗಿ ಗಮನಿಸಿದೆ. ತನುಮನಗಳ ಸಮಗ್ರವೇದನೆ ಬಾಷ್ಪಲಿಪ್ತ ನಯನಗಳಲ್ಲಿ ಹೊರ ಹೊಮ್ಮಿತು. ಗಂಟಲಾರಿ ಒಣಗಿದ್ದ ಆದರೋಷ್ಠಗಳನ್ನು ನಾಲಿಗೆಯಿಂದ ಒರಿಸಿಕೊಂಡು ಜೀವಚ್ಛವದಂತೆ ಬಿದ್ದುಕೊಂಡೆ. ಜಿಂಕ್‌ಶೀಟ್ಸ್‌ನ ಕಂಡಿಗಳಲ್ಲಿ ಒಳ ತೂರಿ ಬರುವ ಸೂರ್ಯರಶ್ಮಿಗಳು ವಿಚಾರಯುಕ್ತ

ಪರಿಹಾಸದಿಂದ ಮಾನವತೆಯನ್ನು ವಿಶ್ಲೇಷಣೆಗೈಯ್ಯುತ್ತಿರುವತೆ ತೋರಿ ಬಂತು.

ಹೊರಗಡೆ ಏನೋ ಮರ್ಮರ ಸದ್ದು.

ಹಾಗೇ ಕಿವಿಗೊಟ್ಟಾಲಿಸಿದೆ. ಮನೋ ವಿಪ್ಲವಕ್ಕೆ-ದುರ್ದಮನೀಯವಾದ ದೈಹಿಕ ವೇದನೆಗೆ ಇನ್ನಷ್ಟು ಕಹಿಯನ್ನೂಡಿಸುವಂತೆ ಚೀನೀಯರ ನಗೆ ಚಾಟಿಕೆ!

ಕೇಳಲಾರೆ.....ತಾಳಲಾರೆ!

ಶಿವಾಜಿಯ ಗತಿಯೇನಾಗಿದೆಯೋ. ಅವನನ್ನೂ ಚೆನ್ನಾಗಿ ಥಳಿಸಿದ್ದಾರೆ ಈ ಧೂರ್ತರು! ಸರಿ; ನಾವೇನು ಕಡಿಮೆ? ನಾವು ಮಾಡಿದ್ದೂ ಅಷ್ಟೆ......ಈ ಅತೀತಯುಗದ ಮಾನವಧರ್ಮ ಚಿಗುರೆಲೆಗಿಂತಲೂ ಚಿಗುರಾಯಿತೇಕೆ? ಆಂತರಿಕ ಕಲ್ಮಷವನ್ನು ದಹಿಸಲಾರದೆ ಹೋದರೆ ಈರ್ಷಾಗ್ನಿಯಲ್ಲಿ ಸಮಗ್ರ ಮಾನವತೆ ಭಸ್ಮೀಭೂತವಾಗುತ್ತದೆ. ಎಂಬುದನ್ನು ತಿಳಿದುಕೊಳ್ಳದೆ ಆತ್ಮವಿಶ್ವಾಸವೇ ಕಳೆದು ಹೋಗುತ್ತಿದೆ. ಆತ್ಮವಿಶ್ವಾಸವನ್ನು ಕಳೆದುಕೊಂಡೆವೆಂದರೆ ಉಳಿಯುವುದು ಮರಣವೊಂದೇ.......

ಯೋಚನೆಯ ಕರಾವಳಿಯಲ್ಲಿ ಓಡುತಿತ್ತು ಚಿತ್ತ; ದೈಹಿಕ ಬೇನೆ ಕ್ಷಣ ಕ್ಷಣಕ್ಕೆ ಹೆಚ್ಚುತಿದ್ದರೂ ಅದರೆಡೆಗೆ ಗಮನಕೊಡಬಾರದೆಂಬಷ್ಟು ಆತ್ಮವಿಶ್ವಾಸ ಬೆಳೆಯುತಿತ್ತು; ಬಹುಶಃ ಅದೇ ನನಗೆ ಜೀವದಾನ ಮಾಡಿರಬಹುದು. ಹೊರಗಡೆ ಮಾತಿನಲ್ಲಿ ಮೈಮರೆತಿರುವ ಚೀನಿಯರಿಗೆ ಕೇಳಿಸಲೆಂದು ಗಟ್ಟಿಯಾಗಿ ಕೂಗಿದೆ.

''...........ಉರಿ........ಉರಿ! ತಾಳಲಾರೆ......ನೀರುಬೇಕು!'' ಹೊತ್ತು ಉರುಳುತಿತ್ತು; ನನ್ನ ಸಹನೆಯೂ ಮೀರುತಿತ್ತು. ಪುನಃ ಪುನಃ ಚೀರಿದೆ,

''ನೀರು.....ನೀರು!''

ಬಹುಶಃ ಗಟ್ಟಿಯಾಗಿ ಚೀರಿರಬೇಕು. ಅನಂತರ ಹಾಗೆ ಮಾಡಬಾರದಿತ್ತು ಎನಿಸಿತು. ಎದ್ದು ಕುಳಿತುಕೊಳ್ಳೋಣವೆಂದು ಪ್ರಯತ್ನಪಟ್ಟೆ. ಮೈಯಲುಗಿಸಲಾಗಲಿಲ್ಲ. ಸ್ವಲ್ಪ ಹೊರಳಿಸಿದರೂ ಪ್ರಾಣಾಂತಕ ನೋವು, ತಾಳಲಾಗದೆ ಕಣ್ಣುಗಳಲ್ಲಿ ಧಾರಾಕಾರವಾಗಿ ಕಂಬನಿ ಸುರಿಯಿತು. ಯಾರೋ ದೂರದಲ್ಲಿ ನಡೆದು ಬರುವ ಸದ್ದುಕೇಳಿಸಿತು. ಅವರಿಗೆ ನನ್ನ ಧ್ವನಿ ಮುಟ್ಟಲೆಂದು ಮತ್ತೆ ಕೂಗಿದೆ.....'ನೀರು!'

ದುಪು ದುಪು ಹೆಜ್ಜೆಯಿಡುತ್ತಾ ದೈತ್ಯಮಾನವ ಒಳಬಂದ. ಏಳು ಅಡಿ ಎತ್ತರ, ಅಸಹ್ಯವಾದ ಹಳದಿ ವರ್ಣದ ಮುಖ. ಹಲ್ಲುಬಾಯಿ ತೊಳೆದು ಸ್ನಾನಮಾಡಿ ಯಾವಕಾಲವೋ.....ನೋಡಿದ ಪ್ರಥಮ ನೋಟಕ್ಕೆ ಮನಸ್ಸು ಮುದುಡಿಕೊಂಡಿತು.

''ಏನು ಬೇಕು?'' ಅಧಿಕಾರವಾಣಿ ಮೊಳಗಿತು.

"ನೀರು,"

ಅವನು ಸಿಟ್ಟಿನಿಂದಲೋ ಏನೋ ಒಂದೇ ಬಾರಿಗೆ ನನ್ನನ್ನು ಹಿಡಿದೆತ್ತಿ ಕೂಡಿಸಿದ, ಕೈಕಾಲುಗಲು ನಿಟಿ ನಿಟಿ ಎನ್ನುವಂತೆ. ಅಸಹನೀಯವಾದ ನೋವನ್ನು ತಾಳಲಾರದೆ ಚೀರಿದೆ "ಅಯ್ಯೊ, ಅಮ್ಮಾ!"

"ಏಯ್! ಎಷ್ಟು ಕೂಗುತ್ತಿ?" ಸಿಟ್ಟಿನಿಂದ ಗದರಿದ.

"ನಿನಗೆ ಸ್ವಲ್ಪವೂ ಕರುಣೆಯಿಲ್ಲ. ಮೈ ನೋವು ಮಾಡಿಬಿಟ್ಟೆ."

ಅವನು ಚೀನೀ ಭಾಷೆಯಲ್ಲಿ ಏನೇನೋ ಕಟುವಾಗಿ ಮಾತಾಡಿದ. ಕಣ್ಣುಗಳಲ್ಲಿ ಕಿಡಿಗಳು ಉದುರುತಿದ್ದುವು. ಹುಬ್ಬುಗಂಟಿಕ್ಕಿ ಕೋಪ ಪ್ರದರ್ಶದ ಮಾಡಿ ಮೂಲೆಯಲ್ಲಿದ್ದ ಗಡಿಗೆಯಿಂದ ನೀರನ್ನು ಒಂದು ಡಬ್ಬಿಗೆ ಜೊಳ ಜೊಳ ಬೊಗ್ಗಿಸಿ ಮುಂದೆ ಹಿಡಿದ. ಮೂರು ನಾಲ್ಕು ಲೋಟೆಯಷ್ಟು ನೀರನ್ನು ಒಂದೇ ಬಾರಿಗೆ ಕುಡಿದೆ.

ಹರಕು ಮುರುಕು ಇಂಗ್ಲಿಷಿನಲ್ಲಿ ಅವನು ಕೇಳಿದ 'ಮಲಗುತ್ತೀಯೇನು?'

"ಸ್ವಲ್ಪ ಹೊತ್ತು ಕೂಡುವೆ." ನಾನು ಏದುತ್ತಾ ಹೇಳಿದೆ.

ಅಷ್ಟಂದದ್ದೇ ಸಾಕಾಗಿತ್ತು ಎಂಬಂತೆ ಅವನು ದುಪು ದುಪು ಹೊರ ಹೋದ.

ಹಿಂದುಗಡೆ ಮೂರು ನಾಲ್ಕು ಜಡೆಗಳು ನೇತಾಡುವುದನ್ನು ನಿಟ್ಟಿಸಿದ ಕಣ್ಣುಗಳು ಬೇರೆಡೆಗೆ ಸಿಡಿದುವು. ಅಜ್ಞಾನ, ಅನಾಚಾರ, ಆಂತರ್ಯದ ಶೈಥಿಲ್ಯ....! ಮಾನವತೆಯ ಪ್ರಾಣಾಳಿಕೆಯಿಂದ ದೂರ ಇಡಬಹುದಾದಂತಹ ಕ್ಷುದ್ರತನ! ಈ ಯಃಕಶ್ಚಿತ್ ಮಾನವತೆಗಾಗಿ ಭಗವಾನ್ ಬುದ್ಧದೇವ ಎಷ್ಟು ನೋವುಂಡಿದ್ದಾನೋ......ಇನ್ನೆಷ್ಟು ಶ್ರಮ ವಹಿಸಿದ್ದಾನೋ.....ಹಾ!

ಎದೆಯಾಳದಿಂದ ನಿಟ್ಟುಸಿರೊಂದು ದೀರ್ಘವಾಗಿ ಹೊಮ್ಮಿತು.

ಮೈಗಾಯಗಳ ಕಡೆ ದೃಷ್ಟಿ ಹೊರಳಿಸಿದೆ. ಅವುಗಳ ಭಯಂಕರ ಸ್ವರೂಪ- ಸ್ಥಿತಿಗತಿ ಮನಸ್ಸಿಗೆ ಕಳವಳವನ್ನೂಡಿಸಿತು. ಚಿಕಿತ್ಸೆ ಇಲ್ಲದಿದ್ದರೆ ಇಲ್ಲಿಂದ ಜೀವ ಸಹಿತ ಪಾರಾಗಿ ಹೋಗುವುದು ಕಷ್ಟ ಎನ್ನಿಸಿ ಚಿಂತೆಗೊಳಗಾದೆ. ಏನು ಮಾಡುವುದೋ ಬಗೆ ಹರಿಯಲಿಲ್ಲ. ಅಷ್ಟರೊಳಗಾಗಿ ಮೂವರು ಹೆಂಗಳೆಯರು ಆಗಮಿಸಿದರು. ಹೆಣ್ಣಿಗೂ ಅಲ್ಲದ ಗಂಡಿಗೂ ಅಲ್ಲದ ಉಡಿಗೆ ತೊಡಿಗೆ, ಸುಕ್ಕು ಸುಕ್ಕಾದ ಹಳದಿವರ್ಣದ ಚರ್ಮ, ಸಣ್ಣ ಕಣ್ಣುಗಳು, ವಿಕೃತ ರೂಪು ನೋಡಲಾರದೆ ಒಂದು ಕ್ಷಣ ಕಣ್ಣು ಮುಚ್ಚಿದೆ. ಅವರು ತಮ್ಮತಮ್ಮೊಳಗೆ ಏನೇನೋ ಚಿಮು ಚಿಮು ಮಾತಾಡಿಕೊಳ್ಳುತ್ತ ಬಳಿಗೆ ಬಂದಾಗ ಹೆಣ್ಣು ಪಿಶಾಚಿಗಳು ಬಳಿಸಾರಿ ಬಂದಂತಾಯಿತು. ಕೊರಳೆತ್ತಿ

ಕುತೂಹಲ ತೃಷಿತ ದೃಷ್ಟಿಯಿಂದ ನೋಡಿದೆ. ಅರ್ಧ ಶತಮಾನವನ್ನು ದಾಟಿದ ಗೊಜ್ಜು ಮೈ; ಉದ್ದಂಡ ದೇಹ; ಜ್ಞಾನ ವಲಯವನ್ನು ಹೊಕ್ಕು ನೋಡದ ಹೊರತು ಇನ್ನೇನೂ ಹೇಳುವಂತಿಲ್ಲ....

ಶಿರ ಬಾಗಿದೆ, ವಿನಯ ಶೀಲ ಭೃತ್ಯನಂತೆ.

ಮೂವರೂ ಪರಸ್ಪರ ಮಾತಾಡಿಕೊಳ್ಳುತ್ತ ನಕ್ಕರು; ಒಮ್ಮೆಲೇ ಶಂಖ ಜಾಗಟೆಗಳನ್ನು ಬಾರಿಸಿದಂತಾಯಿತು. ಬಹುಶಃ ನನ್ನ ಪ್ರಾಣಾಂತಕ ಸ್ಥಿತಿ ಅವರಿಗೆ ಹಾಸ್ಯಾಸ್ಪದವಾಗಿ ತೋರಿತೇನೋ....ನಾನು ನಸು ಬೆರಗಾಗಿ ಬಾಷ್ಪ ಲಿಪ್ತ ನಯನಗಳಿಂದ ಅವರನ್ನು ನಿಟ್ಟಿಸಿದೆ. ನನ್ನನ್ನು ಎದ್ದು ನಿಂತುಕೊಳ್ಳಲು ಹರಕು ಹಿಂದಿಯಲ್ಲಿ ಆದೇಶ ನೀಡಿದರು. ನಾನು ಏಳಲು ಪ್ರಯತ್ನಿಸುತಿದ್ದಂತೆಯೇ ಮೂವರೂ ನನ್ನನ್ನು ಹಿಡಿದು ಎತ್ತಿ ನಿಲ್ಲಿಸಿ, ನನ್ನ ಬಟ್ಟೆಗಳನ್ನು ಒಂದೊಂದಾಗಿ ಕಳಚಿದರು. ನಿಶ್ಶಕ್ತಿಯಿಂದ ಮೈ ಥರಥರ ನಡುಗುತಿತ್ತು. ಮೈ ಕೈ ಅಲುಗಿ ಗಾಯಗಾಯಗಳೂ ಪ್ರಾಣಾಂತಕವಾಗಿ ನೋಯತೊಡಗಿದುವು. ನಾನು ಚೀರಿದರೂ ನನ್ನ 'ಬೇಕು-ಬೇಡ'ಗಳನ್ನು ಅಲಕ್ಷಿಸಿ ಗಾಯಗಳಿಗೆ ಅಂಟಿಕೊಂಡಿದ್ದ ಬನಿಯನ್ ನಿಕ್ಕರುಗಳನ್ನು ಕಿತ್ತು ತೆಗೆದರು. ನಾನು ''ಬೇಡ....ಬೇಡ!'' ಎನ್ನುತ್ತಿದ್ದಂತೆಯೇ ದಿಗಂಬರನಾದೆ. ಗಾಯಗಳಿಗೆ ಔಷಧಿ ಬಳಿದು ಕಟ್ಟು ಬಿಗಿದರು. ತೊಡೆಯಲ್ಲಿ 'ಚರೆ' ಇಂದಾದ ಗಾಯಕ್ಕೂ ಇದೇ ಮದ್ದು ಬಳಿದರು. ಅವರು ನನ್ನ ಸೇವೆಯನ್ನೇ ಮಾಡುತಿದ್ದರೂ ಸಹ ಅಸಹನೀಯವಾದ ದುರ್ಗಂಧ ವಿಕೃತರೂಪು ಸುತ್ತ ಮುತ್ತ ಸುಳಿದಾಡುತಿದ್ದಂತೆ ಏನೋ ಒಂದು ರೀತಿಯಲ್ಲಿ ಜುಗುಪ್ಸೆಯೇ ಮೂಡುತಿತ್ತು. ಎಲ್ಲವೂ ಮುಗಿಯುವವರೆಗೆ ನಾನು ಸುಮ್ಮನಿದ್ದು ಅನಂತರ ಕೇಳಿದೆ,

''ಇಲ್ಲಿ ಇನ್ನಾರಾದರೂ ಭಾರತೀಯ ಖೈದಿಗಳಿರುವರೇ?''

''ಅದೆಲ್ಲಾ ನಿನಗೇಕೆ?'' ಹಿರಿಯಾಕೆ ಗದ್ದರಿಸಿದಳು. ವಿಕೃತ ಧ್ವನಿ ಕರ್ಣಪಟಲ ಹರಿಯುವಂತೆ ಹೊಮ್ಮಿತು.

''......''

ಇನ್ನಿಬ್ಬರು ಕುಲುಕುಲು ನಕ್ಕರು.

ಕೈ ಕಾಲುಗಳನ್ನು ಅಲುಗಿಸುವಾಗ ಜೀವ ಚಿಮ್ಮುವಂತಹ ನೋವು. ಚೀರುತ್ತಲೆ ಬಟ್ಟೆ ತೊಟ್ಟುಕೊಂಡೆ. ಅವರು ಅದುಮಿ ಹಿಡಿದು ಬಟ್ಟೆ ತೊಡಿಸಿದ ರೀತಿ ಯಾಂತ್ರಿಕವಾಗಿತ್ತು. ಜೀವದಯೆ ಎಂಬುದು ಅವರಿಗೆ ಇದ್ದಂತೆಯೇ ತೋರಲಿಲ್ಲ. ನಾನು ಚೀರಿಕೊಂಡದ್ದು ಅವರಿಗೆ ಸಂಗೀತ ಹಾಡಿದಷ್ಟು ಹಿತ. ದೊಡ್ಡ ದನಿಯಲ್ಲಿ

ಮಾತಾಡುತ್ತ ನಕ್ಕರು. ಅವರ ಮಾತುಕತೆ ಕಿಂಚಿತ್ತೂ ಅರ್ಥವಾಗಲಿಲ್ಲ. ನಿಶ್ಶಕ್ತಿಯಿಂದ ಶರೀರ ತೂರಾಡುತಿತ್ತು. ಗಾಯ ಗಾಯಗಳು ಬಹಳವಾಗಿ ನೋಯುತಿದ್ದುದರಿಂದ ನಾನಾಗಿ ಕೈಕಾಲೂರಿ ಮಲಗಿಕೊಳ್ಳುವಂತಿರಲಿಲ್ಲ. ಅವರು ನನ್ನನ್ನು ಮಲಗಿಸಲು ಸಹಾಯ ಮಾಡಿದರು ಎನ್ನುವುದಕ್ಕಿಂತ ಹಿಂದಕ್ಕೆ ತಳ್ಳಿದರು ಎನ್ನುವುದು ಸೂಕ್ತ. ಆಗ ಮತ್ತೊಮ್ಮೆ ಚೀರಿದೆ. ನನ್ನ ಕುಟುಂಬಿಗರೆಲ್ಲ ಸ್ಮೃತಿ ಪಥದಲ್ಲಿ ಸುಳಿದಳಿದರು. ಅಂತಿಮವಾಗಿ ಎಂಬಂತೆ ಭಗವಂತನನ್ನು ಮನಃಪೂರ್ವಕವಾಗಿ ಸ್ಮರಿಸಿಕೊಂಡೆ. ಆ ನರಕ ಯಾತನೆಯಲ್ಲಿ ಅಧರೋಷ್ಟಗಳು ಒಣಗಿದುವು. ಬಾಯಾರಿ-ಗಂಟಲಾರಿ ಉಸಿರು ಸಿಕ್ಕಿದಂತಾಯಿತು. ಕೇಳಲಾರದೆ ಅತಿ ದೈನ್ಯತೆಯಿಂದ ಕೇಳಿದೆ ''ಏನಾದರೂ ಕುಡಿಯಲು ಕೊಡಿ....ಬಹಳ ಬಾಯಾರಿಕೆ.''

ಒಬ್ಬಾಕೆ ನೀರಿನ ಡಬ್ಬಿಯನ್ನು ಎತ್ತಿ ಬಾಯಿಗೆ ಸುರಿದಳು. ಸ್ವಲ್ಪ ಸ್ವಲ್ಪ ಕುಡಿಸುವುದು ತಿಳಿಯಲಿಲ್ಲವೋ ಅಥವಾ ಬೇಕಾಗಿಯೇ ಸುರಿದಳೋ ಊಹಿಸುವುದು ಕಷ್ಟ. ನೀರು ಬಾಯಿ ತುಂಬಿ ಸುತ್ತಮುತ್ತ ಚೆಲ್ಲಿತು. ನಾನು ಏನೂ ಹೇಳಲಾರದೆ ಸುಮ್ಮನಾದೆ.

''ಈಗ ಹೇಳು....ನೀನು ಯಾರು?'' ಒಬ್ಬಾಕೆ ಅಧಿಕಾರವಾಣಿಯಿಂದ ಕೇಳಿದಳು.

ನನಗೆ ಉತ್ತರಿಸುವ ತ್ರಾಣವಿರಲಿಲ್ಲ. ಹಸಿವು ಒಡಲ ಸಂಕಟವನ್ನು ಉಲ್ಬಣಗೊಳಿಸಿತ್ತು. ಮೊದಲು ಒಂದಿಷ್ಟು ಗಂಜಿಯೂಟವಾದರೂ ಸಿಕ್ಕಿದ್ದರೆ ಎನ್ನಿಸಿತು.

ಅದೇ ದನಿ ಪುನಃ ಕರ್ಕಶವಾಗಿ ಮೊಳಗಿತು,

''ಹೇಳು....!''

ಎರಡನೆಯವಳು ಹುಬ್ಬು ಗಂಟಿಕ್ಕಿ ಉಚ್ಚಸ್ವರದಲ್ಲಿ ಅಪ್ಪಣೆಮಾಡಿದಳು,

''ನಾವು ಕೇಳಿದ ಪ್ರಶ್ನೆಗಲಿಗೆ ಸರಿಯಾದ ಉತ್ತರ ಹೇಳದಿದ್ದರೆ ನಿನಗಿಲ್ಲಿ ಉಳಿಗಾಲವಿಲ್ಲ....ತಿಳಿದಿರು! ಜೋಕೆ!'' ಅಧಿಕಾರೋಕ್ತಿ ನೇರವಾಗಿ ಪ್ರಾಣ ಕುಂಡಲಿನಿಗೆ ತಾಗಿತು.

ನನಗೆ ಸಿಟ್ಟು ನೆತ್ತಿಗೇರಿತು. ನನ್ನಲ್ಲಿ ಒಂದಿಷ್ಟು ತ್ರಾಣವಾದರೂ ಇದ್ದಿದ್ದರೆ ಏನಾದರೂ ಮಾಡಬಹುದಾಗಿತ್ತು. ಆದರೆ......ಅಶಕ್ತ ಜೀವವಾಹಿನಿ ನಸು ಕಂಪನಕ್ಕೊಳಗಾಯಿತು.

ಮೊದಲನೆಯಾಕೆ ಪುನಃ ಕೇಳಿದಳು,

"ನೀನು ಯಾರು?"

"ನಾನು ಭಾರತೀಯ."

"ನಿನ್ನ ಹೆಸರೇನು?"

"ಬಂದಿ ಯಾ ಖೈದಿ!"

"ನಿನ್ನ ಉದ್ಯೋಗವೇನು!"

"ದೇಶ ರಕ್ಷಣೆ."

"ನಿನ್ನ ಉದ್ದೇಶವೇನು?"

"ಸ್ವಾತಂತ್ರ್ಯ."

"ನೀನು ಸರಿಯಾಗಿ ಉತ್ತರ ಕೊಟ್ಟೆಯಾದರೆ, ನಿನ್ನ ಹೆಸರು ವಿಳಾಸಗಳನ್ನು ತಿಳಿಸಿದೆಯಾದರೆ ಭಾರತ ಸರಕಾರದೊಂದಿಗೆ ನಿನ್ನ ಬಗ್ಗೆ ವ್ಯವಹರಿಸಲಾಗುತ್ತದೆ."

ಅಂತರಂಗ ಚೀರಿತು "....ಕೃತ್ರಿಮ....ಮೋಸ....!"

ತಲೆಯಲ್ಲಿ ಹಲವಾರು ಭಾವನೆಗಳು ಮೊಳೆತು ಉದ್ದಂಡವಾಗಿ ನಿಂತುವು. ಒಡನೆ ನನ್ನ ಆತ್ಮಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಅವು ಹೊರ ಹೊಮ್ಮದಂತೆ ಅದುಮಿ ಹಿಡಿದೆ. ಹೃದಯ ಬೇಗುದಿಯಲ್ಲಿ ಬೇಯುತಿತ್ತು. ಗಾಯಗಳು ಸುಟ್ಟ ಗಾಯಗಳಂತೆ ಉರಿಯುತಿದ್ದುವು....ನನ್ನೊಳಗೆ ನರಳಿದೆ....ಅವರ್ಣನೀಯ ನೋವಿನಿಂದ ಆರ್ತ ದನಿಯಲ್ಲಿ ನರಳಿದೆ.

"ನೀನು ಗಡಿದಾಟಿ ಅತಿಕ್ರಮಣ ಮಾಡಿದ್ದಿ!"

"ನಾನಲ್ಲ, ನಿಮ್ಮವರು!"

"ನಮ್ಮವರೋ ನಿಮ್ಮವರೋ?"

"ನಿಮ್ಮವರೇ!"

ಅವರು ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತ ಹೊರಟರು.

ಭಾರತ ಸ್ತ್ರೀತ್ವಕ್ಕೂ ಚೀನೀ ಸ್ತ್ರೀತ್ವಕ್ಕೂ ಇರಬಹುದಾದ ಅಜಗಜಾಂತರವನ್ನು ಮೆಲುಕು ಹಾಕಿತು-ಮನಸ್ಸು. ಆದರೆ ಅದೆಲ್ಲಾ ಒಂದೆರಡು ನಿಮಿಷಗಳೋ ಏನೋ....ಹಸಿವು ಬಾಯಾರಿಕೆ ನರಕ ಯಾತನೆಗಳ ತಾನವಿತಾನದಲ್ಲಿ ಪ್ರಾಣ ವಾಯು ತತ್ತರಿಸುತ್ತಿರುವಾಗ ಯೋಚನೆಗೆ ಅವಕಾಶವಾದರೂ ಎಲ್ಲಿ? ನಿದ್ದೆಯಾದರೂ ಬಂದಿದ್ದರೆ ಎಂದು ಕಣ್ಣುಗಳನ್ನು ಮುಚ್ಚಿಕೊಂಡೆ. ಸ್ವಲ್ಪ ಹೊತ್ತಿನ ನಂತರ ಹೊರಗಡೆ ಯಾರೋ ಬರುತ್ತಿರುವ ಪಾದ ಸಪ್ಪಳ ಕೇಳಿಸಿ ಕಣ್ತೆರೆದು ಬಾಗಿಲಕಡೆ ನಿಟ್ಟಿಸಿದೆ. ಮಂಜು ಮಂಜಾದ ಕಣ್ಣುಗಳಿಗೆ ಒಳ ಬಂದವರು ಹೆಣ್ಣೋ ಗಂಡೋ ಎಂಬುದನ್ನು

ಊಹಿಸುವುದು ಕಷ್ಟ....ಮೇಲಾಗಿ ಅವರ ಉಡುಪೂ ಸಹ ಅಂತಾದ್ದೆ. ಕೈಯಲ್ಲಿ ಮಣ್ಣಿನ ಬಟ್ಟಲ ಸಹಿತ ಒಳಬಂದ ವ್ಯಕ್ತಿ ಹೆಂಗಸೆಂಬುದನ್ನು ಐದಾರು ನಿಮಿಷಗಳ ನಂತರ ಗ್ರಹಿಸಿದೆ, ಪ್ರಾಯಸ್ಥೆಯಾದರೂ ಅನಾರೋಗ್ಯದಿಂದ ಮುಖಮಂಡಲ ಸುಕ್ಕುಗಟ್ಟಿ ವೃದ್ಧೆಯಂತೆ ತೋರುತಿದ್ದ ಅವಳ ಸ್ಥಿತಿಗತಿ ಅತ್ಯಂತ ಕರುಣಾಜನಕವಾಗಿತ್ತು. ಊಟದ ತಟ್ಟೆಯನ್ನು ಬಳಿಯಲ್ಲಿಟ್ಟು ಕೇಳಿದಳು,

''ಸ್ವಲ್ಪ ಹೊತ್ತು ಎದ್ದು ಕೂಡುತ್ತೀಯೇನು?''

''ದಯವಿಟ್ಟು ಸ್ವಲ್ಪ ಸಹಾಯ ಮಾಡು, ನಾನಾಗಿ ಏಳಲಾರೆ.''

ಹಾಗೆಂದರೂ ಎಲ್ಲಿ ಮೈ ಕೈಗಳಿಗೆ ಹಿಂದಿನವರಂತೆ ನೋವು ಮಾಡಿಬಿಡುತ್ತಾಳೋ ಎಂಬ ಭಯದಿಂದ ಕ್ಷೀಣಿತ ದನಿಯಲ್ಲಿ ಅತೀ ದೈನ್ಯತೆಯಿಂದ ಮತ್ತೆ ಕೇಳಿಕೊಂಡೆ. ''ಮೈಯೆಲ್ಲ ಗಾಯ; ಮೆಲ್ಲಗೆ ಎತ್ತು ತಾಯಿ!''

ಆ ಕ್ಷಣ ಅವಳ ಮನಸ್ಸು ಮಂಜಿನಂತೆ ಕರಗಿತೇನೋ, ಸಾಂತ್ವನ ನೀಡುವ ದನಿಯಲ್ಲಿ-

''ಇಲ್ಲಪ್ಪಾ, ನಿಧಾನವಾಗಿಯೇ ಎತ್ತುವೆ.''

ಅವಳು ಹಿಡಿದೆತ್ತಲು ಮುಂದಾದರೂ ಶಕ್ತಿ ಸಾಲಲಿಲ್ಲ. ಕೈಯ್ಯೂರಿ ಅವಳ ಸಹಾಯದಿಂದ ಎದ್ದು ಕುಳಿತೆ. ನೋಟ ಗಂಜಿಯ ಕಡೆ ಹೊರಳಿತು. ಕೆಂಪು ನುಚ್ಚಿನ ಗಂಜಿ ಸೊಪ್ಪಿನ ವ್ಯಂಜನದಿಂದ ಕೂಡಿ ಪರಮಾನ್ನದಂತೆ ತೋರಿತು. ಅವಳು ತಟ್ಟೆಯನ್ನೂ ಒಂದು ಡಬ್ಬಿ ನೀರನ್ನೂ ಮುಂದಿಟ್ಟಳು. ನುಚ್ಚು ಅರಬರೆ ಬೆಂದಿತ್ತು. ಬೇರೆ ದಿನಗಳಲ್ಲಾಗಿದ್ದರೆ ಅದನ್ನು ನಾಯಿಗೂ ಬಳಸುತ್ತಿರಲಿಲ್ಲ. ಹಸಿವಿನ ಬವಣೆಗಾಗಿ, ಪ್ರಾಣ ರಕ್ಷಣಾರ್ಥವಾಗಿ ಬಳಿದು ಉಂಡೆ. ಹೊಟ್ಟೆ ತುಂಬಿ ಹಸಿವು ಅಡಗಿತು. ಡಬ್ಬಿಯ ನೀರನ್ನು ಮುಂದಿಟ್ಟು ಖಾಲಿ ತಟ್ಟೆಯನ್ನು ತೆಗೆದುಕೊಂಡಳು ಅವಳು. ನಾನು ನೀರನ್ನು ಕುಡಿದೆ. ಅದು ಶುದ್ಧವಾದ ನೀರಾಗಿರಲಿಲ್ಲ. ಆದರೂ ಆ ಮುಹೂರ್ತದಲ್ಲಿ ರಸಾಮೃತವನ್ನು ಹೀರಿದಂತಾಯಿತು!

ಅವಳು ಖಾಲಿ ಡಬ್ಬಿಯನ್ನು ಈಸಿಕೊಂಡು ಕೇಳಿದಳು,

''ಮಲಗಿಸಲೇ?''

ಅವಳ ಶುದ್ಧವಾದ ಹಿಂದಿ ಭಾಷೆ ನನಗೆ ಸ್ವಲ್ಪ ಆಶ್ಚರ್ಯವನ್ನು ಮೂಡಿಸಿತು. ಆಶ್ಚರ್ಯದಿಂದ ಪ್ರಶ್ನಿಸಿದೆ ''ನಿನಗೆ ಹಿಂದಿ ಚೆನ್ನಾಗಿ ಬರುತ್ತದೆ. ಎಲ್ಲಿ, ಹೇಗೆ ಕಲಿತೆ?''

''ನಾನು ಬಹಳ ಕಾಲದಿಂದ ಭಾರತ ಯುದ್ಧ ಖೈದಿಗಳ ಸೇವೆಯಲ್ಲಿರುವೆ.''

"ಹಾಗಾದರೆ....ಬಹಳ ಮಂದಿ ಭಾರತೀಯರು ನಿನಗೆ ಗೊತ್ತು?"

"ಹೌದು....!"

"ಅವರ ಬಗೆಗೆ ನಿನಗೆ ಹೇಗೆನಿಸುತ್ತದೆ?"

"ತುಂಬ ಗೌರವವಿದೆ. ಬಹಳ ಒಳ್ಳೆಯ ಮಂದಿ." ಎಂದಳು, ಧ್ವನಿಯಲ್ಲಿ ಅಪೂರ್ವ ಅನುಕಂಪ ಸ್ಫುರಿಸಿತು.

ತುಟಿಗಳಲ್ಲಿ ಮಂದಹಾಸವನ್ನು ಬೀರಿದಳು. ಆದರೆ ಅದರಲ್ಲಿ ಆನಂದದ ಸಹಜತೆಗಿಂತ ಸಂಕಟದ ಶ್ರೋತವೇ ಹರಿದು ಬಂದಂತಿತ್ತು. ಕಣ್ಣುಗಳು ಪರಿಮ್ಲಾನವಾಗಿದ್ದುವು. ಮುಖಭಾವ ಸಪ್ಪೆಯಾಗಿ ನೋವಿನ ಆಗರವಾಗಿತ್ತು. ಅವಳ ಚಲನವಲನ ಮಾತುಕತೆಗಳಿಂದ ಆ ಮುದುಕಿಯರಂತೆ ಇವಳು ಉದ್ಧಟತನದ ಹೆಣ್ಣಲ್ಲ ಎನ್ನಿಸಿ ಅವಳಿಂದ ಶಿವಾಜಿಯ ವಿಚಾರವನ್ನು ತಿಳಿದುಕೊಳ್ಳಬಹುದೆಂಬ ಯೋಚನೆ ಮೂಡಿತು. ಶರೀರ ಆಯಾಸಗೊಂಡಿದ್ದುದರಿಂದ ಹೆಚ್ಚು ಹೊತ್ತು ಕೂಡಲಾಗಲಿಲ್ಲ. ಸಣ್ಣಗೆ ತಲೆ ಸುತ್ತುತ್ತಿರುವಂತೆ ಭಾಸವಾಯಿತು.

"ನಾನು ಹೆಚ್ಚು ಹೊತ್ತು ಕೂಡಲಾರೆ. ಒಂದಿಷ್ಟು ಸಹಾಯ ಮಾಡಿದರೆ ಈಗಲೇ ಮಲಗಿಕೊಳ್ಳುವೆ." ಎಂದೆ, ದನಿಯಲ್ಲಿ ನೋವಿತ್ತು; ನಯವಿತ್ತು; ಬೇಡಿಕೆಯಿತ್ತು.

ಅವಳು ತಲೆ ದೆಶೆಗೆ ಬಂದು ಎರಡೂ ಭುಜಗಳಿಗೆ ಕೈಯ್ಯಾಸರೆ ನೀಡಿದಳು. ನಾನು ನಿಧಾನವಾಗಿ ಹಿಂದಕ್ಕೆ ಒರಗಿದೆ. ಮಲಗಲು ಬರಿಯ ಚಾಪೆಯನ್ನು ಬಿಚ್ಚಲಾಗಿತ್ತು. ಹೊದೆಯಲು ಒಂದು ಒರಟು ಕಂಬಳಿ ವಿನಾ ಇನ್ನೇನೂ ಇರಲಿಲ್ಲ. ಒರಟು ನೆಲ ಗಾಯಗಳಿಗೆ ಒತ್ತುತಿದ್ದುದರಿಂದ ಮಲಗುವುದೂ ಸಹ ಬೇಡವಾಗಿತ್ತು. ಮೇಲಾಗಿ ಇಂದು ಜ್ವರ ಬರುವ ಸೂಚನೆ ತೋರಿ ಮೈ ಕೈಗಳ ಅತೀವ ನೋವು ನನ್ನ ಮೇಲೆ ಧಾಳಿ ನಡೆಸುತಿತ್ತು. ನರನಾಡಿಗಳಲ್ಲಿ ಕಿತ್ತು ಬರುವಂತಹ ಸೆಳೆತ-ಚಳಿ.

ನನ್ನ ಸ್ಥಿತಿಗತಿಯನ್ನು ಗಮನಿಸಿ ಜ್ವರಕ್ಕೆ ಔಷಧ ತರುವುದಾಗಿ ಹೇಳಿ ಹೊಸ್ತಿಲು ದಾಟಿದಳು. ಆತುರವಾಗಿ ಅವಳು ನಿರ್ಗಮಿಸಿದುದನ್ನು ಹಿಂದಿಲಿಂದ ನಿಟ್ಟಿಸಿದೆ. ಕಣ್ಣುಗಳಲ್ಲಿ ಬಾಷ್ಪಬಿಂದುಗಳು ಅನಿರೀಕ್ಷಿತವಾಗಿ ಮೂಡಿದುವು. ಅರ್ಧ ಗಂಟೆಯೊಳಗಾಗಿ ಅವಳು ಶೀಶೆಯ ಸಹಿತ ಒಳಗಡೆ ಪದಾರ್ಪಣೆ ಮಾಡಿದಳು. ಕೆಂಪು ದ್ರಾವಕ ಶೀಶೆಯಲ್ಲಿತ್ತು. ಅದನ್ನು ಚಿಕ್ಕ ಡಬ್ಬಿಗೆ ಬೊಗ್ಗಿಸಿ,

"ಬಾಯಿ ಕಳಿ. ಇದು ಒಳ್ಳೆಯ ಮದ್ದು."

ಅದು ದ್ರಾವಕವೇ ಇರಲಿ, ಇನ್ನೇನೇ ಇರಲಿ ಈ ದೈತ್ಯರ ನಾಡಿನಲ್ಲಿ ಅಷ್ಟು ಸ್ನೇಹ ಸಹಜವಾಗಿ ನೀಡುತ್ತಿರುವುದು ಒಂದು ಪುಣ್ಯವಿಶೇಷವೇ ಆಗಿತ್ತು. ನಾನು ವಿನೀತನಾಗಿ ಬಾಯ್ದೆರೆದೆ. ಅವಳು ಬಾಯಿಗೆ ಸುರಿದಳು. ಅದು ಕಹಿ ಕಹಿಯಾಗಿದ್ದರೂ ಮನಸ್ಸಿಗೆ ಹಿತವಾಯಿತು. ಅವಳು ಔಷಧಿಯ ಶೀಶೆಯನ್ನು ಬದಿಯಲ್ಲಿಟ್ಟು ''ಮಧ್ಯಾಹ್ನ ಇನ್ನೊಂದಾವರ್ತಿ ಬಂದು ಕುಡಿಸುವೆ. ಈಗ ಮಲಗಿ ನಿದ್ದೆ ಮಾಡು.'' ಎಂದಳು.

''ದಯವಿಟ್ಟು ಅಷ್ಟು ಉಪಕಾರ ಮಾಡು.''

ಅವಳು ತಟ್ಟೆಯೊಡನೆ ಹಿಂದಿರುಗುವ ಮುನ್ನ ತುಟಿಗಳಲ್ಲಿ ಸರಳ ಸ್ನಿಗ್ಧಹಾಸವನ್ನು ಹರಿಸಿದರೂ ಅದು ಮರುಕ್ಷಣದಲ್ಲಿ ಅಲ್ಲಿಂದಲ್ಲೆ ಲಯ ಹೊಂದಿತು. ನನಗೆ ಏನೆಂಬುದು ಅರ್ಥವಾಗಲಿಲ್ಲ. ಅವಳ ಮುಖವನ್ನು ಮಿಕಿ ಮಿಕಿ ನೋಡಿದೆ. ಅವಳು ಏನಾದರೂ ಅಪಾರ್ಥ ಕಲ್ಪಿಸಬಹುದೆಂಬ ಸಂಕೋಚವು ಆ ಸಮಯದಲ್ಲಿ ಮೂಡಲಿಲ್ಲ. ಅವಳ ಮುಖಮಂಡಲ ನಸುಗೆಂಪು ತಳೆಯಿತೆಂದು ತೋರುತ್ತದೆ. ಆ ಮಂದ ಪ್ರಕಾಶದಲ್ಲಿ ಸ್ಪಷ್ಟವಾಗಿ ತಿಳಿಯುವಂತಿರಲಿಲ್ಲ. ಅವಳು ತ್ವರಿತಗತಿಯಲ್ಲಿ ಅಲ್ಲಿಂದ ನಿರ್ಗಮಿಸಿದಳು.

ಮೈಯಲ್ಲಿ ಮೆಲ್ಲಮೆಲ್ಲನೆ ಜ್ವರದ ಕಾವೇರುತಿದ್ದುದು ಗಮನಕ್ಕೆ ಬಂದಿತು. ಅತೀವ ಆಯಾಸದಿಂದ ಕಣ್ಮುಚ್ಚಿದೆ......ಕಣ್ಣುಗಳ ಮೇಲೆ ನಿದ್ದೆಯ ಮಂಪರ ಕವಿಯ ಹತ್ತಿತು.

....ಹಸುರು ಬನದ ಘನತಡಿಯಲ್ಲಿ ಸಾಗುತಿತ್ತು ಕಾಲು ಹಾದಿ.

....ರುದ್ರ ಮೌನವನ್ನೂ ಮೌನಗೊಳಿಸುವಂತಹ ಮಧುರ ಶೀತಲ ವಾತಾವರಣ.

ನಾನು ಶಿವಾಜಿಯ ಕೈ ಹಿಡಿದು ನಡೆಯುತ್ತ ಕೇಳಿದೆ.

''ಈ ಹಾದಿ ಎಲ್ಲಿಗೆ ಹರಿಯುತ್ತದೆ ಎಂಬುದು ನಮಗೆ ತಿಳಿಯದು. ಅದು ನಮ್ಮನ್ನು ಹೊರಕ್ಕೆ ಸಾಗಿಸುವ ಬದಲು ಒಳಕ್ಕೆ ಸಾಗಿಸಿದರೆ....?''

''ಅಂದರೆ......?''

''ಚೀನೀವಲಯದಿಂದ ನಾವು ಹೊರಕ್ಕೆ ಹೋಗಬೇಕಷ್ಟೆ?''

''ಹೌದಪ್ಪಾ!''

''ಅದಕ್ಕೆ ಕೇಳಿದ್ದು. ನಾವು ದಾರಿ ತಪ್ಪಿದರೆ ಕಷ್ಟ.''

''ನೋಡು ಮುಂದೆ!''

ಅವನು ಹಾದಿಯನೇರಕ್ಕೆ ಬೆರಳನ್ನು ತೋರಿದ. ನನ್ನ ನಿಶ್ಚಲ ನೋಟ ನಿಟ್ಟಿಸಿತು. ದೂರದಲ್ಲಿ ಚೀನೀ ವ್ಯಕ್ತಿಯೊಂದು ದೃಗ್ಗೋಚರಿಸಿತು. ನಾನು ಅತ್ಯಂತ ಆಶ್ಚರ್ಯ ಚಕಿತನಾಗಿ ಅರಳುಗಣ್ಣುಗಳಿಂದ ನಿಟ್ಟಿಸುತ್ತ ''ಯಾರದು?'' ಎಂದೆ.

''ಬಾಬಿ....!''

ನನಗೆ ಅರ್ಥವೇ ಆಗಲಿಲ್ಲ. ಇನ್ನಷ್ಟು ಹೊತ್ತಿನೊಳಗಾಗಿ ವ್ಯಕ್ತಿಯನ್ನು ಸಮೀಪಿಸಿದೆವು. ದೃಷ್ಟಿಸಿ ನೋಡಿದರೆ ನನಗೆ ಆದರದಿಂದ ಗಂಜಿ ನೀಡಿದ ಚೈನೀ ಸ್ತ್ರೀ!''

....ತುಟಿಗಳಲ್ಲಿ ಅದೇ ಸರಳ ಸ್ನಿಗ್ಧ ಹಾಸ!

....ಅದೇ ಅಪೂರ್ವ ಅನುಕಂಪ!

ನಾನು ಅಲ್ಲಿಂದಲ್ಲೇ ಮಂತ್ರಮುಗ್ಧನಂತಾದೆ.

ಪಟ.ಪಟ.ಪಟ.ಪಟ......

ಹೆಜ್ಜೆಗಳ ಪಟತ್ಕಾರ ಅತ್ಯಂತ ಸನಿಹದಲ್ಲಿ ಕೇಳಿಸುತ್ತಲೂ ಕಣ್ತೆರೆದೆ. ನೋಡೆ, ಅದೇ ಆ ಸ್ತ್ರೀ! ಕೈಯಲ್ಲಿ ದ್ರಾವಕ ಶೀಶೆ. ತುಟಿಗಳಲ್ಲಿ ಅದೇ ಅಮಾಯಕ ನಗು.

''ಬಾಬಿ....!''

''ಬಾಬಿ?!'' ಎಂದಳು ಕಣ್ಣರಳಿಸಿ. ಎದೆಯ ಸಂತಸವೆಲ್ಲಾ ಮುಖದಲ್ಲಿ ಪ್ರಕಟವಾದಾಗ ಸಂಭ್ರಮದ ಹೊನಲು ಹರಿದಂತಾಯಿತು- ''ಎಂತಹ ಒಳ್ಳೆಯ ಪ್ರಯೋಗ? ನಿಜವಾಗಿಯೂ ಇದು ನಿಮ್ಮ ಅದ್ಭುತ ಸೌಜನ್ಯವನ್ನು ಪ್ರದರ್ಶಿಸುತ್ತದೆ!'' ನುಡಿ ಹೊರಬಿದ್ದಾಗ ಮನಃಪ್ರಾಣಗಳು ಸಾನಂದದಿಂದ ಉಕ್ಕೇರಿದುವು. ತುಟಿಗಲ್ಲಿ ಮಂದಹಾಸ ಮಿನುಗಿ ಮಾಯವಾಯಿತು.

ನಾನು ಹಾಸಿಗೆಯಿಂದಲೇ ಅವಳನ್ನು ನೋಡುತ್ತ ಕನಸಿನ ಚಿತ್ರವನ್ನು ನೆನೆಸಿಕೊಂಡು ಹೇಳಿದೆ,

''ನಮ್ಮಲ್ಲಿ ಸೋದರೀಭಾವವನ್ನು ವ್ಯಕ್ತಪಡಿಸುವಾಗ ಸಾಮಾನ್ಯವಾಗಿ ಬಾಬಿ ಎಂತಲೂ ಮಾತೃಭಾವವನ್ನು ವ್ಯಕ್ತಪಡಿಸುವಾಗ 'ದೀದೀ' ಎಂತಲೂ ಕರೆಯುತ್ತೇವೆ. ಇದರಲ್ಲಿ ವಿಶೇಷವೇನೂ ಇಲ್ಲ.''

''ಅದೇ ಆಗಲೇ ಹೇಳಿದೆನಲ್ಲಾ ನಿಮ್ಮ ಸೌಜನ್ಯ ಅದ್ಭುತವಾದುದು!''

ನನಗೆ ನಿಜವಾಗಿಯೂ 'ಪಾಪ' ಎನ್ನಿಸಿತು.

''ನಮ್ಮಲ್ಲಿ ನಾವು ಇನ್ನೊಂದು ಜನ್ಮಕ್ಕೂ ಇಂತಹ ಗೌರವಕ್ಕೆ ಪಾತ್ರರಾಗುವುದಿಲ್ಲ. ನಾವು ಪಡೆದುಕೊಂಡು ಬಂದುದೇ ಇಷ್ಟು.'' ಮಾತು ಮುಗಿಯುವಷ್ಟರಲ್ಲಿ ಮುಖ

ಬಾಡಿ ಹೋಯಿತು. ಒಂದೇ ಘಳಿಗೆಯಲ್ಲಿ ಏರಿಳಿತವೆರಡನ್ನೂ ಕಂಡ ನನಗೆ ಸ್ವಲ್ಪ ಹೊತ್ತು ಏನು ಹೇಳಬೇಕೋ ಹೊಳೆಯಲಿಲ್ಲ.

ಅವಳು ಮರುಘಳಿಗೆಯಲ್ಲಿ ತನ್ನ ಕಾರ್ಯಭಾರವನ್ನು ಗಂಭೀರವಾಗಿ ನಿರ್ವಹಿಸುತ್ತ ಕೇಳಿದಳು,

''ಹೇಗಿದ್ದಿ?''

''ಜ್ವರವಿದೆ.''

ಅವಳು ಅನುನಯದಿಂದ ಹಣೆ ಮೈ ಕೈಗಳನ್ನು ಮುಟ್ಟಿನೋಡಿ,

''ಈಗ ಇನ್ನಿಷ್ಟು ಔಷಧ ಕುಡಿ. ಗಾಯಗಳ ನಂಜು ಹರಿದರೆ ಜ್ವರ ಬಿಡುತ್ತದೆ. ಈ ಔಷಧ ನಂಜುಹಾರಿ.''

''ಆಗಬಹುದು. ನೀನು ಹೇಗೆ ಹೇಳಿದರೆ ಹಾಗೆ.''

ಅವಳು ಮುಗುಳು ನಕ್ಕು ಔಷಧಿಯನ್ನು ಬೊಗ್ಗಿಸಿ ಬಾಯಿಗೆ ಸುರಿದಳು. ಕುಡಿದನಂತರ ''ನನಗೆ ತುಂಬ ಬಾಯಾರಿಕೆ' ಎಂದೆ. ಅವಳು ನೀರನ್ನು ಡಬ್ಬಿಗೆ ಸುರುವಿ ಬಾಯಿಗೆ ಹಿಡಿದಳು. ಹೊಟ್ಟೆ ತುಂಬುವಷ್ಟು ಕುಡಿದನಂತರ ಅತ್ಯಂತ ವಿನಯಪೂರ್ವಕವಾಗಿ ಕೇಳಿದೆ,

''ನಿನ್ನನ್ನು ಒಂದು ಪ್ರಶ್ನೆ ಕೇಳಬೇಕೆಂದಿರುವೆ ಬಾಬಿ!''

''ಬಾಬಿ'' ಶಬ್ದ ಅವಳಿಗೆಷ್ಟು ಆನಂದವನ್ನು ತಂದಿತೋ....ತಕ್ಷಣವೇ ನಿಶಾಂತ ಅನುನಯದಿಂದ ನುಡಿದಳು ''ಕೇಳಿರಿ. ಸಂಕೋಚವೇಕೆ?''

''ನೀನು ಏನೂ ತಿಳಿದುಕೊಳ್ಳುವುದಿಲ್ಲವಷ್ಟೆ?''

ಹಾಸಿಗೆಯ ಬಳಿ ಮಂಡಿಯೂರಿ ಕುಳಿತುಕೊಂಡು- ''ಕೇಳಿರಿ....ಪರವಾಯಿಲ್ಲ.''

''ಇಲ್ಲಿ ಭಾರತೀಯ ಖೈದಿಗಳು ಇನ್ನೆಷ್ಟು ಮಂದಿ ಇದ್ದಾರೆ?''

''ಬಹಳ ಮಂದಿ ಇದ್ದಾರೆ.''

''ಮೊನ್ನೆ ಅಂದರೆ ನನ್ನೊಂದಿಗೆ ಸೆರೆ ಸಿಕ್ಕಿದವನು ಇಲ್ಲೇ ಇದ್ದಾನೆಯೆ?''

''ಹೌದು, ಇದ್ದಾನೆ.''

''ಅವನ ಹೆಸರು?''

''ತಿಳಿಯದು.''

''ತಿಳಿದುಕೊಂಡು ನನಗೆ ಹೇಳಬಲ್ಲಿರಾ?''

"ಮೆಲ್ಲಗೆ ಮಾತಾಡು. ಇಲ್ಲಿಯ ಗೋಡೆ ಬಾಗಿಲುಗಳೂ ಕೇಳಬಲ್ಲವು...." ಒಂದು ನಿಮಿಷ ತಡೆದು ಯೋಚಿಸಿ ಅವಳೆಂದಳು "ನಿನಗಾಗಿ ಪ್ರಯತ್ನಿಸುವೆ. ಒಂದುವೇಳೆ ನಮ್ಮವರಿಗೆ ಸುಳಿವು ಸಿಕ್ಕಿದರೆ ನಮ್ಮನ್ನು ಬೆಚ್ಚಿ ಸಾಯಿಸಿಬಿಡುತ್ತಾರೆ ಜೋಕೆ!"

"ಹಾಗಿದ್ದರೆ ನನ್ನಿಂದಾಗಿ ನೀನು ತೊಂದರೆಗೆ ಸಿಕ್ಕಬಾರದು"

"ಬಹಳ ಎಚ್ಚರಿಕೆಯಿಂದ ಪ್ರಯತ್ನಿಸುವೆ."

"ದೇವರು ನಿನಗೆ ಸಹಾಯ ಮಾಡಲಿ!"

ಅವಳು ಕದ ಮುಚ್ಚಿಕೊಂಡು ಹೊರಟಳು.

ಜ್ವರ-ಸಿಡಿತ-ನಿಶ್ಶಕ್ತಿ-ನೋವು-ಉರಿ-ತಾಪಗಳ ಉಗ್ರ ಧಾಳಿಯಲ್ಲಿ ಮನಃಪ್ರಾಣಗಳು ತುಂಬ ದಣಿದಿದ್ದುವು. ಕಣ್ತುಂಬ ನಿದ್ದೆ ಬಂದರೆ ಅದೇ ಒಂದು ಉಪಶಮನ. ಆದರೆ ಸದಾ ಬರಬೇಕಲ್ಲ? ಮಗ್ಗುಲಾಗಿ ಮಲಗೋಣವೆಂದರೂ ಸಾಧ್ಯವಾಗುತ್ತಿಲ್ಲ. ದೈಹಿಕ ಯಾತನೆ ಅಪಾರವಾಗಿದ್ದರೂ ಬಾಬಿ ಭರವಸೆ ಚಿತ್ತಲೋಕವನ್ನು ಕುತೂಹಲದಿಂದ ತುಂಬಿ ಬಿಟ್ಟಿತ್ತು. ಅದೇ ವಿಚಾರ ಮಗ್ನನಾಗಿ ಬಿದ್ದುಕೊಂಡೆ. ನಿಮಿಷ ನಿಮಿಷಗಳೂ ತಾಸು ತಾಸುಗಳೂ ನಿರಾತಂಕವಾಗಿ ಉರುಳಿದುವು. ಶಿಬಿರದ ಹೊರ ವಲಯದಲ್ಲಿ ಚೀನೀಯರ ಪರಿವಾರದ ಕಾರುಬಾರು ನಡೆಯುತಿತ್ತು. ಆದರೆ ಎಲ್ಲಿ, ಹೇಗೆ ಎಂಬುದನ್ನು ಊಹಿಸುವುದು ಕಷ್ಟ. ಮಾತುಕತೆಯೊಂದಿಗೆ ಹಾರೆ ಗುದ್ದಲಿಯದೋ ಅಥವಾ ಇನ್ನಾವ ಬಗೆಯ ಆಯುಧಗಳದೋ ಠಳ್ ಠಳಾರ್ ಸದ್ದು ಕೇಳಿ ಬರುತಿತ್ತು. ಬಹುಶಃ ಶಿಬಿರಕ್ಕೆ ಬಲವಾದ ಬೇಲಿಯನ್ನು ನಿರ್ಮಿಸುತ್ತಿರಬಹುದು ಎಂದುಕೊಂಡೆ. ಅಥವಾ ಮತ್ತೊಂದು ಶಿಬಿರವನ್ನು ಕಟ್ಟುತಿದ್ದಾರೋ ದೇವರಿಗೇ ಗೊತ್ತು.

ಹೊತ್ತು ಇಳಿ ಮುಖವಾದಂತೆಲ್ಲಾ ಜ್ವರದ ತಾಪ ಕಡಿಮೆಯಾಗುತಿತ್ತು. ಅದು ಯಾವ ದೇವರ ಕೃಪೆಯೋ....ಇಲ್ಲದಿದ್ದಲ್ಲಿ ನಮ್ಮ ಸ್ಥಿತಿಗತಿಗೆ ಈ ಚಿಕಿತ್ಸೆಯೊಂದು ಲೆಕ್ಕವೇ ಅಲ್ಲ. ಏನಾದರೂ ಆಗಲಿ, ಭಗವಂತ ಅಷ್ಟಾದರೂ ದಯಾಮಯನಾಗಿದ್ದಾನಲ್ಲ....ಎನಿಸಿದಾಗ ಹೃದಯಪೂರ್ವಕವಾಗಿ-ಮನಃಪೂರ್ವಕವಾಗಿ ಸ್ಮರಿಸಿಕೊಂಡೆ. ಕಣ್ಣುಗಳಲ್ಲಿ ಅನಿರೀಕ್ಷಿತವಾಗಿ ಬಾಷ್ಪ ಬಿಂದುಗಳು ತುಂಬಿ ಬಂದುವು.

ಮೈ ಬೆವರಿ ಒದ್ದೆಯಾಗಿತ್ತು. ನಿದ್ದೆಯಲ್ಲಿರುವಾಗ ತಿಳಿಯದ ಬಾಧೆ ಎಚ್ಚರವಾದೊಡನೆಯೇ ಅವ್ಯಾಹತವಾಗಿ ಧಾಳಿಯಿಟ್ಟಿತು. ಅತೀವ

ಸಂಕಟಾವತರಣದಿಂದ ಪರಿತಪಿಸುತ್ತಿರುವಾಗ ಹೊಸ್ತಿಲ ಬಳಿ ಪಾದ ಸಪ್ಪಳ ಕೇಳಿಸಿ ಕಿವಿಗಳು ನಿಮಿರಿದುವು. ಮುಚ್ಚಿದ ಕದ ತೆರೆಯಿತು. ಊಟದ ಬಟ್ಟಲಿನ ಸಹಿತ ಬಾಬಿ ಒಳಬಂದಳು. ಅದೇ ನಡಿಗೆ, ಅದೇ ಭಂಗಿ, ಅದೇ ಜೋಲು ಮುಖ, ಅದೇ ನಿಮೀಲಿತ ನೇತ್ರಗಳು ಅರ್ಥಾತ್ ರಹಸ್ಯಮಯ ಸತ್ಯವಾದಿನಿ....!

ಅವಳು ಗಂಜಿಯ ತಟ್ಟೆಯನ್ನು ಮುಂದಿಟ್ಟಳು. ಅದನ್ನು ನೋಡುತ್ತಲೂ ಉಣ್ಣುವುದೇ ಬೇಡ ಎಂಬಷ್ಟು ಜುಗುಪ್ಸೆ-ಅಸಮಾಧಾನ. ನನ್ನ ಮುಖಭಾವವನ್ನು ಗಮನಿಸಿ ಅವಳೆಂದಲು ''ನೀನಿದನ್ನು ಒಲ್ಲೆಯಾದರೆ ಬೇರೇನೂ ದೊರೆಯುವುದಿಲ್ಲ. ನಿನ್ನ ಪ್ರಾಣರಕ್ಷಣೆಗಾದರೂ ಸ್ವಲ್ಪ ಉಣ್ಣು. ಉಪವಾಸ ಸಾಯಬೇಡ. ಈಗಲೇ ತುಂಬ ನಿಶ್ಶಕ್ತಿಯಾಗಿದ್ದಿ.''

''......''

''ಇಲ್ಲಿರುವಷ್ಟು ಕಾಲ ಹೇಗಾದರೂ ತಿಂದುಬಿಡು.''

ನಾನು ಎದ್ದು ಕೂಡಲು ಪ್ರಯತ್ನಿಸುತಿದ್ದಾಗ ಅವಳು ತೋಳಾಶ್ರಯ ನೀಡಿದಳು. ಏಳಲಾರದೆ ಎದ್ದು ಕುಳಿತೆ. ನರನರಗಳೂ ಕಟ್ ಕಟ್ಟನೆ ತುಂಡುಗಡಿಯುತ್ತಿರುವಂತೆ ಭಾಸವಾಯಿತು. ಅವಳು ತಟ್ಟೆಯನ್ನು ಮುಂದಿಟ್ಟು ಸುತ್ತಮುತ್ತ ಯಾರೂ ಇಲ್ಲವೆಂಬುದನ್ನು ಖಚಿತ ಪಡಿಸಿಕೊಂಡನಂತರ ತನ್ನ ಉಡುಪಿನಲ್ಲಿ ಅಡಗಿಸಿಕೊಂಡಿದ್ದ ಚೀಟಿಯೊಂದನ್ನು ಹೊರತೆಗೆದು ಮುಂದೆ ಹಿಡಿದಳು. ನೋಡಿದರೆ ಅದರಲ್ಲಿ ಶಿವಾಜಿಯ ಸಹಿ! ಮನೋವೇಗದಿಂದ ಮೈ ಪುಳಕಿತವಾಯಿತು. ಅವಳಿಗೆ ಏನು ಹೇಳಬೇಕೋ ಹೇಗೆ ಅಭಿನಂದಿಸಬೇಕೋ ಹೊಳೆಯಲಿಲ್ಲ. ನನ್ನ ಉದ್ವೇಗವನ್ನು ಗಮನಿಸಿ ''ಸುಮ್ಮನಿರು'' ಎಂಬಂತೆ ಕಣ್ಸನ್ನೆಯಿಂದ ಸೂಚಿಸಿ ''ನೀನೂ ಇದಕ್ಕೆ ಸಹಿ ಹಾಕು. ಶಿವಾಜಿಗೆ ಕೊಡುವೆ.'' ಎಂದಳು-ಪಿಸುದನಿಯಲ್ಲಿ. ಲೇಖನಿಯ ಬಗ್ಗೆ ನಾನು ಯೋಚಿಸುತ್ತಿರುವಾಗಲೇ ಅವಳು ತನ್ನ ಜೇಬಿನಿಂದ ಸೀಸದ ಕಡ್ಡಿಯನ್ನು ಹೊರತೆಗೆದು ಮುಂದಿಟ್ಟಳು. ನಾನು ಅದರಲ್ಲಿ ಸಹಿ ಹಾಕಿದೆ. ಅವಳು ಅದನ್ನು ಯಥಾರೀತಿ ಉಡುಪಿನಲ್ಲಿ ಅಡಗಿಸಿಕೊಂಡಳು. ಅವಳ ಕಾರ್ಯಚತುರತೆಯನ್ನು ಮೆಚ್ಚಿಕೊಂಡರೂ ಸಿಕ್ಕಿಕೊಂಡಲ್ಲಿ ಅವಳಿಗಿರಬಹುದಾದ ಗಂಡಾಂತರವನ್ನು ಗಮನಿಸಿ ಉದ್ವೇಗ-ಕಾರುಣ್ಯಗಳಿಂದ ಕೂಡಿದ ಧ್ವನಿಯಲ್ಲಿ ನುಡಿದೆ ''ಬಾಬೀ ನಿನ್ನ ಪ್ರಾಣಕ್ಕೆ ಗಂಡಾಂತರ ತಂದುಕೊಳ್ಳಬೇಡ.''

''ಇಲ್ಲ'' ಎಂದ ಬಳಿಕ ಮೆಲುದನಿಯಲ್ಲಿ ನುಡಿದಳು. ''ನಾನು ನಿಮ್ಮಿಬ್ಬರಿಗೂ ಸಹಾಯ ಮಾಡಲು ಉದ್ದೇಶಿಸಿರುವೆ!''

ನಾನು ಅತ್ಯಂತ ಅವರ್ಣನೀಯವಾದ ಆಶ್ಚರ್ಯ ಮೂಕನಾಗಿ ನಿಟ್ಟಿಸಿದೆ.

ಊಹೆಗೂ ನಿಲುಕದ ಸಣ್ಣ ನಗುವೊಂದು ಅವಳ ರೂಕ್ಷ ತುಟಿಗಳಲ್ಲಿ ಮಿನುಗಿ ಮಾಯವಾಯಿತು. ಮೈಬಾಗಿ ಪಿಸುದನಿಯಲ್ಲಿ ಹೇಳಿದಳು ''ಯೋಚಿಸಬೇಡ. ನಾನೆಲ್ಲ ಏರ್ಪಾಡು ಮಾಡುವೆ. ಕೆಲವು ದಿನ ಹೋಗಲಿ; ನಿನ್ನ ಗಾಯಗಳೂ ಸಹ ಮಾಯಬೇಕಷ್ಟೆ?'' ಆದರಪೂರ್ವಕವಾಗಿ ಪ್ರಶ್ನೆ ಹೊಮ್ಮಿತು.

ನಾನು ಅತ್ಯಂತ ಆಶ್ಚರ್ಯತೃಷಿತ ಲೋಚನಗಳಿಂದ ಅವಳನ್ನು ನಿಟ್ಟಿಸುತ್ತ ಕೇಳಿದೆ ''ಹೇಗೆ ಸಾಧ್ಯ?''

''ಹೇಗಾದರೂ ಸರಿಯೆ; ನಿಮ್ಮನ್ನು ಇಲ್ಲಿಂದ ಪಾರು ಮಾಡುವುದು ನನ್ನ ಭಾರ!''

''ನಿಜವಾಗಿ?''

''ನಿಜವಾಗಿಯೂ-ಖಂಡಿತವಾಗಿಯೂ!'' ಒತ್ತಿ ಹೇಳಿದಳು ಬಾಬಿ.

''ದೇವರು ನಿನಗೆ ಶಕ್ತಿ ನೀಡಲಿ!'' ದನಿ ಎದೆಯಾಳದಿಂದ ಹರಿದು ಬಂತು.

ಗಂಜಿ ಹಸಿ ಇತ್ತೋ ಬಿಸಿ ಇತ್ತೋ ಗಮನಿಸದೆ ನುಂಗಿದೆ. ಮನಸ್ಸು ಅದೇ ವಿಚಾರವನ್ನು ಮೆಲುಕು ಹಾಕುತಿತ್ತು. ನಾನು ಪೂರಾ ವಿವಶನಾದುದನ್ನು ಗಮನಿಸಿದಳೇನೋ, ಒಂದೆರಡು ಕ್ಷಣ ಯೋಚಿಸಿ ಅವಳೆಂದಳು ''ಅಷ್ಟೊಂದು ಚಿಂತೆಗೊಳಗಾಗಬಾರದು. ಅದರಿಂದ ನಿನ್ನ ಆರೋಗ್ಯಕ್ಕೆ ಕೆಟ್ಟ ಪರಿಣಾಮ ಉಂಟಾಗುತ್ತದೆ. ನೀನು ಬಹಳ ದುರ್ಬಲನಾಗಿದ್ದಿ.''

ಒಡನೆ ನನಗೆ ತಿಳಿವು ಮೂಡಿ ನನ್ನ ಬಗೆಗೆ ನಾನೇ ನಸು ಲಜ್ಜಿತನಾದೆ. ಅವಳು ಬಸಿ ಬಟ್ಟಲಿಗೆ ಕೈ ಹಚ್ಚುವ ಮುನ್ನ ಕೇಳಿದಳು ''ನಾನಿನ್ನು ಹೊರಡಲೇ?''

''ಮತ್ತೆ ಇಲ್ಲಿಗೆ ಬರುವುದುಂಟೇ?''

''ಹೌದು, ಅರ್ಧಗಂಟೆಯನಂತರ ನಿನಗೆ ಔಷಧಿ ತರುವೆ.''

''ಹಾಗಿದ್ದರೆ ನೀನು ಸ್ವಲ್ಪ ಸಹಾಯ ಮಾಡಿದರೆ ಎದ್ದು ನಿಂತುಕೊಳ್ಳುವೆ. ಮಂಡಿ ಮಡಿಸುವಂತಿಲ್ಲ. ಮಲಗಿ ಮಲಗಿ ಮೈ ನೋಯುತ್ತಿದೆ.''

ಬಾಬಿ ಕೈಯ್ಯಾಸರೆ ನೀಡಿದಳು. ನಾನು ಬಹಳ ಕಷ್ಟದಿಂದ ಎದ್ದು ನಿಂತೆ. ಕೈಕಾಲು ಥರ ಥರ ನಡುಗುತ್ತಿದ್ದುವು. ನೆತ್ತರು ಬಸಿದ ಮೈ ಬವಳಿ ಬರುವಂತಾಯಿತು. ಆದರೂ ದೃಢವಾಗಿ ಅಲ್ಲೆ ಸ್ವಲ್ಪ ಸುತ್ತಾಡಿದ ನಂತರ ಅವಳ ಸಹಾಯದಿಂದಲೇ ಚಾಪೆಯ ಮೇಲೆ ಉರುಳಿಕೊಂಡೆ. ಎಷ್ಟೇ ಗಾಯಗಳಾದರೂ ಕೈಕಾಲುಗಳು ಮುರಿಯದಿದ್ದುದು ಒಂದು ಪುಣ್ಯವಿಶೇಷವೆಂದೇ ಹೇಳಬಹುದು. ಅವಳು ಬಸಿಯನ್ನು

ತೆಗೆದುಕೊಂಡು ಹೊರಡುವಾಗ ಕರುಣಾಯಿತ ಅಪಾಂಗವನ್ನು ನನ್ನೆಡೆಗೆ ಹೊರಳಿಸಿದಳು. ಆಗ ಮಿನುಗಿದ ಮಿಂಚಿನಂತಹ ಬೆಳಕಿನ ಅವಲೋಕನ ಮಾತ್ರದಿಂದ 'ದಕ್ಷೆ' ಎಂದುಕೊಂಡೆ. ಹೃದಯ ಸಾನಂದದಿಂದ ಮಿಡಿಯಿತು.

ಆರೇಳು ದಿನಗಳು ಸಂದುವು.

ನಮ್ಮ ಬಿಡುಗಡೆಗಾಗಿ ಬಾಬಿ ಯಾವ ಸಂಚು ಹೂಡಿದ್ದಾಳೆಂಬುದು ಮಾತ್ರ ತಿಳಿದು ಬರಲಿಲ್ಲ. ನನ್ನ ಮನಃಪ್ರಾಣಗಳು ಉದ್ವೇಗದಿಂದ ವ್ಯಾಕುಲಿತವಾದುವು. ಪ್ರತಿ ಸಲವೂ ಅವಳ ಆಗಮನವನ್ನು ಕಾತರದಿಂದ ನಿರೀಕ್ಷಿಸುತಿದ್ದೆ. ಅನಂತರ ಪ್ರಸ್ತಾಪಿಸಲು ಬಾಯಿ ಬರುತ್ತಿರಲಿಲ್ಲ. ಏಕೆಂದರೆ ಅಂತಹ ಬೃಹದ್ ಕೋಟೆಯಲ್ಲಿ ಓರ್ವ ಸ್ತ್ರೀಮಾತ್ರಳು ಬಿಡುಗಡೆ ಮಾಡುವುದೆಂದರೆ ಅತ್ಯಂತ ಹಾಸ್ಯಾಸ್ಪದ. ಅಂತಲೇ ನನಗೆ ನಾನೇ ಆಗಿ ಪ್ರಸ್ತಾಪಿಸಲು ಮನಸ್ಸು ಬರಲಿಲ್ಲ. ದಿನವೂ ಊಟ ತರುವವಳೂ ಮದ್ದು ಬಳಿಯುವವಳೂ ಅವಳೇ. ಅನೇಕ ವೇಳೆ ಆ ಮುದುಕಿಯರೂ ಅವಳೊಂದಿಗೆ ಇರುತಿದ್ದರು. ಅವರು ಬಂದಾಗಲೆಲ್ಲ ಚಿತ್ತ ಗ್ಲಾನಿಯುಂಟಾಗುತಿತ್ತು....ಭಯ ಭೀತಿ ಮೂಡುತಿತ್ತು.

ಶಿವಾಜಿಯ ವಿಷಯ ಹೆಚ್ಚು ತಿಳಿದುಬರಲಿಲ್ಲ. ಆತನ ಗಾಯಗಳು ಒಣಗುತ್ತಿವೆ ಎಂದಷ್ಟು ಮಾತ್ರ ತಿಳಿದು ಬಂತು. ಆಗ ನನಗುಂಟಾದ ಆನಂದ ಕಡಿಮೆಯದಲ್ಲ. ರಕ್ತದ ಪ್ರತಿಕಣವೂ ತುಳುಕುತ್ತಿರುವಂತೆ ಭಾಸವಾಯಿತು. ತಲೆಯಲ್ಲಿ ನಾವು ನಾವಾಗಿಯೇ ಹೇಗಾದರೂ ಇಲ್ಲಿಂದ ಪಾರಾಗಿ ಹೋಗಬೇಕೆಂಬ ಇಚ್ಚೆ ಮನಃಪೂರ್ತಿ ಇತ್ತು. ಆದರೆ ಹೇಗೆಂಬುದೇ ಹೊಳೆಯುತ್ತಿಲ್ಲ. ಮೇಲಾಗಿ ಭಾರತ ಸರಕಾರದಿಂದ ಯಾವ ನಿರ್ದೇಶವೂ ಬರಲಿಲ್ಲ; ಅಥವಾ ಈ ಜನ ನಮಗದನ್ನು ತಿಳಿಸಲಿಲ್ಲ. ಹೊತ್ತು ಉರುಳಿದಷ್ಟೂ ನಿಶ್ಶಬ್ಧ ಪ್ರಕೃತಿಯ ಅಂತರಾಳದಲ್ಲಿ ಒಂದು ಬಗೆಯ ಕೋಲಾಹಲ ಪೂರ್ಣ ಯುದ್ಧ ನಡೆಯುತಿತ್ತು; ಶಾಂತ ಗಂಭೀರವಾದರೂ ಅತ್ಯಂತ ಗುರುತರ ಎನ್ನಬಹುದು. ಆದರೆ ಚೀನೀ ದೈತ್ಯರ ಭದ್ರಕಾವಲಿನಲ್ಲಿ 'ಬಿಡುಗಡೆ' ಎಂಬುದು ಕನಸಿನ ಮಾತು ಎನಿಸಿ ಭಾವನೆ ಛಿನ್ನವಿಚ್ಛಿನ್ನವಾಗುವುದು; ಹೃದಯ ಕುಂಡಲಿನಿ ಸಂತಾಪದಿಂದ ಕುದಿಯುವುದು.

ಆದರೇನು......?

ಅದೇ ನರಕವಾಸದಲ್ಲಿ ಮತ್ತೆ ಮೂರು ದಿನಗಳು ಸಂದುವು.

ಕೈಕಾಲುಗಳ ಗಾಯ ಮಾಗಿದ್ದುವು. ದಿನಕ್ಕೆರಡು ಬಾರಿ ಗಂಜಿಯೂಟ ದಕ್ಕುತಿತ್ತು. ಆದರೂ ಕಳೆದುಕೊಂಡಿದ್ದ ಶಕ್ತಿ ಇನ್ನೂ ಊರ್ಜಿತವಾಗಿರಲಿಲ್ಲ. ನಿಂತೆಡೆ ಕೈಕಾಲು ಸೋಲುತಿದ್ದುವು. ಕಣ್ತುಂಬ ನಿದ್ದೆಯೂ ಬರುತ್ತಿರಲಿಲ್ಲ.

ದಿನಗಳೆಯುವ ಕಷ್ಟ ದೇವರಿಗೇ ಪ್ರೀತಿ.

ನಮ್ಮ ಮೇಲೆ ಅತಿಕ್ರಮಣ ಮಾಡಲಾಗಿದೆಯೆಂದು ಆಪಾದಿಸಲಾಗಿತ್ತು.

ಬೆಳಗಿನ ಸಮಯದಲ್ಲಿ ಹಳದಿ ವರ್ಣದ ಅಸಹ್ಯರೂಪಿಗಳಾದ ನಾಲ್ವರು ಹಿರಿಯರು ಕೊಠಡಿಗೆ ಆಗಮಿಸಿದರು....ಸ್ನಾನಮಾಡಿ ಎಂದೋ..ಮುಡಿಯುಟ್ಟು ಇನ್ನೆಂದೋ, ಹಲ್ಲು ಬಾಯಿಗಳಿಂದ ದುರ್ಗಂಧ ಹೊರಡುತಿತ್ತು. ಅರ್ಥಂಬಂರ್ಥ ಹಿಂದಿಯಲ್ಲಿ ವಿಚಾರಣೆ ಆರಂಭಿಸಿದರು.

''ನಮ್ಮ ಪ್ರಶ್ನೆಗಳಿಗೆ ಸರಿಯಾದ ಉತ್ತರ ಹೇಳು!'' ದರ್ಪಪೂರ್ಣ ಗರ್ವೋಕ್ತಿ ಮೊಳಗಿತು.

ನಾನು ಮಾತಾಡದೆ ಆಶ್ಚರ್ಯಚಕಿತ ಶಿಶುವಿನಂತೆ ಅವರನ್ನೇ ಮಿಕಿಮಿಕಿ ನೋಡಿದೆ,

''ನೀನು ಯಾರು?''

''ನಾನು......?''

''ಹೌದು......ನೀನೇ!''

''ನಾನು......ನಾನೇ!''

''ಸರಿಯಾಗಿ ಹೇಳು! ಸರಕಾರಿ ವರ್ತುಲದಿಂದ ಬಂದಿರುವೆಯಾ? ಅತವಾ ಸ್ವಯಿಚ್ಛೆಯಿಂದ ಬಂದ ವ್ಯಕ್ತಿಯೋ?'' ರುದ್ರಕಾಯದಿಂದ ಉಚ್ಚಸ್ವರ ಮೊಳಗಿತು.

''ನಾನು ಸಿಪಾಯಿ....ಸ್ವಾತಂತ್ರ್ಯ ಯೋಧ!''

''ನಿನ್ನ ಗುರಿಯೇನು?''

''ದೇಶ ರಕ್ಷಣೆ!''

''ಏತಕ್ಕಾಗಿ ಅತಿಕ್ರಮಿಸಿದೆ....?''

''ನಾನು ಅತಿಕ್ರಮಿಸಲಿಲ್ಲ. ನಿಮ್ಮವರು ಅತಿಕ್ರಮಣ ಮಾಡಿದ್ದಾರೆ.''

''ನೀನು ಭಾರತ ಸರಕಾರದ ಮಿಲಿಟರಿ ಪಡೆಗೆ ಸೇರಿದ್ದೀಯಷ್ಟೆ?''

''ಹೌದು.''

ಚೀನೀ ಬಂಟರು ಕೊಳಕು ಹಲ್ಲುಗಳ ಪ್ರದರ್ಶನಗೈದು ತಮ್ಮತಮ್ಮೊಳಗೆ ಚಿಮುಚಿಮು ಮಾತಾಡಿಕೊಳ್ಳುವಾಗ ಅವರ ಮುಖ ಭಾವನೆಗಳನ್ನು ನೋಡಿ ನನ್ನ ಜರ್ಜರಿತ ಹೃದಯ ಅತ್ಯಂತ ಆಕುಲತೆಯಿಂದ ತುಂಬಿ ಹೋಯಿತು. ಅವರು ತಮ್ಮತಮ್ಮಲ್ಲಿ ಚರ್ಚಿಸುತ್ತಲೆ ನಿರ್ಗಮಿಸಿದರು. ನಮ್ಮ ಬಿಡುಗಡೆಯ ವಿಚಾರವನ್ನು ಕುರಿತು ಚಿಂತಿಸುವುದೂ ಸಹ ಬೇಡವೆನಿಸುವಷ್ಟು ನಿರಾಸೆ ಆಗ ಮನದಲ್ಲಿ ಮೂಡಿತು.

ಮಧ್ಯಾಹ್ನ ಎರಡರ ಅಂಚಿಗೆ ಹೊತ್ತು ಇಳಿಯಿತು.

ಬಾಬಿ ಊಟದ ಬಟ್ಟಲಿನೊಡನೆ ಆಗಮಿಸಿದಳು.

ಆ ನಿಸ್ತೇಜವಾದ ಮುಖ ಕಾಂತಿಯಳಿದ ಕಣ್ಣುಗಳನ್ನು ನೋಡುವಾಗಲೆಲ್ಲ ಕರುಳು ನುಲಿಯುತಿತ್ತು. ಅವಳ ದೇಹಸಾಮಗ್ರಿ ಹಲವಾರು ಹೆಮ್ಮಾರಿಗಳಿಗೆ ಗ್ರಾಸವಾಗಿದೆ ಎಂಬುದನ್ನು ಎಂತಹ ಮೂರ್ಖನಾದರೂ ಪ್ರಥಮ ನೋಟಕ್ಕೆ ಅರಿತುಕೊಳ್ಳಬಹುದಾಗಿತ್ತು. ಅಂತಹ ಕರುಣಾಜನಕ ಸ್ಥಿತಿಯಲ್ಲಿದ್ದರೂ ಬಹಳ ಪ್ರಶಾಂತತೆಯಿಂದ ಕೆಲಸ ನಿರ್ವಹಿಸುವುದನ್ನು ನೋಡಿದರೆ ನನ್ನ ಕಣ್ಣುಗಳನ್ನು ನಂಬುವುದೂ ಸಹ ಕಷ್ಟವೆನಿಸುತ್ತದೆ. ಅವಳು ಬರಬರುತ್ತಲೇ ಮೆಲು ದನಿಯಲ್ಲಿ ನುಡಿದಳು.

''ನೀವು ನಮ್ಮ ದೇಶವನ್ನು ಅತಿಕ್ರಮಣ ಮಾಡಿದ್ದೀರೆಂದು ಸಾಬೀತಾಗಿದೆ! ಇಲ್ಲಿ ಅದಕ್ಕೆ ಶಿಕ್ಷೆಯೆಂದರೆ ಮರಣದಂಡನೆ! ನೀವು ಇಲ್ಲಿದ್ದರೆ ಇಂದು ನಾಳೆಯೊಳಗಾಗಿ ನಿಮ್ಮನ್ನು ತೀರಿಸಿ ಬಿಡುತ್ತಾರೆ....! ನಾನು ಹೇಗಾದರೂ ನಿಮ್ಮನ್ನು ಇಂದು ಸೆರೆಯಿಂದ ಗುಪ್ತವಾಗಿ ಪಾರು ಮಾಡಲು ಉದ್ದೇಶಿಸಿರುವೆ. ದಯವಿಟ್ಟು ನನ್ನೊಡನೆ ಸಹಕರಿಸಿರಿ.''

ನನಗೆ ಏನು ಹೇಳಬೇಕೋ ಬಗೆ ಹರಿಯಲಿಲ್ಲ. ತನುಮನಗಳು ಉದ್ವೇಗಗೊಂಡುವು. ಒಂದೆರಡು ಘಳಿಗೆ ಪ್ರಯತ್ನಿಸಿದರೂ ತುಟಿಗಳು ಬಿರಿಯಲಿಲ್ಲ. ಹೃದಯ ಕುಂಡಲಿನಿಯಲ್ಲಿ ನೆತ್ತರು ಹೆಪ್ಪುಗಟ್ಟುತ್ತಿರುವಂತೆ ಭಾಸವಾಯಿತು. ಯೋಚನಾಕ್ರಾಂತನಾಗಿ ನಿಂತುಬಿಟ್ಟೆ.

''ಚಿಂತಿಸಬೇಡ.''

''ನಿಜವಾಗಿ?'' ನಾನು ಸ್ವಲ್ಪ ಸಾವರಿಸಿಕೊಂಡರೂ ಉದ್ವೇಗದಿಂದ ಕೇಳಿದೆ.

ಅವಳು ಮಂಜಿಗಿಂತಲೂ ತಂಪಾಗಿ ಉತ್ತರಿಸಿದಳು ''ಹೌದು.''

ನುಡಿ ಮಸ್ತಿಷ್ಕವನ್ನು ಸರ್‍ರನೆ ಹೊಕ್ಕಿದೊಡನೆ ಬೆಪ್ಪಾಗಿ ಸೊಪ್ಪಾಗಿ ಕುಳಿತೆ. ಒಂದು ಘಳಿಗೆ ಸುತ್ತಮುತ್ತಿನ ವಸ್ತು ಸಮಸ್ತವೂ ಗಿರಗಿರ ಸುತ್ತಿದಂತಾಯಿತು. ಅವಳು ಅನುನಯದಿಂದ ಮುಂದುವರಿದಳು,

''ಒಮ್ಮೆಲೇ ಅಷ್ಟೊಂದು ಚಿಂತೆಗೊಳ್ಳಬೇಡ. ನಾವು ಏನಾದರೊಂದು ಉಪಾಯ ಮಾಡೋಣ.''

ನನ್ನ ಭಾವಭಂಗಿ ಗಂಭೀರವಾಗಿದ್ದರೂ ತುಟಿಗಳಲ್ಲಿ ತಿರಸ್ಕಾರದ ಕಿರುನಗೆ ಮೂಡಿ ಮಾಯವಾಯಿತು. ಏನು ಹೇಳಲೂ ಮನಸ್ಸು ಬರಲಿಲ್ಲ. ನರನಾಡಿಗಳಲ್ಲಿ ಭಯಭೀತಿಯ ಝುರಿ ಬೆಂಕಿಯಂತೆ ಹರಿದಾಡಿತು. ಅವಳು ಒಂದೆರಡು ಘಳಿಗೆ

ಸುತ್ತಮುತ್ತ ನೋಡಿ ಯಾರೂ ಇಲ್ಲವೆಂಬುದನ್ನು ಖಚಿತ ಪಡಿಸಿಕೊಂಡು ಮೆಲ್ಲನೆ-ಬಹುಮೆಲ್ಲನೆ ಸ್ವತಃ ಅವಳಿಗೂ ಕೇಳಿಸಲಾರದೇನೋ ಎಂಬಂತೆ ನುಡಿದಳು.

''ಖಂಡಿತ ನನ್ನನ್ನು ನಂಬು.''

ಎಂತಹ ಆಶ್ಚರ್ಯ?....ನಾನು ಸ್ವಪ್ನಾವಸ್ಥೆಯಲ್ಲಿಲ್ಲವಷ್ಟೆ?

ಮೊಟ್ಟಮೊದಲು ವಿದ್ಯುತ್ ಶಾಕ ತಗಲಿದವನಂತೆ ಭ್ರಾಂತಿವಿಶೇಷದಿಂದ ನಿಟ್ಟಿಸಿ ಕೇಳಿದೆ,

''ನೀನು ತಮಾಷೆ ಮಾಡುತ್ತಿಲ್ಲವಷ್ಟೆ?''

''ಛೀ! ಖಂಡಿತವಾಗಿಯೂ ಇಲ್ಲ.''

''ಹೇಗೆ ಸಾಧ್ಯ?''

''ವಿಚಾರವನ್ನು ನನಗೆ ಬಿಟ್ಟು ಬಿಡು.''

''ಇಲ್ಲಿ ಪ್ರಬಲವಾದ ಕಾವಲಿದೆ ಎಂಬುದನ್ನು ನೀನು ಮರೆಯಲಿಲ್ಲವಷ್ಟೆ?''

''ನನ್ನನ್ನು ನಂಬು ಭಯ್ಯಾ! ನನ್ನ ಭಾಯೀ ಪ್ರಾಂತಕ್ಕಾಗಿ ನನ್ನ ಪ್ರಾಣವನ್ನು ಪಣ ಕಟ್ಟುವುದರಲ್ಲಿ ನನಗೆ ಖಂಡಿತ ಆತ್ಮ ಸಂತೋಷವಿದೆ!''

''......''

''ನಿನಗೆ ಇನ್ನೂ ನಂಬುಗೆ ಬರಲಿಲ್ಲವೇ?''

''ಇದರಿಂದ ನೀನು ಭಯಂಕರ ತೊಂದರೆಗೆ ಒಳಗಾಗಬಹುದು.''

''ತೊಂದರೆ....? ನಮಗೀಗಿರುವ ತೊಂದರೆಯೇನು ಕಡಿಮೆಯೆ? ಇಲ್ಲಿ ಸೈನಿಕರಿಗೆ ಹೆಣ್ಣುಗಳನ್ನು ಅಮಾನುಷವಾಗಿ ಒದಗಿಸುತ್ತಾರೆ. ಹಾಗೆ ಅವರ ಮನರಂಜನೆಯ ಸೊತ್ತಾದವಳು ನಾನು. ನಾವೇನಾದರೂ ತಿರಸ್ಕರಿಸಿದಲ್ಲಿ ನಮ್ಮನ್ನು ಪೈಶಾಚಿಕವಾಗಿ ಕಲ್ಲಿನಿಂದ ಚೆಚ್ಚಿ ಸಾಯಿಸುತ್ತಾರೆಂಬುದು ಬಹುಶಃ ನಿನಗೆ ತಿಳಿದಿರಲಾರದು. ಬುದ್ಧನ ನಾಡಿನವರಾದ ನಿಮ್ಮಿಂದಲಾದರೂ ನಮ್ಮವರು ಬುದ್ಧಿ ಕಲಿತುಕೊಳ್ಳಲಿ ಎಂಬ ಮಹದಾಶಯದಿಂದ ನಿಮ್ಮ ನಾಡಿನ ಸ್ನೇಹ ಹಸ್ತವನ್ನು ಬಯಸುವೆ. ಬುದ್ಧನ ನಾಡಿನವರಿಗೆ ಸಹಾಯಮಾಡುವುದೆಂದರೆ ಹೃದಯ ಹಿಗ್ಗುತ್ತದೆ....ಮನಸ್ಸು ಅರಳುತ್ತದೆ.''

''ಬಾಬೀ.......''

ಅವಳು ಮಾತು ಮುಂದುವರಿಯಗೊಡದೆ ನಡುವೆ ಬಾಯಿಹಾಕಿದಳು,

''ನನ್ನ ಸಂಕಟ ನಿನಗೆ ಅರ್ಥವಾಗಿದೆ....ಏನೇ ಬಂದರೂ ಸರಿಯೆ, ನನ್ನ ಸೋದರನ ಪ್ರಾಣವುಳಿಸಿದರೆ ನಿಜವಾಗಿಯೂ ಈ ಜನ್ಮ ಸಾರ್ಥಕವಾಗುವುದೆಂದು

ನಾನು ತಿಳಿದುಕೊಂಡಿರುವೆ. ನಿಮ್ಮೊಂದಿಗೆ ಸಹಕರಿಸಿ ಸ್ನೇಹ ವಿಶ್ವಾಸ ಗಳಿಸಿಕೊಂಡಲ್ಲಿ ನಮ್ಮವರ ಜ್ಞಾನ ಚಕ್ಷು ತರೆಯಬಹುದು. ನಾವು ಎಂದಾದರೂ ನಿರ್ಮಲವಾಗಿ ಬದುಕುವ ಹಾದಿಯನ್ನು ಕಂಡುಕೊಂಡೇವು. ಈಗಂತೂ ನಮ್ಮವರ ರೂಕ್ಷ ರೀತಿನೀತಿಗೆ ಇದೆಲ್ಲಾ ಅರ್ಥವೇ ಆಗುವುದಿಲ್ಲ. ನಮಗೆ ಅದೇ ಸಂಕಟ....ಅದೇ ದುಃಖ....ಅದೇ ಪರಿತಾಪ.''

ಅವಳ ಮಾತಿನ ಒಂದೊಂದು ಅಕ್ಷರವೂ ಕರುಳನ್ನು ಭೈರಿಗೆಯಂತೆ ಕೊರೆಯುತಿತ್ತು. ಒಂದು ಘಳಿಗೆ ಏನು ಹೇಳಬೇಕೋ ಹೊಳೆಯಲಿಲ್ಲ. ನಿರ್ಜೀವಿಯಂತೆ ಮರವಟ್ಟು ನಿಂತೆ. ಅವಳ ಕ್ಲಾಂತಶೀರ್ಣ ವದನಮಂಡಲದಲ್ಲಿ ಹೆಚ್ಚಿನ ಬದಲಾವಣೆಯಾಗದಿದ್ದರೂ ಕಣ್ಣುಗಳಲ್ಲಿ ನಿಸ್ಸಹಾಯಕತೆ ಮಿಂಚುತಿತ್ತು. ನೋಡು ನೋಡುತ್ತಿದ್ದಂತೆ ನನ್ನ ಹೃದಯ ಯಾವುದೋ ಅಜ್ಞಾತವೇದನೆಯಿಂದ ತುಂಬಿ ಹೋಯಿತು. ಅವಳು ಯಾಂತ್ರಿಕವಾಗಿ ತನ್ನನ್ನು ತಾನು ಸುಧಾರಿಸಿಕೊಳ್ಳುತ್ತ ಬಾಯ್ದೆರೆದಳು,

''ಭೈಯ್ಯಾ! ಈ ರಾತ್ರಿ....ಅಣಿಯಾಗಿರು.''

ಎಲ್ಲೋ ಹರಿದಾಡುತಿದ್ದ ಭ್ರಾಂತ ಚಿತ್ತ ಸರ್ರನೆ ಹಿಮ್ಮರಳಿತು. ನಾನು ಅವಳೆಡೆಗೆ ನೇರ ದೃಷ್ಟಿಯನ್ನು ಹರಿಸಿದೆ. ಮುಖಭಾವ ಗಂಭೀರವಾಗಿತ್ತು.

''ನಮ್ಮನ್ನು ರಕ್ಷಿಸುವ ಕಾರ್ಯ ನಿನ್ನಿಂದ ಸಾಧ್ಯವೇ? ಸಂಚುಹೂಡಿ ಸಿಕ್ಕಿಕೊಂಡಲ್ಲಿ ಗತಿಯೇನು?''

''ಒಂದು ವೇಳೆ ಸಿಕ್ಕಿಕೊಂಡಲ್ಲಿ ಏನುಗತಿಯೋ ಅದೇ ಗತಿ ನೀನಿಲ್ಲಿ ಉಳಿದರೂ ಇದೆಯಷ್ಟೆ?......ಹೇಗಿದ್ದರೂ ಒಂದೇ. ಮತ್ತೇಕೆ ಭಯ?'' ಅತ್ಯಂತ ದೃಢಕಂಠದಿಂದ ಹೇಳಿದಳು ಅವಳು.

ನಾನು ಯೋಚನೆಗೊಳಗಾದೆ. ಹೃದಯ ವ್ಯಾಪ್ತಿಗೆ ಮೀರಿ ಮಿಡಿಯುತಿತ್ತು. ಸೂಕ್ಷ್ಮವಾಗಿ ಆಲೈಸಿದರೆ ಅದರಿಂದ ಹೊಮ್ಮುವ ಸಂಜ್ಞೆ 'ಧೈರ್ಯಂ ಸರ್ವತ್ರ ಸಾಧನಂ' ಎಂದು. ಆದರೆ ಆ ಧೈರ್ಯ ಮಾತ್ರ ಮೂಡುತ್ತಲೇ ಇಲ್ಲ. ಅವಳು ಗಂಭೀರವಾಗಿ ಸಾಧುವಾದವನ್ನೀಯುತ್ತಾ ಹೇಳಿದಳು.

''ಇಲ್ಲಿ ರಾತ್ರಿ ಹೊತ್ತಿನಲ್ಲಿ ಪ್ರಕಾಶಮಾನವಾದ ದೀಪಗಳಿರುವುದಿಲ್ಲ; ಅಂಜಬೇಡ. ಯಾರಿಗೂ ತಿಳಿಯದಂತೆ ನಿಮಗೆ ಚೀನೀ ಉಡುಪುಗಳನ್ನು ತಂದುಕೊಡುವೆ. ನೀನು ಚೀನೀ ಉಡುಪು ತೊಟ್ಟು ನನ್ನೊಡನೆ ಹೊರ ಬಂದಲ್ಲಿ ಯಾರೂ ಅನುಮಾನಿಸಲಾರರು. ನಾನೊಬ್ಬ ಸೈನಿಕನೊಡನೆ ಸಹಕರಿಸುತ್ತಿದ್ದೇನೆಂದು

ಎಲ್ಲರೂ ಸಹಜವಾಗಿ ಭಾವಿಸುತ್ತಾರೆ. ಈಗ ತಿಂಗಳ ಬೆಳಕೂ ಮಸುಕು....ನಿಮಗೆ ತಪ್ಪಿಸಿಕೊಳ್ಳಲು ಇದು ಪ್ರಶಸ್ತವಾದ ಸಮಯ.''

ಹೇಗೆ ಕೃತಜ್ಞತೆ ಸಲ್ಲಿಸಬೇಕೋ ನನಗೆ ತಿಳಿಯಲಿಲ್ಲ. ಮೇಲಾಗಿ ಆಕೆ ಹೇಳುವಷ್ಟು ಸುಲಭವೇ ಎಂಬ ಅನುಮಾನವು ಸಹ ಬಾಧಿಸುತಿತ್ತು. ಅವಳು ಕೃತಕೃತ್ಯಳಾಗಲೆಂದು ದೇವರಲ್ಲಿ ಪ್ರಾರ್ಥಿಸಿಕೊಂಡೆ. ಹೊಟ್ಟೆಯಲ್ಲಿ ಏನೋ ಒಂದು ಬಗೆಯ, ಯೋಚಿಸಿದರೂ ಅರ್ಥವಾಗದ ಸಂಕಟೋದಯವಾಗಿತ್ತು. ಮೇಲಾಗಿ ನಸುಕಂಪನದ ಅಲೆ ದೇಹದಾದ್ಯಂತ ಹರಿದಾಡಿತು.

''ರಾತ್ರಿ ನಿನೆಗೆ ಊಟವನ್ನು ತರುವಾಗ ಉಡುಪನ್ನೂ ತರುವೆ.'' ಎಂದಳು ಬಾಬಿ.

''ಗೋಪ್ಯವಾಗಿರಲಿ....ಇದರಿಂದ ನಿನ್ನ ಜೀವಕ್ಕೆ ಸಂಚಕಾರ ಒದಗೀತು!''

''ಆ ಯೋಚನೆ ಬೇಡ. ಈ ರಾತ್ರಿ ನೀವು ಪಾರಾಗದಿದ್ದಲ್ಲಿ ಕಷ್ಟ.''

ಮೈ ತಟ್ಟನೆ ರೋಮಾಂಚನವಾಯಿತು. ಸ್ವೇದ ಬಿಂದುಗಳು ಹುಚ್ಚೆದ್ದು ಮೂಡಿದುವು.

ಅವಳು ನಲ್ಮೆಯಿಂದ 'ಹೆದರಬೇಡ' ಎಂದಷ್ಟು ನುಡಿದು ಸಜಲ ನೇತ್ರಳಾಗಿ ಹೊರಬಿದ್ದಳು. ಹೊಸ್ತಿಲು ದಾಟುವವರೆಗೂ ಎವೆಯಿಕ್ಕದೆ ನಿಟ್ಟಿಸಿದೆ. ಚಿತ್ತ ಚಿಂತಾಬ್ಧಿಯಲ್ಲಿ ಮುಳುಗಿ ಹೋಯಿತು. ಕೊನೆಯರಿಯದ ಭಾವ ವಿಭಾವಗಳ ರುದ್ರ ಲಾಸ್ಯದ ವಿಕಟ ಭಂಗಿಯಲ್ಲಿ ಶರೀರ ಪ್ರಕೃತಿ ಪ್ರಕಂಪಿತವಾಗತೊಡಗಿತು. ವಿವೇಚನಾ ಶೂನ್ಯನಂತೆ ನೆಲದ ಮೇಲೆ ಬಿದ್ದುಕೊಂಡೆ. ಉರುಳುವ ಒಂದೊಂದು ಕ್ಷಣವೂ ಮುಳ್ಳಿನಂತೆ ಚುಚ್ಚುತಿತ್ತು. ಹೊತ್ತು ಹೇಗೆ ಉರುಳಿತೋ ನಾನರಿಯೆ. ಇರುಳು ಮುಂದಡಿ ಇಟ್ಟಂತೆಲ್ಲಾ ಭಯ ಭೀತಿ ವರ್ಧಿಸುತಿತ್ತು.....ಬುದ್ಧಿ ಅಡವಿಪಾಲಾಗುತಿತ್ತು.

ಬಾಬಿ ಸಮಯಕ್ಕೆ ಸರಿಯಾಗಿ ಗಂಜಿಯ ತಟ್ಟೆಯನ್ನು ತಂದಳು. ಜೊತೆಗೆ ನೀರಿನ ಕೊಡ ವಿನಾ ಇನ್ನೇನೂ ಇರಲಿಲ್ಲ. ನನ್ನ ಆಶಾದೃಷ್ಟಿ ಅಲ್ಲಿಂದಲ್ಲೆ ಮಂಜುಮಂಜಾದಂತೆ ತೋರಿತು. ಅವಳನ್ನು ಮಿಳ್ ಮಿಳ್ಳನೆ ನೋಡಿದೆ. ಅವಳು ಏನೂ ಹೇಳದೆ ಗಡಿಗೆಯನ್ನು ಮುಂದಿಟ್ಟಳು. ನನಗೆ ಕೈ ನೀಡಲೂ ಸಹ ಮರೆತುಹೋಯಿತು. ಅವಳು ಆವರಿಸುತ್ತ ''ಮೊದಲು ಉಣ್ಣು.'' ಎಂದಳು.

''ಏನು?....ಏನಾಯಿತು?''

''ಎಲ್ಲವೂ ಸರಿಯಾಗಿದೆ. ಮೊದಲು ಉಣ್ಣು.''

ಆಕೆಯ ಆಜ್ಞಾಧಾರಕನಂತೆ ತುತ್ತು ನುಂಗಿದೆ. ಗಂಜಿಯೊಂದಿಗೆ ಕಂಬನಿಗಳೂ ಒಡಲನ್ನು ಸೇರಿದುವು. ಬೆಳಗಿನ ಗಡಿಗೆಯಲ್ಲಿದ್ದ ನೀರನ್ನು ಡಬ್ಬಿಗೆ ಸುರಿದು 'ಕುಡಿ' ಎಂದಳು. ದಿನವೂ ಹೊಸದಾಗಿ ತಂದ ಗಡಿಗೆಯಿಂದ ನೀರನ್ನು ಕೊಡುತ್ತಿದ್ದಳಾದರೂ ನನಗೆ ಅದರ ಕಡೆ ಗಮನ ಹರಿಯಲಿಲ್ಲ. ಮನಸ್ಸು ಅಷ್ಟೊಂದು ವಿಕ್ಷುಬ್ಧವಾಗಿತ್ತು. ಅನಂತರ ಅವಳು ತಂದ ಕೊಡದಲ್ಲಿ ಹುದುಗಿಸಿಟ್ಟಿದ್ದ ಚೀನೀ ಸೈನಿಕ ಉಡುಪನ್ನು ತೆಗೆದುಕೊಟ್ಟು ''ಬೇಗನೆ ತೊಟ್ಟುಕೊ.'' ಎಂದಳು.

ನನಗೆ ಎಲ್ಲಿಲ್ಲದ ಆಶ್ಚರ್ಯವಾಯಿತು. ''ಹೇಗೆ ಸಂಪಾದಿಸಿದೆ?'' ಎಂದೆ.

''ನಾನಿರುವುದು ಸೈನಿಕರ ಬಿಡಾರದಲ್ಲಿ ಎಷ್ಟು ಬೇಕಾದರೂ ತರಬಲ್ಲೆ.''

''ಶಿವಾಜಿ?''

''ಅವನು ನಿನಗಾಗಿ ಕಾದಿದ್ದಾನೆ!''

''ಯಾರಿಗಾದರೂ ಸುಳಿವು ಸಿಕ್ಕಿದರೆ....'' ಹಾಗೆಂದು ತುಟಿಗಳು ಬಿರಿಯದಿದ್ದರೂ ಅರಳಿದ ನೋಟದಿಂದಲೇ ಗ್ರಹಿಸಿ ಅವಳೆಂದಳು ''ಬುದ್ಧದೇವನ ಇಚ್ಛೆ....!'' ಧ್ವನಿ ಅತ್ಯಂತ ಸಮಾಧಾನಪೂರ್ವಕವಾಗಿ ಹೊರಬಿತ್ತು.

ನನ್ನ ನೋಟ ಜ್ಯೋತಿರ್ವಿಹೀನವಾದ ಕಂದೀಲಿನ ಕಡೆ ಹರಿಯಿತು. ಅದರಿಂದ ಯಾವ ಭಾವನೆ ಮೂಡಿತೋ ಹೇಳಲಾರೆ. ಅವಳು ಅವಸರಿಸಿದಳು. ನಾನು ನನ್ನ ಬಟ್ಟೆಗಳಚಿ ಚೀನೀ ಉಡುಪನ್ನು ತೊಟ್ಟೆ. ತಲೆಗೆ ಅಗಲವಾದ ಟೋಪಿ ನೀಡಿದಳು. ನಾನು ಕಳಚಿದ ಬಟ್ಟೆಗಳು ಅವಳ ಕೊಡವನ್ನು ಸೇರಿದುವು. ಆದರೂ ಜೀವಸಹಿತ ಇಲ್ಲಿಂದ ಪಾರಾಗುವೆ ಎಂಬ ನಂಬಿಕೆಯಂತೂ ಮೂಡಿರಲಿಲ್ಲ. ಅವಳನ್ನು ಹಿಂಬಾಲಿಸಲು ಅವಳ ಕಣ್ಣುಗಳು ಸೂಚನೆ ಕೊಟ್ಟುವು. ನಾನು ಹಿಂಬಾಲಿಸಿದೆ. ಹೊರಗಿದ್ದ ಕಾವಲು ಪಡೆಯವರು ನನ್ನನ್ನು ಗುರುತಿಸಲಿಲ್ಲ. ಆ ಬೃಹದ್ ವಲಯವನ್ನು ಏಳೆಂಟು ನಿಮಿಷಗಳಲ್ಲಿ ದಾಟಿದೆವು. ಪ್ರಾಂಗಣವನ್ನು ದಾಟುವಾಗ ಅನೇಕ ಚೀನೀಯರು ಗಮನಿಸಿದರೂ ದೈವವಶಾತ್ ಗುರುತಿಸಲಿಲ್ಲ....ಆಕ್ಷೇಪಿಸಲಿಲ್ಲ. ಬಾಬಿ ಸೈನಿಕರ ಮನರಂಜನೆಯ ಹೆಣ್ಣಾದುದರಿಂದ ವಾಸ್ತವವಾಗಿ ನಮ್ಮನ್ನು ಹಾಗೆಂದೇ ಭಾವಿಸಿರಲಿಕ್ಕೂ ಸಾಕು. ಪ್ರಾಂಗಣವನ್ನೂ ಮುಳ್ಳು ಬೇಲಿಯ ವಿದ್ಯುತ್ ಪ್ರಾಕಾರದ ಗೇಟನ್ನೂ ದಾಟಿದ ನಂತರ ಅವಳು ಸಣ್ಣ ಶೀಳು ಹಾದಿಯನ್ನು ಹಿಡಿದಳು. ಸಾಧಾರಣವಾದ ಕದ್ದಿಂಗಳ ರಾತ್ರಿ. ಮಸುಕು ಮಸುಕಾದ ಬೆಳಕು....

''ವೀರವರ! ಆ ತಗ್ಗು ಪ್ರದೇಶದಲ್ಲಿ ಶಿವಾಜಿ ನಿನಗಾಗಿ ಕಾದಿದ್ದಾನೆ. ಇಲ್ಲಿಂದ ಭಾರತ ಗಡಿಯವರೆಗೆ ಇದೇ ಹಾದಿ ಶೀಳಿಲ್ಲದೆ ಹರಿಯುತ್ತದೆ. ನಿನಗೆ ಹಾದಿ

ಹುಡುಕಿಕೊಳ್ಳುವ ಬವಣೆಯೂ ಇಲ್ಲ. ತ್ವರೆಮಾಡು.'' ಎಂದಳು. ಅನಿರೀಕ್ಷಿತವಾಗಿ ಅವಳ ಕಂಠಸ್ವನ ಗದ್ಗದವಾಯಿತು.

ಕೊನೆಯ ಪ್ರಕರಣವಾಗಿ ಅವಳಿಗೆ ಕೃತಜ್ಞತಾಪೂರ್ವಕವಾಗಿ ಒಂದೆರಡು ಮಾತು ಹೇಳೋಣವೆಂದರೆ ಮಾತುಗಳು ಹೊರಡಲಿಲ್ಲ. ಅವಳ ಕೈಗಳನ್ನು ಮೃದುವಾಗಿ ಅದುಮಿ ಹಿಡಿದೆ. ಕಣ್ಣುಗಳಲ್ಲಿ ಕಂಬನಿಗಳು ಮೊಳೆತುವು. ಅವಳು ಅತ್ಯಂತ ನಿರ್ದಯಳಂತೆ ಅವಸರಿಸಿದಳು ''ಹೊತ್ತಾಯಿತು, ಹೊರಡು.''

''ಯಾವತ್ತೂ ಅಳಿಸಿ ಹೋಗದ ರೀತಿಯಲ್ಲಿ ನಿನ್ನ ಹೆಸರನ್ನು ನನ್ನ ಹೃದಯದಲ್ಲಿ ಧರಿಸುವೆ. ದಯವಿಟ್ಟು ನಿನ್ನ ಹೆಸರನ್ನು ತಿಳಿಸು ಬಾಬೀ!''

''ಮೇನ್ಕಾ-ಚಿ!''

ನಾಲ್ಕು ಹೆಜ್ಜೆ ತೆಗೆದು ಹಿಂದಿರುಗಿ ನೋಡಿದಾಗ ಅವಳು ಅಲ್ಲಿರಲಿಲ್ಲ.

ದುಃಖ-ಉದ್ವೇಗ-ಉಲ್ಲಾಸಗಳ ತಾನವಿತಾನದಲ್ಲಿ ಹೃದಯ ಸಮುದ್ರ ಅಲ್ಲೋಲ ಕಲ್ಲೋಲವಾದರೂ ಆನಂದೋಲ್ಲಾಸಪೂರ್ಣ ಧ್ವನಿ ಮತ್ತೆಮತ್ತೆ ಪುನಃಪುನಃ ಬಿತ್ತರಿಸಿತು ''ಮೇನ್ಕಾ-ಚಿ!''

ಮನದಲೆಯ ತರಂಗ ತರಂಗಗಳಲ್ಲಿ ಮೃದು ಮಧುರವಾಗಿ ಹರಿದಾಡಿತು ಅದೇ ಮನೋರಮ ನಾಮಧೇಯ.

ದೂರದಲ್ಲಿ ಚಲಿಸಿದ ನೋಟಕ್ಕೆ ಶಿವಾಜಿಯು ಗೋಚರಿಸಿದಾಗ ನಾನು ಆಗಲೇ ಭಾರತ ಭೂಮಿಯನ್ನು ಮುಟ್ಟಿದಷ್ಟು ಆನಂದವಾಯಿತು.

ಜ್ಯೋತಿರ್ಧಾರಿಣಿ

"ಲೀನಾ!"

"...."

"ಲೀನಾ....!"

"......."

ಆ ಕರೆಯಲ್ಲಿ ಎಂತಹ ಮಾದಕತೆಯಿತ್ತು? ಅದಾವ ಬಗೆಯ ಸಂಮೋಹಿನೀ ವಿದ್ಯೆ ಇತ್ತು? ಈ ಲೋಕದೊಡನೆ ಇರುವ ಮತ್ತಾವ ಸಂಸರ್ಗದಲ್ಲಿಯೂ ಅಂತಹ ಅಮೋಘವಾದ ಮಾದಕತೆಯನ್ನು ಅವಳೆಂದೂ ಕಂಡಿರಲಿಲ್ಲ. ಅಂದಿಂದಿಗೂ ಆ ಮಾತೃಕೆಯ ಅಂತರಾಳದಲ್ಲಿ ಜ್ವಲಿತಜ್ಯೋತಿ ವಿದ್ಯುದ್ದೀಪವೂ ಲ್ಲ; ಗಾಳಿಯ ಹೊಡೆತಕ್ಕೆ ನಂದುವ ಸೊಡರೂ ಅಲ್ಲ. ಅಂತಲೇ ಆ ಕರೆಗೆ ಓಗೊಡುವ ಮೊದಲು ಒಂದೆರಡು ಕ್ಷಣ ಕಿವಿಗಳಲ್ಲಿ ಝೇಂಕರಿಸಿದ ಆ ನಾದಲಹರಿಯನ್ನು ಆನಂದ ಪ್ರಮತ್ತತೆಯಿಂದ ಮನದಲ್ಲೇ ಮೆಲಕುಹಾಕಿದಳು ಲೀನಾ, ಎಳೆಯ ಹೃದಯ ಸಾನಂದದಿಂದ ಉಕ್ಕೇರಿ ಬಂತು. ಒಂದು ಘಳಿಗೆಯ ಹಿಂದೆ ನಡೆಯುತಿದ್ದ ಭಾವವಿಭಾವಗಳ ಅಖಾಂಡತಾಂಡವ ನೃತ್ಯ ಮನೋರಂಗವನ್ನು ಛಿನ್ನ ವಿಚ್ಛಿನ್ನಗೊಳಿಸಿತ್ತು. ಮುಖ ಮೈಗಳಲ್ಲಿ ಶ್ರಮಬಿಂದುಗಳು ತುಂತುರು ತುಂತುರಾಗಿ ಮೂಡಿದ್ದುವು. ಅತೀವ ರಕ್ತ ದ ಒತ್ತಡದಿಂದ ನರತಂತುಗಳು ಸೀಳಿ ಹೋಗುವಂತಿತ್ತು. ಎಳೆಯ ಮನಸ್ಸು, ಎಳೆಯ ಬುದ್ಧಿ ತತ್ತರಿಸುವಂತೆ ಕ್ಷಣ ಕ್ಷಣಗಳು ಕೋರೈಸುವ ಕತ್ತಿಯಲುಗಿನ ಮೇಲೆ ಉರುಳುತಿದ್ದುವು. ಅದೇ ಸಮಯದಲ್ಲಿ ಆ ಮಧುರತರ ಕರೆ! ಧಗಧಗಿಸುವ ಅಗ್ನಿರಾಶಿಗೆ ಒಮ್ಮೆಲೇ ನೀರೆರೆದಂತಾಯಿತು. ತಟ್ಟನೆ ಎದ್ದು ಹೊರಟಳು. ಊದಾವರ್ಣದ ಉದ್ದನೆಯ ಕಾರಿಡಾರನ್ನು ದಾಟಿ ಬಲಕ್ಕೆ ತಿರುಗಿದರೆ ಸಿಸ್ಟರ್ ಫ್ಲಾರೆನ್ಸಳ ಕೊಠಡಿ. ಬಾಗಿಲಲ್ಲಿ ಹಣಿಕಿ ಮೆಲುದನಿಯಲ್ಲಿ ಕೇಳಿದಳು ಲೀನಾ,

"ಒಳಗೆ ಬರಲೇ?"

"ಬಾ, ಮಗೂ....!"

ಕಾನ್ವೆಂಟು ಬೃಹದ್ ಪ್ರಾಕಾರದ ಉದ್ದಗಲಕ್ಕೂ ಮನಮೋಹಕವಾಗಿ ಹರಡಿತ್ತು. ಅದರ ಕೃಪಾಶ್ರಯದಲ್ಲಿ ಬೆಳೆಯುವ ಮಕ್ಕಳ ಸಂಖ್ಯೆಯೂ ಗಣನೀಯವಾದುದೇ. ಸಿಸ್ಟರ್ ಫ್ಲಾರೆನ್ಸ್ ಅಲ್ಲಿಯ ಮೇಲ್ವಿಚಾರಕಿ. ಹಿಂದೂಸ್ಥಾನದ ಅನೇಕ ಶಾಲೆಗಳಲ್ಲಿ ಅತ್ಯಂತ ಆತ್ಮೀಯತೆಯಿಂದ ಕೆಲಸಮಾಡಿ ಒಳ್ಳೆಯ ಹೆಸರನ್ನು ಪಡೆದಿದ್ದ ಅವಳು ಮದರ್ ಸುಪೀರಿಯರ್‌ಗೆ ತುಂಬ ಅಚ್ಚುಮೆಚ್ಚು. ಲೀನಳಿಗೆ ಅವಳ ರೀತಿನೀತಿಗಳನ್ನು ಗಮನಿಸುವಾಗಲೆಲ್ಲಾ ನಾನು 'ಸಿಸ್ಟರ್' ಆದರೆ ಒಳ್ಳೆಯದು ಎಂಬ ಯೋಚನೆ ಮನದಲ್ಲಿ ಮೊಳೆತು ಗೊಂದಲ ಹೂಡುತಿತ್ತು. ಅದೇ ನೇರಕ್ಕೆ ಆಕರ್ಷಣೀಯ ಜೀವನಕ್ಕೆ ಜೋಲುವ ದೈಹಿಕ ಸಂಪತ್ತು. ಯೋಚಿಸಿ ಯೋಚಿಸಿ ಕಿಂಕುರ್ವಾಣತೆ ತುಂಬಿಕೊಳ್ಳುವ ಅಪ್ರಬುದ್ಧ ಬುದ್ಧಿ, ಎಷ್ಟೇ ತರ್ಕವಿತರ್ಕ ಹೂಡಿದರೂ ತಾನೇತಾನಾಗಿ ಸಮಸ್ಯೆಯನ್ನು ಬಗೆ ಹರಿಸಿ ಕೊಳ್ಳುವುದು ಕಷ್ಟ...ಅದೇ ಚಿಂತೆಯಲ್ಲಿ ದಿನಗಟ್ಟಲೆ-ವಾರಗಟ್ಟಲೆ ತೊಳಲಿ ಬಳಲಿಯಾಗಿತ್ತು. ಆದರೂ ತುಲನಾಶಕ್ತಿ ಡೋಲಾಯಮಾನ...ಮೇಲಾಗಿ ಎಳೆಯ ಮನದ ಚಿತ್ರ ವಿಚಿತ್ರ ಕೋಲಾಹಲ.

ಎದುರಿಗೆ ಮೂರ್ತಿಮತ್ತಾಗಿ ನಿಂತ ಹುಡುಗಿಯನ್ನು ಪ್ರಸನ್ನಮುಖಿಯಾಗಿ ಕೇಳಿದಳು ಸಿಸ್ಟರ್,

"ಏನಾದರೂ ನಿರ್ಧರಿಸಿದೆಯಾ?"

ಪ್ರಶ್ನೆ ಏನಿರಬಹುದೆಂದು ಮೊದಲೇ ಊಹಿಸಿದ್ದ ಹದಿನೆಂಟರ ಮುಗುದೆ ಮಿಡುಕಲಿಲ್ಲ. ಅತ್ಯಂತ ಸಮಂಜಸವಾಗಿ ಉತ್ತರಿಸಿದಳು "ಯೋಚಿಸಿದಷ್ಟೂ ತಲೆ ಬರಡಾಗುತ್ತೆ. ನೀವೇ ಸಲಹೆ ಕೊಡಿ ಸಿಸ್ಟರ್. ನನ್ನ ಮನಸ್ಸಿಗೆ ವಿಚಾರ ಶಕ್ತಿಯ ನಿರೂಪಣೆ ಏನೇನೂ ಸಾಲದು. ಅಂತಲೇ ನಿಮ್ಮ ಸಹಾಯವನ್ನು ಅಪೇಕ್ಷಿಸುತ್ತಿರುವೆ." ಸ್ವರ ಎದೆಯಾಳದಿಂದ ಹರಿದು ಬಂತು. ಹರಿಣಾಕ್ಷಿಗಳು ಪ್ರಜ್ವಲಿತ ಉಲ್ಕೆಗಳಂತೆ ಬೆಳಗಿದುವು.

ಒಂದೆರಡು ಘಳಿಗೆ ಮೂಕ ಮೌನ ಕೊಠಡಿಯನ್ನು ಆವರಿಸಿತು.

ಗೋಡೆಯ ಶುಭ್ರ ವೇದಿಯಮೇಲೆ ಮೇರಿ ಏಸುವನ್ನು ಎತ್ತಿಕೊಂಡು ನಿಂತಿದ್ದ ಭವ್ಯ ಚಿತ್ರಪಟ ಅತ್ಯಂತ ಆಕರ್ಷಣೀಯವಾಗಿತ್ತು. ಆ ಮಾತೃಕೆಯ ಭಾವಭರಿತ ನೋಟ ಸ್ವರ್ಗದ ಮೆಟ್ಟಲಿಗೆ ಬಾ ಬಾರೆಂದು ಕರೆಯುತ್ತಿರುವಂತೆ ಭಾಸವಾಯಿತು. ನೆಟ್ಟದೃಷ್ಟಿ ಸ್ವಲ್ಪ ಹೊತ್ತು ಅಲ್ಲಿಂದ ಚಲಿಸಲಿಲ್ಲ. ಏಸುವಿನ ಮುಗ್ಧಮುಖದಲ್ಲಿ ಹೊಳೆ ಹೊಳೆಯುವ ಕಣ್ಣುಗಳು ಸೂಜಿಗಲ್ಲಿನಂತೆ ತನ್ನನ್ನು ಸೆರೆಹಿಡಿದಿವೆ. ಆತನ ವಿಚಾರಧಾರೆ

ಇಲ್ಲೇ ಈ ಬಳಿಯಲ್ಲೇ ಸುಳಿದಾಡುತ್ತಿರುವಂತೆ ರೋಮ ರೋಮವೂ ಪುಳಕಿತವಾಗಿ ಜಗತ್ತಿನ ಸಂಸ್ರವದಿಂದ ದೂರದೂರ ಸೆಳೆಯುತ್ತಿರುವಂತೆ ತೋರಿತು. ಇನ್ನು ಪ್ರಯತ್ನಿಸಿದರೂ 'ಬಿಡುಗಡೆ' ಎಂಬುದು ಅಸಾಧ್ಯ.....

ಮನದೋಟ ರೈಲೋಟಕ್ಕಿಂತ ಮಿಗಿಲು....ಹಾಗೆ ಅದೆಷ್ಟು ಹೊತ್ತು ಉರುಳಿತೋ. ಸಿಸ್ಟರ್ ಫ್ಲಾರೆನ್ಸ್ 'ಕುಳಿತುಕೋ' ಎಂದಾಗಲೇ ಇತ್ತಗಮನ, ಕುಳಿತುಕೊಂಡಳು ಲೀನಾ. ವಿಚಾರ ಚಕ್ರಕ್ಕೆ ಸಿಲುಕಿ ಅಲ್ಲಿಂದಲ್ಲೇ ಸುತ್ತ ತೊಡಗಿತು ಯೋಚನಾಲಹರಿ. ಚಿಂತಾಭಾರದಿಂದ ಮೂರ್ತಿಮತ್ತಾಗಿದಳು ಹುಡುಗಿ. ಮೈ ನರನಾಡಿಗಳಲ್ಲಿ ಭಾವಧಾರೆ ವಿದ್ಯುಲ್ಲಹರಿಯಂತೆ ಹರಿದಾಡಿತು. ಹೃದಯ ನೂರು ಆವೇಶಗಳಿಂದ ಮಿಡಿಯುತಿತ್ತು.

ಸಿಸ್ಟರ್ ಫ್ಲಾರೆನ್ಸ್ ಹವಳದ ಕುಡಿಯಂತಹ ತುಟಿಗಳಲ್ಲಿ ಮೃದು ಮಂದಹಾಸವನ್ನು ಹರಿಸಿ ಮುಕ್ತಕಂಠದಿಂದ ನುಡಿದಳು ''ನಾವು ಯಾವುದೇ ಕ್ಷೇತ್ರಕ್ಕೆ ಕಾಲಿಟ್ಟರೂ ಜಗತ್ತಿನ ಎಲ್ಲಾ ಸಂಸರ್ಗವನ್ನೂ ಕಡಿದುಕೊಂಡು ಸ್ವತಂತ್ರ ಪಿಂಡವಾಗುವುದು ಸಾಧ್ಯವೇ ಇಲ್ಲ. ನಾವು ಎಲ್ಲಿರುತ್ತೇವೊ ಅಲ್ಲಿ ಜೀವನ ಬಂಧ ಬೆಳೆದೇ ಬೆಳೆಯುತ್ತದೆ ಎಂಬುದು ನಿನಗೆ ತಿಳಿದಿದೆಯೇ?''

''ಹೇಳಿ ಸಿಸ್ಟರ್!'' ಎಂದಳು ಲೀನಾ ಮಂತ್ರಮುಗ್ಧಳಂತೆ.

''ನೋಡು, ನಾನು ಅಂದಿಂದಿಗೂ ಈ ಜೀವವನ್ನು 'ಸೇವೆ'ಯಲ್ಲೇ ಸವೆಸುತ್ತಿರುವೆ. ಆದರೂ ಸಹ ನಾನು ಇಲ್ಲಿ ಪೂರ್ಣ ಸ್ವತಂತ್ರಳಲ್ಲ. ನಿನ್ನ ಮನಸ್ಸು ಒಂದುವೇಳೆ ಸ್ವಾತಂತ್ರಕ್ಕಾಗಿ ಘೀಳಿಡುತಿದ್ದಲ್ಲಿ ಅದು ತಪ್ಪಾಗುತ್ತದೆ.''

''ಸ್ವಾಂತ್ರ್ಯದ ಬಯಕೆಯೂ ಉಂಟು. ಆದರೆ ಅದನ್ನೇ ನಾನು ಪೂರ್ಣ ನೆಚ್ಚಿಕೊಂಡಿಲ್ಲ.''

''ಸಿಸ್ಟರಾಗುವುದೆಂದರೆ ಸ್ವಸುಖವನ್ನು ಬಯಸುವಂತಿಲ್ಲ.''

''ಅದು ತಿಳಿದಿದೆ ಸಿಸ್ಟರ್!''

''ಎಲ್ಲಂದರಲ್ಲಿ ಸೇವೆ ಸಲ್ಲಿಸಲು ತಯಾರಿರಬೇಕು.''

''ಆ ಎಲ್ಲಕ್ಕೂ ನಾನು ಸಿದ್ಧ.''

ಸಿಸ್ಟರ್ ಫ್ಲಾರೆನ್ಸ್ ತನ್ನ ದಸ್ಕತ್ತುಗಳಮೇಲೆ ಕಣ್ಣಾಡಿಸಿದಳು.

ಸುಗಂಧ ಗಂಧಿತ ಚೈತ್ರಾನಿಲ ಕಿಟಕಿಯ ಮುಖೇನ ನುಗ್ಗಿ ಬಂದು ಮುಖ ಮೈಗಳನ್ನು ಮೆಲ್ಲಮೆಲ್ಲನೆ ಮುದ್ದಿಟ್ಟ. ಮಾಮರದ ಮೊಗ್ಗುಗಳು- ಅರಳಿದ ಪುಷ್ಪಗಳು ಉತ್ಸುಕಮನವನ್ನು ಇನ್ನೂ ಉತ್ಸುಕಗೊಳಿಸುವಂತಿದ್ದವು. ಅನೇಕ ವೇಳೆ

ಭ್ರಮಂತಭ್ರಮರಗಳು ಹಾದಿತಪ್ಪಿ ಕಿಟಿಕಿಯೊಳಗೆ ಹಾರಿ ಬಂದು, ಅನಂತರ ಹೊರಹೋಗಲು ಹಾದಿಯನ್ನು ಹುಡುಕಿಕೊಳ್ಳಲಾಗದೆ ಅಲ್ಲಲ್ಲೆ ಹಾರಾಡುತ್ತ ಝೇಂಕರಿಸುತಿದ್ದುವು. ಲೀನಾ ಹೊರ ಜಗತ್ತಿನಲ್ಲಿ ದೃಷ್ಟಿಯನ್ನು ನೆಟ್ಟು ಭಾವಪರವಶಳಾಗಿ ಚಿಂತಿತಳಾದಳು. ಕಿಟಿಕಿಯ ಕದಗಳು ಹರವಾಗಿ ತೆರೆದಿದ್ದುವು ಶುಭ್ರವಾದ ಪರದೆ ಬದಿಯಲ್ಲಿ ನಿರಿನಿರಿಯಾಗಿ-ಮುದ್ದೆಯಾಗಿ ನಿಂತಿತ್ತು. ಮೇಜಿನ ಮೇಲೆ ಹೊಂದಿಸಿದ ಪುಷ್ಪ ಕುಂಡದಲ್ಲಿ ವಿಧವಿಧ ವರ್ಣದ ಪುಷ್ಪಗಳು ನಳನಳಿಸುತಿದ್ದುವು. ಒಳಗಡೆ ಸಿಕ್ಕಿಕೊಂಡಿದ್ದ ಭ್ರಮರಗಳು ಹಾರಿ ಬಳಲಿದನಂತರ ಪುಷ್ಪಕುಂಡದ ಪುಷ್ಪಗಳಿಂದ ಆಕರ್ಷಿತವಾದುವು. ಭ್ರಮರ ಭಾರದಿಂದ ಪುಷ್ಪರಾಗ ಚೆಲ್ಲಿ ತಲಸ್ಥಲ ಸ್ವರ್ಣ ರಂಗೋಲಿಯಿಂದ ಚಿತ್ರಿತವಾಯಿತು.

ಆನಂದವನ್ನೇ ಆನಂದಿತಗೊಳಿಸುವಂತಿದ್ದ ಭ್ರಮಿತಭ್ರಮರಾವಳಿಗಳನ್ನು ನಿಟ್ಟಿಸುತ್ತ,

"ಒಂದು ವೇಳೆ..." ಎಂದ ಸಿಸ್ಟರ್ ಫ್ಲಾರೆನ್ಸ್ ಒಂದು ಘಳಿಗೆ ಯೋಚಿಸಿ ಮುಂದುವರಿದಳು, "ನೋಡು ಮಗೂ, ನೀನು 'ಸಿಸ್ಟರ್' ಆಗುವುದೇ ಸರಿಯೆಂದು ತೀರ್ಮಾನಿಸಿದರೆ ಮಹಾತ್ಯಾಗಕ್ಕೆ ಸಿದ್ಧಳಾಗಿರಬೇಕು. ಸೇವೆಯೇ ಪರಮ ಗುರಿ. ಅದನ್ನು ಮೀರಿ ನೀನು ನಿನಗಾಗಿ ಈ ಜೀವಿತದಲ್ಲಿ ಏನನ್ನೂ ಪಡೆಯಲಾರೆ, ಎಂಬುದು ನಿನಗೆ ಮನದಟ್ಟಾಗಿದೆಯಷ್ಟೆ....?"

"ಹೌದು; ಸಿಸ್ಟರ್."

"ನೀನು ಸರ್ವಸ್ವವನ್ನು ತ್ಯಾಗ ಮಾಡಲು ಸಿದ್ಧವಿರುವುದಾದಲ್ಲಿ ಮಾತ್ರ ಮುಂದೆ ಹೆಜ್ಜೆಯಿಡಬಹುದು. ಇಲ್ಲದಿದ್ದಲ್ಲಿ ಅವಮಾನಕ್ಕೆ ಗುರಿಯಾಗುವೆ."

"......."

"ನಿನ್ನ ಚಿಕ್ಕಮ್ಮ ಚಿಕ್ಕಪ್ಪಂದಿರಿಗೆ ಏನು ಹೇಳುವೆ?"

ಲೀನಾ ಒಂದು ಘಳಿಗೆ ಯೋಚಿಸಿದಳು. ಏನು ಮಾಡಬೇಕೆಂಬುದೇ ತೋರುತ್ತಿಲ್ಲ. ಸ್ಮರಣೆಯ ಹಾದಿಯಲ್ಲಿ ಚಿಕ್ಕಪ್ಪ ಚಿಕ್ಕಮ್ಮ ಸಾಗಿ ಹೋದರು. ಅವರ ಆಸ್ತಿಗೆ ತಾನು ಮಣಿದೆನೆಂದರೆ ತನ್ನ ಸ್ವಾತಂತ್ರ್ಯಹರಣವಾಗುವುದೇನೋ ಎಂಬ ಭಯ. ಮೇಲಾಗಿ ಇಲ್ಲೇ ಇದ್ದು ಬಿಟ್ಟಿರುವುದರಿಂದ ಅವರ ಬಳಕೆಯೂ ಅಷ್ಟಾಗಿ ಆಗಿಲ್ಲ. ಅನಂತರ ಮದುವೆ, ಮಕ್ಕಳು ಮರಿ, ಸಂಸಾರ. ಮನದಲ್ಲಿ ನೂರಾರು ಸಮಸ್ಯೆಗಳು ಸುಳಿದಾಡಿದುವು. ಮೈನವಿರೆದ್ದು ಅಪಾದಮಸ್ತಕವೂ ವಿದ್ಯುಲ್ಲಹರಿಯು 'ಜುಂ' ನೆ ಹರಿದಾಡಿಹೋಯಿತು. ಮುಗ್ಧ ಮನಸ್ಸು ಆತಂಕಕ್ಕೊಳಗಾಯಿತು. ಸುಮ್ಮನೆ ಮರವಟ್ಟಂತೆ ಕುಳಿತು ಬಿಟ್ಟಳು.

"ಏಕೆ ಮಾತೇ ಇಲ್ಲವಲ್ಲಾ? ಏನು ಹೇಳುತ್ತಿ?"

"ಏನು ಹೇಳಬೇಕೋ ನನಗೆ ಗೊತ್ತಾಗುತ್ತಲೇ ಇಲ್ಲ ಸಿಸ್ಟರ್."

"ಅವರು ಅವಸರಿಸತಿದ್ದಾರೆ. ನೀನು ಒಪ್ಪಿಕೊಳ್ಳದೆ ಹೋದರೆ ಬೇರೆ ಯಾರನ್ನಾದರೂ ದತ್ತು ತೆಗೆದುಕೊಳ್ಳುತ್ತಾರೆ. ಅನಂತರ ನಿನಗೆ ಅವರ ಸಹಾಯ ದೊರೆಯುವುದು ಕಷ್ಟ."

"ನಿಜ...."

"ಅಂದಮೇಲೆ ನಿನ್ನ ಭವಿಷ್ಯವನ್ನು ನೀನೇ ನಿರ್ಧರಿಸಬೇಕು."

"ನಿಮ್ಮ ಸಲಹೆಯೇನು ಸಿಸ್ಟರ್?"

"ನಾನು ಯಾವ ರೀತಿ ಸಲಹೆ ಕೊಟ್ಟರೂ ಏಕ ಪಕ್ಷೀಯವಾಗುತ್ತೆ. ನಿನ್ನ ಮನಸ್ಸು-ನಿನ್ನ ಇಚ್ಛೆ-ನಿನ್ನ ಬುದ್ಧಿ ಇವುಗಳ ಮಟ್ಟದಲ್ಲಿ ನಿನ್ನ ಭವಿಷ್ಯವನ್ನು ನೀನೇ ನಿರ್ಧರಿಸಬೇಕು. ನಿನ್ನ ಮುಂದಿರುವ ಎರಡು ಹಾದಿಗಳಲ್ಲೂ ಹೊಣೆಗಾರಿಕೆ ಅಪಾರವಾಗಿದೆ. ಯಾವುದು ಸೂಕ್ತ-ಯಾವುದರಲ್ಲಿ ನೀನು ಶಾಂತಿಯನ್ನು ಪಡೆದುಕೊಳ್ಳಬಲ್ಲೆ ಎಂಬುದನ್ನು ಬಹಳವಾಗಿ ಯೋಚಿಸಿ ನಿರ್ಧರಿಸು."

"ನನಗೆ ಈಗಾಗಲೇ ಏನು ತಿಳಿಯುತ್ತೆ ಸಿಸ್ಟರ್?"

"ಹಾಗೆಂದರೆ....? ನಿನ್ನ ಭವಿಷ್ಯವನ್ನು ನೀನಲ್ಲದೆ ಇನ್ನಾರು ನಿರ್ಧರಿಸಬೇಕು ಹೇಳು?"

ಲೀನಾ ಮಾತಾಡಲಿಲ್ಲ. ಯಾವುದೋ ಕಾಣದ ಕೈ ಗಂಟಲನ್ನು ಒತ್ತಿ ಹಿಡಿದಂತಾಯಿತು.

"ನಿನ್ನ ಮನಸ್ಸು ಮೋಹಮುಕ್ತವಾಗಿದ್ದರೆ ಮಾತ್ರ 'ಸಿಸ್ಟರ್' ಆಗುವುದು ಸಾಧ್ಯ."

"ಯೋಚಿಸಿ ನೋಡು. ಮುಂದಿಟ್ಟ ಹೆಜ್ಜೆಯನ್ನು ಎಂದೂ ಹಿಂತೆಗೆಯಬಾರದು."

★ ★ ★ ★ ★

ಬಹುಶಃ ಸುಮಾರು ಹದಿನೇಳು ವರ್ಷಗಳ ಹಿಂದೆ ದುರದೃಷ್ಟವಶಾತ್ ನಡೆದ ಆಕಸ್ಮಿಕದಿಂದಾಗಿ, ಲೀಲಾ ಹತ್ತು ತಿಂಗಳ ಮಗುವಿರುವಾಗಲೇ ತಂದೆಯನ್ನು ಕಳೆದುಕೊಂಡಳೇನೋ....ಅನಂತರ ತಾಯಿಯ ಪಾಲನೆ ಕೇವಲ ಎರಡು-ಮೂರು ವರ್ಷಗಳು. ತನ್ನ ದುಃಖಭರಿತ ಸಂಸಾರವನ್ನು ಬರಿದು ಮಾಡಿ ಮಗುವನ್ನು

ತಬ್ಬಲಿಯನ್ನಾಗಿಸಿ ಸ್ವರ್ಗದ ಹಾದಿಯನ್ನು ನಿಶ್ಚಿಂತೆಯಿಂದ ಅವಳು ಅಡರಿದಾಗ ಕುಟುಂಬಿಗರು ಅನೇಕರಿದ್ದರೂ ಮಗುವಿನ ಹೊಣೆಗಾರಿಕೆ ಯಾರಿಗೂ ಬೇಡವಾಗಿತ್ತು; ದುಡ್ಡು ದುಗ್ಗಾಣಿ ಸಾಮಾನು ಸರಂಜಾಮು ಇವುಗಳಲ್ಲಿ ಮಾತ್ರ ಎಲ್ಲರ ಆಸಕ್ತಿ ಕೇಂದ್ರೀಕೃತವಾಗಿತ್ತು. ಅಂತಹ ಸಂದರ್ಭದಲ್ಲಿ ಮಗುವಿನ ಹೊಣೆಗಾರಿಕೆಯನ್ನು ಹೃತ್ಪೂರ್ವಕವಾಗ ಹೊತ್ತವರು ಮದರ್ ಸುಪೀರಿಯರ್ ಹಿಲ್ಡಾ. 'ಲೀಲಾ' ಎಂಬ ನಾಮಧೇಯ ಕ್ರಮೇಣ 'ಲೀನಾ' ಎಂಬುದಾಗಿ ಮಾರ್ಪಟ್ಟಿತು. ಇದುವರೆವಿಗೂ ಸರಾಗವಾಗಿ-ವಿದ್ಯಾಪೀಠದ ಮೆಟ್ಟಿಲನ್ನು ಹಂತಹಂತವಾಗಿ ಏರಿದ್ದ ಲೀನಾಳ ಮುಂದೆ ಇದ್ದಕ್ಕಿದಂತೆ ಸಮಸ್ಯೆಯೊಂದು ಧುತ್ತೆಂದು ಬಂದು ಕುಳಿತಿತು.

ಅವಳ ಸ್ವಂತ ಚಿಕ್ಕಪ್ಪನಿಗೆ ಇದ್ದ ಮೂವರು ಮಕ್ಕಳೂ ಕೈಬಿಟ್ಟು ಹೋದುದರಿಂದ ಮನೆತನಕ್ಕೆ ದಿಕ್ಕಿಲ್ಲವಾಗಿ ದೃಷ್ಟಿ ಇತ್ತ ಹರಿಯಿತು. ಕಾನ್ವೆಂಟಿನ ಮದರ್ ಸುಪೀರಿಯರನ್ನು ಕಂಡು ''ಲೀಲಳನ್ನು ನಮಗೆ ಬಿಟ್ಟುಕೊಡಿ, ಅವಳನ್ನು ಮದುವೆ ಮಾಡಿ ಮನೆಯಲ್ಲೇ ಇಟ್ಟುಕೊಳ್ಳುತ್ತೇವೆ. ನಮ್ಮ ವೃದ್ಧಾಪ್ಯಕ್ಕೆ ಒಂದು ದಿಕ್ಕಾಗುತ್ತದೆ.'' ಎಂಬ ಬೇಡಿಕೆಯನ್ನು ಮುಂದಿಟ್ಟರು. ಅವರಿರುವುದು ಕೇರಳದಲ್ಲಿ. ಇಲ್ಲಿಂದ ಕಾಲ್ತೆಗೆದರೆ ಕಾನ್ವೆಂಟಿನ ಸಂಸ್ರವವು ಸಂಪೂರ್ಣ ಕಡಿದು ಹೋಗುವುದಲ್ಲದೆ ಅಪರಿಚಿತ ದೇಶ-ಅಪರಿಚಿತ ಜನ ಏನು ಕತೆಯೋ ಮುಂದೆ, ಎಂಬ ಭಯ ಮನವನ್ನು ಗಾಣಕ್ಕೆ ಕೊಟ್ಟ ಕಬ್ಬಿನಂತೆ ಹಿಂಡುತಿತ್ತು. ಯೋಚಿಸಿ ಯೋಚಿಸಿ ಯಾವ ವಿಧವಾದ ಸಂವೇದನೆಯೂ ಅನುಭವಕ್ಕೆ ಬಾರದಷ್ಟು ಚಿತ್ತ ಜಡವಾಗಿ...ನಿಷ್ಕ್ರಿಯವಾಯಿತು. ತಾನೊಬ್ಬ ಸಿಸ್ಟರಾಗಿ ಸೇವೆ ಸಲ್ಲಿಸುವ ಯೋಚನೆ ಮಾಡಿದ್ದಾಗಲೇ ಈ ಸೂಚನೆ ಬಂದು ಹಾದಿ ಇದ್ದಕ್ಕಿಂತೆಯೇ ಕವಲೊಡೆಯಿತು; ಮುಂದೆ....?

ಅಂದು ಚಿಕ್ಕಪ್ಪ ಚಿಕ್ಕಮ್ಮ ಅನಿರೀಕ್ಷಿತವಾಗಿ ಬಂದಿದ್ದಾಗ ಲೀನಾ ತನ್ನ ಗೆಳತಿ ಶಶಿಯೊಡನೆ ವಿಚಾರ ವಿಹಾರದಲ್ಲಿ ತೊಡಗಿದ್ದಳು,

''ನನಗೆ ಖಂಡಿತ ಸಿಸ್ಟರಾಗಿ ಸೇವೆ ಸಲ್ಲಿಸಬೇಕೆಂದು ತುಂಬ ಇಷ್ಟ ಶಶಿ.''

''ಸಿಸ್ಟರಾಗುವುದು ಸಿಸ್ಟರ್ ಫ್ಲಾರೆನ್ಸ್ ಮತ್ತು ಸಿಸ್ಟರ್ ಮೇರಿಯವರನ್ನು ನೋಡುವಾಗಲೆಲ್ಲ ನಾನೂ ಸಿಸ್ಟರಾಗಬೇಕು ಎಂಬ ಅದಮ್ಯ ಆಸೆ ಮನವನ್ನು ತುಂಬಿಕೊಳ್ಳುತ್ತದೆ. ಏನು ಮಾಡಬೇಕೋ ಬಗೆ ಹರಿಯುತ್ತಿಲ್ಲ.''

''ಯೋಚಿಸಿ ನೋಡು; ದುಡುಕ ಬೇಡ.''

''ಈ ಜೀವನದಲ್ಲಿ ಏನಿದೆ ಹೇಳು? ಮದುವೆ-ಮನೆ-ಮಕ್ಕಳು-ಸಂಸಾರ-ಕಸ-ಮುಸುರೆ ಇಷ್ಟರಲ್ಲೇ ಇಡೀ ಜೀವಮಾನ ಕಳೆಯಬೇಕಷ್ಟೆ? ಇದನ್ನೆಲ್ಲಾ

ಕುರಿತು ಆಳವಾಗಿ ಯೋಚಿಸಿದರೆ ಸಿಸ್ಟರಾಗುವುದೇ ಲೇಸು ಎನಿಸುತ್ತದೆ. ಇನ್ನೂ ಯಾವ ನಿರ್ಧಾರವನ್ನೂ ಕೈಕೊಂಡಿಲ್ಲ. ಒಮ್ಮೆ ಮದರ್ ಸುಪೀರಿಯರನ್ನು ಕೇಳಬೇಕು ಎಂಬ ಇಚ್ಛೆ, ಆದರೆ ಈ ತನಕ ಸಾಧ್ಯವಾಗಿಲ್ಲ. ಅವರನ್ನು ಕಂಡಾಗಲೆಲ್ಲ ಯಾವುದೋ ಕಾಣದ ಕೈ ಗಂಟಲನ್ನು ಅದುಮಿ ಹಿಡಿದಂತಾಗುತ್ತದೆ.''

''ಆದರಲ್ಲೇ ಗೊತ್ತಾಗುತ್ತದೆ. ನಿನ್ನ ಮನಸ್ಸು ಇನ್ನೂ ದೃಢವಾಗಿಲ್ಲ, ಎಂದು.''

ಇಬ್ಬರ ತುಟಿಗಳಲ್ಲೂ ಎಳೆನಗು ಮೂಡಿತು.

ಅದೇ ಸಮಯದಲ್ಲಿ ಆಯಾ ಬಂದು ಹೇಳಿದಳು,

''ಮದರ್ ಸುಪೀರಿಯರ್ ಕರೆಯುತಿದ್ದಾರೆ.''

ಲೀನಾ ಆಶ್ಚರ್ಯಪೂರ್ವಕವಾಗಿ ಕಣ್ಣುಗಳನ್ನು ಅರಳಿಸಿ ಕೇಳಿದಳು,

''ನನ್ನನ್ನೇ?''

''ಹೌದು.''

ಏನಿರಬಹುದು...? ಆದರಲ್ಲೂ ನನ್ನಂತಹ ಯಃಕಶ್ಚಿತಳೊಂದಿಗೆ ಯಾವ ವಿಚಾರವಿನಿಮಯವಿದ್ದೀತು? ಒಂದುವೇಳೆ ನನ್ನ ಆಸೆ ಅವರ ಅಂತರಾತ್ಮವನ್ನು ಮುಟ್ಟಿರಬಹುದೆ?....ಅದೇ ಪರಮ ಆಶ್ಚರ್ಯ !

ಲೀನಾ ಗಂಭೀರಮೂರ್ತಿಯಾಗಿ ಅಲ್ಲಿಂದ ಹೊರಟಳು. ಗೆಳತಿ ಹೊಸ್ತಿಲು ದಾಟುವ ಮುನ್ನಪಿಸುಗುಟ್ಟಿದಳು ''ಅದೇನು ಸಮಾಚಾರ? ಆಮೇಲೆ ಬಂದು ಹೇಳು ನನಗೆ.''

''ಆಗಲಿ.''

ಲೀನಾ ಹೊರಟಳು. ಮದರ್ ಸುಪೀರಿಯರ ಕೊಠಡಿ ಇದ್ದುದು ಹೊಸ ಕಟ್ಟಡದಲ್ಲಿ. ಮಧ್ಯೆ ವಿಶಾಲವಾದ ಅಂಗಳವನ್ನು ದಾಟಿ ಅಲ್ಲಿಗೆ ಹೋಗಬೇಕು. ಹೂದೋಟದ ಆ ಸುಂದರ ಹಾದಿ ನಯನಾಕರ್ಷಕವಾಗಿತ್ತು. ವರ್ಣರಂಜಿತ ಚಿತ್ತಾರವನ್ನು ಚಿತ್ರಿಸಿದಂತಿತ್ತು.

ಸಂಧ್ಯಾಸಮಯ....

ಹೊಳೆ ಹೊಳೆಯುವ ಹೊನ್ನವರ್ಣದ ನೇಸರು ಪಡುವಣ ದಿಗ್ದೇಶದಲ್ಲಿ ರಾರಾಜಿಸಿದ್ದಾನೆ.

ಆ ಹೊಂಬಿಸಿಲಲ್ಲಿ ಮೀಯುವುದೆಂದರೆ ಮನಸ್ಸಿಗಂತೂ ತುಂಬ ಹಿತ. ಮನದಲ್ಲಿ ಮದರ್ ಸುಪೀರಿಯರ ಕರೆ ಧುಮುಧುಮಿಸುತಿದ್ದರೂ ನಡಿಗೆ ನಿಧಾನವಾಯಿತು. ಸೌವರ್ಣಕಾಂತಿಯಲ್ಲಿ ಮಿಂದು, ಅಂಗರಾಗ ವರ್ಧಿಸಿ ಆನಂದ ಆತಂಕಗಳ

ಒಕ್ಕೂಟವಾಯಿತು ಎಳೆ ಹೃದಯ. ಮುಂದಿನ ಹತ್ತು ಮಾರನ್ನು ಕಳೆದು ಕೊಠಡಿಯ ಬಳಿಗೆ ಹೋದಾಗ ಅಪರಿಚಿತ ಕಂಠಗಳ ಸ್ವರ ಕಿವಿಗಳನ್ನುತಾಗಿತು. ಅಪರಿಚಿತರಿರುವಾಗ ಏಕಾಏಕಿ ಒಳಗೆ ಹೋಗುವುದು ಸರಿಯಲ್ಲ ಎಂಬ ವಿವೇಚನೆಗೆ ಶರಣಾಗಿ ಹೊಸ್ತಿಲ ಬಳಿಯಲ್ಲೇ ನಿಂತಳು. ಅವರ ಮಾತುಕತೆ ಸಾಗಿಯೇ ಇತ್ತು. ಆದರೂ ಅವರೇ ಕರೆ ಕಳುಹಿಸಿರುವುದರಿಂದ ಹೆಚ್ಚು ವಿಳಂಬ ಮಾಡಲು ಮನಸ್ಸು ಬರಲಿಲ್ಲ.

ಕಟ. ಕಟ. ಕಟ. ಕಟ.

''Yes Please !''

ಬೆರಳು ಮಿಡಿದರೂ, ತುಟಿ ಕಚ್ಚಿಕೊಂಡಿದ್ದಳು ಲೀನಾ, ಮಾರುತ್ತರ ಹೊರಡುತ್ತಲೂ ಸಮಾಧಾನದಿಂದ ಒಳ ಹೋದಳು. ಅಪರಿಚಿತರ ನೋಟ ತಟ್ಟನೆ ಇತ್ತ ಹರಿಯಿತು. ಕುತೂಹಲ ತೃಷಿತ ನೋಟ ಒಂದು ಕ್ಷಣ ಅವರೆಡೆಗೆ ಹರಿದು ಮದರ್ ಸುಪೀರಿಯರ್ ಕಡೆ ಚಿಮ್ಮಿತು. ಅವರ ತುಟಿಗಳಲ್ಲಿ ಮಿನುಗಿದ ಸರಳ ಸ್ನಿಗ್ಧಹಾಸ ಸ್ವಾಗತ ನೀಡಿತು. ಎದುರಿನ ಕುರ್ಚಿಗಳಲ್ಲಿ ಕುಳಿತಿದ್ದ-ದಂಪತಿಗಳೆಂಬಂತೆ ತೋರುವ ಅಪರಿಚಿತರ ಕಡೆ ಬೆರಳುಮಾಡಿ ''ಇವರ ಪರಿಚಯ ನಿನಗಿಲ್ಲ ಅಲ್ಲವೆ?'' ಎಂದರು-ಮದರ್ ಸುಪೀರಿಯರ್.

ಲೀನಾ ಅವರನ್ನು ಮಿಕಿ ಮಿಕಿ ನೋಡಿದಳು. ತುಟಿಗಳು ಬಿರಿಯದಿದ್ದರೂ ಮುಖಭಾವ 'ಪರಿಚಯವಿಲ್ಲ' ಎಂಬುದನ್ನು ಸಾರಿ ಹೇಳಿತು.

''ಪಾಪ, ಆಗ ಅವಳಿನ್ನು ಚಿಕ್ಕ ಮಗು. ಈ ನಡುವೆ ಎಂದೂ ನೋಡಿಲ್ಲ. ಪರಿಚಯವಿರುವುದಾದರೂ ಹೇಗೆ?'' ಎಂದಳು ಗೃಹಿಣಿ. ಮುಖಭಾವ ಪ್ರಸನ್ನವಾಯಿತು.

''ಬಾ, ಇಲ್ಲಿ. ನಾನೇ ಪರಿಚಯ ಹೇಳುವೆ.'' ಎಂದ ಗೃಹಸ್ಥ.

ಖಾಲಿ ಕುರ್ಚಿಯ ಕಡೆ ಬೆರಳು ತೋರಿ ''ಕುಳಿತುಕೊ.'' ಎಂದರು ಮದರ್ ಸುಪೀರಿಯರ್.

''ಬಾಮ್ಮಾ!''

ನಾಚಿಕೆ ಅಂಜಿಕೆಗಳ ಒಕ್ಕೂಟವಾಗಿ ಕುಳಿತುಕೊಂಡಳು ಲೀನಾ.

★ ★ ★ ★ ★

''ಅವರು ನಿಜವಾಗಿಯೂ ನನ್ನ ಚಿಕ್ಕಪ್ಪ ಆಗಿದ್ದಿದ್ದರೆ ಇದುವರೆವಿಗೆ ಒಂದು ಬಾರಿಯೂ ಬರಲಿಲ್ಲವಲ್ಲ.....?''

“ಕೇರಳ ಹತ್ತಿರವೇನಲ್ಲ; ಜಮೀನು ಮನೆ ಸಂಸಾರ ಅಂದಮೇಲೆ ಅವರಿಗೂ ಕಷ್ಟಸುಖಗಳಿರುತ್ತವೆ.”

“ಆದರೂ ಸಹ....ನಾನು ತಬ್ಬಲಿ ಎಂದಾದರೂ ಬರಬಹುದಾಗಿತ್ತಲ್ಲ?”

“ಇರಲಿ, ಜೀವನದಲ್ಲಿ ಲೋಪ ದೋಷಗಳಿರುವುದು ಸಹಜ....”

“ಎಷ್ಟೆಂದರೂ ನನಗಿದೊಂದು ಒಗಟು.”

“ಇದೊಂದು ಮಾತ್ರವಲ್ಲ. ನಿನ್ನ ಪ್ರತಿ ಹೆಜ್ಜೆ ಹೆಜ್ಜೆಯೂ ಸಮಸ್ಯೆಯನ್ನೆದುರಿಸಬೇಕಾಗುತ್ತದೆ.”

“ನನಗೆ ಈಗಲೇ ಚಿಂತೆ ಹಿಡಿದಿದೆ.”

“ಚಿಂತೆ ಹಚ್ಚಿಕೊಂಡೇನು ಫಲ?”

“ಏನೋ.... ದೇವರಗತಿ!”

“ಆ ಧೈರ್ಯದ ಮೇಲೆ ಮುಂದುವರಿ.”

“..........”

“ಧೈರ್ಯಂ ಸರ್ವತ್ರ ಸಾಧನಂ.”

ಲೀನಾ ಕಿಟಕಿಗೆದುರಾದ ಕುರ್ಚಿಯ ಮೇಲೆ ಕುಳಿತಿದ್ದಾಳೆ. ಮೇಜಿನ ಮೇಲೆ ಮೊಣಕೈಯ್ಯೂರಿ ಎರಡೂ ಹಸ್ತಗಳನ್ನು ಸುಂದರವಾದ ಗಲ್ಲಕ್ಕೆ ಆಧಾರವಾಗಿಟ್ಟು ಶಿರೋಭಾರವನ್ನು ಇಳಿಸಿದ್ದಾಳೆ. ತಲೆಯಲ್ಲಿ ವಿಚಾರ ಮಂಥನ ನಡೆದತ್ತು. ದಂಡೆದ್ದು ಬರುವ ಪ್ರಶ್ನೋತ್ತರಗಳನ್ನು ಶಾಂತಿಯಿಂದ ಅವಲೋಕಿಸುತ್ತ ಅದೆಷ್ಟು ಹೊತ್ತು ಕುಳಿತಿದ್ದಳೋ...... ಬಹುಶಃ ಅದರ ಪರಿವೆಯೇ ಅವಳಿಗಿರಲಿಲ್ಲ.

ನೀಲ ವರ್ಣಾಚ್ಛಾದಿತವಾದ ಆಕಾಶದಲ್ಲಿ ಬೆಳ್ಮೋಡಗಳ ಮಾಲೆ ಮೇಳೈಸಿದ್ದುವು.

ಸಂಧ್ಯಾ ಸಮೀರ ಅತ್ಯಂತ ಆನಂದೋಲ್ಲಾಸಭರಿತನಾಗಿ ದಿಗಂತರದಿಂದ ದಿಗಂತರಕ್ಕೆ ತಣ್ಣಗೆ ತೀಡುತ್ತಿದ್ದಾನೆ. ಪುಷ್ಪ ಸೌಗಂಧ ಪೂರಿತ ವಾಯುಸೇವನೆ ಮನೋಲ್ಲಾಸಕರವಾಗಿತ್ತು. ಒಂದು ಬಗೆಯ ಸಹಜ ಸೌಕುಮಾರ್ಯದಿಂದ ಜಗತ್ತು ಅತ್ಯಂತ ಕಮನೀಯವಾಗಿ ಕಾಣಿಸುತಿತ್ತು. ಜೀವನವೂ ಅಷ್ಟೇ ಕಮನೀಯವಾಗಿರುತ್ತದೆ ಎಂದು ನಂಬುವುದು ಕಷ್ಟವಾದರೂ ಕಮನೀಯತೆಯನ್ನು ಪಡೆದು ಕೊಳ್ಳುವುದು ತನ್ನ ಕೈಯ್ಯಲ್ಲಿದೆ ಎಂಬ ನಂಬುಗೆಯನ್ನಂತೂ ಮೂಡಿಸುತ್ತದೆ. ಆದರೂ ಸಹ ತನ್ನ ಗಮನವನ್ನೆಲ್ಲಾ ಈ ಪ್ರಪಂಚದ ದೀನ ದುಃಖಿಗಳ ಕಡೆ ಹರಿಸುವುದರಲ್ಲೇ ಮಹೋನ್ನತಿ ಇದೆ...... ಎಂಬುದು ಮನದಟ್ಟಾಗಿದೆ. ಇನ್ನದನ್ನು ಯಾವ ಕಾರಣಕ್ಕೂ ಬಿಟ್ಟು ಕೊಡಲು ಮನಸ್ಸಾಗುವುದಿಲ್ಲ. ಹೇಗಾದರೂ ಆ ಹಾದಿಯಲ್ಲಿಯೇ ಮುಂದುವರಿಯ-ಬೇಕೆಂಬುದು ತನ್ನ ಇಚ್ಛೆ. ಆದರೆ ಭಗವಂತನ ಇಚ್ಛೆ ಏನಿದೆಯೋ.....

ಅಯ್ಯೋ, ಈ ಜೀವನವೇ 'ಆದರೆ' ಮಯ.....!

ಮರುಕ್ಷಣದಲ್ಲಿ ಚಿಕ್ಕಮ್ಮ ಮನದಲೆಯಲ್ಲಿ ಮೂಡಿ ನಿಂತರು. ಅವರು ಅಂದು ನುಡಿದ ವಾಕ್ಯ ಸರಣಿ ಕಿವಿಯಲ್ಲಿ ಮತ್ತೆ ಝೇಂಕರಿಸಿತು.

''ನಮ್ಮ ದೌರ್ಭಾಗ್ಯಕ್ಕೆ ಮೂರು ಮಕ್ಕಳೂ ದಕ್ಕಲಿಲ್ಲ. ಅಮೂಲ್ಯವಾದ ಮನೆ-ಜಮೀನು ಕಂಡವರ ಪಾಲಾಗುವುದಕ್ಕಿಂತ ನಮ್ಮವರೇ ಅನುಭವಿಸಲಿ ಎಂಬುದು ನಮ್ಮ ಆಸೆ.''

''ನಾವೇನೂ ಅಂತಹ ಕೆಟ್ಟವರಲ್ಲ.... ನೀನು ಇದುವರೆವಿಗೂ ಬಂದು ನೋಡಲಿಲ್ಲ. ಎಂದುಕೊಳ್ಳಬಹುದು. ಸಂಸಾರದ ನಾನಾ ಕಷ್ಟಕಾರ್ಪಣ್ಯಗಳಿಂದ ಇಷ್ಟುದೂರ ಬರುವಷ್ಟು ಬಿಡುವು ನಮಗೆ ಆಗಲಿಲ್ಲ. ನೀನು ಹೇಗೂ ಸುಖವಾಗಿದ್ದಿ ಎಂಬುದು ಗೊತ್ತಿತ್ತು. ಅಂತೂ ಹೇಗೋ ದಿನಗಳು ಕಳೆದು ಹೋದುವು. ನೀನು ಇಲ್ಲಿದ್ದು 'ಕ್ರಿಶ್ಚಿಯನ್' ಆಗುವುದಕ್ಕಿಂತ ಅಲ್ಲಿಗೆ ಬಂದು ಸಂಸಾರಸ್ಥಳಾಗಿ ಸುಖವಾಗಿರುವುದು ಲೇಸು.''

ಅವರು ದಿನವೆಲ್ಲ ಅದೇ ಪುರಾಣ ಊದಿದ್ದರು. ತಮ್ಮ ವೃದ್ಧಾಪ್ಯ ಸಂದರ್ಭದಲ್ಲಿ ಯಾರಾದರೂ ತಮ್ಮ ಬಳಿ ಇರುವುದು ಲೇಸು ಎಂಬ ಯೋಚನೆ ಅಕ್ಷರ ಅಕ್ಷರದಲ್ಲೂ ಹೊಮ್ಮುತಿತ್ತು. ಮೇಲಾಗಿ ಅವರ ಸೋದರಳಿಯನನ್ನು ಮನೆಯಲ್ಲೇ ಉಳಿಸಿಕೊಳ್ಳುವ ಯೋಚನೆ. ಅವನಿಗೆ ಮನೆ ಮಗಳನ್ನೇ ತಂದುಕೊಂಡರೆ ಇನ್ನೂ ಉತ್ತಮ ಎಂಬ ಚಿಂತನೆಯನ್ನು ಅವರಂತೆ ನಾನು ಮೈಗೂಡಿಸಿಕೊಳ್ಳುವುದು ಕಷ್ಟವೇ. ಆದ್ದರಿಂದ ಹೋಗಿ ತೊಂದರೆಗೆ ಸಿಕ್ಕಿಕೊಳ್ಳುವುದಕ್ಕಿಂತ ಹೋಗದಿರುವುದು ಲೇಸು...

ಮಾನಸ ಮುರಳಿ ಹಾಡುತ್ತಲೇ ಇತ್ತು.

ಪ್ರಯತ್ನಪಟ್ಟರೂ ಆ ಮಹತ್ವವಾಹವನ್ನು ತಡೆಗಟ್ಟಲಾಗಲಿಲ್ಲ. ಮಯಣದ ಬೊಂಬೆಯಂತೆ ಕುಳಿತು ಏಸು ಸ್ವಾಮಿಗೆ ಆತ್ಮನಿವೇದನೆ ಮಾಡಿಕೊಂಡು ಭಕ್ತಿಭಾವೋದ್ವೇಗದಿಂದ ನುಡಿದಳು ''ಏನೇ ಇರಲಿ, ನನ್ನನ್ನು ಮುನ್ನಡೆಸುವುದು ನಿನ್ನ ಕರ್ತವ್ಯ.''

''ಮಗೂ, ಯಾವುದನ್ನು ನೀನು ಜೀವನದ ಪರಮ ಕಲುಷವೆಂದು ಭಾವಿಸುತ್ತಿರುವೆಯೋ ಅದೇ ಜೀವನದ ಪರಮ ಸತ್ಯ.''

ಅರೆ.............! ಎಂತಹ ಉತ್ತರ?

★ ★ ★ ★ ★

ಸಿಸ್ಟರ್ ಫ್ಲಾರೆನ್ಸ್ ಮುಂದಡಿ ಇಡುತ್ತ ಹೇಳಿದಳು,

''ನೀನು ಜೀವನನ್ನು ಗೆಲ್ಲಲಾರೆ-ನಿಜ; ಅದಕ್ಕಿಂತ ಇದು ಉತ್ತಮ ಅಥವಾ ಇದು ತುಂಬ ಸುಲಭ ಎಂದು ಭಾವಿಸುವುದಾದರೆ ತಪ್ಪು ಕಲ್ಪನೆ ಎಂದೇ ಹೇಳಬೇಕಾಗುತ್ತದೆ.''

ಒಮ್ಮೆ ಹುಬ್ಬೆತ್ತಿ ಅವಳ ಕಡೆ ನೋಡುವ ಧೈರ್ಯ ಮಾಡಿದಳು ಲೀನಾ. ಒಂದುಸಲ-ಕೇವಲ ಒಂದೇ ಒಂದು ಸಲ ನೋಡಿದ ಆ ನೋಟದಲ್ಲಿ ಆಶ್ಚರ್ಯದ ಛಾಯೆ ಹೊಮ್ಮಿತು.

''ಆತ್ಮಸಂಯಮ ಎಂಬುದು ಷಡ್ರಸಗಳನ್ನು ಜೀರ್ಣಿಸಿಕೊಂಡ ಈ ದೇಹಕ್ಕೆ ಅಷ್ಟು ಸುಲಭವಲ್ಲ. ನಾವು ಈ ಅಸ್ತಿತ್ವ ಪಡೆಯಬೇಕಾದರೆ ಸುಮ್ಮನೆ ಆಗಿದೆಯೇ? ನೀನು ಇದನ್ನೆಲ್ಲಾ ಅದ್ಯಂತವಾಗಿ ಪರಿಶೀಲಿಸಬೇಕು.'' ಎಂದಾಗ ಭಕ್ತಿಸಮುಜ್ವಲ ಮುಖಮಂಡಲ ಆನಂದಾಶ್ರುವಿನಿಂದ ಸಿಕ್ತವಾಯಿತು..... ಅಲೆಯಲೆಯಾಗಿ ಹರಿದಾಡುವ ಭಾವಧಾರೆಯಲ್ಲಿ ಅತೀವ ಶಾಂತಿರಸ ಮೆಲ್ಲನೆ ತೊಟ್ಟಿಕ್ಕುತಿತ್ತು. ಧವಳಾಂಬರಾವೃತವಾದ ಶರೀರ ಸಂಪುಟ ಧವಳಾಮೃತದಿಂದಲೇ ನಿರ್ಮಿತವಾದಂತಿತ್ತು. ಆ ನಡಿಗೆ, ಮೃದು ಮಂದಹಾಸ, ಸವಿನಯ ಸೇವಾಸೌಜನ್ಯ, ಮಮತೆ, ವಿಶ್ವಾಸ.... ಎಲ್ಲಾ ಸೌಭಾಗ್ಯಗಳು ಒಂದೇ ಕಡೆ ಕೇಂದ್ರೀಕೃತವಾಗಿರುವುದೂ ಸಹ ವಿಶೇಷವೇ. ಆಕೆ ಎಷ್ಟೆಷ್ಟು ಜನ್ಮಗಳ ಪುಣ್ಯ ಫಲವನ್ನು ಈ ದೇಹ ಪಂಚಪಾತ್ರೆಯಲ್ಲಿ ತುಂಬಿಕೊಂಡಿದ್ದಾಳೋ ದೇವರಿಗೇ ಗೊತ್ತು. ಇವೆಲ್ಲಾ ನನ್ನಂತಹ ಅಲ್ಪಳಿಗೆ ದುರ್ಲಭ....

ಯೋಚನೆಯ ಕರಾವಳಿಯಲ್ಲಿ ಓಡುತಿತ್ತು ಚಿತ್ತ, ಲೀನಾ ತಲೆಬಾಗಿ ಹೆಜ್ಜೆಹಾಕಿದಳು. ಮುಖವರ್ಣ ನಸು ಬಾಡಿತ್ತು. ತನ್ನೆಲ್ಲ ಶಕ್ತಿ ಸಾಮರ್ಥ್ಯವನ್ನು ಒಂದುಗೂಡಿಸಿ ಪ್ರಯತ್ನಪೂರ್ವಕವಾಗಿ ನುಡಿಯನ್ನು ಹೊರಹಾಕಿದಳು, ''ಹಾಗಾದರೆ..... ನನ್ನಿಂದ ಸಾಧ್ಯವಿಲ್ಲ ಎಂದು ನಿಮ್ಮ ಅಭಿಪ್ರಾಯವೇ?'' ದನಿಯಲ್ಲಿ ಅನಿರೀಕ್ಷಿತವಾಗಿ ಲಘು ಕಂಪನ ಸಂಭವಿಸಿತು.

''ಅಲ್ಲ; ಅಲ್ಲ.'' ತಲೆಯಲ್ಲಾಡಿಸಿ ದೃಢ ಕಂಠದಿಂದ ನುಡಿದಳು ಫ್ಲಾರೆನ್ಸ್ ''ಹಾಗೆಂದೂ ಭಾವಿಸಬೇಡ; ನಿನ್ನಿಂದಾಗದು ಎನ್ನಲಾರೆ. ಆದರೆ... ಹಗಲಿರುಳೂ ಅತ್ಯಂತ ಕಠಿಣ ಸಾಧನೆ ಮಾಡಬೇಕು ಎಂದು ಮಾತ್ರ ಹೇಳುವೆ. ದೃಢ ಮನಸ್ಸು-ಕಠಿಣ ಸಾಧನೆ ಎರಡೂ ಅದ್ಭುತ ಊರುಗೋಲುಗಳು ಅದರಲ್ಲಿ ಒಂದನ್ನುಳಿದು ಒಂದಿಲ್ಲ.....''

''ಆಶೀರ್ವದಿಸಿ ಸಿಸ್ಟರ್!''

"ಸರಿ ಮತ್ತೆ. Go on! God bless you!"

"ತುಂಬ ವಂದನೆಗಳು!"

ಇಬ್ಬರ ತುಟಿಗಳಲ್ಲೂ ಎಳೆ ನಗು ಮಿನುಗಿ ಮಾಯವಾಯಿತು.

★ ★ ★ ★ ★

ಅದೊಂದು ಸುಂದರ ಮುಂಜಾನೆ.

ಅತ್ಯಂತ ಶೀತಲ ವಾತಾವರಣ....

ನೆತ್ತರಿನ ಕಣಕಣವನ್ನೂ ಹೆಪ್ಪುಗಟ್ಟಿಸುವಂತ ಗಾಳಿ-ಹಿಮಗಾಳಿ.

ಅದೇ ತಾನೇ ಕೇರಳದಿಂದ ಹಿಂದಿರುಗಿ ಬಂದ ಲೀನಳಿಗೆ ಜಗತ್ತೇ ಮಧುಮಯವಾಗಿ ತೋರಿತು. ಅಲ್ಲಿಯ ಸುಂದರವಾದ ಎಸ್ಟೇಟು-ಪ್ರಕೃತಿಯ ಸೌಂದರ್ಯ-ಶಾಂತವಾತಾವರಣ-ಕೌಟುಂಬಿಕ ಸಹಯೋಗ ಒಂದೊಂದು ಮೂಗುದಾರವನ್ನೇ ಹಾಕಿ ಬಿಟ್ಟಿವೆ. ಜೇಡನ ಬಲೆಗೆ ಬಿದ್ದ ನೊಣದಂತಾದ ಮನಸ್ಸು ಮಿಲಿಮಿಲಿಗೊಂಡಿತು. ಆತ್ಮ ಚಡಪಡಿಸಿತು.

ಆದರೆ.....!

"ಈ ಆಕರ್ಷಣೆ ಎಷ್ಟು ದಿನ ಉಳಿಯಬಲ್ಲುದು ಎಂಬುದು ಊಹಾತೀತ. ಸಧ್ಯಕ್ಕಂತೂ ಆನಂದಪ್ರಮತ್ತತೆಯಿಂದ ನೆತ್ತರಿನ ಕಣಕಣವೂ ತುಳುಕುವುದುಂಟು. ಮುಂದೇನೋ...."

"ಆ ಅನುಮಾನದಿಂದ ಹೆಜ್ಜೆಯಿಟ್ಟರೆ ಯಾವ ಕ್ಷೇತ್ರದಲ್ಲೇ ಆಗಲಿ ಬುಡಮೇಲಾಗುವುದು ಶತಸಿದ್ಧ!"

ಆ ವಿಚಾರದೋಹನ ಅಂತರಂಗಕ್ಕೆ ಕೊಕ್ಕೆ ಹಾಕಿ ಎಳೆಯಿತು.

ಲೀನಾ ಬಿಸಿಯುಸಿರು ಬಿಡುತ್ತ ಮೆಟ್ಟಿಲು ಹತ್ತಿದಳು. ಎರಡು ಕೈಯಲ್ಲೂ ಸೂಟ್‌ಕೇಸ್ ಬುಟ್ಟಿಗಳಿದ್ದುವು ಚಿಕ್ಕಮ್ಮ ಸಿಹಿ ಖಾರಗಳೇನ್ನೇನೋ ತುಂಬಿ ಕೊಟ್ಟಿದ್ದಾಳೆ. ಅದಕ್ಕೂ ಮಿಗಿಲಾಗಿ ಅವರ ಸೋದರಳಿಯ ಸಂಜೀವ - ಆತನ ಆಕರ್ಷಕ ವ್ಯಕ್ತಿತ್ವ - ಪ್ರೇಮಕಾತರ - ಬೌದ್ಧಿಕ ಶಕ್ತಿ ಮೋಹಕ ಮಳೆಯನ್ನೇ ಕರೆದಿವೆ.... ಮುಂದೇನು? ಎಂಬುದೇ ಈಗ ತನ್ನ ಮುಂದಿರುವ ಪ್ರಶ್ನೆ.

ಕಾನ್ವೆಂಟು ಆಗಲೇ ಚಟುವಟಿಕೆಯ ಬೀಡಾಗಿತ್ತು. ಪೆಟ್ಟಿಗೆ ಬುಟ್ಟಿಗಳನ್ನು ತನ್ನ ಕೊಠಡಿಯಲ್ಲಿಟ್ಟು ಪ್ರಾತರ್ವಿಧಿಗಳನ್ನು ಮುಗಿಸಿ ಹೊರ ಬರುವಷ್ಟರಲ್ಲಿ ಶಶಿ ಎದುರಾದಳು. ಗೆಳತಿಯನ್ನು ನೋಡುತ್ತಲೂ ಮುಖಮಂಡಲ ಪ್ರಸನ್ನವಾಯಿತು.

"ಹೇಗಿತ್ತಮ್ಮಾ ಪ್ರವಾಸ?"

"ತುಂಬ ಚೆನ್ನಾಗಿತ್ತು."

"ಈಗ ನಿನ್ನ ಮನಸ್ಸು ಏನು ಹೇಳುತ್ತದೆ? ಸಂಸಾರವೋ? ಸಂನ್ಯಾಸವೋ?" ಮುಖಬಿಂಬ ಹೂವಿನಂತರಳಿ ಕಣ್ಣುಗಳಲ್ಲಿ ತುಂಟತನ ನಲಿದಾಡಿತು. ಉತ್ತರವನ್ನು ಆಸಕ್ತಿಯಿಂದ ನಿರೀಕ್ಷಿಸಿದಳು ಶಶಿ.

"ಜೀವನ ಸಮಸ್ಯೆಯನ್ನು ಅಷ್ಟು ಸುಲಭವಾಗಿ ಬಿಡಿಸಲಾದೀತೆ?"

"ಬಿಡಿಸಲೇಬೇಕು! ಇನ್ನೂ ಎಷ್ಟು ಕಾಲ ಹೀಗೆ ತೊಳಲಾಡುತ್ತಿ?"

"ತೊಳಲಾಡುತ್ತಿಲ್ಲ. ಸದ್ಯಕ್ಕೆ ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೇನೆ."

"ಎಲ್ಲಿಯ ತನಕ?"

"ಎಲ್ಲಿಯತನಕ ಸಾಧ್ಯವೋ ಅಲ್ಲಿಯ ತನಕ."

"ನಿಜಹೇಳೆ! ನನ್ನ ಹತ್ತಿರವೂ ಗುಟ್ಟೆ?"

"ಗುಟ್ಟು....? ಅಂತಹದ್ದೇನಿಲ್ಲ, ಇನ್ನೂ ಒಂದು ನಿರ್ಧಾರಕ್ಕೆ ಬರಲಾಗಲಿಲ್ಲ ಅಷ್ಟೆ."

"ನಡೆ, ಹೊರಗಡೆ ಹೋಗೋಣ. ಇಲ್ಲಿ ತುಂಬ ಚಳಿ; ಹೊರಗಡೆ ಎಳೆ ಬಿಸಿಲಿದೆ.

ಆ ಮಾತು ಬಹಳ ಹಿತವಾಗಿ ತೋರಿತು. ಲೀನಾ ಅವಳೊಂದುಗೂಡಿ ಹೆಜ್ಜೆ ಹಾಕಿದಳು. ಅಂಗಳದಲ್ಲಿ ಹೊಂಬಿಸಿಲು ಬೆಚ್ಚಗೆ ಹರಡಿತ್ತು. ದಿವಸ ಲಕ್ಷ್ಮಿಯ ಧೃತ ಸಂಚಾರಿತ ಚರಣಗಳ ಪದ್ಮರಾಗಮಣಿಯ ಸುಂದರ ನೂಪುರಗಳು ಕಳಚಿ ಬಿದ್ದು ಸ್ವರ್ಣರಾಗವು ಮೂಡಿದೆಯೋ ಎಂಬಂತೆ ದೃಗ್ಗೋಚರಿಸುತಿತ್ತು ದಿಗ್ದೇಶ.... ಹೆಮ್ಮರಗಳ ಕಿರುಸಂದಿಯಲ್ಲಿ ದಿನಕರನ ಸ್ವರ್ಣಬಿಂಬ ಮೇಲೇರುತ್ತಿರುವುದು ಕಾಣಿಸುತಿತ್ತು. ಕೋಲು ಕೋಲಾಗಿ ಹರಿದ ಅರುಣಕಿರಣಗಳ ಜಾಲ ಮುಖ ಮೈಗಳನ್ನು ಸ್ವಚ್ಛಂದವಾಗಿ ಆವರಿಸಿತು. ಸನಿಹದ ಕೊಳದಲ್ಲಿ ಮೇಳೈಸಿದ ಸಾರಸಗಳ ಕ್ರೇಂಕಾರ ಎಡೆಬಿಡದೆ ಕರ್ಣಗಳಿಗೊರೆಯುತಿತ್ತು. ಆ ಒಂದು ಸುಂದರ ಸನ್ನಿವೇಶವನ್ನೆ ಮುಂದಿಟ್ಟುಕೊಂಡು ಧ್ಯಾನ ಗದ್ಗದಳಾಗಿ ನುಡಿದಳು ಲೀನಾ,

"ನೋಡು ಶಶಿ, ಭಗವಂತ ಈ ವಿಶಾಲವಾದ ಜಗತ್ತನ್ನು ನಿರ್ಮಿಸಿ ಪ್ರತಿಯೊಬ್ಬರಿಗೂ ಅವರವರ ಧ್ಯೇಯಗಳನ್ನು ಸಾಧಿಸಿಕೊಳ್ಳಲು ಅನುಕೂಲ-ಅವಕಾಶ ಎರಡನ್ನೂ ಮನಃಪೂರ್ವಕವಾಗಿ ನೀಡಿದ್ದಾನೆ. ಅಂದಮೇಲೆ ನಾವೇಕೆ ಸಂಕೋಚ ಪಡಬೇಕು?"

"ಅದು ನಿಜವೆ. ನುಡಿ ಎದೆಯಾಳದಿಂದ ಹರಿದು ಬಂತು.

★ ★ ★ ★ ★

ಕಾನ್ವೆಂಟಿನ ಪಶ್ಚಿಮಪ್ರಾಚೀರ ಹೆಚ್ಚೇನೂ ಎತ್ತರವಾಗಿರಲಿಲ್ಲ. ಬಹಳ ಹಳೆಯ ಕಾಲದ ಗೋಡೆಯಾದುದರಿಂದ ಅಗಲವಾಗಿಯೂ ಇತ್ತು. ಅದರಮೇಲೆ ಹತ್ತಿ ಕುರಿಗಳೆರಡು ಮಲಗಿದ್ದುವು. ಅಲ್ಲೇ ಪದಚಾರಣ ಮಾಡುತ್ತ ಸಂಧ್ಯಾ ಸೌಂದರ್ಯ ಸಮೀಕ್ಷೆ ನಡೆಸಿದ್ದ ಲೀನಾ ಆ ಮೋಹನೀಯ ದೃಶ್ಯವನ್ನು ನೋಡುತ್ತ ಸ್ವಲ್ಪಹೊತ್ತು ಅಲ್ಲೇ ನಿಂತಳು. ಅರುಣನ ಛಾಯೆ ಮುಖ ಮೈಗಳಿಗೆ ಲಾಲಿಮೆಯೊತ್ತಿತು. ಎಲೆಗಳ ಮರ್ಮರ ಲೀಲೆಯೊಂದಿಗೆ ಶುಕ-ಪಿಕಗಳ ಇನಿಯಿಂಚರವೂ ಕೇಳಿ ಬರುತಿತ್ತು.

ಪ್ರಾಕಾರದ ಬಾಗಿಲ ಬಳಿ ಹೆಜ್ಜೆಯ ಸಪ್ಪಳ ಕೇಳಿ ಬಂದು ಸುಮ್ಮನೆ ಸಹಜವಾಗಿ ನೋಟ ಅತ್ತ ಹೊರಳಿಸಿ ನೋಡಿದರೆ ಎಂತಹ ಆಶ್ಚರ್ಯ? ಒಂದೆರಡು ಕ್ಷಣ ತನ್ನ ಕಣ್ಣುಗಳನ್ನೇ ತಾನು ನಂಬಲಾರದಷ್ಟು ದಿಗ್ಭ್ರಮೆ ಮೂಡಿತು. ಪ್ರಯತ್ನಪೂರ್ವಕವಾಗಿ ನೋಟವನ್ನು ಬೇರೆಡೆಗೆ ಹೊರಳಿಸಿದಳು. ಅನಿರೀಕ್ಷಿತವಾಗಿ ದೇಹದಾದ್ಯಂತ ನಸು ಕಂಪನದ ಅಲೆ ಚಿಲ್ಲನೆ ಹರಿದಾಡಿ ಹೋಯಿತು. ಅಷ್ಟರೊಳಗಾಗಿ ಆತ ಸನಿಹಕ್ಕೆ ಬಂದಾಗಿತ್ತು. ಮುಖಮಂಡಲ ಪ್ರಸನ್ನ ಮನೋಹರತೆಯಿಂದ ಬೆಳಗಿತ್ತು.

ಬೆಳಿಗ್ಗೆಯಷ್ಟೆ ತಾನು ಹಿಂದಿರುಗಿದೆ. ಅಷ್ಟರೊಳಗಾಗಿ ಸಂಜೀವ! ಇದೇನು ಹಿಂದೆಯೇ ಹೊರಟನೇ ಹೇಗೆ? ಸಧ್ಯ, ನನ್ನೊಂದಿಗೆ ಹೊರಡಲಿಲ್ಲವಲ್ಲಾ; ಅದೇ ಪುಣ್ಯ......! ಎಂದು ಎದೆಯಹಕ್ಕಿ ಉಲಿಯಿತು. ಅತ್ಯಂತ ಆಶ್ಚರ್ಯಚಕಿತ ಚಿತ್ತ ಸಂಭ್ರಾಂತವಾಯಿತು....

"ಇಲ್ಲಿಗೆ ಎಷ್ಟೊತ್ತಿಗೆ ಬಂದೆ?"

"ಬೆಳಿಗ್ಗೆ." ನುಡಿಯಲಾರದೆ ನುಡಿದಳು ಲೀನಾ.

"ನನಗೂ ಸ್ವಲ್ಪ ತುರ್ತುಕೆಲಸ ಬಿದ್ದುದರಿಂದ ಬಂದೆ." ಎಲ್ಲಾ ಹಲ್ಲುಗಳನ್ನೂ ಪ್ರದರ್ಶಿಸಿ ನುಡಿದ ಸಂಜೀವ. ರಕ್ತದ ಕಣಕಣವೂ ಉಕ್ಕಿ ತುಳುಕುತ್ತಿರುವಂತೆ ಭಾಸವಾಯಿತು. ಮೈಯೆಲ್ಲಾ-ಹೃದಯವಾಗಿ ನಿಂತ.

ಅವನೊಂದಿಗೆ ಏನಾದರೂ ಪ್ರಾಸಂಗಿಕವಾಗಿ ಮಾತನಾಡೋಣವೆಂದರೂ ಶಬ್ದಗಳು ಸರಾಗವಾಗಿ ಹೊರಡುತ್ತಿಲ್ಲ. ವಿಷಯಗಳೂ ನಿಚ್ಚಳವಾಗಿ ಹೊಳೆಯುತ್ತಿಲ್ಲ. ಏನೋ ಒಂದು ಬಗೆಯ ಕಿಂಕುರ್ವಾಣತೆ ತುಂಬಿ ಮರವಟ್ಟು ನಿಂತಳು ಹುಡುಗಿ.

"ನಿನ್ನೊಂದಿಗೆ ಮಾತಾಡಿ ನಿರ್ಣಯಿಸಬೇಕಾದ ವಿಚಾರವಿದ್ದುದರಿಂದ ಬಂದೆ ಲೀಲಾ!"

"........."

"ದಯಮಾಡಿ ನೀನು ಸಾವಧಾನದಿಂದ ಪರಾಂಬರಿಸುವಿಯಾದರೆ....?"

"ನನ್ನ ಬಳಿ ಅಂತಹ ದೊಡ್ಡ ವಿಚಾರವಾದರೂ ಏನು?"

"ವಿಚಾರ....? ಅದೇನೆಂಬುದು ನಿನಗೇ ಗೊತ್ತು!"

ಮುಖ ಬಿಂಬ ತಟ್ಟನೆ ಓಕುಳಿ ಎರಚಿದಂತೆ ರಂಗು ತಳೆಯಿತು. ನಸು ತಲೆ ಬಾಗಿದರೂ ದೃಢವಾಗಿ ನಿಲ್ಲಲು ಪ್ರಯತ್ನಿಸಿದಳು-ಲೀನಾ. ನರನಾಡಿಗಳಲ್ಲಿ ನವ ಚೇತನದ ಝುರಿ ಜಿಲ್ಲನೆ ಹರಿದಾಡಿ.... ಚಿದಾಕಾಶದಲ್ಲಿ ಪ್ರಚಂಡ ಬಿರುಗಾಳಿ ಬೀಸತೊಡಗಿತು-ತನುಮನಗಳು ಒಮ್ಮೆಲೇ ತತ್ತರಿಸಿ ಹೋಗುವಂತೆ.

ಅವಳ ಮುಖಭಾವವನ್ನು ಸೂಕ್ಷವಾಗಿ ಗಮನಿಸಿ ಕೇಳಿದ,

"ನಿಜವಾಗಿಯೂ ಹೇಳು. ನಿನಗೇನೆನಿಸುತ್ತೆ?"

"ನನಗಿನ್ನೂ ಯಾವ ನಿರ್ಧಾರಕ್ಕೂ ಬರಲಾಗಲಿಲ್ಲ."

"ದಯಮಾಡಿ ನನ್ನನ್ನು ಹೆಚ್ಚು ಕಾಲ ಕಾಯಿಸಬೇಡ."

"ಇಂತಹ ವಿಚಾರಗಳಲ್ಲಿ ಅವಸರ ಮಾಡಲಾಗುತ್ತದೆಯೇ ಹೇಳಿ?"

"ಎಷ್ಟು ದಿನ ಕಾಲಾವಕಾಶ ಬೇಕು ಹೇಳು?"

"ದಯಮಾಡಿ ಕ್ಷಮಿಸಿರಿ. ನಾನೀಗ ಏನೂ ಹೇಳಲಾರೆ. ಮದರ್ ಸುಪೀರಿಯರ ಸಲಹೆ ಕೇಳಬೇಕು."

"ಕೇಳು.... ನಾನೂ ಅವರನ್ನು ಕಂಡು ಮಾತಾಡುವೆ."

"ಇದು ಒಂದೆರಡು ದಿನಗಳಲ್ಲಿ ಬಗೆ ಹರಿಸುವ ವಿಚಾರವಲ್ಲ. ನೀವು ಅವಸರ ಪಡುವುದು ಪ್ರಯೋಜನವಿಲ್ಲ."

"ನಿನಗೇಕಿಷ್ಟು ಭಯ? ಅಥವಾ ಅನುಮಾನ?"

"ಅಂತಹದ್ದೇನಿಲ್ಲ. ನನ್ನ ಧ್ಯೇಯೋದ್ದೇಶವೇ ಬೇರೆ. ಆಸೆ ಆಕಾಂಕ್ಷೆಗಳೇ ಬೇರೆ."

"ಹೇಳು... ಏನೇನಿದೆ?"

"ಸಿಸ್ಟರಾಗಿ ಸೇವೆ ಸಲ್ಲಿಸಬೇಕೆಂಬ ಆಸೆ ತುಂಬಾ ಇದೆ."

"ಸೇವೆ... ಅದನ್ನು ಆಯಾಕ್ಷೇತ್ರದಲ್ಲಾದರೂ ಸಲ್ಲಿಸಬಹುದು. ಅದಕ್ಕಾಗಿ ಸಿಸ್ಟರಾಗಬೇಕಿಲ್ಲ."

"....."

"ಏನು ಹೇಳುತ್ತಿ?"

"ಆಗಲೇ ಹೇಳಿದೆನಲ್ಲಾ."

"ಈ ಉತ್ತರ ಸಮಂಜಸವಲ್ಲ."

"........"

ಆ ಮುಹೂರ್ತದಲ್ಲಿ ಅವನಿಂದ ತಪ್ಪಿಸಿಕೊಳ್ಳಬೇಕಾದರೆ ಎಷ್ಟು ಬಾರಿ ಧೈರ್ಯದ ಸಂಪುಟ ಕುಸಿದಿತ್ತೋ, ಇನ್ನೆಷ್ಟು ಬಾರಿ ಧ್ಯೇಯೋದ್ದೇಶದ ಬುಡ ಅಡಿಮೇಲಾಗಿತ್ತೋ. ಅಂತೂ, ಹೇಗೋ ಸಾವರಿಸಿಕೊಂಡು ಒಳಬಂದಾಗ ಪಲ್ಲಂಕದ ಮೇಲೆ ಒಂದೇ ಬಾರಿಗೆ ಕುಸಿದು ಬೀಳುವಂತಾಯಿತು.

★ ★ ★ ★ ★

ಪ್ರಚಂಡ ಬಿರುಗಾಳಿಗೆ ಸಿಕ್ಕಿ ಛಿನ್ನ ಭಿನ್ನವಾದ ಮೇಘ ಪಟಲದಂತೆ ಚಂಚಲಿತ ಚಿತ್ತ ಶ್ರೀಹೀನವಾಯಿತು. ಹೇಗೆ ಯಾವರೀತಿ ತನ್ನನ್ನು ತಾನು ಅಭ್ಯುದಯದ ಹಾದಿಗೆ ಹಚ್ಚಬೇಕೆಂಬುದು ಅರ್ಥವಾಗದು; ಯೋಚಿಸಿದರೂ ನಿಚ್ಚಳವಾಗಿ ಹೊಳೆಯದು. ಅಪ್ರಬುದ್ಧ ಬುದ್ಧಿ, ಅಪ್ರಬುದ್ಧ ಚಿತ್ತ, ಅಪ್ರಬುದ್ದ ಚೇತನ ಏನೋ ಒಂದು ರೀತಿಯ ವಿಕಟನಾದಗೈಯ್ಯುತ್ತಿವೆ. ಅದರಿಂದ ಹೊಮ್ಮುವ ವಿಚಿತ್ರ ಪರಿಮಳ ಮನಃಪ್ರಾಣಗಳನ್ನು ವ್ಯಾಪಕವಾಗಿ ಆವರಿಸಿ ಬಿಟ್ಟಿದೆ. ಇನ್ನು ತಾನೇ ತಾನಾಗಿ ನಿರ್ಧರಿಸಿಕೊಳ್ಳುವ ಶಕ್ತಿ ತನ್ನಲ್ಲಿ ಉಳಿದೇ ಇಲ್ಲವೇನೋ ಎಂಬಷ್ಟು ಕಳವಳ ಕ್ಷೋಭೆ ಮನಸ್ಸಿಗೆ.

ಲೀನಾ ವಿಚಾರವಾಹಿನಿಯಲ್ಲಿ ಮುಳುಗಿ ಭವ್ಯ ಭವಿತವ್ಯದಲ್ಲಿನ ಆಶಾಕಿರಣವನ್ನು ಅರಸತೊಡಗಿದಳು. ಆದರೆ ಎಷ್ಟೇ ಪ್ರಯತ್ನಿಸಿದರೂ ಸಂಜೀವನ ಮನಮೋಹಕ ನಿಲುವನ್ನು ಮನದಲೆಯಿಂದ ತಳ್ಳಿ ಹಾಕಲಾಗಲಿಲ್ಲ. ಅವನ ಹೃದಯದೇಗುಲ ಪ್ರತಿಕ್ಷಣವೂ ಸೂಜಿಗಲ್ಲಿನಂತೆ ಮನಃಪ್ರಾಣಗಳನ್ನು ಸೆಳೆಯುತಿತ್ತು. ಎಷ್ಟೇ ಪ್ರಯತ್ನಿಸಿದರೂ ಜೇಡ ಬಾಂಧವನ ಅತ್ಯಂತ ನವುರಾದ ಬಲೆಯಲ್ಲಿ ಸಿಲುಕಿದ ಕೀಟದಂತಾಯಿತು ಮನಃಸ್ಥಿತಿ.

"ದೂರ ಭವಿಷ್ಯಯವನ್ನು ಕುರಿತು ಈಗಲೇ ನಿರ್ಧಾರ ಕೈಗೊಳ್ಳುವಷ್ಟು ಬುದ್ಧಿ ಶಕ್ತವಾಗಿಲ್ಲ. ನನಗೆ ಯಾವುದು ಹಿತವೋ ಅದನ್ನು ನೀನೆ ಅನುಗ್ರಹಿಸು ಪರಮಾತ್ಮ!"

ಎಂದು ಅಂತರಾತ್ಮ ತಾನೇ ತಾನಾಗಿ ಪ್ರಾರ್ಥಿಸಿತು.

ಆದರೆ.....!

ಜೀವನಿಶಕ್ತಿಯ ಹಸುರಾದ ಆಸೆ ಆಕಾಂಕ್ಷೆಗಳಿಗೆ ವಿಜಯ ಘೋಷಣೆ ಮಾಡಲು ಒಂದು ದೃಢವಾದ ನೆಲೆಗಾಣದೆ ಆತುರಾತುರವಾಗಿ ಎಡೆ ಕಂಡೆಡೆಯೆಲ್ಲಾ ನುಗ್ಗುವ ಸಾಹಸ ಮಾಡುವುದರಿಂದ ಚಿತ್ತ ಕ್ಷೋಭೆ ಕ್ಷಣಕ್ಷಣಕ್ಕೂ ವೃದ್ಧಿಯಾಗುತಿತ್ತು.

ಸ್ನೇಹಮೇದುರ ನಯನಗಳಲ್ಲಿ ಬಾಷ್ಪಬಿಂದುಗಳು ಮೂಡುತ್ತಿದ್ದುವು. ಅಂತಹ ಸಂದರ್ಭದಲ್ಲಿ ಲೀನಾ ಸಿಸ್ಟರ್ ಫ್ಲಾರೆನ್ಸ್ ಬಳಿ ಹೆಚ್ಚು ಹೆಚ್ಚಾಗಿ ಹೊತ್ತು ಕಳೆಯುವಳು.

ಇಂದು,

ಲೀನಾ ಕೊಠಡಿಗೆ ಪದಾರ್ಪಣೆ ಮಾಡಿದಾಗ ಸಿಸ್ಟರ್ ಫ್ಲಾರೆನ್ಸ್ ಅಂದಿನ ದಸ್ಕತ್ತುಗಳಿಗೆ ಸಹಿ ಹಾಕುತ್ತಿದ್ದಳು. ಒಂದು ಕ್ಷಣ ತಲೆಯೆತ್ತಿ ನೋಡಿ ''ಬಾ ಮಗೂ!'' ಎಂದಳು. ನಂತರ ಒಂದು ಘಳಿಗೆ ತನ್ನ ಕೆಲಸವನ್ನು ಮುಂದುವರಿಸಿ ಕೇಳಿದಳು. ''ನಿನ್ನ ಸಮಸ್ಯೆಗೆ ಉತ್ತರ ಸಿಕ್ಕಿತೇ?''

''ಇನ್ನೂ ಇಲ್ಲ ಸಿಸ್ಟರ್.''

ಹಿಡಿದ ಕೆಲಸವನ್ನು ಮುಗಿಸಿ, ಎಲ್ಲವನ್ನೂ ಒಂದೆಡೆ ಜೋಡಿಸಿಟ್ಟು ಪ್ರಸನ್ನ ಮುಖಿಯಾಗಿ ಹೇಳಿದಳು.

''ನಿನ್ನ ಭವಿಷ್ಯವನ್ನು ನೀನೇ ರೂಪಿಸಿಕೊಳ್ಳಬಲ್ಲಷ್ಟು ವಿವೇಚನೆ ನಿನಗೆ ಬೆಳೆಯಲಿಲ್ಲ ಎಂದೇನಿಲ್ಲ. ಮುಖ್ಯವಾಗಿ ದೃಢ ಮನಸ್ಸು ಮಾಡು. ಸಂಸಾರ ನಿನಗೆ ಹಿತವೆನಿಸುವುದಾದರೆ ಅಲ್ಲೇ ಜೀವನಾದರ್ಶವನ್ನು ಕಂಡುಕೊಳ್ಳಬಹುದು.... ಯೋಚಿಸು; ನಿನಗೆ ಆದಾಗದೆನಿಸಿದರೆ ಸಿಸ್ಟರಾಗಬಹುದು. ಸಹನೆ ಸಮಾಧಾನಗಳು ತುಂಬ ಬೇಕು. ಇದೆಲ್ಲಾ ನಿನಗೆ ತಿಳಿದಿದೆ.''

''ಏನು ಮಾಡಲಿ....ಸಿಸ್ಟರ್?''

''ನಿನ್ನ ಅಭಿಪ್ರಾಯವೇನು?''

''ಸಿಸ್ಟರಾಗುವುದು.''

''ನಿನ್ನ ಚಿಕ್ಕಪ್ಪ-ಚಿಕ್ಕಮ್ಮ ಏನು ಹೇಳುತ್ತಾರೆ? ಸಂಜೀವ......?''

''ಅವರಿಗಾರಿಗೂ ಇಷ್ಟವಿಲ್ಲ.''

''ಅವರಿಗೇನು ಹೇಳಿದ್ದಿ?''

''ಇನ್ನೂ ಏನೂ ಹೇಳಿಲ್ಲ. ಇಂದು ಅಂತಿಮವಾಗಿ ಹೇಳುವುದಾಗಿ ತಿಳಿಸಿರುವೆ. ಇಂದು ಸಂಜೀವ ಇಲ್ಲಿಗೆ ಬರಲಿದ್ದಾರೆ.''

''ಈಗ ಅಂತ್ಯ ತೀರ್ಮಾನಕ್ಕೆ ಬಂದಿರುವೆಯಾ?''

''ನಿಮ್ಮ ಸಲಹೆಬೇಕು ಸಿಸ್ಟರ್.''

ಫ್ಲಾರೆನ್ಸಳ ಚಂದನರಾಗದ ತುಟಿಗಳಲ್ಲಿ ಮುಗುಳುನಗು ಮೂಡಿ ಮಾಯವಾಯಿತು. ಕಾರುಣ್ಯಪೂರ್ಣದೃಷ್ಟಿಯಿಂದ ನೋಡುತ್ತ-''ನಾನು ಸಲಹೆ ಕೊಡಬಹುದು....ಆದರೆ ನಿರ್ಧಾರ ನಿನ್ನದು.''

ಆ ಮಾತು ಎದೆಯಾಳಕ್ಕಿಳಿಯಿತು. ಆದರೆ ತನ್ನದೇ ಆದ ಆ ನಿರ್ಧಾರ? ದೇವರೇ! ಹೇಗಾದರೂ ದಡ ಹಾಯಿಸು. ನಾನಂತೂ ಈ ಜೀವನವನ್ನು ನಿರ್ಣಯಿಸಲಾರೆ....

ಆಂತರಂಗಿಕವಾಗಿ ಮೊರೆಯಿಟ್ಟಳು ಲೀನಾ.

''ಯಾವುದನ್ನೇ ಆರಿಸಿದರೂ ದೃಢ ನಿರ್ಧಾರದಿಂದ ಆರಿಸು. ಒಮ್ಮೆ ಕೈ ಕೊಂಡಮೇಲೆ ಬದಲಿಸುವ ಗೋಜಿಗೆ ಹೋಗಬಾರದು.''

ಲೀನಾ ಮಾತಡಲಿಲ್ಲ. ಎದೆಯಾಳದಿಂದ ಬಿಸಿಯುಸಿರೊಂದು ಹರಿದು ಬಂತು.

★ ★ ★ ★ ★

ಇಂದು ಸಂಜೀವ ಮಾತ್ರ ಬಂದಿರಲಿಲ್ಲ. ಚಿಕ್ಕಪ್ಪ-ಚಿಕ್ಕಮ್ಮಂದಿರೂ ಬಂದಿದ್ದರು. ಅವರನ್ನು ನೋಡುತ್ತಲೂ ಚಿದಾಕಾಶದಲ್ಲಿ ಆಸೆ-ಪ್ರತ್ಯಾಸೆಗಳು ನಕ್ಷತ್ರೇಕ್ಷುಗಳಂತೆ ಅಲ್ಲಲ್ಲಿ ಮೂಡಿದುವು. ನಿರ್ಧಾರದ ಬಳ್ಳಿ ಆಸರೆ ತಪ್ಪಿದಂತೆ ಕುಸಿಯಹತ್ತಿತು. ಆಪಾದಮಸ್ತಕವೂ ಕಂಡರಿಯದ ವಿದ್ಯುಲ್ಲಹರಿ ಚಿಲ್ಲನೆ ಹರಿದಾಡಿ ಹೋಯಿತು. ಅವರ ಮುಂದೆ ತನ್ನದೇ ಆದ ನಿರ್ಧಾರವನ್ನು ಮಂಡಿಸಲೂ ಸಹ ಶಕ್ತಿ ಉಳಿದಿಲ್ಲವೆಂಬಂತೆ ಜೀವ ಸೋತು ತತ್ತರಿಸಿ ಭಾವೀ ಜೀವನದ ಯುವಕ ಪ್ರತಿಭೆಯಲ್ಲಿ ತನ್ನ ಸರ್ವಸ್ವವೂ ಕರಗುತ್ತಿರುವಂತೆ ಭಾಸವಾಯಿತು.

ಅವರ ಹಿತವಚನಗಳು ಎಣೆಯಿಲ್ಲದೆ ಕಿವಿಗಳ ಮೇಲೆ ಬೀಳುತಿದ್ದುವು.

ಮಂತ್ರಮುಗ್ಧ ಫಣಿಯಂತೆ ತಲೆಬಾಗಿ ಕುಳಿತಿದ್ದ ಲೀನಾ ಚದುರಿ ಚಂಚಲವಾದ ತನ್ನೆಲ್ಲಾ ಭಾವನೆಗಳನ್ನು ಒಟ್ಟುಗೂಡಿಸಿಕೊಂಡಂತೆ ತನ್ನನ್ನು ತಾನು ಸಾವರಿಸಿಕೊಂಡು ಮೆಲುನುಡಿಯನ್ನು ಬಹಳ ಕಷ್ಟದಿಂದ ಹೊರ ಹಾಕಿದಳು,

''ಈ ಸಲ ನನ್ನನ್ನು ಕ್ಷಮಿಸಿ ಬಿಡಿ ಚಿಕ್ಕಪ್ಪ!''

ಹಾ......!

ಆ ಮುಹೂರ್ತದಲ್ಲಿ ಸಂಜನಿಸಿದ ಪ್ರತಿಕ್ರಿಯೆಯನ್ನು ತನ್ನ ಜೀವಮಾನದಲ್ಲೇ ಪ್ರಪ್ರಥಮವಾಗಿ ಎದುರಿಸಿದಳು ಲೀನಾ. ಕಿಸಲಯವನ್ನೂ ಲಜ್ಜಿತಗೊಲಿಸುವಂತಹ ಮುಖಭಾವ, ಕಣ್ಣುಗಳ ಹೊಳಪು ಸಂಜೀವನ ಬಿಸಿನೆತ್ತರನ್ನು ಉಕ್ಕೇರಿಸಿತು. ಹಾವ-ಬಾವಗಳು ಬಲಿತುವು. ಆಶಾ ಸ್ರೋತವು ಅನೇಕ ರೀತಿಯಲ್ಲಿ ಹರಿದು ಬಂತು. ಆ ಎಲ್ಲಾ ಪ್ರಾಕಾರಗಳಿಂದಲೂ ತಪ್ಪಿಸಿಕೊಳ್ಳಬೇಕಾದರೆ ಮನಸ್ಸು ಮಿಲಿಮಿಲಿ ಒದ್ದಾಡಿತು.

‘‘ಅಂದಮೇಲೆ ನಮ್ಮ ಆಸ್ತಿಯಲ್ಲಿ ನಿನಗೆ ಯಾವ ಹಕ್ಕೂ ಇರುವುದಿಲ್ಲ. ಹಾಗೆಂದು ಬರೆದುಕೊಟ್ಟುಬಿಡು.’’ ಎಂದರು ಚಿಕ್ಕಪ್ಪ.

ಲೀನಾ ತಲೆಬಾಗಿ ನಸುಕಂಪಿತ ಹಸ್ತದಿಂದ ಸಹಿಹಾಕಿದಳು.

ಅಲ್ಲಿಗೆ ಆ ಘಟಕ ಮುಗಿದರೂ ಅವರನ್ನು ಬೀಳ್ಕೊಡುವಾಗ ಕಣ್ಣುಗಳಲ್ಲಿ ಅನಿರೀಕ್ಷಿತವಾಗಿ ಕಂಬನಿಗಳು ಮೂಡಿದುವು. ಒಡಲ ಸಂಕಟ ಉಕ್ಕೇರಿ ಬಂತು. ಯಾವುದೋ ಕಾಣದ ಕೈ ಹೃದಯವನ್ನು ಸಾಸಿರ ಪಟ್ಟು ಹಿಸುಕಿದಂತಾಯಿತು.

ಮರುದಿನ ಬೆಳಿಗ್ಗೆ ಸಿಸ್ಟರ್ ಫ್ಲಾರೆನ್ಸ್‌ರನ್ನು ನೋಡಲು ಹೋದಾಗ ಆಕೆ ಇನ್ನೂ ಎದ್ದಿರಲಿಲ್ಲ. ದಿನವೂ ಬೆಳಗಿನ ಝಾವವೇ ಎದ್ದು ನಿತ್ಯಕರ್ಮಗಳಲ್ಲಿ ತೊಡಗಿರುತಿದ್ದ ಸಿಸ್ಟರ್ ಎದ್ದಿರದಿದ್ದುದು ಸೋಜಿಗವೆನಿಸಿತು. ಅದೇ ವೇಳೆಗೆ ಅಲ್ಲಿಗೆ ಬಂದ ಶಶಿ-‘‘ಏನಮ್ಮಾ?’’

‘‘ಇನ್ನೂ ಸಿಸ್ಟರ್ ಎದ್ದೇ ಇಲ್ಲವಲ್ಲಾ?’’

‘‘ಎದ್ದಿಲ್ಲ........?’’

‘‘ಹೌದು! ಎದ್ದೇ ಇಲ್ಲ!’’

‘‘ಎಲ್ಲಾದರೂ ಉಂಟೇ? ಇದರಲ್ಲೇನೋ ವಿಪರೀತವೇ ಇರಬೇಕು!’’ ಎಂದವಳೇ ಮಂಚದ ಬಳಿಗೆ ಹೋದಳು. ಮುಖಮುದ್ರೆ ಗಂಭೀರ ಶಾಂತಿಯಲ್ಲಿತ್ತು. ಅರೆದೆರೆದ ಕಣ್ಣುಗಳು, ಎದೆಯಮೇಲೆ ಜೋಡಿಸಿದ ಕೈಗಳು, ಹಣೆಯಮೇಲೆ ಹರಿದ ಅಲೆಗೂದಲು, ನಿಶ್ಚಲ ಭಂಗಿ ಒಂದೊಂದು ಗಮನೀಯವಾಗಿದ್ದುವು. ಒಂದೆರಡುಘಳಿಗೆ ನಿಂತು ನೋಡಿದನಂತರ ಮೆಲುದನಿ ಹೊರಬಿತ್ತು,

‘‘ಸಿಸ್ಟರ್.....!’’

‘‘............’’

‘‘ಸಿಸ್ಟರ್........!’’

‘‘............’’

‘‘ಸಿಸ್ಟರ್......ಸಿಸ್ಟರ್!’’

‘...............’’

ಹಣೆಯಮೇಲೆ ಭಯಭೀತಿಯಿಂದ ಕೈಯಿಟ್ಟಳು ಲೀನಾ. ಕಪೋಲ ಪಾಲಿಯಮೇಲೆ ಬೆರಳಾಡಿಸಿದಳು ಶಶಿ. ಮಂಜನ್ನು ಅಣಕಿಸುವಂತಹ ಶೀತಲ.....!

ಅಯ್ಯೋ ದೇವರೇ! ನನ್ನ ಜ್ಯೋತಿರ್ಧಾರಿಣಿ ಎಲ್ಲಿ??

“ಸಿಸ್ಟರ್! ನೀವು ನನ್ನ ಕೈ ಬಿಟ್ಟು ಹೋದಿರಾ? ನಿಮ್ಮ ಸಲಹೆ ಇನ್ನೆಲ್ಲಿ? ನೀವು ದೂರದ ಹಾದಿ ಹಿಡಿದು ನನ್ನ ದಾರಿದೀಪವನ್ನು ನಂದಿಸಿದಿರಾ? ನಾನೂ ನಿಮ್ಮೊಂದಿಗೆ ಬರುವೆ......ಇಬ್ಬರೂ ಸಿಸ್ಟರಾಗಿ ಸಗ್ಗದಲ್ಲಿ ಸೇವೆ ಸಲ್ಲಿಸೋಣ!”

ಎಂದು ಮುಂತಾಗಿ ದುಃಖಪೂರ್ಣಧ್ವನಿ ಪ್ರಲಾಪಿಸಿತು.

ಆರ್ತ ಹೃದಯ ಅಂತ್ಯ ಪ್ರಾರ್ಥನೆ ಸಲ್ಲಿಸಿತು.

ಮರಕಾಸುರ

ಹೇಮಂತ ಕಾಲೀನ ಅಸುರ ಸಂಭ್ರಾಂತ ಸಂಧ್ಯೆ!

ಹಿರಣ್ಮಯನಾದ ಸಂಧ್ಯಾ ಸೂರ್ಯನ ಸ್ವರ್ಣಧಾರೆ ಬೃಹತ್ ಜಗತ್ತನ್ನು ಮೀಯಿಸಿತ್ತು.

ಅತ್ಯಂತ ಪ್ರಶಾಂತ ವಾತಾವರಣದಲ್ಲಿ ಆಗೊಮ್ಮೆ ಈಗೊಮ್ಮೆ ನಾಯಿಗಳ ಬೊಗಳುವಿಕೆ ಕೇಳಿ ಬರುತಿತ್ತು. ಭೂಭಾಗವನ್ನು ಇಬ್ಬಾಗಿಸಿಕೊಂಡು ಹರಿದ ರಸ್ತೆಯ ಇಕ್ಕೆಲಗಳಲ್ಲಿ ಸಾಲ್ಗಂಬಗಳ ಮೇಗಡೆ ಉರಿಯುವ ಪ್ರಕಾಶಮಯೀ ವಿದ್ಯುದ್ದೀಪಗಳು ಪ್ರಾಂಗಣಕ್ಕೆ ಉಜ್ಜಲವಾದ ಬೆಳಕು ನೀಡಿವೆ. ಪಕ್ಕದಲ್ಲಿ ಹರಿಯುವ ನದಿಯ ಜುಳು. ಜುಳು. ಜುಳು. ಜುಳು. ಮಂಜುಳಗಾನ.

ಸುವಿಶಾಲವಾದ ಭೂಪ್ರದೇಶದ ಮಧ್ಯೆ ವಿದ್ಯುದ್ದೀಪಗಳಿಂದಲಂಕೃತವಾದ ಅದ್ಬುತ ಪ್ರಾಸಾದ. ಸುತ್ತಮುತ್ತ ಹೆಮ್ಮರಗಳಿಂದ ಕೂಡಿದ ಭೂವಲಯ. ನಗರ ಪ್ರದೇಶದಿಂದ ಬಹಳ ದೂರದಲ್ಲಿದ್ದುದರಿಂದ ಯಾವ ಕಿರಿಕಿರಿ ಇಲ್ಲದೆ ಈ ಲೋಕದೊಡನೆ ಯಾವ ಸಂಸ್ರವವೂ ಇಲ್ಲವೇನೋ ಎಂಬಂತಹ ಗಂಭೀರ ಶಾಂತಿ; ಎಳ್ಳು ಬೀರಿದರೂ ಕೇಳಿಸುವಂತಹ ನಿಶ್ಯಬ್ಧ. ಸುತ್ತಲೂ ಸಸ್ಯ ಸಮೃದ್ಧಿಯೂ ಪುಷ್ಪಸಮೃದ್ಧಿಯೂ ಆದ ತೋಟವನ್ನು ಬೆಳೆಸಬಹುದಾಗಿದ್ದರೂ ಅತ್ತ ಯಾರ ಗಮನವೂ ಹರಿದಿರಲಿಲ್ಲ. ಅಲ್ಲಿಯ ಮರಗಳೆಷ್ಟು ಪುರಾತನವೋ ಅಷ್ಟೇ ಪ್ರಾಸಾದವೂ ಪುರಾತನ; ವಿಶಾಲವಾದ ವರಾಂಡ, ಬೃಹದ್ ಕೊಠಡಿಗಳು, ಬೈಠಕ್‌ಖಾನೆ, ದಿವಾನಖಾನೆ, ಎತ್ತರವಾದ ಬಾಗಿಲು ಕಿಟಿಕಿಗಳು, ಭದ್ರವಾದ ಮಾಡು ಯಾವ ರಾಜಭೋಗಕ್ಕಾಗಿ ನಿರ್ಮಿಸಲ್ಪಟ್ಟಿದ್ದುವೋ ಈಗ ಊಹಿಸುವುದು ಕಷ್ಟ.....ಎಷ್ಟೆಷ್ಟು ಕೈ ಬದಲಾಯಿಸಿತ್ತೋ ಹೇಳುವುದೂ ಸಹ ಸಾಧ್ಯವಾಗದು. ಆದರೆ ಯಾರೂ ಅದರ ಮೂಲಭೂತ ಸೌಂದರ್ಯವನ್ನು ಕೆಡಿಸುವಂತಹ ಮಾರ್ಪಾಡನ್ನು ಮಾಡಿರಲಿಲ್ಲ. ನಯನಾಕರ್ಷಿತ ವಲಯದಲ್ಲಿ ದೈತ್ಯಾಕಾರದ ನಾಯಿಗಳೆರಡು ಸುತ್ತಾಡುತ್ತಿವೆ. ಕರ್ರನೆಯ ಕಾಳವರ್ಣ, ಕೆಂಗಣ್ಣು, ಉದ್ದನಾಲಿಗೆ ಕುತ್ತಿಗೆಯಲ್ಲಿ ಬೆಲ್ಟು...ಅವು ಓತಿ, ಅಳಿಲು

ಮುಂತಾದುವನ್ನು ಕಂಡು ಅಟ್ಟಿಸಿಕೊಂಡು ಓಡುವಾಗ ಹೊಮ್ಮುವ ದರುಗೆಲೆಗಳ 'ಲರಲರ' ಸದ್ದು ಅಂತರಂಗವನ್ನು ಮುಟ್ಟುತಿತ್ತು. ಅಂಗಳದಲ್ಲಿ ನಿಂತಿದ್ದ ವಿಜ್ಞಾನಿ ಎರಡೂ ಕೈಗಳನ್ನು ಹಿಂಭಾಗದಲ್ಲಿ ಜೋಡಿಸಿದ್ದ. ಅಂತರ್ಯದಲ್ಲಿ ಯಾವುದೋ ಅನಿರ್ವಚನೀಯ ಕೋಲಾಹಲ! ದುರ್ದಮ್ಯ ಅಭಿಶಕ್ತಿ.....ಗಮನೀಯ ಪರಿಸ್ಥಿತಿ....ದುರ್ದಾಂತ ಸನ್ನಿವೇಶ....ಪ್ರಕ್ಷುಬ್ಧ ಪರಿಸ್ಥಿತಿ....ಒಂದೊಂದೂ ಎಣೆಯಿಲ್ಲದ ಸ್ಪರ್ಧೆ ಹೂಡಿವೆ. ಯಾವ ರೀತಿ ಬಗೆಹರಿಸಬೇಕೋ ಇನ್ನಾವ ರೀತಿ ಹೊಂದಿಕೊಳ್ಳಬೇಕೋ ಅರ್ಥವಾಗುತ್ತಿಲ್ಲ.

ಪ್ರಾಂಗಣದಲ್ಲಿ ತಂಗಾಳಿಗೆ ಮೈಗೊಟ್ಟು ನೆರೆತ ಕೂದಲಿನ-ಬಳ್ಳಿದೇಹದ ವಿಜ್ಞಾನಿ ಅತ್ತಿಂದಿತ್ತ ಶತಪಥ ತಿರುಗುತಿದ್ದ. ಮನಸ್ಸು ಜಗತ್ ಶಾಂತಿಯನ್ನು ಕುರಿತು ಚಿಂತಿಸುತಿತ್ತು. ಆದರೆ ಇನ್ನಾವುದೋ ಅದ್ಭುತ ವಿಚಾರಧಾರೆ ಮನಸ್ಸಾಗರವನ್ನು ಕಲಕಿ ವಿಹ್ವಲಗೊಳಿಸುತ್ತಿದೆಯೋ ಎಂಬಂತೆ ತೀವ್ರ ಅನ್ಯಮನಸ್ಕನಾಗಿ ನಿಂತಲ್ಲಿ ನಿಲ್ಲದೆ ಪದಚಾರಣ ಮಾಡುತ್ತಲೇ ಇದ್ದಾನೆ. ವಿದ್ಯುತ್ತಿನ ಕ್ಷಣ ಸ್ಥಾಯೀ ಪ್ರಭೆಯಂತೆ ಅಪೂರ್ವ ಆಸ್ಮರಣೀಯ ಶುಭ್ರಕಾಂತಿ ಲೋಹಿತ ಲೋಚನಗಳಲ್ಲಿ ಮಿನುಗುತಿತ್ತು.

ಅದೇ ತಾನೇ ರೇಡಿಯೋ ಬಿ.ಬಿ.ಸಿ.ಯಿಂದ ಬಂದಿದ್ದ ಸುದ್ದಿಯನ್ನು ಪ್ರಸಾರ ಮಾಡಿತ್ತು: ಅಮೆರಿಕವು ತಾನು ಎಲ್ಲಾ ರೀತಿಯ ರೋಗಾಣು ರಾಸಾಯನಿಕ ಆಯುಧಗಳ ತಯಾರಿ ಮತ್ತು ಪ್ರಯೋಗಗಳನ್ನು ಸಂಪೂರ್ಣ ಪರಿತ್ಯಜಿಸಲು ನಿರ್ಧರಿಸಿರುವುದಾಗಿ ಪ್ರಕಟಿಸಿದೆ....!

ರಷ್ಯದಲ್ಲಿ ವಿವಿಧ ರಾಸಾಯನಿಕ ಮಾರಾಕಾಸ್ತ್ರಗಳು ಸಿದ್ಧವಾದ ಸುದ್ದಿ ಎಲ್ಲೆಡೆಯೂ ಪ್ರಾಚುರ್ಯವಾದ ರೋಮಾಂಚನಕಾರೀ ಸಮಯಧಲ್ಲಿ ಅಮೆರಿಕದ ಈ ನಿರ್ಧಾರ ಎಂತಹ ಆಶ್ಚರ್ಯ??

....ಇನ್ನೊಂದು ಮುಖ್ಯ ವಿಚಾರ. ನಾವೀಗ ಯಾವ ಕ್ರಮ ಕೈಕೊಳ್ಳಬೇಕು???

ಯಾವುದೇ ಪ್ರಬಲ ಶಕ್ತಿ ಇನ್ನೂ ಜೀವಂತವಿರುವಾಗ ನಾವು ನಮ್ಮ ಪ್ರಯೋಗಗಳನ್ನು ನಿಲ್ಲಿಸುವುದಾದರೂ ಹೇಗೆ? ಶಕ್ತಿ ಇದ್ದು, ಸೌಕರ್ಯವಿದ್ದು, ಬುದ್ಧಿ ಇದ್ದು, ಬಲವಿದ್ದು ನಿಲ್ಲಿಸಿದಲ್ಲಿ ನಮಗೆ ನಾವೇ ಉರುಳಾಗುವುದು ಖಂಡಿತ. ರಷ್ಯ ಚೀನಾಗಳು ಪರಸ್ಪರ ಪೈಪೋಟಿಯಿಂದ ತಮ್ಮತಮ್ಮ ಸಿದ್ಧಿಯನ್ನು ಪ್ರಕಟಿಸುತ್ತಿರುವಾಗ ನಾವು ಕೈಕಟ್ಟಿ ಕುಳಿತುಕೊಳ್ಳುವುದು ಹೇಗೆ?

ಪ್ರಶ್ನೆ ಉದ್ದಂಡವಾಗಿ ಬೆಳೆದು ನಿಂತು ವಿಜ್ಞಾನಿಯನ್ನು ಅತ್ತಿಂದಿತ್ತ ಎಳೆದಾಡಹತ್ತಿತು.

ಡಾ|| ಜೇಮ್ಸ್‌ರಾಸ್ ಬೃಹದ್ ರಾಷ್ಟ್ರಗಳ ಶಕ್ತಿ ಸಾಮರ್ಥ್ಯಗಳನ್ನು ಕೂಲಂಕಶವಾಗಿ ವಿಶ್ಲೇಷಣೆಗೈಯ್ದು ಸಕಲ ವಿದ್ಯಮಾನವನ್ನು ಒರೆಗೆ ಹಚ್ಚಿ ತುಲನೆ ಮಾಡುತಿದ್ದ. ತರ್ಕವಿತರ್ಕಗಳ ಸುಳಿಯಲ್ಲಿ ಸಿಕ್ಕಿ ಭಾವವಿಭಾವಗಳಲ್ಲಿ ತೊಳಲಿ ರೋಮರೋಮಗಳು ಉದ್ಬುದ್ಧಗೊಂಡುವು. ಚಿತ್ತಕ್ಷೋಭೆ ಸುಪ್ತಗ್ಲಾನಿಗಳಿಂದ ಆತನ ರಕ್ತದಲ್ಲಿ ಚಿತ್ರವಿಚಿತ್ರವಾದ ಆಲೋಡನೆಯುಂಟಾಯಿತು. ಬೃಹತ್ ರಾಷ್ಟ್ರಗಳ ಮಹತ್ ಶಕ್ತಿಯು ಮಹಾಜಲ ಪ್ರಳಯದಂತೆ ಉಕ್ಕುಕ್ಕಿ ಭೀಮವೇಗದಲ್ಲಿ ಪ್ರವಹಿಸುವುದನ್ನು ಅಂತಃಚಕ್ಷುಗಳು ಗಮನಿಸುತ್ತಲೇ ಇವೆ. ಎಷ್ಟೇ ಪ್ರಯತ್ನಿಸಿದರೂ ಗಮನವನ್ನು ಅದರಿಂದ ಸೆಳೆದುಕೊಳ್ಳಲಾಗಲಿಲ್ಲ.

ವನ್ಯ ಪ್ರದೇಶದ ಮೇಲೆ ತೀಡಿ ಬರುವ ತಂಗಾಳಿ ಪುಷ್ಪಸೌರಭವನ್ನು ಅಲೆಯಲೆಯಾಗಿ ಸಿಂಪಡಿಸುತಿತ್ತು. ಗಮನಿಸದಿದ್ದರೂ ನಾಸಿಕ ರಂಧ್ರಗಳಲ್ಲಿ ಸುಗಂಧ ನುಗ್ಗುತಿತ್ತು. ಗೂಡುಗಳನ್ನು ಸೇರಿದ ಪಕ್ಷಿಗಳು ಒಮ್ಮೊಮ್ಮೆ ಕೊರಳೆತ್ತಿ ಹಾಡುವುದು ಕಿವಿಗೆ ಬೀಳುತಿತ್ತು. ವನವಲಯದಲ್ಲಿ ಸುತ್ತಾಡುತಿದ್ದ ನಾಯಿಗಳು ಹಿಂದಿರುಗಿ ಬಂದೊಡನೆಯೇ ಒಡೆಯನ ಮೈಮೇಲೆ ಜಿಗಿದುವು.. ಹಾಗೇ ತಲೆಯನ್ನು ತಟ್ಟಿ ಔಪಚಾರಿಕವಾಗಿ ಮುದ್ದುಗೈದು ಸುಮ್ಮನಾಗಿಸಿದ.

......ಪ್ರಕೃತ ಅಮೆರಿಕೆಯ ಪ್ರಕಟಣೆ ಬರಿಯ ತೋರುಗಾಣಿಕೆ ಇರಬಹುದೇ? ಎಂಬುದೂ ಸಹ ತರ್ಕಬದ್ಧ......ಎಂದು ಅನೇಕಬಾರಿ ತನಗೆ ತಾನೇ ಹೇಳಿಕೊಂಡ. ಉದ್ರೇಕಿತ ವಿಚಾರ ಶಕ್ತಿ ಪುನಃಪುನಃ ವೀರಾಲಾಪವನ್ನು ವಾಚಿಸುವಾಗ ಮನಸ್ಸಾಗರದ ಪ್ರಚಂಡ ಅಲೆಗಳು ಅಲ್ಲೋಲಕಲ್ಲೋಲವಾದುವು. ಅಲೆಯಲೆಯಾಗಿ ವಿಚಾರವಾಹಿನಿಯಲ್ಲಿ ದೇಹಧರಿತ್ರಿ ತೇಲಿ ಹೋಗುತ್ತಿರುವಂತೆ ಭಾಸವಾಯಿತು.

ಡಾ|| ಜೇಮ್ಸ್‌ರಾಸ್ ಭಾವವಿಭಾವಗಳ ಪರಸ್ಪರ ಸಂಘರ್ಷಣಾಂದೋಲನದಲ್ಲಿ ಸಿಕ್ಕಿ ಜೇಡ ಬಾಂಧವನ ತಂತು ಕೃತಿಯಲ್ಲಿ ಒದ್ದಾಡುವ ಕ್ರಿಮಿಕೀಟದಂತಾದ.

★ ★ ★ ★ ★

ಬೃಹದ್ ವ್ಯಾನು ಕಣ್ಣು ಕುಕ್ಕುವಂತಹ ಪ್ರಕಾಶಮಾನವಾದ ಬೆಳಕನ್ನು ಚೆಲ್ಲಿ ಕರ್ಕಶ ಸದ್ದಿನೊಡನೆ ಸರ್ರನೆ ಹರಿದು ಬಂದು ಮುಂಬಾಗಿಲಿನಲ್ಲಿ ಗಕ್ಕನೆ ನಿಂತಿತು. ಅದರಿಂದ ಇಳಿದವನು ಡಾ|| ಜಾರ್ಜ್ ಹ್ಯಾಂಕ್ಲಿ. ಸ್ಥೂಲ ದೇಹ ಐವತ್ತರ ಹರೆಯ, ತೀಕ್ಷ್ಣವಾದ ಕಣ್ಣುಗಳು, ಚಪ್ಪಟೆ ಮೂಗು, ಲೋಹಿತ ವರ್ಣ ಚಟುವಟಿಕೆಯ ಬೀಡಾದ ಮನಃಪ್ರಾಣಗಳು.....

ಧಿಗ್. ಧಿಗ್. ಧಿಗ್. ಧಿಗ್.......

ಲರಕ್. ಲರಕ್. ಲರಕ್. ಲರಕ್.

ಪಾದರಕ್ಷೆಗಳ ತಾಡನ ಮನಃಶಕ್ತಿಯ ಭೀಮಕಾಂತಾರದಲ್ಲಿದ್ದ ಐರಾವತವನ್ನು ಹೊರಗೆಳೆತಂದಿತೇನೋ......ಅವನು ಒಳಗಡೆ ಹೆಜ್ಜೆ ಇಡುತ್ತಲೂ ಡಾ|| ಜೇಮ್ಸ್‌ರಾಸ್ ನುಡಿದ,

''ಅಮೆರಿಕೆಯ ಪ್ರಕಟನೆ ಕೇಳಿದೆಯಾ? ವಿಯಟ್‌ನಾಮಿನ ಸಾಮೂಹಿಕ ಕೊಲೆಯ ಅಗಾಧವಾದ 'ಪಾಪ'ಕ್ಕೆ ಮುಸುಕು ಹಾಕಲು ಮಾಡಿರುವ ಉಪಾಯದ ಉದ್ದೀಪನೆ!''

ಡಾ|| ಜಾರ್ಜ್ ಮುಗುಳು ನಕ್ಕ. ದೈಹಿಕ ಯಂತ್ರಸಾಧನೆ ಕ್ರಮಬದ್ಧವಾಗಿ ನಡೆಯುತಿದ್ದರೂ ಅಲ್ಲಲ್ಲಿ ಕುಂಟುತ್ತಿರುವುದೇನೋ ಎಂದು ಭಾಸವಾಯಿತು.

ಹಿರಿಯ ವಿಜ್ಞಾನಿ ಉದ್ಗಾರ ತೆಗೆದ ''ನಾಟಕ! ಶುದ್ಧ ಕಪಟ ನಾಟಕ!''

''ಖಡಾಖಂಡಿತವಾಗಿ ಹಾಗೆನ್ನುವುದು ಹೇಗೆ? ಅಮೆರಿಕ ಮನಸ್ಸು ಬದಲಾಯಿಸಿದ್ದರೂ ಇರಬಹುದು. ಹೇಗೆ ಹೇಳೋಣ?''

ಇಬ್ಬರೂ ಒಳಗಣ ಪ್ರಯೋಗ ಶಾಲೆಗೆ ನಡೆದರು.

ಡಾ|| ಜೇಮ್ಸ್ ಮಾತಾಡಲಿಲ್ಲ. ಸಹ ವಿಜ್ಞಾನಿಯ ಅಭಿಪ್ರಾಯವನ್ನು ಅಂತರ್ಯದ ತೀರ್ಮಾನಕ್ಕೆ ಬಿಟ್ಟು ಸಮಯೋಚಿತ ಭಾವನೆಗಳನ್ನು ಅವಲೋಕಿಸುತಿದ್ದ.

ವ್ಯಾನಿನಲ್ಲಿ ತುಂಬಿ ತಂದಿದ್ದ ಆಸಿಡ್-ಗಂಧಕ-ಚೂರ್ಣ-ಭಸ್ಮ-ದ್ರಾವಕ-ಬರಣಿಗಳು-ಶೀಶೆಗಳು-ವಿದ್ಯುತ್ ಸಲಕರಣೆಗಳು ಇತ್ಯಾದಿಗಳನ್ನು ತಂದು ಒಳಗಿನ ಪ್ರಯೋಗಶಾಲೆಯಲ್ಲಿ ಅಟೆಂಡರ್ ಅಳವಡಿಸುತಿದ್ದ. ನಾನಾ ರೀತಿಯ ಬೃಹದ್ ವಿದ್ಯುತ್‌ಸಲಕರಣೆಗಳಿಂದ ಕೂಡಿದ ಪ್ರಯೋಗಶಾಲೆ ಕಾರ್ಖಾನೆಯನ್ನು ನೆನಪಿಗೆ ತರುವಂತಿತ್ತು. ಶೆಲ್ಫ್‌ಗಳ ಮೇಲೆ ಜೋಡಿಸಲಾದ ಸಾಮಗ್ರಿಗಳನ್ನು ತದೇಕ ಚಿತ್ತದಿಂದ ಪರಿಶೀಲಿಸುತ್ತ ಡಾ|| ಜೇಮ್ಸ್‌ರಾಸ್ ಗಂಭೀರ ಧ್ವನಿಯಲ್ಲಿ ನುಡಿದ,

''ಡಾ|| ಜಾರ್ಜ್.....ನಿರಾಯುಧೀ ಸಮಿತಿಯ ವಿಚಾರಧೋರಣೆ ಏನೇ ಇದ್ದರೂ, ಬೃಹದ್ ರಾಷ್ಟ್ರಗಳ ಮೇಲಿನ ಹತೋಟಿಯಂತೂ ಯಾರಿಗೂ ಇಲ್ಲ. ಅನೇಕ ರಾಷ್ಟ್ರಗಳ ರೀತಿ-ನೀತಿಗಳು ಒಳಗೊಂದು ಹೊರಗೊಂದು; ಆತ್ಮರಕ್ಷಣೆಯ ಹೆಸರಿನಲ್ಲಿ ನಡೆಯುತ್ತಿರುವುದು ಆತ್ಮವಂಚನೆ. ಇಂದು ಒಂದಕ್ಕಿಂತ ಇನ್ನೊಂದು ಪ್ರಬಲವಾದ ರಾಸಾಯನಿಕ ಆಯುಧಗಳನ್ನು ಸಿದ್ಧಪಡಿಸುವುದರಲ್ಲಿ ತೊಡಗಿವೆ.

ಇವರ ಹೇಳಿಕೆಗಳನ್ನು ಕೇಳಿಕೊಂಡು ನಾವು ಕೈಕಟ್ಟಿ ಕುಳಿತಲ್ಲಿ ಖಂಡಿತ ಕರ್ತವ್ಯ ಲೋಪ ಮಾಡಿದ ಕಡು ಶಾಪಕ್ಕೆ ಗುರಿಯಾಗುತ್ತೇವೆ!''

ಹಾ......!

ಆದರೆ.......!

ಡಾ|| ಜಾರ್ಜ್ ಹ್ಯಾಂಕ್ಲಿ ಒಂದು ಘಳಿಗೆ ಕಣ್ಮುಚ್ಚಿ ಚಿಂತಿಸಿದ. ನೆತ್ತರು ಹೆಪ್ಪುಗಟ್ಟಿದಂತೆ ಹೃದಯ ನಾಡಿ ಮೆಲ್ಲನೆ-ಬಹು ಮೆಲ್ಲನೆ ಮಿಡಿಯಿತು.

.....ಈ ವಿಚಾರ ವಾಹಿನಿ ಪ್ರಚಂಡ ಶಕ್ತಿಯ ಪ್ರದರ್ಶನಕ್ಕೆ ದ್ಯೋತಕ......ಜಗತ್ ವಿನಾಶಕ್ಕೆ ನಾಂದಿ........ಭ್ರಾತೃಭಾವ-ಜೀವದಯೆಗಳಿಗೆ ಕತ್ತರಿ ಪ್ರಯೋಗ......ವಿಶ್ವಶಾಂತಿಗೆ ಮಾರಕ.....

ಅಂತರ್ಯದಲ್ಲಿ ಹೃದಯ ಬನದ ಕೋಗಿಲೆ ವೀತರಾಗದಲ್ಲಿ ಉಲಿಯಿತು.

ಡಾ|| ಜಾರ್ಜ್ ಉತ್ತರಿಸುವ ಶಕ್ತಿಗೆ ಮಣಿದು ಚಡಪಡಿಸುತ್ತ ''ಆದರೆ.....'' ಎಂದ. ಮುಂದೆ ಮಾತು ಹೊರಡಲಿಲ್ಲ. ಮುಖಭಾವ ಗಂಭೀರವಾಯಿತು.

ಡಾ|| ಜೇಮ್ಸ್‌ರಾಸ್ ಪೆಟ್ಟಿಗೆಯಿಂದ ಒಂದು ಸಿಗಾರನ್ನು ತೆಗೆದು ಡಾ|| ಜಾರ್ಜ್ ಕಡೆಗೆ ನೀಡಿ ಇನ್ನೊಂದನ್ನು ತಾನು ತೆಗೆದುಕೊಂಡು ಅಗ್ನಿ ಸ್ಪರ್ಷ ಮಾಡಿ ಅಲ್ಲೇ ಶತಪಥ ತಿರುಗುತ್ತ ನುಡಿದ,

''ರಷ್ಯದ ರೋಗಾಣು-ವಿಷಾನಿಲಗಳ ಪ್ರಬಲ ಮಾರಕ ಶಕ್ತಿಯಿಂದ ಆತ್ಮರಕ್ಷಣೆ ಪಡೆಯಲೋಸುಗ ನಿರಾಯುಧೀಕರಣದ 'ಉಪಾಯ'ವನ್ನು ಹೂಡಿರಬಹುದೇ ಅಮೆರಿಕ?''

''ಹಾ.....! ಇದ್ದರೂ ಇರಬಹುದು! ಬಹಳ ಸುಲಭೋಪಾಯ! ಅಲ್ಲದೆ ಜಗತ್ ಮಾನ್ಯತೆಯನ್ನು ಸಹ ಪಡೆಯಬಹುದು! ಒಂದೇ ಬಾಣಕ್ಕೆ ಎರಡು ಹಕ್ಕಿ!''

ಇಬ್ಬರ ಮುಖದಲ್ಲೂ ಸ್ವರ್ಣರೇಖೆಯಂತಹ ಎಳೆನಗು ನಲಿದಾಡಿತು.

ಆದರೂ.....!

''ಅಮೆರಿಕ ನಿರಾಯುಧೀಕರಣಕ್ಕೆ ತಲೆಬಾಗಿದೆಯೆಂದರೆ ಸಾಮಾನ್ಯ ವಿಚಾರವಲ್ಲವಷ್ಟೆ?''

''ನಿಜ-ನಿಜ!''

''ಈಗ ನಾನು ಯೋಚಿಸುವುದೇನೆಂದರೆ.....'' ಮಾತನ್ನು ಅಷ್ಟಕ್ಕೆ ತುಂಡುಗಡಿದು ಸಿಗಾರನ್ನು ಬಾಯಲ್ಲಿಟ್ಟುಕೊಂಡು ಕಿಟಕಿಯಲ್ಲಿ ನೋಟವನ್ನು ಚೆಲ್ಲಿ ಕೊಟ್ಟು, ದೂರ ದಿಗಂತದಲ್ಲಿ ಮನನೆಟ್ಟ ಡಾ|| ಜೇಮ್ಸ್‌ರಾಸ್.

"ಏನು ಹೇಳು?" ಡಾ॥ ಜಾರ್ಜ್ ಹ್ಯಾಂಕ್ಲಿ ಪ್ರಶ್ನೆ ಹಾಕಿದ.

ಡಾ॥ ಜೇಮ್ಸ್ ಯಾವುದೋ ಯೋಚನಾ ಕರಾವಳಿಯಲ್ಲಿ ಸಾಗುತಿದ್ದು, ಒಂದೆರಡು ಘಳಿಗೆ ಯೋಚಿಸಿದನಂತರ ಉತ್ಸುಕ ದನಿಯಲ್ಲಿ, ಭೀಮಸಾಹಸದಲ್ಲಿ ನುಡಿದ,

"ಈಗ ನಾವು ಸಹ ಕಣ್ಣಿಗೆ ಕಾಣಿಸದ ವಾಸನೆ ಇಲ್ಲದ, ಪ್ರಚಂಡ ಮಾರಕ ಶಕ್ತಿಯುಳ್ಳ ವಿಷಾನಿಲ ರೋಗಾಣು ಸಮರಕ್ಕೆ ಸಿದ್ಧರಾಗುವುದು ಲೇಸು. ಕಿಚ್ಚೆದ್ದ ಮೇಲೆ ಬಾವಿ ತೋಡ ಹೊರಟರೆ ಆದೀತೆ?"

"ನಿರಾಯುಧೀ ಸಮಿತಿಯ ಮುಂದೆ ಏನು ಹೇಳುವಿ....?"

"ಜಗತ್ತಿನ ಬೃಹದ್ ರಾಷ್ಟ್ರಗಳು ಏನು ಹೇಳುತ್ತವೆಯೋ ಅದನ್ನೆ!"

ಡಾ॥ ಜಾರ್ಜನ ರೂಕ್ಷ ಅಧರೋಷ್ಠಗಳಲ್ಲಿ ಶುಷ್ಕ ನಗು ಅರಳಿ ಮಾಯವಾಯಿತು.

ಡಾ॥ ಜೇಮ್ಸ್‌ರಾಸ್ ದೃಢ ಕಂಠದಿಂದ ಮುಂದುವರಿದ "ರಾಸಾಯನಿಕ ಸಮರ ಹೊಸದೇನಲ್ಲ. ಹಿರಿಯ ರಾಷ್ಟ್ರಗಳು ತೆರೆಯ ಮರೆಯಲ್ಲಿ ಎಂದೋ ಸಿದ್ಧವಾಗಿವೆ. ಅದು ಇಂದು ನಾಳೆಗೆ ಮುಗಿಯುವ ಪ್ರಶ್ನೆಯೂ ಅಲ್ಲ."

ಡಾ॥ ಜಾರ್ಜ್‌ಹ್ಯಾಂಕ್ಲಿ ಅಗಾಧವಾದ ವಿಚಾರವಾಹಿನಿಯಲ್ಲಿ ಸಿಕ್ಕಿಕೊಂಡಿದ್ದ. ತುಟಿಗಳು ಬಿರಿಯಲಿಲ್ಲ. ಕಣ್ಣುಗಳಲ್ಲಿ ಭಾವಜ್ವಾಲೆ ತಾಂಡವವಾಡುತಿತ್ತು. ಗಂಭೀರ ಮುಖಮುದ್ರೆಯಲ್ಲಿ ಚಿಂತೆ ಅಚ್ಚೊತ್ತಿತ್ತು.

"ಪರಸ್ಪರ ಆಯುಧಗಳು ಸಿದ್ಧವಾಗಿದ್ದರೂ ಪ್ರಯೋಗಿಸಲು ಆತ್ಮಭಯವಿರುವುದಿಲ್ಲವೇ? ನಾನು ಪ್ರಯೋಗಿಸಿದರೆ ಆತ ಬಿಟ್ಟಾನೆಯೇ ಎಂಬ ಪ್ರಶ್ನೆ ಎದ್ದೇ ಏಳುತ್ತದೆ. ಒಂದುವೇಳೆ ನಮ್ಮಲ್ಲಿ ರಾಸಾಯನಿಕ ಆಯುಧ ಇಲ್ಲದೆಯೇ ಹೋದರೆ ಇದ್ದವನು ನಿರ್ಭಯದಿಂದ ನಮ್ಮ ಮೇಲೆ ಪ್ರಯೋಗಿಸುತ್ತಾನೆ....... ಆಗ.....?

ಆ ಪ್ರಶ್ನೆ ಮನದಲೆಯಲ್ಲಿ ನಿಮಿರಿ ನಿಂತಿತು.

ಡಾ॥ ಜಾರ್ಜ್ ಯೋಚನಾಕ್ರಾಂತನಾಗಿ ನಿಂತ, ಡಾ॥ ಜೇಮ್ಸ್ ಮುಂದುವರಿದ,

"೧೯೩೬ರಲ್ಲಿ ಮುಸ್ಸೋಲಿನಿ ಇಥಿಯೋಪಿಯಾದ ಮೇಲೆ ಇಂಥ ಅತ್ಯಾಚಾರ ನಡೆಸಲಿಲ್ಲವೇ?"

ಡಾ॥ ಜಾರ್ಜ್ ಮಾತಾಡದೆ 'ಹೌದು' ಎಂಬಂತೆ ತಲೆದೂಗಿದ.

"ಅಲ್ಲದೆ ಅಮೆರಿಕ ರಷ್ಯಗಳಲ್ಲಿರಬಹುದಾದ ರೋಗಣುಗಳಾದರೂ ಎಂಥಾದ್ದು? ಭಯಂಕರ ರೋಗಗಳನ್ನು ಸೃಷ್ಟಿಸಿ ಊರಿಗೆ ಊರುಗಳನ್ನೆ ಬಲಿ ತೆಗೆದುಕೊಳ್ಳಲು ಸಮರ್ಥವಾಗಿವೆ.....ಅವರು ಎಂದಾದರೂ, ಯಾವ ಘಳಿಗೆಯಲ್ಲಾದರೂ ಆಸ್ಫೋಟಿಸಬಲ್ಲರು. ಅಂದಮೇಲೆ......?"

"ಅದಕ್ಕೂ ನಿಷೇಧವಿದೆ; ಅಂತರ್ರಾಷ್ಟ್ರೀಯ ಒಪ್ಪಂದಗಳಿವೆ; ಅದು ಎಷ್ಟೆಂದರೂ ಅಷ್ಟು ಸುಲಭವಾಗಲಾರದು.

"ಈಗ ರಷ್ಯದ ವಿಚಾರ ತೆಗೆದುಕೊ. ಅದು ಸಂಗ್ರಹಿಸಿರುವ ಶಸ್ತ್ರಾಸ್ತ್ರಗಳಲ್ಲಿ ಶೇಖಡಾ ಹದಿನೈದರಿಂದ ಮೂವತ್ತರಷ್ಟು ಯುದ್ಧಾನಿಲಗಳೆಂದರೆ ತಪ್ಪಲ್ಲ....ಅದು ಸುಮ್ಮನೆ ಸಂಗ್ರಹಿಸಿದೆಯೇ? ಯಾವ ನಿಮಿಷದಲ್ಲಾದರೂ ಪ್ರಯೋಗಕ್ಕೆ ಸಿದ್ಧ......"

"ಏನೇನಾಗುತ್ತೋ, ಸ್ವಲ್ಪಕಾಲ ಕಾದು ನೋಡೋಣ......"

"ಛೇ! ಛೇ! ಹಾಗೆನ್ನುವುದು ಬುದ್ಧಿವಂತಿಕೆಯಲ್ಲ."

"ಅಮೆರಿಕ ಒಂದು ಹೆಜ್ಜೆ ಮುಂದೆ ಬಂದು ಯುದ್ಧಾನಿಲಗಳ ಪ್ರಯೋಗದ ಕತೆಯಿರಲಿ, ಅದನ್ನು ತಯಾರಿಸುವುದೇ ಇಲ್ಲವೆಂದು ಹೇಗೂ ಘೋಷಿಸಿದೆಯಷ್ಟೆ? ಇನ್ನು ಇದೇ ರೀತಿ ರಷ್ಯ ಮುಂದೆ ಬಂದಲ್ಲಿ ಈ ಗೋಜೇ ಇರುವುದಿಲ್ಲ. ಈಗಾಗಲೇ ಸಂಗ್ರಹಿಸಿರುವ ಯುದ್ಧಾನಿಲಗಲನ್ನು ನಾಶಮಾಡುವುದು ಸಹ ಸಾಮಾನ್ಯವಲ್ಲ.....ಬಹಳ ಗಂಭೀರವಾದ ಸಮಸ್ಯೆ."

ಅಂದಮೇಲೆ....?

"ನಿಜ.... ಎಲ್ಲರೂ ನಾಶ ಮಾಡಿದ ಮೇಲೆಯೇ ಮುಂದಿನ ಮಾತು. ಅಲ್ಲಿಯವರೆಗೆ ನಾವು ಸುಮ್ಮನೆ ಕೂಡ ಬಾರದು."

"ಬೃಹದ್ ರಾಷ್ಟ್ರಗಳಲ್ಲಿ ಮೂಡಿದ ಪ್ರಚ್ಛನ್ನ ಸಮರ ನೀತಿಯು ಪ್ರಚಂಡ ಶಕ್ತಿಯ ದ್ಯೋತಕ. ಆದರೆ...."

"ಈಗ 'ಆದರೆ'ಯ ಪ್ರಶ್ನೆ ನಿರರ್ಥಕ. ಒಂದುವೇಳೆ ರಷ್ಯ ಮುಂದೆ ಬಂದರೂ ಚೀನಾ ಕತೆಯೇನು? ಅಂದೆಂದಾದರೂ ತಲೆಬಾಗುವುದುಂಟೇ?"

ಡಾ॥ಜಾರ್ಜ್ ವ್ಯಥಿತನಾದ, ತಲೆಯಲ್ಲಿ ಜಾಗಟೆ ಬಾರಿಸಿದಂತಾಯಿತು.

.... ನಿಜ; ರಷ್ಯ ಅಮೆರಿಕಗಳದ್ದು ವ್ಯಾಘ್ರನೀತಿಯಾದರೆ ಚೀಣದ್ದು ಕ್ಷುದ್ರನೀತಿ. ಅದು ನಿರಾಯುಧೀಕರಣ ಸಮಿತಿಯ ಮುಂದೆ ಹಾಜರಾದರಷ್ಟೆ? ಇಂತಿಂತಹ ಆತಂಕಗಳಲ್ಲಿ ಡಾ॥ಜೇಮ್ಸ್‌ನಂತಹ ದೃಢ ಮನಸ್ಕನಾದ ಪ್ರತಿಭಾ ಶಾಲಿಯನ್ನು ಕದಲಿಸುವುದು ಸಾಮಾನ್ಯವಲ್ಲ..... ಡಾ॥ಜಾರ್ಜ್ ಹ್ಯಾಂಕ್ಲಿ ಚಿಂತಿಸುತ್ತ ಸಿಗಾರಿನ

ಹೊಗೆಯನ್ನು ಪುಪ್ಪನೆ ಊದಿದ. ಕಣ್ಣುಗಳಲ್ಲಿ ಆಂತರಂಗಿಕ ಭಾವವಿಭಾವಗಳ ಉಜ್ವಲ ಕಾಂತಿ ತಾಂಡವವಾಡುತಿತ್ತು. ಪ್ರಕಾಶ ಮಯೀ ಸಂಧ್ಯಾದೀಪಗಳ ದಿವ್ಯ ಪ್ರಭೆಯಲ್ಲಿ ಮಿಂದು ಮೂರ್ತಿಮತ್ತಾಗಿ ನಿಂತ. ರುದ್ರ ಮೌನ ಆವರಿಸಿತು. ಹೊಂದಾವರೆಯ ಮೊಗ್ಗಿನಂತೆ ಪರಿಶೋಭಿಸುತಿದ್ದ ಮುಖ ಮಂಡಲ ಗಂಭೀರವಾಯಿತು. ಮನದಲೆಯಲ್ಲಿ ತರಂಗಾಯಿತವಾಗುವ ಹಲವಾರು ಆಲೋಚನೆಗಳ ವಿಚಾರಸರಣಿಯನ್ನವಲೋಕಿಸುತ್ತ ನಿಟ್ಟುಸಿರು ಬಿಟ್ಟ. ಯೋಚನಾಭಾರದಿಂದ ಮನಸ್ಸು ಅತ್ಯಂತ ಆಕುಲಗೊಂಡಿತು.

★ ★ ★ ★ ★

ಡಾ॥ಜೇಮ್ಸ್‌ರಾಸ್ ಪ್ರಯೋಗಶಾಲೆಯ ಪರಿಕರಣಗಳನ್ನು ಜೋಡಿಸುವುದರಲ್ಲಿ ನಿಮಗ್ನನಾದ. ದೊಡ್ಡದೊಡ್ಡ ಹೂಜೆಗಳಲ್ಲಿನ ದ್ರಾವಕ-ಆಸಿಡ್-ಗಂಧಕ-ಚೂರ್ಣಗಳ ಪರಿಶೀಲನೆಯಲ್ಲಿ ಚಿತ್ತ ಪ್ರವೃತ್ತವಾಗಿತ್ತು. ಆ ಬೃಹತ್ ಕಾರಾಗಾರದಲ್ಲಿ ಕೈಯಾಡಿಸಿದಷ್ಟೂ ಸಾಲದು. ಯೋಚನೆ ಮಾಡಿದಷ್ಟೂ ಮುಗಿಯದು. ಮೇಜಿನ ಬಳಿ ಮೈಬಾಗಿ ಸೂಕ್ಷ್ಮದರ್ಶಕ ಯಂತ್ರದ ಕಡೆ ನೋಟ ಹೊರಳಿಸಿದ. ಭವ್ಯ ಶರೀರ ಭಾವೋದ್ವೇಗದಿಂದ ತುಂಬಿಕೊಂಡುವು. ರಾತ್ರಿಯ ಏಕಾಂತ ಪ್ರಯೋಗಕ್ಕೆ ಒಂದೊಂದಾಗಿ ಸಿದ್ಧಗೊಳಿಸುತಿದ್ದ ಹಿರಿಯ ವಿಜ್ಞಾನಿಯನ್ನು ಹಿಂದಿನಿಂದ ಕಿರಿಯ ವಿಜ್ಞಾನಿಯು ಆತಂಕಪೂರ್ಣ ದೃಷ್ಟಿಯಿಂದ ನಿಟ್ಟಿಸಿದ. ಮನದಲ್ಲಿ ಯಾವುದೋ ಗಾಢವಾದ ಚಿಂತೆ ಕೊರೆಯುತ್ತಿದೆ ಎಂಬುದನ್ನು ಮುಖ ಮುದ್ರೆ ಸಾರಿ ಹೇಳುತಿತ್ತು. ಹಿರಿಯ ಅಧಿಕಾರಿಯ ಉದ್ದೇಶ-ಅಭಿಲಾಶೆ-ಆಕಾಂಕ್ಷೆ-ವಿಚಾರಸರಣಿಗಳ ಮುಂದೆ ತನ್ನ ಗಂಭೀರ ಸಲಹೆಯನ್ನು ಇಡಬಹುದೇ ಹೊರತು ಒತ್ತಾಯ ಹೇರುವಂತಿಲ್ಲ.... ಎಷ್ಟೇ ಚರ್ಚಿಸಿದರೂ ಡಾ॥ಜೇಮ್ಸ್ ತನ್ನ ನಿಲುವನ್ನು ಕದಲಿಸಲಾರ.... ಬದಲಿಸಲಾರ....

ಡಾ॥ಜಾರ್ಜ್ ಸ್ವಲ್ಪ ಹೊತ್ತು ಗಂಭೀರಗತಿಯಲ್ಲಿ ನಿಂತಿದ್ದು, ಭಾರವಾದ ಹೆಜ್ಜೆಗಳನ್ನೆಳೆದುಕೊಳ್ಳುತ್ತ ನಿಷ್ಕ್ರಮಿಸಿದ. ಎದೆಯ ನೆಲೆಯಲ್ಲಿ ಚಿಂತೆಯ ಕೀಟ ಕೊರೆಯುತಿತ್ತು. ಆದೇಶವೀಯದಿದ್ದರೂ ಕಾಲುಗಳು ಹೊರಂಗಳದತ್ತ ನಡೆದುವು. ಪ್ರಾಸಾದದ ಬಲಭಾಗಕ್ಕೆ ಹಬ್ಬಿದ ವಿಶಾಲವಾದ ಭೂ ಪ್ರದೇಶದಲ್ಲಿ ಚಿಕ್ಕದಾದರೂ ಚೊಕ್ಕವಾದ ಪುಷ್ಕರಣಿ. ಸ್ಫಟಿಕದಂತೆ ಥಳಥಳಿಸುವ ನೀರು, ಸುತ್ತಲೂ ಸಾಲು ಮೆಟ್ಟಿಲು, ತೀರದಲ್ಲಿ ನಾಲ್ಕಾರು ಕಲ್ಲಿನ ಬೆಂಚುಗಳು, ಸುತ್ತ ಮುತ್ತ ಪ್ರಕಾಶಮಾನವಾದ ವಿದ್ಯುದ್ದೀಪಗಳು, ಪುಷ್ಕರಣಿಯ ನೀರಿನಲ್ಲಿ ಮೈಚಾಚಿದ ನೀಲಿ 'ಹುಣ್ಣಿಮೆ ಚಂದ್ರಮ'

ಮಿನುಮಿನುಗುವ ನಕ್ಷತ್ರಗಳ ಸೊಬಗು ಕಣ್ಮನಗಳನ್ನು ಅತ್ತತ್ತಲೇ ಸೆಳೆಯುವಂತಿವೆ. ಸುನೀಲ ಜಲರಾಶಿ ಮಂದಾನಿಲನ ಅತ್ಯಂತ ಶಾಂತ ಲೀಲಾ ಖೇಲನದಲ್ಲಿ ಮೆಲ್ಲಮೆಲ್ಲನೆ ತರಂಗಾಯಿತವಾಗುತಿತ್ತು.

ಡಾ॥ಜಾರ್ಜ್ ವ್ಯಾಕುಲ ಚಿತ್ತನಾಗಿ ಅಲ್ಲಲ್ಲೆ ಪದಚಾರಣ ಮಾಡಿದ. ಮಾನವತೆಯ ಭವ್ಯ ಭವಿತವ್ಯ-ವಿಶ್ವಶಾಂತಿ ಮತ್ತು ರಾಷ್ಟ್ರಾಭಿಮಾನ ತಲೆಯಲ್ಲಿ ತುಂಬಿ ಹೋಗಿದ್ದು, ನರತಂತುಗಳಲ್ಲಿ ಅಗ್ನಿಜ್ವಾಲೆಯಂತೆ ದೇಹದಾದ್ಯಂತ ಪ್ರವಹಿಸುತಿತ್ತು.... ಬೃಹತ್ ರಾಷ್ಟ್ರಗಳ ಉಗ್ರ ಪೈಪೋಟಿಯಲ್ಲಿ ಇನ್ನೆಷ್ಟು ಕೋಟ್ಯಾನುಕೋಟಿ ನಿರಪರಾಧೀ ಸ್ತ್ರೀಯರು ಮಕ್ಕಳು ಬಲಿಯಾಗಬೇಕೋ ದೇವರಿಗೇ ಗೊತ್ತು. ಹಾ....! ಆ ವಿಚಾರವನ್ನು ಯೋಚಿಸುವುದೂ ಸಹ ಸಾಧ್ಯವಾಗುತ್ತಿಲ್ಲ; ಇನ್ನದನ್ನು ಕಣ್ಣಿಂದ ನೋಡುವುದೆಂದರೆ ಹೇಗೆ?

ಹಾಯ್!

ಆ ಯೋಚನೆ ಬಂದೊಡನೆಯೇ ಮನಸ್ಸು ತಳಮಳಗೊಂಡಿತು. ನಯನದ್ವಯಗಳು ಕೆಂಡದಂತೆ ಲೋಹಿತ ವರ್ಣ ತಳೆದುವು. ಅಖಿಲ ಸಂಕಷ್ಟ ಭರಿತ ಜೀವನವನ್ನು ಉದ್ಧರಿಸಬಹುದಾದ ಸಂವಿಧಾನವನ್ನು ಕುರಿತು ಚಿಂತಿಸುತ್ತ ಬೆಂಚಿನಮೇಲೆ ಸ್ವಲ್ಪ ಹೊತ್ತು ಕುಳಿತ. ಚಿಂತಿತ ಚಿತ್ತ ರಾಷ್ಟ್ರ ರಾಷ್ಟ್ರಗಳಲ್ಲಿ ಸಂಚರಿಸಿ ಸ್ತ್ರೀ ಜನರ ಬಳಿ ಸುಳಿದಾಡಿ ಮಕ್ಕಳುಮರಿಗಳನ್ನು ಕಂಡು ನೋವುಂಡು ಮರ್ಮರ ಮರುಗಿತು. ಆತ್ಮರಕ್ಷಣೆಯ ಸೋಗಿನಲ್ಲಿ ರಾಷ್ಟ್ರ ರಾಷ್ಟ್ರಗಳ ಪೈಪೋಟಿ ಮೈನವಿರೇಳಿಸಿತು.

ಇಂದಿನ ಪ್ರಯೋಗದ ಫಲಿತಾಂಶ.... ಸಾವು.... ನೋವು.... ಸಾವು...... ನೋವು.

ಎಷ್ಟೇ ಪ್ರಯತ್ನಿಸಿದರೂ, ಇನ್ನೆಷ್ಟೇ ವಿಷಯಗಳನ್ನು ಬೆದಕಿದರೂ ಪ್ರಯೋಗದ ದಿಕ್ಸೂಚಿ ನಿಲ್ಲುತಿದ್ದುದು ಆ ದುರ್ದಾಂತ ಬಿಂದುವಿನಲ್ಲೇ! ಇದ್ದಕ್ಕಿದ್ದಂತೆಯೇ ದೇಹದಾದ್ಯಂತ ನಸುಕಂಪನದ ಅಲೆ ಹರಿದಾಡಿ ಹೋಯಿತು. ಮರು ಘಳಿಗೆಯಲ್ಲಿ ಯಾವುದೋ ಓಜಃಪೂರ್ಣವಾದ ಮದಧಾರೆ ಆಲೋಚನಾ ಜಗತ್ತನ್ನು ಆವರಿಸಿ ಅಲ್ಲೋಲಕಲ್ಲೋಲ ಗೊಳಿಸುತ್ತಿರುವಂತೆ ಉದ್ಭಾಸಿತವಾಯಿತು. ಎಷ್ಟೇ ಪ್ರಯತ್ನಿಸಿದರೂ ಮನಸ್ಸಾಗರದ ಆ ಪ್ರಚಂಡ ಅಲೆಯನ್ನು ಶಾಂತ ಶೀಲ ಗೊಳಿಸಲಾಗಲಿಲ್ಲ.

ಹಿಮಗಾಳಿ ಮೈನವಿರೇಳಿಸುವಂತೆ ಭರ್‍ರನೆ ತೀಡುತಿತ್ತು.

ಡಾ॥ಜೇಮ್ಸನ ವಿಚಾರಧಾರೆ ಮತ್ತು ಆತನ ಪ್ರಯೋಗ ವ್ಯವೆತ್ತು ಮೂರ್ತಿಮತ್ತಾಗಿ ಅಕ್ಷಿಪಟಲದ ಮೇಲೆ ಲಾಸ್ಯವಾಡಿತು. ಒಂದೆರಡು ಘಳಿಗೆ ಕಣ್ಮುಚ್ಚಿ ಕುಳಿತು ಚಿಂತಿಸಿದ. ಚಿದಾಕಾಶದಲ್ಲಿ ತರಂಗಾಯಿತವಾಗುವ ಭಾವಲಹರಿಗಳ ರುದ್ರಕ್ಲೇಶ ಮುಖಮಂಡಲದಮೇಲೆ ಮುದ್ರೆಯೊತ್ತಿತು. ಹೃದಯ ಮೃದಂಗದ ವಿಕಟ ತಾಂಡವ ಉದ್ಘೋಷ ಮಾನಸ ಮುರುಳಿಯ ವೀತಗಾನಕ್ಕೆ ತಾಳಲಯಬದ್ಧವಾಗಿತ್ತು. ಗಾಢ ಚಿಂತೆಯಲ್ಲಿ ಕೈಯ್ಯಲ್ಲಿದ್ದ ಸಿಗಾರು ಗಮನಕ್ಕೆ ಬಾರದೆ ಬೆರಳ ಸಂಧಿಯಲ್ಲೇ ಉರಿದು ಹೋಗಿತ್ತು. ಅದರ ನೆನಹು ಮೂಡಿದಾಗ ಭಸ್ಮವನ್ನು ಕೊಡವಿ ಒಂದು ದಮ್ ಎಳೆದು ಅಲ್ಲಲ್ಲೆ ಸುತ್ತಾಡಹತ್ತಿದ.

ಮುಂದೇನು? ಹೇಗೆ ಪರಿಹಾರ?

ಹಿರಿಯ ಪ್ರಶ್ನೆ ಹಿರಿದು ತಿನ್ನುವಾಗ ತೀವ್ರ ಮಾನಸ ಸಂತಾಪದಿಂದ ಮೈ ಜ್ವಾಲಾನಲದಂತೆ ಉರಿಯತೊಡಗಿತು. ಎಷ್ಟೇ ಯೋಚಿಸಿದರೂ ಪರಿಹಾರವನ್ನು ಕಂಡುಕೊಳ್ಳಲಾಗಲಿಲ್ಲ. ಹಾಗೇ ಶತಪಥ ಸುತ್ತತೊಡಗಿದ. ಆದರೆ ಆ ಹೆಜ್ಜೆಗಳೂ ಮೊಂಡು ಹೂಡಿದಂತೆ ಭಾರಾಕ್ರಾಂತವಾಗಿವೆ. ಬಾಂಬ್‌ಧಾಳಿಗೆ ಸಿಕ್ಕಿದ ಪ್ರಾಂತದಲ್ಲಿ ನಡೆಯಲಾರದೆ ನಡೆಯುವ ಪತ್ರಿಕಾ ವರದಿಗಾರನಂತಾಯಿತು ಚಲನ-ವಲನ.

......ಇಂದಿನ ಶಸ್ತ್ರಾಸ್ತ್ರಗಳ ತೀವ್ರ ಸ್ಪರ್ದೆ ಕೊನೆ ಮುಟ್ಟುವುದೆಂದಿಗೆ? ಕಾಲಾನುಕಾಲದಿಂದ ಕಷ್ಟಪಟ್ಟು ಕಟ್ಟಿದ ದೇಶವನ್ನು ಸ್ವಹಸ್ತಗಳಿಂದ ವಿನಾಶ ಗೊಳಿಸುವುದೇ? ಇತರರ ಮೇಲಣ ದ್ವೇಷಾಸೂಯೆಗಳಿಂದ ನಮ್ಮ ನಾಶಕ್ಕೆ ನಾವೇ ನಾಂದಿ ಹಾಡಿ, ಮೃತ್ಯವಿನ ಪದಧ್ವನಿಯನ್ನು ಆಲೈಸುತ್ತ ಕೂಡುವುದು ಎಂತಹ ಹೇಯ ಕೃತ್ಯ?

ಹಾ.....!

ಯೋಚಿಸುತ್ತ ನಿಟ್ಟುಸಿರು ಬಿಟ್ಟ. ಹೊತ್ತು ಏಳರ ಅಂಚನ್ನು ದಾಟಿತ್ತು. ಇಡೀ ಆವರಣದಲ್ಲಿ ವಿದ್ಯುದ್ದೀಪಗಳು ಜಗಜಗಿಸುತ್ತಿವೆ. ಇನ್ನು ಬಹಳ ಹೊತ್ತು ಹೊರಗಡೆ ಉಳಿಯುವ ವ್ಯವಧಾನವೂ ಉಳಿಯಲಿಲ್ಲ. ಭಾರವಾದ ಶರೀರವನ್ನು ಹೊರಲಾರದೆ ಹೊತ್ತು ಮೆಟ್ಟಿಲಿನ ಬಳಿಗೆ ಬರುವುದಕ್ಕೂ ಊಟದ ಬೆಲ್ಲು ಭಾರಿಸುವುದಕ್ಕೂ ಸರಿ ಹೋಯಿತು.

ಠಣ್.ಠಣ್.ಠಣ್.ಠಣ್.

ಹೋಟೆಲಿಂದ ತಂದ ಊಟವನ್ನು ಮೇಜಿನ ಮೇಲೆ ಅಟೆಂಡರ್ ಹೊಂದಿಸಿದ್ದ. ಡಾ॥ಜಾರ್ಜ್ ಹ್ಯಾಂಕ್ಲಿ ಕೇಳಿದ ''ಏಕಪ್ಪಾ, ಇಷ್ಟು ಹೊತ್ತು?''

ಅಟೆಂಡರ್ ನಗುತ್ತ ಉತ್ತರಿಸಿದ ''ನಮ್ಮ ವ್ಯಾನು ಕೈಕೊಟ್ಟುದುದರಿಂದ ಊಟ ತರುವುದು ತಡವಾಯಿತು,''

''ಓ ಹೌದು! ಅದರ ಬ್ಯಾಟರಿ ಡೌನಾಗಿತ್ತು.''

''ಹೊಸ ಬ್ಯಾಟರಿ ತಂದಿದ್ದಾಯ್ತು.''

ಅದೇ ವೇಳೆಗೆ ಡಾ॥ಜೇಮ್ಸ್ ರಾಸ್ ಪ್ರಯೋಗಶಾಲೆಯಿಂದ ಹೊರ ಬಂದ. ಪದ್ಮರಾಗ ವರ್ಷಿತ ಮುಖಮಂಡಲದ ಮೇಲೆ ನಿರಿಗಳು ಮೂಡಿದ್ದರೂ ಅಪೂರ್ವ ಶೋಭೆಯಿಂದ ಪ್ರಕಾಶಿತವಾಗಿತ್ತು. ಪ್ರಶಸ್ತವಾದ ಹಣೆಯಮೇಲೆ ಹರಿದ ಕೆಂಗೂದಲನ್ನು ಹಿಂದಕ್ಕೆ ತಳ್ಳಿ ಹುಬ್ಬೆತ್ತಿ ನೋಡಿದ. ಕಣ್ಣುಗಳಲ್ಲಿ ಕಾಂತಿಯುಕ್ಕುತಿತ್ತು. ತುಟಿಗಳಮೇಲೆ ಊಹಿಸಲೂ ಆಗದಂತಹ ಶುಷ್ಕ ನಗೆ ಹರಿದಾಡಿ ಮಾಯವಾಯಿತು. ಇಬ್ಬರೂ ಮೇಜಿನ ಮುಂದೆ ಕುಳಿತುಕೊಂಡರು. ಕಪ್ಪು ಜೂಲು ನಾಯಿಗಳಿಗೂ ಅಲ್ಲೇ ಊಟವನ್ನು ಕೊಟ್ಟಿದ್ದ ಅಟೆಂಡರ್.

ಊಟದ ಮೇಜಿನಲ್ಲಿ ಏನೇನಿರಬೇಕೋ ಅವನ್ನೆಲ್ಲಾ ಹೊಂದಿಸಿದನಂತರ ಅಟೆಂಡರ್ ಹೊರ ಹೋದ. ಬಾಗಿಲಿಂದಾಚೆಗೆ ವ್ಯಕ್ತಿ ನಿರ್ಗಮಿಸಿದುದನ್ನು ಪಾದರಕ್ಷೆಗಳ ಸದ್ದು ಸಾರಿ ಹೇಳಿದುವು. ಆತ ಉದ್ದನೆಯ ಕಾರಿಡಾರನ್ನು ದಾಟುವವರೆಗೂ ಇಬ್ಬರ ತುಟಿಗಳೂ ಬಿಗಿದುಕೊಂಡಿರುತ್ತವೆ. ನಂತರ ಚರ್ಚೆಯು ಪ್ರಾರಂಭವಾಗುತ್ತದೆ. ಆದರೆ ಇಂದು ಬಹಳ ಮಟ್ಟಿಗೆ ಸದ್ದುಗದ್ದಲವಿಲ್ಲದೆ ಊಟ ಸಾಗಿತ್ತು. ಡಾ॥ಜೇಮ್ಸರಾಸ್ ಗಂಭೀರವಾಗಿ ತುತ್ತು ನುಂಗಿದ. ಯಾವುದೋ ವಿಚಾರತ್ತಗರಿಯಲ್ಲಿ ಮನಸ್ಸು ಸಿಕ್ಕಿಕೊಂಡಿರುವಂತೆ ತೋರುತಿತ್ತು. ಕೈಗಳು ಯಾಂತ್ರಿಕವಾಗಿ ಕೆಲಸ ನಿರ್ವಹಿಸಿದ್ದುವು.

ಕಲಕಿತ ಮನಸ್ಸಾಗರದ ಮಹಾಕ್ಷೋಭೆಯನ್ನು ಬದಿಗಿಟ್ಟು ಶೀತಲ ಶಾಂತಿಯ ಚಿಂತನೆಯಲ್ಲಿ ಡಾ॥ಜಾರ್ಜ್ ಹ್ಯಾಂಕ್ಲಿ ಪೂರ್ಣ ಮುಳುಗಿದ್ದನೆಂದು ತೋರುತ್ತದೆ. ಆತ ಯಾವ ಮಾತನ್ನೂ ಆಡಲಿಲ್ಲ. ಅಂತೂ, ಊಟ ಮುಗಿಯಿತು. ಡಾ॥ಜೇಮ್ಸ್ ಪ್ರಯೋಗಶಾಲೆಗೆ ಹಿಮ್ಮರಳಿದ. ಡಾ॥ ಜಾರ್ಜ್ ಪತ್ರಿಕಾವಲೋಕನದಲ್ಲಿ ತಲ್ಲೀನನಾದ. ದೇಶವಿದೇಶಗಳ ಕಷ್ಟನಷ್ಟಗಳ ತಿರುಳನ್ನು ಕಲೆಹಾಕಿ ತಂದಿತ್ತು-ಪತ್ರಿಕೆ. ಎರಡನೆಯ ಮಹಾಯುದ್ಧದಲ್ಲಿ ಅನುಭವಿಸಿದ ಅಗಾಧವಾದ ದುಃಖವನ್ನು ವಿಚಾರವಾದಿಯೊಬ್ಬ ಕೂಲಂಕುಷವಾಗಿ ವಿಶ್ಲೇಷಣೆ ಮಾಡಿ ಇನ್ನಾದರೂ ಬೃಹತ್ ರಾಷ್ಟ್ರಗಳು ಜಗತ್ ಶಾಂತಿಯ ಕಡೆಗೆ ಹೆಚ್ಚು ಗಮನಕೊಡಬೇಕೆಂದು ಒತ್ತಾಯಪೂರ್ವಕವಾಗಿ ವಿನಂತಿಸಿ ಕೊಂಡಿದ್ದ.

ಅಂದಿನ ಅಪಾರವಾದ ಕಷ್ಟನಷ್ಟಗಳು, ಅನಂತರ ದಲಿತ ದೇಶೋದ್ಧಾರಕ್ಕಾಗಿ ಪಟ್ಟಪಾಡು ಚಿತ್ತ ಭಿತ್ತಿಯಮೇಲೆ ಚಲನ ಚಿತ್ರದಂತೆ ಸುಳಿಸುಳಿದಳಿಯಿತು. ಒಡಲಿನಲ್ಲಿ ಕತ್ತಿಯಲುಗು ಹರಿದಾಡಿದಂತೆ ಒಳಗಿಂದೊಳಗೇ ಚುರುಚುರುಗುಟ್ಟಿತು. ಮನೋರಾಜ್ಯದಲ್ಲಿ ನೂರಾರು ಭಾವನೆಗಳು ಮೊಳೆತು ಅತೀವ ಕೋಲಾಹಲವನ್ನೆಬ್ಬಿಸಿದುವು. ಡಾ॥ಜಾರ್ಜ್ ಯೋಚನಾಕ್ರಾಂತನಾಗಿ, ಮೈಮರವಟ್ಟಂತೆ ಮೂರ್ತಿಮತ್ತಾಗಿ ಕುಳಿತ. ತಲೆ ಹುಚ್ಚೆದ್ದು ಸಿಡಿಯತೊಡಗಿತು. ಪ್ರಯೋಗಶಾಲೆಗೆ ಹೋಗಲು ಮನಸ್ಸು ಬರಲಿಲ್ಲ. ಹಾಗೆ ಅದೆಷ್ಟು ಹೊತ್ತು ಉರುಳಿತೋ.......

ಹೊರಗಡೆ ಕಣ್ಣುಗಳನ್ನು ತಿವಿಯುವಂತಹ ಕಾಳಗಪ್ಪು.

ನಕ್ಷತ್ರ ಖಚಿತ ನೀಲಾಕಾಶ.

ನಿಶಾಚರ ಪಶುಪಕ್ಷಿಗಳು ಅಲ್ಲಲ್ಲಿ ಊಳಿಡುತ್ತಿವೆ. ಜೂಲು ನಾಯಿಗಳು ತಮ್ಮತಮ್ಮ ಪಲ್ಲಂಕಗಳ ಮೇಲೆ ಮಲಗಿ ನಿದ್ದೆಗೈಯ್ಯುತ್ತಿವೆ. ಸೂಜಿ ಕೆಳಗೆ ಬಿದ್ದರೂ ಕೇಳಿಸಬಹುದಾದಂತಹ ನಿಶ್ಶಬ್ದ; ಕಮನೀಯ ಕಠೋರ ಶಾಂತಿಯಲ್ಲಿ ಹೊತ್ತು ಕ್ಷಣ ಕ್ಷಣ ಪ್ರತಿಕ್ಷಣ ಕರಗುತಿತ್ತು. ವರಾಂಡದಲ್ಲಿ ವಿದ್ಯುದ್ದೀಪಗಳು ಮಂದಕಾಂತಿಯನ್ನು ಚೆಲ್ಲುತ್ತಿದ್ದುವು.

ಡಾ॥ಜಾರ್ಜ್ ವರ್ತಮಾನ ಪತ್ರಿಕೆಯನ್ನು ಬದಿಗಿಟ್ಟು ಎದ್ದುನಿಂತ- ಪರ್ವತವೇ ಎದ್ದುನಿಂತಂತೆ. ಪ್ರಯೋಗ ಶಾಲೆಗೆ ಹೋಗಲಾಗಲೀ ಮಲಗುವ ಕೊಠಡಿಗೆ ಹೋಗಲಾಗಲೀ ಮನಸ್ಸು ಬರಲಿಲ್ಲ. ಉದ್ವಿಗ್ನಚಿತ್ತ ಗೋಡೆಯ ಮೇಲಿನ ಚಿತ್ತಾರಗಳ ಕಡೆ ಹರಿಯಿತು. ಚಿತ್ರವಾಸೀ ಪದ್ಮರಾಗ ವರ್ಷಿತ ಏಸು ಮಹಾಶಯ ಆಶೀರ್ವಾದ ಪೂರ್ವಕವಾಗಿ ಇತ್ತಲೇ ನಿಟ್ಟಿಸುತಿದ್ದ. ಧವಳರಾಗ ರಂಜಿತ ಮನೋಹಾರಿಣೀ ಮೇರಿ ಏಸುವನ್ನಾಂತು ದೈನ್ಯವೇ ಮೈವೆತ್ತು ಬಂದಂತೆ ನಿಂತ ನಿಲುವು ತನುಮನಗಳನ್ನು ಸೂರೆಗೊಂಡಿತು. ಡಾ॥ಜ್ಯಾರ್ಜ್ ಭಾವಾವಿಷ್ಟನಾದ. ಒಂದುಕಾಲದಲ್ಲಿ ಆ ತಾಯಿಯ ಅಮೃತ ಪುತ್ರನ ಮೇಲೆ ಅಜ್ಞ ಜನ ಸಮುದಾಯ ಹಗೆ ತೀರಿಸಿಕೊಂಡಿತು. ಇಂದು, ಈ ವಿಜ್ಞಾನಯುಗದಲ್ಲಿ ಜ್ಞಾನಿಗಳೂ ವಿಜ್ಞಾನಿಗಳೂ ಕೋಟಿ ಕೋಟಿ ತಾಯಂದಿರು ಮಕ್ಕಳ ಮೇಲೆ ತೀರಿಸಿಕೊಳ್ಳುತ್ತಿರುವ ಹಗೆಗೆ ಶಿಕ್ಷೆಯೇ ಇಲ್ಲವೇ? ಇನ್ನೆಷ್ಟು ಮಂದಿ ದೈಹಿಕ-ಬೌದ್ಧಿಕ-ಮಾನಸಿಕ ಸ್ಥಿಮಿತ ತಪ್ಪಿ ಸತ್ವಹೀನರಾಗಿ ಭೂಮಿಗೆ ಭಾರವಾಗಿ ನರಳಬೇಕೋ? ಹಾಯ್! ಈ ದುರ್ದಾಂತ ಕಗ್ಗೊಲೆಗೆ..... ಶಿಕ್ಷೆ.... ಇಲ್ಲವೇ ಇಲ್ಲವೇ?? ಖಂಡಿತ ಇಲ್ಲವೇ???

ಬೇಲಿಯೆದ್ದು ಹೊಲವ ಮೇದೊಡೆ....

ಪಾಕ ಶಾಲೆಯಲ್ಲಿ ಉರಿಯಬಹುದಾದ ಅಗ್ನಿ ಗೃಹವ್ಯಾಪಿಯಾದರೆ.... ಈ ವಿಜ್ಞಾನಯುಗದಲ್ಲಿ ಸ್ಥೂಲ ಸೂಕ್ಷ್ಮ ಜಗತ್ತಿನ ಶೇಷ ತಾರುಣ್ಯ ಸಮೂಲವಾಗಿ ಆಲೋಡಿತವಾದರೆ...... ಸುಪ್ತ ಮಹತ್‌ಶಕ್ತಿ ವಾಮಮಾರ್ಗವನ್ನು ಹಿಡಿದರೆ.....?

ಛೆಃ! ಛೆಃ!

ಈ ದುರಂತವಾಹಿನಿಯ ಮಹಾಪೂರವನ್ನು ತಡೆಗಟ್ಟುವುದು ಹೇಗೆ? ಸಮಸ್ತ ಜೀವಕೋಟಿಗೆ ಈ ದಿಶೆಯಲ್ಲಿ ಸಹಾಯಮಾಡಲು ಕಿಂಚಿತ್ತಾದರೂ ಸಾಧ್ಯವೇ? ಹೇಗೆ, ಯಾವರೀತಿಯ ಕ್ರಮ ಕೈಕೊಳ್ಳಬೇಕು? ಯಾವ ದಾರಿ ಸುಗಮ?

ಡಾ॥ಜಾರ್ಜ್ ಹ್ಯಾಂಕ್ಲಿ ಡ್ರಾಯಿಂಗ್ ರೂಮಿನಲ್ಲಿ ಅತ್ತಿತ್ತ ಪದಚಾರಣ ಮಾಡುತ್ತ ಚಿಂತಿಸಿದ. ಹೃದಯ ಬೆಂದು ಬೆಂಗಾಡಾಗಿತ್ತು. ಚಿತ್ತ ದ್ರವಿತ ಮಂಜಿನಂತಾಗಿತ್ತು. ನಿಡಿದಾದ ನಿಟ್ಟುಸಿರು ಬಿಟ್ಟ. ಜೀವನಬನದಲ್ಲಿ ಹೆಂಡತಿ ಮಕ್ಕಳೊಂದಿಗೆ ಪಡೆದ ಮಧುರಾನುಭೂತಿ ಅಂತಃಪಟಲದಮೇಲೆ ಪ್ರತಿಫಲಿಸಿ ಹೃದಯ ಚೂರ್ಣವಿಚೂರ್ಣವಾದಂತೆ ಭಾಸವಾಯಿತು. ಶೋಣವರ್ಣದ ಮುಖಮಂಡಲ ಆತ್ಮಗ್ಲಾನಿಯಿಂದ ಮ್ಲಾನವಾಯಿತು. ತುಟಿಗಳು ನಸು ಕಂಪಿಸಿದುವು. ಒಂದೆರಡು ಕ್ಷಣ ಕಣ್ಣ ಮುಂದಿನ ಸಮಸ್ತ ವಸ್ತುಗಳೂ ಗಿರಿಗಿರ ಸುತ್ತಿದಂತಾಯಿತು. ತಲೆಯನ್ನು ಎರಡೂ ಕೈಗಳಿಂದ ಅದುಮಿ ಹಿಡಿದುಕೊಂಡ.

ಗೋಡೆಯ ಮೇಲಿನ ಗಡಿಯಾರ ಮನಮೋಹಕ ದನಿಯಲ್ಲಿ ಗಂಟೆ ಭಾರಿಸಿತು. ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಭತ್ತು, ಹತ್ತು, ಹನ್ನೊಂದು, ಹನ್ನೆರಡು.

ಹೃದಯ ಮೃದಂಗ ಅದಕ್ಕನುಗುಣಾಗಿ ಮಿಡಿದು ಮರುದನಿ ಕೊಟ್ಟಿತು. ಧಣ. ಧಣ. ಧಣ. ಧಣ......

ಘಂಟಾಘೋಷದೊಡನೆ ಬೆರೆತು ಹೃದಯ ಮೃದಂಗ ಘೋಷಿಸಿದ ಆ ಮಂತ್ರವಾದರೂ ಯಾವುದು? ಎಲ್ಲಿಂದ ಯಾವ ಕಡೆ ಕೇಳಿಸುತ್ತಿದೆ? ಕರ್ಣ ಪಟಲದ ಮೇಲೆ ಮಾತ್ರವಲ್ಲ; ಅಂತಃಪಟಲದ ಮೇಲೂ ಘೋಷಿಸುತ್ತಿದೆ. ಅದೇ ಅರ್ಥಪೂರ್ಣ ಶ್ರೀ ಘೋಷ!

"How for that little candle throws its beams!
So shines a good deed in a naughty world."

ನುಡಿ ಮುತ್ತನ್ನು ಚೆಲ್ಲಿದ ವರಕವಿ ಮೈವೆತ್ತು ರೂಪು ತಳೆದು ಅಕ್ಷಿಪಟಲದ ಮೇಲೆ ಸುಳಿದನೇನೋ.... ಡಾ||ಜಾರ್ಜ್ ಕಣ್ಮುಚ್ಚಿ ಸ್ವಲ್ಪ ಹೊತ್ತು ಕುಳಿತ. ಹೊತ್ತು ನಿರಾತಂಕವಾಗಿ ಉರುಳಿತು. ಕಣ್ದೆರೆದಾಗ ಮರಿಯಳ ಮನೋಹರ ಮೂರ್ತಿ ಕಂಗೊಳಿಸಿತು. ಆಕೆಯ ಉಜ್ವಲ ತೇಜವು ಮ್ಲಾನವಾದಂತೆ, ಕುಮಾರ ಏಸುವಿನ ಕಣ್ಣುಗಳು ಅಶ್ರು ಲಿಪ್ತವಾದಂತೆ ತೋರಿ ಬಂತು. ಅಲ್ಲಿಂದ ನೋಟವನ್ನು ಕದಲಿಸಲಾಗಲಿಲ್ಲ. ಅಂತರಾತ್ಮ ಗೋಳನ್ನು ಮುಂದಿಟ್ಟು ಗೋಗರೆದು ಶಾಂತಿಸಾಧನೆಗಾಗಿ, ಲೋಕ ಕಲ್ಯಾಣಕ್ಕಾಗಿ, ಮಾರ್ಗದರ್ಶನ ಮಾಡಿಸಲು ಬೇಡಿಕೊಂಡಿತು. ಎದ್ದು ತನ್ನ ಕೊಠಡಿಗೆ ಹೋಗಿ ಬಟ್ಟೆಗಳಚಿ ರಾತ್ರಿಯುಡುಪು ತೊಟ್ಟು ಪಲ್ಲಂಕದ ಮೇಲೆ ಅಡ್ಡಾದ. ಎಷ್ಟೇ ಪ್ರಯತ್ನಿಸಿದರೂ ಕದಡಿದ ಮನಸ್ಸಿಗೆ ಶಾಂತಿಯನ್ನು ಪಡೆದುಕೊಳ್ಳಲಾಗಲಿಲ್ಲ. ಒಡಲಲ್ಲಿ ಏನೋ ಒಂದು ಬಗೆಯ ಸಂಕಟ.... ಮತ್ತೇನೋ ಒಂದು ಬಗೆಯ ಗ್ಲಾನಿ. ಈ ಎಲ್ಲವನ್ನೂ ಮೀರಿದ, ಯೋಚಿಸಿದರೂ ಅರ್ಥವಾಗದ, ಕ್ಷಣಕ್ಷಣಕ್ಕೂ ಬಲಿಯುತ್ತಿರುವ ಆಶಾಭಾವನೆ....? ಹಾ....! ಅದೆಲ್ಲಿಯದು?

ಭಾವವಿಭಾವಗಳಲ್ಲಿ ತನುಮನಗಳು ದಣಿದುವು. ಮಾಡಿನ ನೇರಕ್ಕೆ ದೃಷ್ಟಿಯನ್ನು ಹರಿಸಿ ಎದೆಯ ಮೇಲೆ ಕೈಕಟ್ಟಿ ಮಲಗಿದ, ದೀಪ ಉರಿಯುತ್ತಲೇ ಇತ್ತು. ಉಜ್ವಲ ಕಾಂತಿ ಕಣ್ಣುಗಳಿಗೆ ಮುತ್ತುತಿದ್ದರೂ ಸ್ವಿಚ್ ಒತ್ತಲಿಲ್ಲ. ಪ್ರಯೋಗಶಾಲೆಯಲ್ಲಿ ಕೆಲಸ ಸಾಗುತ್ತಲೇ ಇತ್ತು. ಮುಚ್ಚಳ, ಚಿಮುಟ, ಬಸಿ, ಬಟ್ಟಲು ಇವುಗಳ ಮತ್ತು ವಿದ್ಯುತ್ ಸಾಧನೆಗಳ ಕಟ ಪಟ ಸಣ್ಣ ಸದ್ದು ಆಗಾಗ ಕೇಳಿಬರುತ್ತಿತು...... ವಿದ್ಯುತ್ ಪರಿಕರಣಗಳ ಶಬ್ದ ಕಿವಿಯಮೇಲೆ ಬೀಳುತಿತ್ತು.

ಡಾ||ಜೇಮ್ಸ್ ರಾಸ್ ತನಗಾಗಿ ಕಾದಿದ್ದಾನೇನೋ..... ಏನಾದರೂ ಆಗಲಿ, ಕದಡಿದ ಮನಸ್ಸಿಗೆ ಶಾಂತಿ ಇಲ್ಲದೆ ನಾನೇನೂ ಮಾಡಲಾರೆ, ಎಂದು ತನಗೆ ತಾನೇ ಹೇಳಿಕೊಂಡ ಡಾ||ಜಾರ್ಜ್ ಹ್ಯಾಂಕ್ಲಿ.

ಹೊತ್ತು ಕ್ಷಣಶಃ ತಂಗದೆ ಉರುಳುತಿತ್ತು. ನಿದ್ದೆ ಈ ಬಳಿಯಲ್ಲಿ ಸುಳಿಯಲಿಲ್ಲ. ದೂರ ದೂರ ಲೋಕದ ಚಂದ್ರಮ ಕಿಟಿಕಿಯಲ್ಲಿ ಮೈದೋರಿದ. ಹಾಲ್ಬೆಳಕು ಅತ್ಯಂತ ಪ್ರಶಾಂತವಾಗಿತ್ತು.

★ ★ ★ ★ ★

ಬೆಳಕು ಹರಿದಾಗ ಡಾ||ಜಾರ್ಜ್ ಹಾಸಿಗೆ ಬಿಟ್ಟೆದ್ದ. ಮೈ ಕೈ ಹುಣ್ಣಿನಂತೆ ನೋಯುತ್ತಿತ್ತು. ಕಣ್ಣುಗಳು ಉರಿಯುತ್ತಿದ್ದುವು. ತಲೆ ಕಲ್ಲು ಹೊತ್ತಂತೆ ಭಾರವಾಗಿತ್ತು.

ಎದ್ದು ಮುಖ ಮಜ್ಜನ ಮಾಡುವಷ್ಟರಲ್ಲಿ ಅಟೆಂಡರ್ ಕಾಫಿಯನ್ನು ತಂದು ಮುಂದಿಟ್ಟ. ಬಹುಶಃ, ಬೆಳಗಿನ ಆ ಒಂದು ಬಿಸಿ ಕಾಫಿ ನೀಡುವಷ್ಟು ಚೈತನ್ಯವನ್ನು ಇನ್ನಾವ ಖಾದ್ಯಾಖಾದ್ಯಗಳೂ ನೀಡಲಾರವೇನೋ..... ಆತ್ಮ ಸಂತೋಷದಿಂದ ಒಂದೊಂದು ಹನಿಯನ್ನೂ ಅಮೃತೋಪಮವಾಗಿ ಹೀರಿದ.

ಪ್ರಾಂಗಣದಲ್ಲಿ- ಗಿಡ ಮರಗಳ ನೆಲೆಯಲ್ಲಿ ಬೆಳಗಿನ ಹವೆಗಾಗಿ ಅಡ್ಡಾಡುವಾಗ ಅಭಿಶಸ್ತ ಹೆಜ್ಜೆಗಳ ಅಭಿಶಕ್ತಿ ಕೂರ್ಮಗತಿಯಲ್ಲಿ ಮಂದಮಂದವಾಗಿತ್ತು. ತೀವ್ರತೆಗಾಗಿ ಪ್ರಯತ್ನಿಸಿದರೂ ಕ್ರೇನಿನ ಸಹಾಯದಿಂದ ಬಂಡಿಯನ್ನೆಳೆದಂತಾಗುತ್ತದೆ ದೇಹ. ಆಲೋಚನಾ ಜಗತ್ತಿನ ಅಕಳಂಕಭಾವ ಅಜ್ಞಾತ ವೇದನೆಯಿಂದ ನರಳುತಿತ್ತು, ನಿಶ್ಶಕ್ತನಂತೆ, ನಿರ್ವೀರ್ಯನಂತೆ ಅಲ್ಲಲ್ಲೆ ಸುತ್ತಿದ. ಆಂತರಂಗಿಕ ನಿರ್ಧೂಮ ಅಗ್ನಿಜ್ವಾಲೆ ತನುಮನಗಳನ್ನು ದಹಿಸುತಿತ್ತು. ಗಿಡ ಮರಗಳ ಸುಂದರ ನೆಲೆಯಲ್ಲಿ ಅಡ್ಡಾಡುವಷ್ಟು ಅಡ್ಡಾಡಿ, ಬೆಳಗಿನ ಹವೆಯನ್ನು ಮರಗಳ ಸುಂದರ ನೆಲೆಯಲ್ಲಿ ಅಡ್ಡಾಡುವಷ್ಟು ಅಡ್ಡಾಡಿ, ಬೆಳಗಿನ ಹವೆಯನ್ನು ಮೈದುಂಬಿಕೊಂಡು ಬೃಹದ್ ಮಹಲಿನ ಸಾಲು ಮೆಟ್ಟಿಲುಗಳನ್ನೇರುವಾಗ ಬಾಲರವಿ ಬಾನೇರುತಿದ್ದ. ಹೊಂಬಿಸಿಲು ಮೈಗೆ ಹಿತಕರವಾಗಿ ಕಾವೂಡಿಸುತಿತ್ತು.

ಅಟೆಂಡರ್ ಬ್ರೆಡ್ಡು ಬಿಸ್ಕತ್ತು ಬೆಣ್ಣೆ ಮೊಟ್ಟೆ ಜಾಮುಗಳನ್ನು ತಂದಿಟ್ಟು ಹೋದ. ರಾತ್ರಿ ಬಹಳ ತಡವಾಗಿ ಮಲಗಿದ್ದ ಡಾ||ಜೇಮ್ಸ್‌ರಾಸ್ ಇನ್ನೂ ಎದ್ದಿರಲಿಲ್ಲ. ಬ್ರೆಡ್ಡಿಗೆ ಬೆಣ್ಣೆಯನ್ನು ಬಳಿದು, ವ್ಯಂಜನದೊಡನೆ ನುಂಗಿ ಹಸಿವನ್ನು ಹಿಂಗಿಸಿಕೊಳ್ಳುವಾಗ ದುರ್ದಾಂತ ಮಾರಕಾಸುರ ಅಕ್ಷಿಪಟಲಗಳಮೇಲೆ ಸುಳಿಸುಳಿದಾಡಿದ. ನಿರಪರಾಧೀ ಆಬಾಲಸ್ತ್ರೀವೃದ್ಧರನ್ನು ಬಲಿ ತೆಗೆದುಕೊಳ್ಳಲು ಸಿದ್ಧನಾಗುತ್ತಿರುವ ಆತ ದಿನೇ ದಿನೇ ನವಶಕ್ತಿಯಿಂದ ಮೈದುಂಬಿಕೊಳ್ಳುತ್ತಿದ್ದಾನೆ.....!

ಆ ಯೋಚನೆ ಬಂದೊಡನೆಯೇ ಗಂಟಲೊಣಗಿತು. ಸುತ್ತಮುತ್ತ ಮಂಗಳ ಸೂಚಕ ಗಂಭೀರ ಶೂನ್ಯತೆ, ಅನುತಪ್ತವಾಯು, ಅಪ್ರಕಾಶಿತ ತಿರ್ಯಕ್ ಸೂರ್ಯಕಿರಣಗಳ ಸಾಂದ್ರತೆ ಅನಾತ್ಮೀಯ ಭಾವದಿಂದ ಸುಳಿಸುತ್ತುತ್ತಿರುವಂತೆ ಉದ್ಭಾಸಿತವಾಯಿತು. ಕ್ಲಾಂತ ಶೀರ್ಣ ಮುಖದ ಲಾಲಿಮೆ ಮಾಯವಾಗಿ ರಕ್ತಹೀನರಂತೆ ಬಿಳಿಚಿಕೊಂಡಿತು. ಎದ್ದು ವೃತ್ತ ಪತ್ರಿಕೆಗಳನ್ನು ತೆಗೆದುಕೊಂಡ. ಮನಸ್ಸು ಒಲ್ಲದಿದ್ದರೂ ಕಣ್ಣುಗಳು ತಲೆ ಬರೆಹಗಳಮೇಲೆ ಹರಿದಾಡಿದುವು. ಮೊಟ್ಟಮೊದಲು ದಿಟ್ಟಿಗೆ ಬಿದ್ದುದು ಒಲ್ಲದ ವಿಷಯಗಳು..... ಹಿರಿಯ ರಾಜಕಾರಿಣಿಗಳ ಯುದ್ಧ ಪ್ರಚೋದಕ ಭಾಷಣಗಳು, ಶಸ್ತ್ರಾಸ್ತ್ರಗಳ ಸಂಗ್ರಹಣೆಗಳು, ಜಲಜನಕ ಬಾಂಬುಗಳ

ತಯಾರಿಕೆ, ಅಣುಬಾಂಬುಗಳ ಪ್ರಯೋಗ, ರಾಸಾಯನಿಕ ವಿಷಾನಿಲ-ರೋಗಾಣುಗಳ ಸಿದ್ಧತೆ....!

ಹಾ.....!

ಆದಿ ಅಂತ್ಯವಿಲ್ಲದ ವಿಷಯಗಳು ನೊಂದ ಮನಕ್ಕೆ ಕಹಿಯನ್ನೂಡಿಸಿದುವು. ಪತ್ರಿಕೆಯನ್ನು ಬದಿಗಿಟ್ಟು ಯೋಚಿಸುತ್ತ ಕುಳಿತ. ಚಿಂತಾಬ್ಧಿಯಲ್ಲಿ ಚಿತ್ತ ಮುಳುಗಿತು. ಎಷ್ಟೇ ಯೋಚಿಸಿದರೂ ಪರಿಹಾರ ದೊರೆಯುತ್ತಿಲ್ಲ. ಅಕ್ಷಮ್ಯ ಅಪರಾಧದಲ್ಲಿ ತಾನೂ ಸಹ ತೊಡಗಿರುವುದು ಎಂತಹ ಅವಿವೇಕ? ಇಲ್ಲಿಯವರೆಗಿನ ಪಾಪಕರ್ಮಗಳೇ ಸಾಕು. ಇನ್ನಂತೂ ನಾನಿದರಲ್ಲಿ ಭಾಗವಹಿಸಲಾರೆ.

ಹಾಯ್, ಹಾಯ್!

ಡಾ॥ಜೇಮ್ಸ್‌ರಾಸ್ ಎದ್ದು ಮುಖ ಮಜ್ಜನ ಮಾಡಿ ಹೊರಬಂದ. ಕಣ್ಣುಗಳಲ್ಲಿನ ರಂಗು ಇನ್ನೂ ಮಾಸಿರಲಿಲ್ಲ. ತಿದ್ದಿದ ಕೂದಲು ಹಣೆಯಮೇಲೆ ನಲಿಯುತಿತ್ತು. ಕುರ್ಚಿಯನ್ನೆಳೆದುಕೊಳ್ಳುತ್ತ ಕೇಳಿದ ಡಾ॥ಜೇಮ್ಸ್,

''ನೀನು ರಾತ್ರಿಯೇಕೆ ಪ್ರಯೋಗಶಾಲೆಗೆ ಬರಲಿಲ್ಲ?''

''ತುಂಬ ತಲೆ ನೋಯುತಿತ್ತು; ಸುಮ್ಮನೆ ಮಲಗಿ ಬಿಟ್ಟೆ; ನಿದ್ದೆಯೂ ಬರಲಿಲ್ಲ.''

''ಓ..... ಹಾಗೋ?''

ಡಾ॥ಜೇಮ್ಸ್ ಮೆಲುನಗೆ ಬೀರಿ ಬ್ರೆಡ್ಡು ಬಿಸ್ಕತ್ತುಗಳಿಗೆ ಕೈ ಹಚ್ಚಿದ. ಮುಖದಲ್ಲಿ ಅದ್ಭುತ ಖಳೆ ವಿಜಯದ ವೈಜಯಂತಿಯಂತೆ ನಲಿಯುತಿತ್ತು. ಕಣ್ಣುಗಳಲ್ಲಿ ಅಪ್ರತಿಮ ಪ್ರಭೆ ತಾಂಡವವಾಡುತಿತ್ತು. ಅಂತರ್ನಿಹಿತ ಆತ್ಮಸಂತೋಷದಲ್ಲಿ ಆತ ಸಂಪೂರ್ಣ ಮುಳುಗಿದ್ದ. ಭಾವೋದ್ವೇಗದಿಂದ ಮುಖಮುದ್ರೆಯಲ್ಲಿ ತೆರೆತೆರೆಯಾಗಿ ಯೋಚನಾಲಹರಿಗಳು ಮೂಡಿ ಮಾಯವಾಗುತಿದ್ದುವು.

ಡಾ॥ಜಾರ್ಜ್ ಅತ್ಯಂತ ಬಾವುಕತೆಯಿಂದ ಅಂದ ''ರೋಗಾಣು ಸಮರೋಪಕರಣಗಳ ತಯಾರಿಕೆಯಲ್ಲಿ ಬೃಹದ್ ರಾಷ್ಟ್ರಗಳ ಪೈಪೋಟಿ ಜಗತ್ತಿನ ಶುಭ ಕಲ್ಪನೆಯಲ್ಲ. ಯಾವ ದುರ್ಮುಹೂರ್ತದಲ್ಲಿ ಅವುಗಳ ಆಸ್ಫೋಟನೆಯಾಗಿ ನಿರಪರಾಧೀ ಜೀವ ಕೋಟಿಯನ್ನು ಬಲಿ ತೆಗೆದುಕೊಳ್ಳುವುದೋ ಹೇಳುವಂತಿಲ್ಲ. ಇದು ಅಗಾಧವಾದ ಪಾಪ!''

ಡಾ॥ಜೇಮ್ಸ್‌ರಾಸ್ ಅತ್ಯಂತ ಆಶ್ಚರ್ಯದಿಂದ ತಲೆಯೆತ್ತಿ ನೋಡಿದ. ಕೆಲವು ಕ್ಷಣ ತನ್ನ ಕಿವಿಗಳನ್ನೆ ನಂಬಲಾಗಲಿಲ್ಲವೋ ಏನೋ.... ಒಂದೆರಡು ಘಳಿಗೆ ಏನೆನ್ನಬೇಕೋ ಹೊಳೆಯಲಿಲ್ಲ. ಅನಂತರ ಗಮನ ವಿಜ್ಞಾನದೆಡೆಗೆ ಹರಿಯಿತು.

ಹಿತಾಹಿತಗಳನ್ನೂ ಕರ್ತವ್ಯಾಕರ್ತವ್ಯಗಳನ್ನೂ ಒಂದೆರಡು ಘಳಿಗೆ ತನ್ನಲ್ಲೇ ಗಮನಿಸಿದನೇನೋ... ಆದರೆ ಅದಕ್ಕಿಂತಲೂ ನೂರ್ಮಡಿಯಲ್ಲಿ ಮನಃಪ್ರಾಣಗಳು ಆನಂದ ಪ್ರಮತ್ತವಾಗಿವೆ. ತನ್ನ ಪ್ರಯೋಗದಲ್ಲಿ ದಿಟ್ಟ ಹೆಜ್ಜೆಯನ್ನು ಮುಂದಿಟ್ಟಾಗಿದೆ. ಇನ್ನು ಪ್ರಕರಣವನ್ನು ಪೂರೈಸುವುದೊಂದು ಬಾಕಿ.

ಅಂದಮೇಲೆ...?

ಡಾ||ಜೇಮ್ಸ್ ಬಹಳ ಹೊತ್ತು ಮಾತಾಡಲಿಲ್ಲ. ಬಿಸಿ ಬಿಸಿ ಕಾಫಿಯನ್ನು ಸ್ವಲ್ಪಸ್ವಲ್ಪವಾಗಿ ಹೀರಿ ಖಾಲಿ ಬಸಿಯನ್ನು ಮೇಜಿನಮೇಲಿಟ್ಟು ಯಾವು ಯಾವುದೋ ವಿಚಾರಗಳನ್ನು ಮೆದ್ದು ದೇಶವಿದೇಶಗಳಲ್ಲಿ ಅಲೆದು ಮನದುಂಬಿ ಕೊಂಡಿದ್ದ ವಿಷಯವನ್ನು ಗಂಭೀರ ಧ್ವನಿಯಲ್ಲಿ ಬಿತ್ತರಿಸಿದ,

''ಜಗತ್ ಪ್ರಭುತ್ವಕ್ಕಾಗಿ ನಡೆದ ಎರಡನೆಯ ಸಮರಾನಂತರ ಪೂರ್ವ ಜರ್ಮನಿಯ 'ಡೈರೆನ್ ಫರ್ತ್' ಕಾರ್ಖಾನೆಯು ರಷ್ಯನರ ವಶವಾಗಿ ಜರ್ಮನಿಯ ಭಯಂಕರ ರೋಗಾಣು ಸಮರೋಪಕರಣಗಳ ಗುಟ್ಟು ರಷ್ಯದ ಸ್ವಾಧೀನಕ್ಕೆ ಹೋಯಿತು. ಇಲ್ಲದಿದ್ದಲ್ಲಿ ರಷ್ಯನರು ಈ ದಿಶೆಯಲ್ಲಿ ಇಷ್ಟು ತೀವ್ರ ಪ್ರಗತಿಯನ್ನು ಹೊಂದುವುದು ಸಾಧ್ಯವಾಗುತ್ತಿರಲಿಲ್ಲ.''

ಡಾ||ಜಾರ್ಜ್‌ನ ಕಾತರ ತುಂಬಿದ ಚಿತ್ತ ಆಶಿಸಿದ ರೀತಿಯೇ ಬೇರೆ ಡಾ||ಜೇಮ್ಸ್ ಪ್ರಸ್ತಾಪಿಸಿದ ವಿಷಯವೇ ಬೇರೆ. ಒಂದು ಘಳಿಗೆ ಮಾತಾಡದೆ ಆತನನ್ನು ಸೂಕ್ಷ್ಮವಾಗಿ ಗಮನಿಸಿದ. ಆತನ ಗಮನ ಇನ್ನೂ ಬಾಹ್ಯಜಗತ್ತಿಗೆ ಬಂದಿರದೆ ಪ್ರಯೋಗ ಶಾಲೆಯ ಮಹತ್ಸಾಧನೆಯಲ್ಲಿಯೇ ಮುಳುಗಿದ್ದು ಭಾವೋದ್ವೇಗದಿಂದ ಮುಖ ಕೆಂಪಡರಿತ್ತು. ಸ್ವಲ್ಪ ಹೊತ್ತು ಸುಮ್ಮನಿದ್ದು ಅತ್ಯಂತ ಖೇದದಿಂದ ನುಡಿದ ''ಡಾಕ್ಟರ್! ರೋಗಾಣು ಸಮರ ನಿರೋಧಕ ಸಮಿತಿಯ ಮುಂದೆ ಇನ್ನೊಮ್ಮೆ ಈ ವಿಷಯವನ್ನಿಟ್ಟು ಎಲ್ಲಾ ರಾಷ್ಟ್ರಗಳಿಗೂ ಆಮಂತ್ರಣ ನೀಡಿ, ಕೂಲಂಕಶವಾಗಿ ಚರ್ಚಿಸುವುದು ಒಳ್ಳೆಯದು.''

''ಹೇಳಿದ್ದೇ ಹೇಳು...! ಯಾವುದು ನಮ್ಮ ಪ್ರಯತ್ನಕ್ಕೆ ಮೀರಿದೆಯೋ ಯಾವುದು ಸಾಧ್ಯವೋ ಅದನ್ನು ಕುರಿತು ಚಿಂತಿಸುವುದರಲ್ಲಾಗಲೀ, ಅದರಲ್ಲಿ ತೊಡಗುವುದರಲ್ಲಾಗಲೀ ವ್ಯರ್ಥ ಕಾಲಾಹರಣ ಮಾಡುವುದು ಪ್ರಯೋಜನವಿಲ್ಲ. ಎಲ್ಲಾ ವಿಧದಲ್ಲೂ ನಾವು ಪ್ರಬುದ್ಧರಿರುವಾಗ ಏಕೆ ಅಳುಕು? ಈ ದಿಶೆಯಲ್ಲೂ ನಾವು ಸಜ್ಜಾಗಿರುವುದು ಕ್ಷೇಮ.''

''ಇದು ಅಳುಕುವ ಪ್ರಶ್ನೆಯೇ ಅಲ್ಲಾ ಡಾಕ್ಟರ್! 'ಜೀವದಯೆ' ಎಂದು ಅರ್ಥ ಮಾಡಿಕೋ.''

''ನಾವು ಹಾಗೆಂದರೆ ನಮ್ಮ ಶತ್ರು ಹಾಗೆನ್ನುತ್ತಾನೆಯೇ?''

''ದಯವಿಟ್ಟು ಒಂದು ವಿಚಾರವನ್ನು ಪರಾಂಬರಿಸು. ಈ ಪ್ರಚಂಡ ಮಾರಕ ಶಕ್ತಿಯನ್ನು ಶತ್ರುಗಳ ಮೇಲೆ ಮಾತ್ರ ಪ್ರಯೋಗಿಸಲಾಗುತ್ತದೆಯೇ?'' ದನಿ ಎದೆಯಾಳದಿಂದ ಹರಿದು ಬಂತು. ಅಕ್ಷರ ಅಕ್ಷರಗಳೂ ಲಘು ಕಂಪನಕ್ಕೊಳಗಾದುವು. ಉದ್ವೇಗ ಮುಖಮಂಡಲದಲ್ಲಿ ಮುದ್ರೆಯೊತ್ತಿತು.

''ಆಗುವುದಿಲ್ಲ ನಿಜ; ಒಪ್ಪಿಕೊಳ್ಳುವೆ.'' ಕೆಲವು ಕ್ಷಣ ತಡೆದು ದೃಢವಾದ ಕಂಠಸ್ವರದಲ್ಲಿ ಮುಂದುವರಿದ ''ಬಾಂಬ್ ಧಾಳಿಯಲ್ಲಿ ಶತ್ರುಗಳು ಮಾತ್ರ ಸಾಯುತ್ತಾರೆಯೆ? ಯಾವುದೇ ಬಗೆಯ ಧಾಳಿಯಲ್ಲಿ ನಿರಪರಾಧಿಗಳ ಸಾವು ಅನಿವಾರ್ಯ. ಮಸಿ ಗುಂಡುಗಳ ದಾಳಿಯಲ್ಲಿ ಮೈಕೈ ನೋಯಿಸಿಕೊಂಡು ಕಾಲ ಹರಣ ಮಾಡಿ ಸಾಯುವುದಕ್ಕಿಂದ ಇದು ಸರ್ವೋತ್ತಮ!.... ಒಂದೇ ಬಾರಿಗೆ ಮುಗಿದು ಹೋಗುತ್ತದೆ! ಸಿಗಾರನ್ನು ಹತ್ತಿಸಿ ಒಂದು ದಮ್ ಎಳೆದು ತುಂಟ ನಗೆ ಬೀರಿ ತರುಣಾಟ್ಟಹಾಸದಿಂದ ಪುನಃ ಮುಂದುವರಿದ ''ಇಲ್ಲಿ ಕೇಳು! ಇಷ್ಟಕ್ಕೂ ನಾವೀಗ ಪ್ರಯೋಗಿಸುವುದಿಲ್ಲವಲ್ಲಾ?''

''ಯೋಚಿಸಿ ನೋಡು; ಒಂದಲ್ಲ, ಹತ್ತು ಬಾರಿ ಯೋಜಿಸಿ ನೋಡು.''

ಡಾ॥ ಜೇಮ್ಸ್ ರಾಸ್ ಘಕಘಕನೆ ನಕ್ಕು ಬಿಟ್ಟ.

ಡಾ॥ಜಾರ್ಜ್ ಹ್ಯಾಂಕ್ಲಿ ಆ ತಿರಸ್ಕಾರದ ಘಾತವನ್ನು ತಿಂದರೂ ವ್ಯಥಿತನಾಗಿ ಬಿತ್ತರಿಸಿದ ''ಖಂಡಿತ ವಿಚಾರ ಮಾಡು; ಸಿದ್ಧವಸ್ತು ನಮ್ಮಲ್ಲಿರುವಾಗ ಅಸ್ಫೋಟನೆ ಯಾವ ಘಳಿಗೆಯಲ್ಲಾದರೂ ಆಗಬಹುದು.''

''ಅಂತಹ ಪ್ರಸಂಗ ಬಂದಲ್ಲಿ ನಾವು ಸಿದ್ಧರಿರಲೇ ಬೇಕಷ್ಟೆ? ಕಿಚ್ಚೆದ್ದ ಮೇಲೆ ಬಾವಿ ತೊಡುವುದು ಮೂರ್ಖತನ!''

ಇನ್ನು ಪ್ರತಿವಾದನೆ ಹೂಡಲು ಡಾ॥ಜಾರ್ಜ್ ಇಷ್ಟಪಡಲಿಲ್ಲ. ಹೃದಯ ಹೆಗ್ಗಲ್ಲು ಹೊತ್ತಂತೆ ಭಾರವಾಯಿತು. ಸಿಗಾರೊಂದನ್ನು ತೆಗೆದುಕೊಂಡು ಅಗ್ನಿ ಸ್ಪರ್ಶ ಮಾಡಿ ಹೊರ ಹೋದ. ತಲೆಯಲ್ಲಿ ನೂರು ಆನೆಗಳು ನುಗ್ಗಿ ಬಂದಂತಾಯಿತು. ಪುಷ್ಕರಣಿಯಲ್ಲಿ ನೀರು ಥಳಥಳಿಸುತಿತ್ತು. ಆದೇಶವೀಯದಿದ್ದರೂ ಕಾಲುಗಳು ಅತ್ತಲೇ ನಡೆದುವು. ಹೋಗಿ ಕಲ್ಲು ಬೆಂಚಿನಮೇಲೆ ಕಾಲು ಚಾಚಿದ.

ದೂರ ದಿಗಂತದಲ್ಲಿ ಸೂರ್ಯ ಬಾನೇರುತಿದ್ದ. ಬಿಸಿಲು ಕ್ಷಣಕ್ಷಣಕ್ಕೂ ಕಾವೇರಿ ಸುಡುತಿತ್ತು.

ನಗರದ ಕಡೆಗೆ ಧಾವಿಸಿದ್ದ ಅಟೆಂಡರ್ ವ್ಯಾನಿನಲ್ಲಿ ಬಗೆಬಗೆಯ ಪರಿಕರಣಗಳನ್ನೂ, ದ್ರಾವಕ ಚೂರ್ಣಗಳನ್ನೂ ತಂದು ಪ್ರಯೋಗ ಶಾಲೆಯಲ್ಲಿ ಅಳವಡಿಸುತಿದ್ದ. ಡಾ॥ಜೇಮ್ಸ್‌ರಾಸ್ ಸ್ವಲ್ಪ ಹೊತ್ತು ಹೊರಗಡೆ ಅಡ್ಡಾಡಿ ಪುನಃ ಪ್ರಯೋಗ ಶಾಲೆಯಲ್ಲಿ ಕಾರ್ಯ ನಿರತನಾದ. ಡಾ॥ ಜಾರ್ಜ್ ಮರವಟ್ಟಂತಾದ. ಮನಸ್ಸು ಅಜ್ಞಾತ ವೇದನೆಯಿಂದ ತುಂಬಿ ಹೋಗಿತ್ತು. ಪ್ರಯೋಗ ಶಾಲೆಗೆ ಹೋಗಲು ಮನಸ್ಸಾಗಲಿಲ್ಲ. ಶರೀರ ಬಿಸಿಲ ಸ್ನಾನ ಮಾಡುತಿದ್ದರೆ ಮನಸ್ಸು ಚಿಂತಾ ಸ್ನಾನ ಮಾಡುತಿತ್ತು.

ಆದರೆ, ಸ್ವಲ್ಪ ಹೊತ್ತು ಉರುಳುವುದರೊಳಗಾಗಿ ಡಾ॥ಜೇಮ್ಸ್‌ನಿಂದ ಕರೆ ಬಂತು. ಎದ್ದು ಹೋಗಲಾರದೆ ಹೋದ. ನರನರಗಳೂ ಕಿತ್ತು ಬರುವಂತೆ ಭಾಸವಾಗುತಿತ್ತು. ವ್ಯಕ್ತಿ ಯಾಂತ್ರಿಕವಾಗಿ ಒಳಹೆಜ್ಜೆ ಇಟ್ಟ. ವಿದ್ಯುಚ್ಛಕ್ತಿಯ ಪರಿಕರಣವೊಂದು ಇದ್ದಕ್ಕಿದ್ದಂತೆಯೇ ಸಂಪು ಹೂಡಿತ್ತು. ಅದರ ಉದ್ದನೆಯ ತಂತಿಯು 'ವಾಲ್ ಸ್ವಿಚ್' ಸಹಿತ ಸುರುಳಿ ಸುರುಳಿಯಾಗಿ ಸುತ್ತಿಕೊಂಡು ಮೇಜಿನ ಮೇಲೆ ದುಂಡಗೆ ಬಿದ್ದಿತ್ತು. ಡಾ॥ಜೇಮ್ಸ್‌ರಾಸ್ ಅದರೆಡೆಗೆ ಬೆರಳು ತೋರಿ ''ಇದು ಸರಿಯಾಗಿ ನಡೆಯುತ್ತಿಲ್ಲ, ರಾತ್ರಿಯಿಂದ ಸಂಪು ಹೂಡಿದೆ.'' ಎಂದ.

ರುದ್ರಭಯಂಕರ ಮಾರಕಾಸುರನ ಜನ್ಮಸ್ಥಾನವಾದ ಆ ಭೀಷಣತರ ಬೃಹದ್ ಕಾರಾಗಾರ ಸಕಲ ಯಂತ್ರ ಸಾಧನೆಗಳಿಂದ ತುಂಬಿ ಹೋಗಿದೆ. ಎಲ್ಲಿ ನೋಡಿದರೂ ವಿಧವಿಧವಾದ ಪರಿಕರಣಗಳು ದೊಡ್ಡದೊಡ್ಡ ಪೀಪಾಯಿಗಳು, ಪಿಂಗಾಣಿ ಭರಣಿಗಳು ಇತ್ಯಾದಿ....ಇತ್ಯಾದಿ. ಡಾ॥ಜಾರ್ಜ್ ಒಮ್ಮೆಸುತ್ತಲೂ ಕಣ್ಣಾಡಿಸಿ, ಆ ಯಂತ್ರ ಸಾಧನೆಯ ಸ್ವಿಚ್ಛನ್ನು ಕಳಚಿ ಸ್ಥಿತಿಗತಿಗಳನ್ನು ಪರೀಕ್ಷಿಸುತ್ತ ನಿಟ್ಟುಸಿರುಬಿಟ್ಟ. ಸೂಕ್ಷ್ಮದರ್ಶಕ ಯಂತ್ರದ ಬಳಿ ಕುಳಿತು ತನ್ನ ಪ್ರಯೋಗೀಕರಣವನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಪರೀಕ್ಷಿಸುತ್ತಿದ್ದ ಡಾ॥ಜೇಮ್ಸ್‌ರಾಸ್ ಇತ್ತ ತಿರುಗದೆಯೆ ಅಂದ ''ನಿನಗಿನ್ನೂ ಸೀರಿಯಸ್ ನೆಸ್ ಬರಲಿಲ್ಲ!''

ಡಾ॥ ಜಾರ್ಜ್ ಮುಳ್ಳು ತುಳಿದವನಂತಾದ. ಏನು ಹೇಳಲೂ ತೋರಲಿಲ್ಲ. ತುಟಿಗಳಲ್ಲಿ ಸಣ್ಣ ಶುಷ್ಕನಗೆ ಮಿನುಗಿ ಮಾಯವಾಯಿತು. ಸ್ವಲ್ಪ ಹೊತ್ತು ಯಂತ್ರ ಸಾಧನೆಯಲ್ಲಿ ಕೈಯಾಡಿಸಿ ಆದ್ಯಂತವಾಗಿ ಪರಿಶೀಲನೆ ನಡೆಸಿ, ನಂತರ ಅದರ ವಾಲ್‌ಸ್ವಿಚ್ಛನ್ನು ಕಳಚಿಟ್ಟು ''ಈಗ ಇದು ಸರಿ ಹೋಗುವಂತಿಲ್ಲ. ಸ್ವಿಚ್ಛ್ ಬದಲಾಯಿಸಬೇಕು'' ಎಂದ.

''ಓಹೋ! ಹಾಗೋ? ನಾನು ಪರಿಕರಣವೇ ಕೆಟ್ಟಿದೆಯೇನೋ ಎಂದುಕೊಂಡಿದ್ದೆ.''

“ಇಲ್ಲ; ಇಲ್ಲ.”

“ಹೋಗಲಿ ಬಿಡು; ಈಗ ಅದರ ಅಗತ್ಯವೂ ಇಲ್ಲ.”

“ನಗರದ ಕಡೆ ಹೋದಾಗ ಹೊಸ ಸ್ವಿಚ್ಛ್ ತಂದು ಜೋಡಿಸುವೆ.”

ಅಲ್ಲಿ ಆತನಿಗೆ ಏನೆಲ್ಲ ಬೇಕೋ ಅದನ್ನು ಕ್ರಮಬದ್ಧವಾಗಿ ಮಾಡುವಾಗ ತಾನು ಯಾವುದೋ ‘ಪಾಪ’ದಲ್ಲಿ ತೊಡಗಿರುವಂತೆ ಚಡಪಡಿಸಿದ. ಒಡಲು ಅತ್ಯಂತ ಸಂಕಟದಿಂದ ತುಂಬಿ ಹೋಯಿತು. ತಾಮ್ರವರ್ಣರಂಚಿತ ಅಧರೋಷ್ಠಗಳು ಬಿಗಿದುಕೊಂಡುವು.

★ ★ ★ ★ ★

ಏರಿದ ರವಿ ಇಳಿಮುಖನಾಗಿದ್ದ. ಹೊತ್ತು ಸದ್ದಿಲ್ಲದೆ ಉರುಳುತಿತ್ತು. ಮಧ್ಯಾಹ್ನದ ಗಡು ಕಳೆದರೂ ಸುಡು ಬಿಸಿಲು ತಣ್ಪು ತಳೆದಿರಲಿಲ್ಲ.

ಮೇಜಿನ ಮೇಲೆ ಬಸಿ ಬಟ್ಟಲುಗಳ ಜೋಡಣೆಯಾಗಿತ್ತು. ಬಸಿಗಳಲ್ಲಿ ಹಬೆಯಾಡುವ ಚಹ, ಬಗೆಬಗೆಯ ಬಿಸ್ಕತ್ತುಗಳು ಹೊಂದಿಸಲ್ಪಟ್ಟಿದ್ದುವು. ಅಟೆಂಡರ್ ದೊಡ್ಡತಟ್ಟೆಯಲ್ಲಿ ಕೆಲವು ಹಣ್ಣುಗಳನ್ನು ತಂದಿಟ್ಟು ಹೋದ. ಸದ್ದಿಲ್ಲದೆ ಚಹಪಾನ ವಾಗಿತು. ಡಾ॥ಜೇಮ್ಸ್ ಒಂದು ಗುಟುಕು ಚಹ ಹೀರಿ “ನಿರಾಯುಧೀಕರಣ ಸಮಿತಿಯ ಆದೇಶವನ್ನೇ ಆಗಲಿ, ೧೯೨೦ರ ಲೀಗ್ ಆಫ್ ನೇಷನ್ಸ್-ನ ಒಪ್ಪಂದವನ್ನೇ ಆಗಲಿ ಇಂದು ಎಷ್ಟು ರಾಷ್ಟ್ರಗಳು ಪರಿಪಾಲಿಸುತ್ತಿವೆ? ಒಪ್ಪಂದದ ಪಾಡಿಗೆ ಒಪ್ಪಂದವಿದೆ. ಬೃಹದ್ ರಾಷ್ಟ್ರಗಳು ತಮ್ಮ ಗುಪ್ತ ಕಾರ್ಯಾಗಾರವನ್ನು ನಡೆಸುತ್ತಲೇ ಇವೆ.... ಎಂಬುದು ನಿನ್ನ ಗಮನಕ್ಕೆ ಬಂದಿದೆಯಷ್ಟೆ? ಪ್ರಸ್ತುತ ಪರಿಸ್ಥಿತಿಯಲ್ಲಿ ಯಾರೇ ಆಗಲಿ ಕೈ ಕಟ್ಟಿ ಕೂಡುವುದು ಸರಿಯಲ್ಲ ಎಂಬುದನ್ನು ಈಗಲಾದರೂ ನೀನು ಮನಗಂಡಿರಬಹುದು.” ಎಂದ. ಸಮಯ ಸ್ಫೂರ್ತಿಯಿಂದ ಹುಬ್ಬುಗಳು ಏರಿ ಇಳಿದುವು. ತುಟಿಗಳಲ್ಲಿ ತುಂಟನಗೆ ಹರಿದಾಡಿತು. ಮನಃಪ್ರಾಣಗಳು ಆನಂದದ ಬೀಡಾಗಿದ್ದುವು.

“ಅದು ಸರಿಯೆ. ಆದರೂ ಈ ವಿಚಾರ ನೂರು ಬಾರಿ ಯೋಚಿಸತಕ್ಕದ್ದು. ತೀವ್ರ ಪೈಪೋಟಿ ಶಕ್ತಿ ಪ್ರಯೋಗಕ್ಕೆ ನಾಂದಿ!”

“ಇರಲಿ; ಒಮ್ಮೆ ಅದರ ಸವಿಯನ್ನೂ ನೋಡಿ ಬಿಡಲಿ, ಈ ಜಗತ್ತು!”

ಚಹ ಪಾನ ಮುಗಿದಿತ್ತು. ಡಾ॥ಜಾರ್ಜ್ ಎದ್ದು ಹೋದ. ಶೃಂಖಲಾ ಬದ್ಧ ಕೈಗಳು ಕೆಲಸ ಮಾಡುತ್ತಿರುವಾಗ ಉಚ್ಛೃಂಖಲ ಚಿತ್ತ ನೂರು ದಿಶೆಯಲ್ಲಿ ಹರಿದಾಡುತಿತ್ತು. ಅನೇಕವೇಳೆ ಬಿಸಿಯುಸಿರು ಅಲ್ಲಿಂದಲ್ಲೆ ಸಿಕ್ಕಿಕೊಂಡಂತೆ

ಭಾಸವಾಯಿತು. ಡಾ॥ಜೇಮ್ಸ್ ವರಾಂಡದಲ್ಲಿ ಕುಳಿತು ಪ್ರಶಾಂತ ವಾತಾವರಣಕ್ಕೆ ಮೈಯೊಡ್ಡಿ ಪತ್ರಿಕಾವಲೋಕನದಲ್ಲಿ ತಲ್ಲೀನನಾಗಿದ್ದುದನ್ನು ಗಮನಿಸಿಯೇ ಡಾ॥ಜಾರ್ಜ್ ಕೈಗಳಿಗೆ ಚಟುವಟಿಕೆ ಬಂದಿತ್ತೋ ಏನೋ..... ಕಳಚಿದ್ದ ಉದ್ದನೆಯ ತಂತಿಗಳನ್ನು ಮಾಯಕತೆಯಿಂದ ವಿಚಿತ್ರ ಗತಿಯಲ್ಲಿ ಹೊಂದಿಸಿ, ಅಲ್ಲಿ ಇಲ್ಲಿ ಜೋಡಿಸಿ ಕಾಣದಂತೆ ಮರೆಮಾಚಿದ. ಧೂರ್ತ ಧೈರ್ಯದಿಂದ ಕೆಲಸ ನಡೆದರೂ ಯಾಂತ್ರಿಕವಾಗಿ ಸಾಗುತಿತ್ತು. ಪರಿಕರಣಗಳ ಜೋಡನೆ, ರಾಸಾಯನಿಕ ರೋಗಾಣುಗಳ ಪರಿಶೀಲನೆ ನಡೆಯುತಿದ್ದಂತೆ ಡಾ॥ಜೇಮ್ಸ್‌ರಾಸ್ ಆಗಮಿಸಿದ. ಪ್ರಶಸ್ತ ಹೆಜ್ಜೆಗಳ ಸದ್ದು ವರಾಂಡದ ಹೊಸ್ತಿಲು ದಾಟಿದಾಗಿನಿಂದಲೂ ಕೇಳಿಸುತಿತ್ತು. ಅದನ್ನು ಗಮನಿಸುತ್ತಲೇ ಡಾ॥ಜಾರ್ಜ್ ಕೆಲಸವನ್ನು ಮುಂದುವರಿಸಿದ್ದ. ಅವನು ಬಂದು ಬಳಿಯಲ್ಲಿ ನಿಲ್ಲುತ್ತಲೂ ಡಾ॥ಜಾರ್ಜ್ ಹ್ಯಾಂಕ್ಲಿ ವಿನಮ್ರನಾಗಿ ಅಂದ,

"ಪ್ರಯೋಗ ಈಗೀಗ ಸರಿಯಾದ ರೂಪಕ್ಕೆ ಬರುತ್ತಿದೆ!"

"ನಾಳೆಯೊಳಗಾಗಿ ಪೂರೈಸಿಕೊಳ್ಳುವೆ! ನಂತರ ಒಂದು ವಾರದೊಳಗಾಗಿ ರೋಗಾಣು ಸಮರೋಪಕರಣಗಳ ಬಗ್ಗೆ ನನ್ನ ಅಂತಿಮ ವರದಿ ತಯಾರಾಗುತ್ತದೆ. ನಾನು ತಯಾರಿಸಿರುವ ಈ ಪ್ರಚಂಡ ಮಾರಕಾಣು ಸಾಮಾನ್ಯವಾದುದಲ್ಲ. ಒಮ್ಮೆ ಪ್ರಯೋಗಿಸಿದರೆ ಐದು ಲಕ್ಷ ಚದುರ ಮೈಲಿಗಳವರೆಗೆ ಹಬ್ಬುವ ಅದ್ಭುತ ಶಕ್ತಿ ಉಳ್ಳದ್ದು!"

"ಮಾಡು, ಮಾಡು!"

"ಮಾಡುವುದು ಮಾತ್ರವಲ್ಲ; ವಿಶ್ವ ವಿಖ್ಯಾತಿ ಹೊಂದುವೆ!"

"ಅತ್ಯಂತ ಅಭಿನಂದನೆಗಳು!"

ಪ್ರಾಸಂಗಿಕವಾಗಿ, ಅಭಿಮಾನ ಪೂರ್ವಕವಾಗಿ ಪರಸ್ಪರ ಕೈಕುಲುಕಿದರು. ತುಟಿಗಳಲ್ಲಿ ಹೂನಗೆ ಚೆಲ್ಲಿತು. ಡಾ॥ ಜಾರ್ಜ್ ಆತನಿಗೆ ಮಾಡಬೇಕಾದ ಎಲ್ಲಾ ಸಹಾಯವನ್ನು ಮಾಡಿ ಹೊರಬಂದ. ನಂತರ ಡಾ॥ಜೇಮ್ಸ್‌ರಾಸ್ ಪ್ರಯೋಗಶಾಲೆಯಿಂದ ಹೊರಬರಲಿಲ್ಲ. ರಾತ್ರಿಯೂಟಕ್ಕೆ ಕೆಲವು ನಿಮಿಷ ಮಾತ್ರ ಹೊರ ಬಂದಿದ್ದು ಒಳ ಹೋದ. ಮೇಜಿನ ಮುಂದೆ ಕುಳಿತು ಅಂತಿಮ ವರದಿಯನ್ನು ಏಕ ನಿಷ್ಠೆಯಿಂದ ಬರೆಯುತಿದ್ದ. ನಡುವೆ ಒಂದು ಮಾತೂ ಆಡಲಿಲ್ಲ. ಡಾ॥ಜಾರ್ಜ್ ಅಲ್ಲಲ್ಲೆ ಕೈಯಾಡಿ ಮಾಡಬೇಕಾದ ಸಹಾಯ ಮಾಡಿ ಮಧ್ಯರಾತ್ರಿಯನಂತರ ತನ್ನ ಕೊಠಡಿಗೆ ಹಿಂದಿರುಗಿದಾಗ ಗೃಹವಲಯ ಶಾಂತ ಸಾಮ್ರಾಜ್ಯದಲ್ಲಿ ಮೈಮರೆತಿತ್ತು. ನಾಯಿಗಳು ವರಾಂಡದಲ್ಲಿ ಮೈಚೆಲ್ಲಿದ್ದುವು. ಅಟೆಂಡರ್ ತನ್ನ ಬಿಡಾರಕ್ಕೆ ಹೋಗಿಯಾಗಿತ್ತು.

ಸಂಕಟ.... ಸಂಕಟ..... ಯಾವುದೋ ಅನಿರ್ವಚನೀಯ ಸಂಕಟ ಒಡಲನ್ನು ತುಂಬಿತ್ತು. ನೋಟ ಗಡಿಯಾರದ ಮೇಲೆ ಹೊರಳಿ ಹಿಮ್ಮರಳಿತು.

ಉದ್ವೇಗ-ಕಳವಳ-ಕಾತರಗಳು ಇದ್ದಕ್ಕಿದ್ದಂತೆಯೇ ಮನವನ್ನು ಆವರಿಸಿದುವು. ಕುಳಿತಿರಲಾಗದೆ ಎದ್ದು ಡ್ರಾಯಿಂಗ್ ರೂಮಿಗೆ ಹೋದ. ನೋಟ ಮರಿಯಳ ಕಡೆ ಹರಿಯಿತು. ಮಾತೆಯ ಕೈಗಳಲ್ಲಿನ ಸುಂದರ ಮಗು.... ದೀನಾದೀನಳಾಗಿ ನಿಂತ ತಾಯಿ ಕಣ್ಮನಗಳನ್ನು ಯಾವರೀತಿ ಸೆಳೆದಳೊರೋ ದೇಹ ಸಮಸ್ತವೂ ದೃಢ ಗಂಭೀರವಾಯಿತು. ಭಾವವಿಭಾವಗಳು ಅಲ್ಲಿಂದಲ್ಲೆ ಲಯಹೊಂದಿ ಧರ್ಮಾಧರ್ಮಗಳ ತುಮುಲಯುದ್ಧ ಬುಡಮೇಲಾಯಿತು. ಒಡನೆ ಎದೆಯಾಳದಿಂದ ಅಂತರ್ವಾಣಿ ನುಡಿಯುತು.... ಕೇವಲ ಒಂದು ಜೀವದಿಂದ ಕೋಟ್ಯಾನುಕೋಟಿ ಜೀವಿಗಳನ್ನು ಉಳಿಸಿಕೊಳ್ಳಬಹುದಾದರೆ ಅದರಿಂದ ದೋಷವಿಲ್ಲವೇ ಇಲ್ಲ... ಮತ್ತೇಕೆ ಚಿಂತೆ?

ಡಾ॥ಜಾರ್ಜ್‌ಹ್ಯಾಂಕ್ಲಿ ಮುಂದುವರಿದು ಪ್ರಯೋಗ ಶಾಲೆಯ ಬಾಗಿಲಲ್ಲಿ ಹಣಿಕಿದ. ತುಂತುರು ಹನಿಗಳು ಹಣೆಯಮೇಲೆ ಮೂಡಿದ್ದುವು. ನಿಶ್ಚಲ ನೇತ್ರಗಳು ನಿಟ್ಟಿಸುತ್ತಲೇ ಇವೆ...... ನಿತಾಂತ ಶಾಂತಿಯಿಂದ ಡಾ॥ಜೇಮ್ಸ್ ಬರೆಯುತ್ತಲೇ ಇದ್ದಾನೆ. ದೇಹದ ಹಿಂಭಾಗ ಮಾತ್ರ ಕಣ್ಣಿಗೆಬೀಳುತಿತ್ತು. ಆ ಮುಹೂರ್ತದಲ್ಲಿ ಮಹತ್ಪ್ರಳಯವಾದರೂ ಗಮನಕ್ಕೆ ಬಾರದಷ್ಟು ಚಿತ್ತೈಕಾಗ್ರತೆಯಲ್ಲಿ ಅವನ ಕೆಲಸ ಸಾಗುತಿತ್ತು.

ಡಾ॥ಜಾರ್ಜ್ ಸ್ಥಿರ ಗಾಂಭೀರ್ಯದಿಂದ ನಿಂತು ಸ್ವಿಚ್ಚನ್ನು ಒತ್ತಿದ. ವಿದ್ಯುಚ್ಛಕ್ತಿ ಆಕ್ಷಣ ಹಿರಿಯ ವಿಜ್ಞಾನಿಯ ಕುರ್ಚಿಗೆ ಹರಿಯಿತು. ದಟ್ಟಪುಷ್ಟ ಶರೀರ ಒಂದೆರಡು ಕ್ಷಣಗಳಲ್ಲಿ ಮಿಲಿಮಿಲಿಗೊಂಡು ಉರುಳಿದಾಗ ಯಾವದೋ ಮಹತ್ಕಾರ್ಯವನ್ನೆಸಗುತ್ತಿರುವಂತೆ ಭಾಸವಾಯಿತೋ ಏನೋ..... ಗಂಭೀರವಾಗಿ ಕೃತಜ್ಞತೆಯ ಸಮಾಧಾನದಿಂದ ಸ್ವಿಚ್ಛ್ ತೆಗೆದು ವಿದ್ಯುತ್ ಪರಿಕರಣವನ್ನು ಯಥಾರೀತಿ ಅಳವಡಿಸಿ ''ಮಾರಕಾಸುರ ಅಂತರ್ಧಾನಾದ!'' ಎಂದು ಉದ್ಗಾರ ತೆಗೆದ. ಹೃದಯ ಅಗಾಧವಾದ ಸುಖದುಃಖಗಳ ನೆಲೆಯಾಗಿತ್ತು.

ಇಂದೂ, ಈಗಲೂ ಡಾ॥ಜೇಮ್ಸ್‌ರಾಸನ ಅಕಾಲ ಮರಣ ನಿಗೂಢವಾಗಿಯೇ ಉಳಿದಿದೆ.

★ ಇದನ್ನು ೫-೫-೧೯೭೦ರಲ್ಲಿ ಬರೆಯಲಾಯಿತು.

ಸತ್ಯಭಾಮಾ

ಎಲ್ಲೋ ದೂರದಲ್ಲಿ ಬಾನುಲಿಯ ಮನೋಹಾರೀ ಸಂಗೀತ ಕೇಳಿಬರುತಿತ್ತು.

ನಿಶ್ಯಬ್ದ ವಾತಾವರಣದಲ್ಲಿ ಕಿವಿಗೊಟ್ಟು ಆಲೈಸುತ್ತ ನಾನು ಕುಳಿತೆ.

ದೂರ ದಿಗಂತದ ನೀಲ ಪಟಲದ ಮೇಲೆ ಹರಿದಾಡುವ ಶುಭ್ರ ಮೋಡಗಳನ್ನು ನಿಟ್ಟಿಸುತ್ತ ನಿಶ್ಚಲ ಭಂಗಿಯಲ್ಲಿ ಮೈಮರೆತ ಸತ್ಯಭಾಮ ಕೆಲವೇ ನಿಮಿಷಗಳಲ್ಲಿ ಭಾವನಾಲೋಕದಲ್ಲಿ ಸಂಪೂರ್ಣ ಮುಳುಗಿ ಹೋದಳು. ಅವಳ ಹೃದಯದಾಳದಿಂದ ಬಿಸಿಯುಸಿರೊಂದು ಸದ್ದಿಲ್ಲದೆ ದೀರ್ಘಗತಿಯಲ್ಲಿ ತಪ್ಪಿಸಿ ಕೊಂಡುದುದನ್ನು ಬಹುಶಃ ಅವಳು ಗಮನಿಸಿರಲಾರಳು. ನಾನು ಸದ್ದಿಲ್ಲದೆ ಗಮನಿಸಿದೆ. ಅವಳ ನೆಟ್ಟ ದೃಷ್ಟಿ ಗಗನಪಟಲದಿಂದ ಚಲಿಸಲಿಲ್ಲ. ಹಣೆಯ ಮೇಲೆ ಹರಿದಾಡುವ ಅಲೆಗೂದಲು ತಂಗಾಳಿಗೆ ಆಗಾಗ ಅಲುಗುತಿತ್ತು. ಒಂದು ಕಾಲದಲ್ಲಿ ಅವುಗಳ ಸೌಂದರ್ಯ ನಿರ್ವಹಣೆಗೆ ಅವಳು ಎಲ್ಲರಂತೆಯೇ ಶ್ರದ್ಧೆ ವಹಿಸುತಿದ್ದಳು..... ಈಗ ಏನೋ ಒಂದು ರೀತಿಯ ಸಪ್ಪೆ. ಒನಪು ವೈಯ್ಯಾರಗಳು ಮಣ್ಣು ಪಾಲಾಗಿವೆ. ಅಲಂಕಾರದಲ್ಲಿ ಇನಿತೂ ಅಭಿರುಚಿ ಇಲ್ಲ. ಅಷ್ಟು ಬೇಗನೆ ಇಷ್ಟೊಂದು ಗಂಭೀರತರ ವೈರಾಗ್ಯ ಬಂದುದಾದರೂ ಹೇಗೆ? ಅದೇ ಅರ್ಥವಾಗದ ವಿಷಯ!

ವನದೇಶದ ಹರಿಣೆ ಅನುಗ್ರಹಿಸಿದ ಚಟುವಟಿಕೆ..... ಜನ್ಮಜನ್ಮಾಂತರಗಳು ನೀಡಿದ ಪರಿಜ್ಞಾನ ಒಂದಕ್ಕೊಂದು ಪೂರಕವಾದ ಅವಳಲ್ಲಿ ಈಚೆಗೆ ಅನನ್ಯ ಅನುಪಮ ಬದಲಾವಣೆಯಾಗುತಿದ್ದುದನ್ನು ನನ್ನ ಸೂಕ್ಷ್ಮಚಿತ್ತ ಗಮನಿಸುತಿತ್ತು; ಆದರೂ ಏನೆಂಬುದೇ ಅರ್ಥವಾಗುತ್ತಿಲ್ಲ. ಅದೊಂದು ಅಪೂರ್ವ ಗಂಭೀರ ಸ್ವರೂಪ.... ಅಳೆಯಲಾಗದ ಶ್ರದ್ಧಾ ಭಕ್ತಿ....

ಸಂಜ್ಞಾಹೀನಳಂತೆ ಬೆಂಚಿನಮೇಲೆ ಕುಳಿತಿದ್ದ ಅವಳನ್ನು ನಾನು ಗಮನಿಸುತ್ತಲೇ ಇದ್ದೆ. ಹೃದ್ದೇಶ ಸ್ವಲ್ಪಮಟ್ಟಿಗೆ ಏರಿಳಿಯುತಿದ್ದುದು ಸ್ಪಷ್ಟವಾಗಿ ಕಾಣಿಸುತಿತ್ತು. ಅದು ವಿನಾ ಆ ಮೂರ್ತಿಮತ್ತಾದ ಶರೀರದಲ್ಲಿ ಮತ್ತಾವ ಚಲನೆಯೂ ಬಹಳ ಹೊತ್ತು ಮೂಡಲಿಲ್ಲ. ಯಾವುದೋ ಭಾವನಾಂತರಂಗದಲ್ಲಿ ತಾನೇತಾನಾಗಿ ತೇಲುತ್ತಿರುವಂತೆ

ಉದ್ಭಾಸಿತವಾಯಿತು. ನನಗೆ ಆ ಘನ ಗಂಭೀರ ಮುದ್ರೆಯನ್ನು ಭಂಗಗೊಳಿಸಲು ಮನಸ್ಸಾಗಲಿಲ್ಲ. ಅಂತಲೇ ಸ್ವಲ್ಪ ಹೊತ್ತು ಸದ್ದಿಲ್ಲದೆ ಉರುಳಿ ಹೋಯಿತು. ಅವಳು ಬಾನುಲಿಯ ಸಂಗೀತಕ್ಕೆ ಮಾರು ಹೋದಂತೆಯೂ ಕಂಡು ಬರಲಿಲ್ಲ; ಅಥವಾ ಪ್ರಕೃತಿಯ ವೈಭವದಲ್ಲಿಯೂ ಮುಳುಗಿರಲಿಲ್ಲ. ಅಭಿರಾಮ ಭಂಗಿ, ನಿಶ್ಚಲ ನೇತ್ರಗಳ ಹೊಳಪು ಸಮಾನ್ಯವೂ ಅಪೂರ್ವವೂ ಆಗಿತ್ತು. ನನ್ನ ಸಹನೆ ಒಳಗಿಂದೊಳಗೇ ಮೀರುತಿತ್ತು. ಆದರೂ ನನ್ನನ್ನು ನಾನೇ ಹತೋಟಿಯಲ್ಲಿಟ್ಟುಕೊಂಡೆ.

ಸ್ವಲ್ಪ ಹೊತ್ತು ನಿರಾತಂಕವಾಗಿ ಉರುಳಿತು.

ಸಂಧ್ಯಾಶಾಂತಿಯಲ್ಲಿ ಕರ್ಣ ಮನೋಹರವಾಗಿ ಕೋಗಿಲೆಯ ಇನಿಗಾನ ಹೊಮ್ಮಿತು,

ಕೂಊಊವು! ಕೂಊಊವು ಕೂಊಊವು!

ಆಃ! ಎಂತಹ ಮಾಧುರ್ಯ!

ಸತ್ಯಾಭಾಮಾ ಆಗಲೂ ಭಾವಸಮಾಧಿಯಿಂದ ವಿಮುಖಳಾಗಲಿಲ್ಲ; ಹೃದಯ ತಂತುಗಳಲ್ಲಿ ಹರಿದಾಡುವ ನೆತ್ತರಿನ ಕಣಕಣವೂ ಯಾವುದೋ ಮಂತ್ರಯುಕ್ತವಾದಂತೆ ಏರು ಪೇರಿಲ್ಲದೆ ಹರಿದಾಡುವುದನ್ನು ಸೂಕ್ಷ್ಮವಾಗಿ ಗಮನಿಸಿ ನನ್ನ ಅಂತಃಪ್ರಜ್ಞೆ ಏಕಾಗ್ರತೆಗೆ ನಿಲುಕಲಾರದೆ ಚಡಪಡಿಸಹತ್ತಿತು. ಎದೆಯ ನೆಲೆಯಲ್ಲಿ ಸರಾಗವಾಗಿ ಹರಿದಾಡುತಿದ್ದ ಉಸಿರು ಅಲ್ಲಲ್ಲಿ ಸಿಕ್ಕಿ ಕೊಳ್ಳುತ್ತಿರುವಂತೆ ಭಾಸವಾಯಿತು. ವಕ್ಷಸ್ಥಲದಮೇಲೆ ಎರಡೂ ಕೈಗಳನ್ನು ಕಟ್ಟಿಕೊಂಡು ನೇರವಾಗಿ ಕುಳಿತೆ.

ಕೋಗಿಲೆಯ ಇನಿಗಾನ ಮತ್ತೆ ಮತ್ತೆ ಕೇಳಿ ಬರುತಿತ್ತು-ಸುಪ್ತ ಚೇತನ ಸಮಸ್ತವನ್ನೂ ಬಡಿದೆಬ್ಬಿಸುವಂತೆ.

ತಣ್ಣೆಲರು ತಣ್ಣಗೆ ತೀಡುತಿತ್ತು. ಪ್ರತ್ಯಕ್ಷ ಆವಿರ್ಭೂತ ಲಕ್ಷ್ಮಿಯಂತೆ ದಿಗ್ದೇಶ ಸುವರ್ಣಕಾಂತಿಯಿಂದ ಹೊಳೆಯುತಿತ್ತು. ಮಂತ್ರಮುಗ್ಧ ನಿರ್ನಿಮೇಷ ನಯನಗಳಿಂದ ನೋಡುತಿದ್ದ ಸತ್ಯಭಾಮಾ ಲವಲೇಶವೂ ಚಲಿಸಲಿಲ್ಲ. ನನ್ನ ಎದೆಯಾಳದಿಂದ ನಿಟ್ಟುಸಿರೊಂದು ತಪ್ಪಿಸಿಕೊಂಡಿತು.

ಅವಳ ವಿಚಾರವಾಗಿ ಹೇಳುವುದಾದರೆ ಪ್ರಸಂಗ ಬಹಳ ಉದ್ದವೇನೂ ಆಗಲಾರದು. ನಾನೂ ಅವಳೂ ಕಾಲೇಜಿನ ಸೋಪಾನವನ್ನು ಏರಿದಾಗಿನಿಂದ ಎಂ.ಎ., ಮುಗಿಸುವವರೆಗೂ ಅವಿಚ್ಛಿನ್ನ ಸ್ನೇಹದ ಸಾರವನ್ನು ಮನಃಪೂರ್ತಿ ಸವಿದಿದ್ದೇವೆ. ನಂತರ ನಮ್ಮ ಹಾದಿ ಕವಲೊಡೆಯಿತು. ಅವಳು ಲೆಕ್ಚರರ್ ಆಗಿ ಅಲ್ಲಿಯೇ ಉಳಿದಳು. ನಾನು ಸಂಸಾರಿಯಾದೆ. ಈಚೀಚಿಗೆ ನಮ್ಮನಮ್ಮ ಭೇಟಿ ಅಪರೂಪವಾದರೂ

ಮಹತ್ಪೂರ್ಣವಾಗಿರುತ್ತದೆ. ಅನೇಕ ವಿಚಾರಗಳ ಸಾರಾಸಾರವನ್ನು ಹೃತ್ಪೂರ್ವಕವಾಗಿ ಚರ್ಚಿಸುತ್ತೇವೆ. ತರ್ಕವಿತರ್ಕಗಳೂ ಚರ್ವಿತಚರ್ವಣಗೊಳ್ಳುತ್ತವೆ. ಮೊದಮೊದಲೆಲ್ಲ ಅವಳ ವಾಕ್ಸರಣಿ ಮನೋಹಾರಿಯಾಗಿ ವಿಜೃಂಭಿಸುತಿತ್ತು. ಈಚೀಚಿನ ಅವಳ ರೀತಿಯೇ ಬೇರೆ. ಅಲೌಕಿಕ ವಿಚಾರಗಳಲ್ಲಿ ಶ್ರದ್ಧಾಭಕ್ತಿ ಪ್ರವ್ಯಾಪ್ತವಾಗುತಿದ್ದರೂ ಅರ್ಥವಾಗದಷ್ಟು ಗಹನ. ಅಕ್ಷರ ಅಕ್ಷರದಲ್ಲೂ ಅವಳು ವ್ಯಕ್ತ ಪಡಿಸುತಿದ್ದುದು ನಿಸ್ಸಾರವನ್ನೇ, ಅದೇ ನನಗೆ ಎಲ್ಲಿಲ್ಲದ ಆಶ್ಚರ್ಯ. ಆ ಉತ್ತೇಜಿತ ಕಂಠದ ಸಾರಮರ್ಮವನ್ನು ನಾನು ಅರಿತುಕೊಳ್ಳಲು ಪ್ರಯತ್ನಿಸುತ್ತಿರುವೆನಾದರೂ ನನ್ನಿಂದ ಇದುವರೆಗೆ ಸಾಧ್ಯವಾಗಿಲ್ಲ. ಅವಳು ಏನೊಂದನ್ನೂ ಸ್ವಂತವಾಗಿ ವ್ಯಕ್ತಪಡಿಸಲಿಲ್ಲ; ನಿಸ್ಸಾರ ಸರಣಿ ಹರಿಯುತಿದ್ದುದು ಲೌಕಿಕವಾಗಿ. ಎಷ್ಟೇ ಆತ್ಮೀಯತೆ ಇದ್ದರೂ ಅಂತಹ ಅಸಾರವಾದ ಅಂತರ್ಗತ ವಿಚಾರವೇನೆಂಬುದನ್ನು ನಾನು ಇದುವರೆವಿಗೂ ಅವಳನ್ನು ಕೇಳಲಿಲ್ಲ. ಕೇಳಲು ಪ್ರಯತ್ನಿಸಿದಾಗ ಏನೋ ಒಂದು ಬಗೆಯ ಯೋಚಿಸಿದರೂ ಅರ್ಥವಾಗದ ಭಾವಶಂಕೆ ಗಂಟಲನ್ನು ಅದುಮಿ ಹಿಡಿಯುತಿತ್ತು, ನಾನು ಸೋತು ಸುಮ್ಮನಾಗುತಿದ್ದೆ. ನನ್ನ ವಿಚಾರವನ್ನು ನಾನು ಹೇಳಿಕೊಳ್ಳುವುದಾದರೆ ನನ್ನ ಬಾಳಿನ ರುದ್ರಕ್ಲೇಶ ಕಾವ್ಯಕಲ್ಪನೆಗೆ ಅತ್ಯುತ್ತಮ ಸಾಮಗ್ರಿಯಾಗಬಲ್ಲುದು. ಖಂಡಿತ ಇದು ಅತಿಶಯೋಕ್ತಿಯೇನೂ ಅಲ್ಲ. ಮೂವರು ಮಕ್ಕಳ ಸಂರಕ್ಷಣೆ; ಮೇಲಾಗಿ ತುಂಬಿದ ಸಂಸಾರ; ಪರಿಪಕ್ವ ಜೀವನ; ಅಪರಿಮಿತ ಕ್ಲೇಶ. ಒಂದೊಂದಕ್ಕೂ ಎಣೆಯಿಲ್ಲದ ಬಾಂಧವ್ಯ, ಒಂದನ್ನುಳಿದು ಇನ್ನೊಂದಿಲ್ಲ. ಕಲಿತ ವಿದ್ಯೆಯನ್ನು ಬದಿಗೊತ್ತಿ ಸರ್ವೇ ಸಾಧಾರಣ ಜೀವನಕ್ಕೆ ನಾನು ತಲೆ ಬಾಗಿರುವೆ. ಆರ್ಥಿಕ ಮುಗ್ಗಟ್ಟು-ಕುಸಂಸ್ಕಾರದ ಆಶ್ಲೇಶ ಹೆಜ್ಜೆಹೆಜ್ಜೆಗೂ ತೊಡಕಾಗುತ್ತವೆ. ದಿನನಿತ್ಯ ಅನುಭವಿಸಿ ಅಭ್ಯಾಸವಾಗಿರುವುದರಿಂದ.... ಹೇಗಾದರೂ ನಡೆಯಲಿ ದೇವರ ದಯೆ ಇದ್ದಲ್ಲಿ ಎಂದಾದರೂ ಒಳ್ಳೆಯದಾಗಬಹುದು ಎಂಬ ದೂರದಾಶಾಕಿರಣವನ್ನು ಆತ್ಮಶಃ ತುಂಬಿಕೊಂಡು ಕಾಲಯಾಪನೆ ಮಾಡುತ್ತಿರುವೆ. ಅಂತಲೇ ನನಗೆ ಇದ್ದುದರಲ್ಲಿ ಸಂತೃಪ್ತಿ.

ಸತ್ಯಭಾಮಾ ಆತ್ಮಚಿಂತನೆಯಿಂದ ಬಹಿರ್ಮುಖಿಯಾದಾಗ ಬಹುಶಃ ಅರ್ಧ ತಾಸು ಉರುಳಿತ್ತೇನೋ... ಹೊರಗಡೆ ಬಂದು ಕುಳಿತೊಡನೆಯೇ ಅಂತರ್ಮುಖಿಯಾದುದು ಪ್ರಾಯಶಃ ಅವಳಿಗೆ ಗೊತ್ತಿರಲಾರದು. ಏನೋ ಒಂದುರೀತಿಯಲ್ಲಿ ಅತ್ಯಂತ ಸಹಜಭಾವನೆಯಿಂದ ನುಡಿದಳು.

“ನಿನಗೆ ಬೇಸರವಾಯಿತೇನೋ......... ಬಹಳ ಹೊತ್ತು ತೆಗೆದುಕೊಂಡೆ ಎನಿಸುತ್ತೆ.”

“ಇಲ್ಲ.....ಇಲ್ಲ.”

“ನನಗೆ ಒಂದೊಂದು ಬಾರಿ ಹಾಗಾಗುತ್ತೆ. ತಕ್ಷಣ ವಿಮುಖವಾಗುವುದು ಕಷ್ಟ.”

“ಓಹೋ.....”

“ನಾನು ಇದುವರೆಗೆ ಜೀವನದಲ್ಲಿ ‘ಸಂತೃಪ್ತಿ’ಗಾಗಿ ಬಹಳ ಅರಸಿರುವೆ, ಆದರೆ ದೊರಕುತ್ತಲೇ ಇಲ್ಲ.”

“ದೊರಕದಿರುವುದಕ್ಕೆ ಒಂದು ಕಾರಣ ಬೇಕಲ್ಲ? ಬಹುಶಃ ಅದನ್ನು ನೀನಾಗಿ ನಿರ್ಲಕ್ಷಿಸಿರಬಹುದು.... ಅಥವಾ ನಿನ್ನ ಗಮನಕ್ಕೆ ಅದು ಬಂದಿರಲಾರದು. ಸಂತೃಪ್ತಿಯನ್ನು ಅರಸುವಷ್ಟು ಸಮಯವಾದರೂ ನಿನಗೆಲ್ಲಿದೆ” ಆರ್ದ್ರಸ್ಮಿತದೊಡನೆ ನಾನು ಸ್ನೇಹದಿಂದ ಕೇಳಿದೆ.

“ಶುಭೆ! ಅದೇ ನನಗೆ ಅರ್ಥವಾಗುತ್ತಿಲ್ಲ.” ಮುಗುಳು ನಕ್ಕಳು ಆಕೆ. ಸುಂದರವಾದ ಹರಿಣನಯನಗಳು ಅತ್ಯಂತ ಉಜ್ವಲತೆಯಿಂದ ಬೆಳಗಿದುವು.

ಅವಳು ಯಾವುದೋ ಮಾನಸಿಕ ದುರ್ಬಲತೆಯಿಂದ ನರಳುತಿದ್ದಾಳೆ ಎಂಬ ನಿರ್ಧಾರಕ್ಕೆ ಈ ಹಿಂದೆಯೇ ಬಂದಿದ್ದ ನಾನು ಹೆಚ್ಚು ಖೇದಗೊಳ್ಳದಿದ್ದರೂ ವಿಶಾದ ಪಟ್ಟೆ.

“ಸತ್ಯಾ.....! ನೀನು ಇದುವರೆವಿಗೂ ಬಹಳ ಸುಖವಾಗಿದ್ದಿ. ನನ್ನಂತೆ ಸಂಸಾರ ಬಂಧವೂ ಇಲ್ಲ. ಕಾಲೇಜು ಅಧ್ಯಾಪಕಿ, ನೂರಾರು ಹೆಣ್ಣುಮಕ್ಕಳೊಡನೆ ಕಲೆತು ಹೊತ್ತುಗಳೆಯುತ್ತಿ. ತನುಮನಗಳು ಕಲಕಲಮಯವಾಗಿರುತ್ತವೆ. ವಿದ್ಯಾವಂತೆ; ಸಂಗೀತ ವಿದುಷಿ; ಅವಿವಾಹಿತೆ. ಇಂತಹ ಸುಖಮಯ ಜೀವನ ಎಷ್ಟು ಮಂದಿ ಅಂಗನೆಯರಿಗೆ ದೊರಕೀತು ಹೇಳು? ಇನ್ನು ಸಧ್ಯದಲ್ಲಿ ನಿನಗೆ ಬಡ್ತಿಯೂ ದೊರಕುತ್ತದೆ. ಒಳ್ಳೆಯ ಅನುಭವಿಯನ್ನು ಮದುವೆಯಾಗಿ ಆರಾಮವಾಗಿರು.”

“ಸರಿಯಮ್ಮಾ.....!”

ಏನೋ ಒಂದುರೀತಿಯಲ್ಲಿ ನೀರಸ ಉದ್ಗಾರ ತೆಗೆದ ಸತ್ಯಭಾಮಾ ನನ್ನೆಡೆಗೆ ನೇರ ಕಟಾಕ್ಷವನ್ನು ಬೀರಿದಳು. ಎದೆಯಾಳದಲ್ಲಿ ತರಂಗಾಯಿತವಾಗುವ ಯೋಚನಾಲಹರಿಗಳು ಮುಖಮುದ್ರೆಯಲ್ಲಿ ಬಿಂಬಿತವಾದುವು. ನಯನಗಳ ಅಂಚಿನಲ್ಲಿ ಸಣ್ಣಗೆ ಬೆಳ್ಳಿಯಗೆರೆಯಂತೆ ಹನಿಯಾಡಿತು. ಆ ಸುಂದರ ಮುಖಕ್ಕೆ

ಅದೊಂದು ವಿನೂತನ ಶೋಭೆಯೋ ಎಂಬಂತೆ ಶೋಭಿತವಾಯಿತು. ಆದರೂ ಆಳವರಿಯದ ಆ ನಯನಾಂಬುವಿನಿಂದ ನನ್ನ ಹೃದಯ ಮಂಜಿನಂತೆ ಕರಗತೊಡಗಿತು. ಯೋಚನೆಯ ಭಾರದಿಂದ ಬಿಸಿಯುಸಿರೊಂದು ಹೊಮ್ಮಿತು. ನಾನು ಸ್ವಲ್ಪ ಹೊತ್ತು ಮಯಣದ ಬೊಂಬೆಯಂತೆ ಕುಳಿತುಕೊಂಡೆ.

ಅವಳ ಹೃದಯ ಯಾವುದೋ ಮೂಕವೇದನೆಯಿಂದ ನರಳುತ್ತಿದೆ ಎಂಬುದು ಸುಸ್ಪಷ್ಟ. ಆದರೂ ನನ್ನ ತುಟಿಗಳು ಬಿರಿಯಲಿಲ್ಲ. ಮನಸ್ಸು ಚಿಂತಾಕಾತರವಾಗಿತ್ತು.

ಸಂಧ್ಯಾ ಸೂರ್ಯ ಪಡುವಣ ಮಟ್ಟೆಗೈತರುತಿದ್ದ. ದಿಙ್ನಾರಿ ಕನಕಾಂಬರ ಧಾರಿಣಿಯಾಗಿದ್ದಾಳೆ. ಅರುಣಕಿರಣಗಳ ಸುಮಂಗಳಧಾರೆಯಲ್ಲಿ ಭುವಿಯ ಪಾಪ-ಪುಣ್ಯ-ಶಾಂತಿ-ಕೀರುತಿ-ಭಯ-ಭೀತಿಗಳು ಕ್ಷಣೇಕ್ಷಣೇ ಕಳೆಗುಂದುತ್ತಿರುವಂತೆ ಭಾಸವಾಯಿತು. ಮಂದಮಾರುತ ಮಂದಗತಿಯಲ್ಲಿ ತೀಡುತ್ತಲಿದ್ದ. ಗಿಡ ಮರಗಳಿಂದ ಎಲೆಗಳ ಮರ್ಮರ ಲೀಲೆ ಆಗಾಗ ಕೇಳಿಸುತಿತ್ತು. ಕೋಗಿಲೆಯ ಮಧುರ ಧ್ವನಿ ಮೇಲಿಂದ ಮೇಲೆ ಕಿವಿಗೆ ಬೀಳುತಿತ್ತು. ಅವಳು ಪ್ರಕೃತಿಯ ಸೌಂದರ್ಯದಲ್ಲಿ ಮನನೆಟ್ಟಂತೆ ತೋರಲಿಲ್ಲ, ಅದರ ಅಂತರಾಳದಲ್ಲಿ ಸಂಪೂರ್ಣ ಮುಳುಗಿದ್ದಂತೆ ಭಾಸವಾಯಿತು...... ಆದರೆ ಅದನ್ನು ದೃಢವಾಗಿ ನಾನು ಹೇಳಲಾರೆ.

''ಪದ್ಮಾ......!''

ಮುಂದೆ ಮಾತು ಹೊರಡಲಿಲ್ಲ. ಅವಳು ಏನೋ ಹೇಳಲು ಬಯಸಿದ್ದಳೆಂದು ತೋರುತ್ತದೆ. ಒಂದೆರಡು ಘಳಿಗೆ ಮತ್ತೆ ಹಾಗೇ ವ್ಯಥಾವ್ಯಾಕುಲತೆಯಿಂದ ಹೃದಯ ಭಾರವಾಯಿತೇನೋ ಸ್ವಲ್ಪಹೊತ್ತು ಸುಮ್ಮನಿದ್ದು ಅನಂತರ ಮುಂದುವರಿದಳು,

''ನನ್ನ ಅಂತಃಸ್ಥಲ ಉರಿಯುತ್ತಿದೆ...... ನಾನು ಧೂಮಾಯಿತಳಾಗುತ್ತಿರುವುದು ಸ್ಪಷ್ಟವಾಗಿ ತಿಳಿಯುತ್ತಿದೆ. ನಾನು ಎಂದಾದರೂ ಹೀಗೆಯೇ ಉರಿದು ಹೋಗಬಯಸುತ್ತೇನೆ....!''

ದನಿ ಭಾರವಾಗಿದ್ದರೂ ತುಟಿಗಳಲ್ಲಿ ಜಾಹೀರಾತಿಗೆ ಹೊಮ್ಮುವಂತಹ ಕೃತಕ ನಗೆಯೊಂದು ಕ್ಷಣಕಾಲ ಮಿನುಗಿ ಮಾಯವಾಯಿತು. ನಿಶ್ಚಲನಯನಗಳಲ್ಲಿ ಉಜ್ವಲಕಾಂತಿಯು ಹೊಮ್ಮುತಿತ್ತು. ಅಚಂಚಲ ದೇಹ ಮೂರ್ತಿಮುತ್ತಾಗಿತ್ತು. ಮುಖಭಾವ ಅತ್ಯಂತ ಗಂಭೀರವಾಯಿತು.

ನನ್ನ ಹೃದಯಕ್ಕೆ ತಟ್ಟನೆ ಮುಳ್ಳು ಮುರಿದಂತಾಯಿತು. ವಿದ್ಯಾರ್ಥಿ ದಿಶೆಯಲ್ಲಿ ಎಂದೂ ಹೀಗಿದ್ದಿಲ್ಲ. ಯೋಚಿಸಿನೋಡಿದರೆ ಆ ದಿನಗಳಲ್ಲಿ ಇದ್ದ ಜೀವನ ಸ್ಥಿತಿಗತಿಗಿಂತ ಈಗ ಉತ್ತಮವಾಗಿದ್ದಾಳೆ. ಮೇಲಾಗಿ ಸ್ವಾತಂತ್ರ್ಯ ಜೀವಿ. ಅಂದಮೇಲೆ ಏಕೆ ಹೀಗೆ?

ವಿಷಯ ಗಂಟಲಗಾಳವಾಯಿತು. ದೇಹದಾದ್ಯಂತ ಮೈನವಿರೆದ್ದಿತು. ನೋಟ ಅವಳನ್ನೆ ನಿಟ್ಟಿಸಿತು. ಪಾಂಡುರ ವರ್ಣದ ದುಂಡು ಮುಖ ಸುಂದರವಾದ ಮೈಕಟ್ಟು, ಎತ್ತರವಾದ ನಿಲುವು. ಯಾವುದೋ ಒಂದು ವಿಶಿಷ್ಟ ಸಂದರ್ಭಕ್ಕಾಗಿ ಹೇಳಿ ಮಾಡಿಸಿದಂತಿದೆ. ಮೇಲಾಗಿ ಅಪೂರ್ವ ಧೃಡಭಾವ ಚಿತ್ತಸ್ವಾಸ್ಥ್ಯ ಆರೋಗ್ಯ ಸಾಮಾನ್ಯರಿಗೆ ಅಲಭ್ಯ. ಈ ಎಲ್ಲವುಗಳಮೇಲೆ ಸ್ವಚ್ಛಂದವಾಗಿ ಹರಿದಾಡಹತ್ತಿತು - ನನ್ನ ಚಿಂತಿತ ಚಿತ್ತ.

ನಾನು ಆತುರ-ಕುತೂಹಲ-ಆಶ್ಚರ್ಯ-ಸಮಾಧಾನಗಳ ಒಕ್ಕೂಟವಾಗಿ ಕೂಗಿ ಹೇಳಿದೆ ''ಇದೆಂತಹ ಹುಡುಗಾಟ? ನಿನಗಿನ್ನೂ ಯೋಚನಾ ಶಕ್ತಿ ಬೆಳೆಯಲಿಲ್ಲವೆಂದೇ ಹೇಳಬಹುದು! ನೀನು ಏನಾದರೂ ಅಂದುಕೋ. ನಾನೀಗ ಎರಡು ಮಾತು ಹೇಳದೆ ವಿಧಿಯಿಲ್ಲ!''

ಆಕೆಯ ಅಪಾಂಗ ಒಂದು ಕ್ಷಣ ಇತ್ತ ಹೊರಳಿ ಮತ್ತೆ ಗಗನದಂಚಿನಲ್ಲಿ ನೆಟ್ಟಿತು. ಮುಖದಲ್ಲಿ ಯಾವ ಬದಲಾವಣೆಯೂ ತೋರಲಿಲ್ಲ. ನನ್ನ ಮಾತಿನ ನಿರೀಕ್ಷಣೆಯಲ್ಲಿಯೇ ಇರುವಂತೆ ಶ್ರವಣೇಂದ್ರಿಯವನ್ನು ನಿಮಿರಿಸಿದಳು. ಆದರೆ ಚಿತ್ತ ಪ್ರವೃತ್ತಿಯೇ ಬೇರೆ ಎನ್ನಿಸಿತು ನನಗೆ.

ನಾನೆಂದೆ,

''ಈಚೆಗೆ ಓದಿದವರಿಗೆಲ್ಲಾ ಇದೊಂದು ಬಗೆಯ ಜಾಡ್ಯ ಅಂಟಿದೆ. ಭಾವನಾ ಜಗತ್ತಿನಲ್ಲಿ ತೇಲಿ ಅಂಬರದೆತ್ತರಕ್ಕೆ ಒಮ್ಮೆಲೇ ಏರಿದರೆಂದರೆ ಆಗುವುದೇ ಹೀಗೆ ಸ್ವಲ್ಪ ಸ್ವಲ್ಪವಾಗಿ ಏರುವವರ ರೀತಿಯೇ ಬೇರೆ ಸತ್ಯಾ.....!''

''ಆದರೆ.....? ನೀನು ಸ್ವಲ್ಪ ಸ್ವಲ್ಪವಾಗಿ ಏರಿದ್ದಿ ಎಂದು ಅರ್ಥ?!''

''ನಾನು ಭಾವ ಜೀವಿಯಲ್ಲ.''

ಅವಳು ನಿರೀಕ್ಷಿತವಾಗಿ ಮುಗುಳ್ನಗೆ ಬೀರಿ ನುಡಿದಳು ''ನೀನು ಸಂಸಾರಕ್ಕೆ ಅಂಟಿಕೊಂಡಿದ್ದಿ. ಮತ್ಸ್ಯಗಾರನಿಗೆ ಮತ್ಸ್ಯಗಂಧ ಹಿತ!''

''ಇರಬಹುದು.... ನಾನು ಅಲ್ಲಗಳೆಯುವುದಿಲ್ಲ. ನಿನ್ನ ರೋಗ ವಿಶೇಷಕ್ಕೆ ಸೂಕ್ತ ಪರಿಹಾರವೆಂದರೆ ಬೇಗ ಮದುವೆಯಾಗುವುದೊಂದೇ! ಮತ್ಸ್ಯಗಾರರಿಗೆ ಮತ್ಸ್ಯಗಂಧವನ್ನು ದಕ್ಕಿಸಿಕೊಳ್ಳುವುದರಲ್ಲೇ ತೃಪ್ತಿ!''

''ನೀನು ತಪ್ಪು ತಿಳಿದುಕೊಂಡಿದ್ದಿ!''

''ಖಂಡಿತಾ ಇಲ್ಲ!''

''ಅಷ್ಟೊಂದು ದೃಢ ವಿಶ್ವಾಸ ಇರುವುದೂ ಸಹ ಸರಿಯಲ್ಲ ಶುಭೆ!''

ತಲೆಯನ್ನು ಮೆಲ್ಲನೆ ಆಡಿಸಿದಳು ಸತ್ಯಭಾಮ.

ನನಗೆ ನಗು ಬಂತು. ಆದರೆ ಹೊರ ಪಡಿಸಲು ಧೈರ್ಯವಾಗಲಿಲ್ಲ. ಸತ್ಯಭಾಮ ಗಂಭೀರ ಭಾವ ತಳೆದಳು.

ದೂರದಲ್ಲಿ-ಕಾಲೇಜ್ ಕಟ್ಟಡದ ವಿಶಾಲವಾದ ಪ್ರದೇಶದ ಆಚೆ ಹರಿದಿದ್ದ ಹಳಿಗಳ ಮೇಲೆ ರೈಲು ಓಡುತ್ತಾ ಶಿಳ್ಳೆ ಹಾಕಿತು. ಧ್ವನಿ ಕಿವಿ ಕೊರೈಸುವಂತೆ ಕರ್ಣಪಟಲಗಳನ್ನು ತಾಗಿತು. ಅದರ ಶಬ್ದಾಯಮಾನ ಆಕೃತಿ ಕ್ರಮೇಣ ಕ್ಷೀಣಿಸುತ್ತ ಹೋಯಿತು. ಸತ್ಯಭಾಮಳ ಚಿತ್ತ ಸುತ್ತಮುತ್ತಣ ಯಾವ ವಸ್ತು ವಿಶೇಷದ ಮೇಲೂ ಹರಿದಿರಲಿಲ್ಲ. ಆಕೆ ಏನೋ ಒಂದು ರೀತಿಯ ಭಾವೋದ್ವೇಗದಿಂದ ನುಡಿದಳು, ''ನನ್ನ ಅಂತರಿಕ ಭಾವಜ್ಞಾನದ ಜಿಜ್ಞಾಸೆ ಏನೇ ಇರಲಿ, ವೈರಾಗ್ಯ-ನಿರಾಸೆಗಳಿಗೆ ಕಾರಣವೇನು? ಎಂದು ಯಾರಾದರೂ ಕೇಳಿದರೆ ಉತ್ತರ ಹೇಳುವುದು ನನಗೆ ಕಷ್ಟ. ಏಕೆಂದರೆ ಇದುವರೆಗೂ ಏನೆಂಬುದನ್ನು ನಾನು ಕಂಡುಕೊಳ್ಳಲು ಸಮರ್ಥಳಾಗಿಲ್ಲ.''

''ಇಷ್ಟಕ್ಕೂ ನಿನ್ನನ್ನು ದಹಿಸುವಂತಹ ದುಃಖವೇನಿದೆ ಸತ್ಯಭಾಮಾ? ಈ ದೇಶದ ಯಾವುದೇ ಸ್ತ್ರೀಗೆ ನಿನ್ನನ್ನು ಹೋಲಿಸಿ ನೋಡಿದರೆ ನೀನು ಪೂರ್ಣ ಸುಖಿ ಎಂದೇ ಹೇಳಬಹುದು.''

ನಾನು ನುಡಿಯನ್ನು ಹೊರಹಾಕಿ ಅವಳ ಮುಖಪದ್ಮವನ್ನು ಕೂಲಂಕುಶವಾಗಿ-ಸೂಕ್ಷ್ಮವಾಗಿ ಗಮನಿಸಿದೆ.

ಅವಳು ಮಾತಾಡಲಿಲ್ಲ. ಚಿತ್ತ ಅಂತರ್ಮುಖಿಯಾಗಿತ್ತು. ಭಾವ ಪೂರ್ಣಲೋಚನಗಳಲ್ಲಿ ತೇಜಸ್ಸು ತಾಂಡವವಾಡುತಿತ್ತು. ಅವಳದು ಸುಮಾರು ಇಪ್ಪತ್ತೆಂಟರ ಹರೆಯ. ಕಾರಿರುಳಿನ ಕುರುಳುಗಳಲ್ಲಿ ಆಗಲೇ ನೆರೆಗೂದಲು ಕಾಣಿಸಿಕೊಂಡಿವೆ. ಕಾಮನ ಬಿಲ್ಲಿನಂತಹ ಹುಬ್ಬುಗಳಿಗೆ ಅವಳು ಆಗಾಗ ಕಪ್ಪು ಬಳಿಯುತ್ತಿದ್ದುದುಂಟು. ಈಗ ಅದೂ ಸಹ ಮಾಯವಾಗಿದೆ. ಸಿಂಧೂರಯುಕ್ತ ಬೈತಲೆ ಸುಮನೋಹರವಾಗಿತ್ತು. ಲಲಾಟ ಮಧ್ಯೆ ತಿಲಕ, ಮಾಟವಾದ ಮೂಗು ಒಂದೊಂದಕ್ಕೂ ಅಂತಹ ಹೊಂದಾಣಿಕೆ ಇದೆ. ಭಗವಂತ ಎರಡೂ ಕೈಗಳಿಂದ ಆಶೀರ್ವದಿಸಿದ್ದಾನೆ. ಅಂದಮೇಲೆ ಇನ್ಯಾವ ಕೊರತೆ ಅವಳ ಮನವನ್ನು ಹೊಕ್ಕಿದ್ದೀತು? ಅದೇ ಅಳೆಯಲಾಗದ ಆಶ್ಚರ್ಯ.

ನಾವು ಕುಳಿತದ್ದು ಒಂದು ಕಲ್ಲುಬೆಂಚಿನ ಮೇಲೆ. ಅಂಗಳವು ಅಷ್ಟೇನೂ ವಿಶಾಲವಾಗಿಲ್ಲ; ಮನೆಯೂ ಕಿಷ್ಕಿಂದಾ ಪಟ್ಟಣವೇ. ಒಳಗಿನ ಮಾತುಕತೆಗಳು ಕಿವಿಯ ಮೇಲೆ ಬೇಡವೆಂದರೂ ಲತ್ತೆಹೊಡೆದಂತೆ ಬೀಳುತ್ತವೆ. ಬಹಳ ಮಟ್ಟಿಗೆ ಏಕಾಂತತೆಗಾಗಿಯೇ ನಾವು ಅಂಗಳದ ಬೆಂಚನ್ನು ಬಳಸುತ್ತೇವೆ. ಅಂತಲೇ ಅವಳನ್ನು

ಇಲ್ಲಿಯೇ ಬರಮಾಡಿಕೊಂಡೆ. ಅವಳು ಬರುವುದೂ ಅಪರೂಪ. ಬಂದರೆ ಅರ್ಧಗಂಟೆಗಿಂತ ಹೆಚ್ಚು ಉಳಿಯುವವಳೂ ಅಲ್ಲ. ಏಳೆಂಟು ವರ್ಷಗಳ ವಿದ್ಯಾರ್ಥಿ ಜೀವನದಲ್ಲಿ ಗಳಿಸಿದ ಅಪಾರವಾದ 'ಆತ್ಮೀಯತೆ' ಕಂಡರಿಯದ ಕತ್ತರಿಯ ಬಾಯಿಯಲ್ಲಿ ಸಿಕ್ಕಿದಂತೆ ಒಳಗೊಳಗೇ ನರಳಿತು.

ನಾನು ಪ್ರಯತ್ನಪೂರ್ವಕವಾಗಿ ಮೌನ ಮುರಿದೆ,

''ನಿನ್ನನ್ನು ಸುಡುವಂತಹ ಸಂಕಟವೇನಿದೆ ಸತ್ಯಾ? ಇದ್ದರೂ ಅದನ್ನು ರಹಸ್ಯವಾಗಿ ಕಾಪಾಡುವ ಉದ್ದೇಶವಾದರೂ ಏನು? ನನಗೆ ಅದೇ ಅರ್ಥವಾಗದ ಸಮಸ್ಯೆ.''

''ರಹಸ್ಯವಾಗಿ ಕಾಪಾಡುವ ಪ್ರಸಂಗವೇ ಇಲ್ಲ. ಏನೋ ಒಂದು ಬಗೆಯ ಅಶಾಂತಿ-ನಿರಾಸೆ-ವೈರಾಗ್ಯ ನನಗೇ ಅರ್ಥವಾಗಿಲ್ಲದಿರುವಾಗ ಹೇಳುವುದೇನು?.... ಇದು ನಿನಗೆ ಮಾತ್ರವಲ್ಲ; ನನಗೂ ಸಹ ಸಮಸ್ಯೆಯೇ.''

ಧ್ವನಿ ಅತ್ಯಂತ ದುಗುಡದಿಂದ ಕೂಡಿದಂತೆ ಎದೆಯಾಳದಿಂದ ಹರಿದು ಬಂತು.

''ಬಹುಶಃ....''

ಏನೋ ಹೇಳಲು ಪ್ರಯತ್ನಿಸಿದ್ದೆ. ಆದರೆ ಧ್ವನಿ ಅಲ್ಲಿಗೇ ತುಂಡುಗಡಿಯಿತು. ಮುಂದೆ ಮಾತು ಹೊರಡಲಿಲ್ಲ. ಒಂದು ಕ್ಷಣ ಅವಳನ್ನು ನಿಟ್ಟಿಸಿ ಸುಮ್ಮನಾದೆ. ಹೃದಯ ಕಲ್ಲುಹೊತ್ತಂತೆ ಭಾರವಾಗಿತ್ತು. ನಿಜಕ್ಕೂ ಹೇಳುವುದಾದರೆ ನನ್ನ ಸಂಸಾರ ಖಂಡಿತ ಸುಖಮಯವಾಗಿಲ್ಲ. ಕಡುಗತ್ತಿಯಲುಗಿನ ಮೇಲೆಯೇ ಬಾಳಿನ ತೇರು ಹರಿದಾಡುತ್ತದೆ. ನನ್ನ ವಿದ್ಯೆಯನ್ನು ಸಾರ್ಥಕ ಪಡಿಸಿಕೊಳ್ಳಬೇಕೆಂಬ ಆಸೆ ಮನಃಪ್ರಾಣವ್ಯಾಪಿಯಾಗಿತ್ತು. ಈಗಲೂ ಇದೆ. ಆದರೆ ಬಾಳಿನ ಬಂಧ ಸಡಿಲಗೊಂಡರಷ್ಟೆ? ನಾವೊಂದು ಬಯಸಿದರೆ ವಿಧಿಯೊಂದು ಬಯಸುತ್ತದೆ. ಹೋಗಲಿ, ಮಕ್ಕಳನ್ನು ಹೆತ್ತ ತಪ್ಪಿಗೆ ಅವರನ್ನಾದರೂ ಒಂದು ಸ್ಥಿತಿಗೆ ತರೋಣ ಎಂಬ ಯೋಚನೆಗೆ ಶರಣಾಗಿರುವೆ. ಅದಕ್ಕಿಂತ ಹೆಚ್ಚಿನ ಉದ್ದೇಶವೇ ಈಗ ಕಾಣಿಸುತ್ತಿಲ್ಲ. ಆದರೂ..... ಬದುಕು ಸಾಗುತ್ತಿದೆ. ಆಸೆ-ನಿರಾಸೆಗಳ ಹೊಯ್ದಾಟದಲ್ಲಿ ಹೊತ್ತು ಉರುಳುತ್ತದೆ.

ಅವಳದು ಅನುಪಮ ಆಶಾವಾದಿತ್ವ, ಅವಳು ಏನನ್ನು ಸಾದಿಸುತ್ತೇನೆಂದರೂ ಸಾಧಿಸಬಹುದು. ಅಷ್ಟು ಮಾತ್ರವಲ್ಲ ಸಾಧಿಸಬಲ್ಲಳು ಕೂಡಾ. ಅಂದಮೇಲೆ ಎಲ್ಲಿಯ ರುದ್ರಕ್ಲೇಷ? ಈ ಬೇಗುದಿ-ನಿರಾಸೆ ಅರ್ಥವೇ ಆಗುತ್ತಿಲ್ಲ. ನನ್ನ ಮನೋದಧಿಯ ಚಿಂತಾ ಸುರುಳಿಯನ್ನು ಅವಳು ಗಮನಿಸಿದಳೇನೋ ''ಏಕೆ ಅಷ್ಟಕ್ಕೇ ನಿಲ್ಲಿಸಿ ಬಿಟ್ಟೆಯಲ್ಲಾ?'' ಎಂದಳು.

''ನೀನು ಸಾಹಿತಿ. ಮೇಲಾಗಿ ಆಶಾವಾದಿ. ನಿನ್ನ ಕಥಾ ನಾಯಕರಿಗೆ ನೀನು ಕೊಟ್ಟಿರಬಹುದಾದ ಗುಣವಿಶೇಷ ನಿನ್ನ ಸುತ್ತಮುತ್ತಣ ಜನಗಣದಲ್ಲಿ ಕಾಣದೆ ಇರುವುದರಿಂದ ನೀನು ಉತ್ತಮ ಸಂಗಾತಿಯನ್ನು ಪಡೆಯಲು ಅಶಕ್ತಳಾಗಿದ್ದು, ಅದನ್ನಿಷ್ಟು ಮನಸ್ಸಿಗೆ ಹಚ್ಚಿಕೊಂಡಿರಬಹುದು.''

''ಅಂತಾದ್ದೇನಿಲ್ಲ.'' ತಲೆಯಲ್ಲಾಡಿಸಿದಳು ಅವಳು.

''ನಾವು ಕಲಿತ ವಿದ್ಯೆ, ಪಡೆದ ದೀಕ್ಷೆ ನಮ್ಮನ್ನು ಗಗನವಿಹಾರಿಗಳನ್ನಾಗಿ ಮಾಡುತ್ತವೆ ಸತ್ಯಾ.... ನಾವು ನೋಡುವ ಸಿನಿಮಾದಂತೆ - ಅಥವಾ ಓದುವ ಕಾದಂಬರಿಗಳಂತೆ - ಅಥವಾ ನಿನ್ನ ಸಾಹಿತ್ಯ ವಿಚಾರಧಾರೆಯಂತೆ ಈ ಬದುಕನ್ನು ರೂಪಿಸಿಕೊಳ್ಳುವುದು ಸಾಧ್ಯವಿಲ್ಲಮ್ಮಾ! ಮನದೋಟವೇ ಬೇರೆ; ಜೀವನದೋಟವೇ ಬೇರೆ ಅಂದರೆ ಒಪ್ಪಿಕೊಳ್ಳುವೆ ತಾನೆ....!''

''ನಿಜ; ಆದರೂ ನಿನ್ನ ವಾದಸರಣಿಗೂ ನನ್ನ ಜೀವನಕ್ಕೂ ತಾರತಮ್ಯವಿದೆ. ಇಲ್ಲಿ, ಈ ಜೀವನವನ್ನು ಆತ್ಮಪೂರ್ವಕವಾಗಿ ರೂಪಿಸುವವಳು ನಾನೇ!''

ಧ್ವನಿ ಸರಾಗವಾಗಿ ಹೊರಬಿತ್ತು. ನಾನು ಮನಃಪೂರ್ವಕವಾಗಿ ಸೋಲನ್ನೊಪ್ಪಿಕೊಂಡೆ. ಆದರೂ ಅವಳ ಮನಸ್ಸಿಗಿಷ್ಟು ಹಾಲೋಗರವನ್ನು ತುಂಬದೆ ವಿಧಿ ಇರಲಿಲ್ಲ. ನನ್ನ ವಾಕ್ಸರಣಿಯನ್ನು ಪುನಃ ಹರಿಯಬಿಟ್ಟೆ; ''ವ್ಯಕ್ತಿ ವ್ಯಕ್ತಿಯೂ ತನ್ನ ಮನಸೇಚ್ಛೆ ಆದರ್ಶಗಳನ್ನು ಹೆಣೆದುಕೊಂಡಿರುತ್ತಾನೆ. ಅವನ್ನು ಅಲ್ಲಗಳೆಯುವಂತಿಲ್ಲ. ಆದರೆ ಎಲ್ಲಾ ಸಂದರ್ಭಗಳಲ್ಲೂ ಆದರ್ಶದ ಆಶಾಸೌಧಗಳಲ್ಲಿ ಕನಸು ಕಾಣುತ್ತ ವಿಹರಿಸಿದರೆ ಭಾವನೆ ಬೆಳೆದಷ್ಟೂ ಈ ಪ್ರಪಂಚದಲ್ಲಿ ಕ್ಲೇಷ ಹೆಚ್ಚುತ್ತದೆ. ಮನೆಯಲ್ಲಿ ಕ್ರಿಮಿಕೀಟಗಳು ಸೇರಿ ಕೊಂಡಿವೆ ಎಂದು ಮನೆಗೆ ಬೆಂಕಿ ಹಚ್ಚುವುದಕ್ಕಾಗುತ್ತದೆಯೇ? ನಿನ್ನ ಆದರ್ಶ ಪೂರ್ಣ ಭವ್ಯಲೋಕಕ್ಕೂ ಈ ವಾಸ್ತವಿಕ ಸಾಮಾನ್ಯ ಬಾಳುವೆಗೂ ಸಾಮ್ಯವಿಲ್ಲವೆಂದು ಬದುಕನ್ನು ಬರಡು ಮಾಡಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ ಸತ್ಯಾ....!''

ಸತ್ಯಭಾಮ ನಿಟ್ಟುಸಿರು ಬಿಟ್ಟು ಹೇಳಿದಳು,

''ನಿನ್ನ ವಾಕ್ಸರಣಿ ಅನುಭವಪೂರ್ಣವಾದುದು. ಆದರೆ ಅದಕ್ಕೂ ನನ್ನ ಅಶಾಂತಿಗೂ ಸಂಬಂಧವೇ ಇಲ್ಲ ಪದ್ಮಾ. ನೀನು ಹೇಳಿದಂತೆ ನನ್ನ ಜೀವನ ಯಾವುದೇ ರೀತಿಯಲ್ಲಿ ರೂಪಿಸಿಕೊಳ್ಳಲು ನಾನು ಪೂರ್ಣ ಸ್ವಾತಂತ್ರ್ಯ ಹೊಂದಿರುವೆ. ನನ್ನ ವಿಚಾರಧಾರೆ ಅದಲ್ಲವೇ ಅಲ್ಲ....''

''.........''

ಅನಂತರ,

ಅದೆಷ್ಟು ಹೊತ್ತು ರುದ್ರಮೌನವಾಚರಿಸಿದೆವೋ ಹೇಳಲಾರೆ. ನನ್ನ ಮನಸ್ಸು ಚಿಂತಾಬ್ಧಿಯಲ್ಲಿ ಮುಳುಗಿದ್ದುದರಿಂದ ಬಾಹ್ಯ ಜಗತ್ತಿನ ಅರಿವೇ ಬಹಳ ಹೊತ್ತಿನವರೆಗೆ ಮೂಡಲಿಲ್ಲ. ಅನಂತರ ನಾನೇ ನಾನಾಗಿ ಚೇತರಿಸಿಕೊಂಡು ಮೌನ ಮುರಿದೆ,

''ಸತ್ಯಾ! ಖಂಡಿತವಾಗಿಯೂ ನೀನದರ ಅಂತರಾಳವನ್ನು ಕಂಡುಕೊಳ್ಳಲಿಲ್ಲವೆ? ಅಥವಾ....'' ಮುಂದೆ ಮಾತು ಹೊರಡದೆ ಒಂದು ಘಳಿಗೆ ಸುಮ್ಮನಾದೆ.

''ಏನು ಹೇಳು?'' ಶೀತದೇಶದ ಶೈತ್ಯಕ್ಕಿಂತಲೂ ಶೀತಲವಾಗಿ ಹೊಮ್ಮಿತು ಪ್ರಶ್ನೆ.

''....ಅಥವಾ ನೀನದರ ಅಂತರಾಳಕ್ಕೆ ಇಳಿಯುವ ಪ್ರಯತ್ನವನ್ನೇ ಮಾಡಲಿಲ್ಲವೇ....?''

''ನಿಜಕ್ಕೂ ಹೇಳುವುದಾದರೆ ನನ್ನ ಪ್ರಯತ್ನ ಹಗಲಿರುಳೂ ನಡೆದಿದೆ. ಹೆಜ್ಜೆ ಹೆಜ್ಜೆಯೂ ಶೀತಲ ಶಾಂತಿಯನ್ನು ಅರಸಿವೆ.... ಈಗ ನನ್ನಲ್ಲಿ ಅಂತಹ ಶಕ್ತಿ ಉಳಿದಿದೆಯೋ ಇಲ್ಲವೋ ಅದೂ ಸಹ ಅನುಮಾನ....! ವೃಥಾ ಪರಿತಾಪ... ಅನ್ಯಥಾ ಕಾಲಹರಣ.''

''ಛೆ! ಇದೆಂತಹ ಮನಃಕ್ಲೇಶ? ನನಗಂತೂ ಅರ್ಥವೇ ಆಗುತ್ತಿಲ್ಲ. ನೀನು ಏನೆಲ್ಲ ಮಾತಾಡುತ್ತಿದ್ದಿ? ಹೀಗಾದರೆ ನಿನ್ನ ಭವಿಷ್ಯದ ಕತೆಯೇನು?''

''ಶುಭೆ! ಅದು ಅಲ್ಪ. ಅದಕ್ಕಾಗಿ ಯೋಚಿಸಬೇಕಾಗಿಯೇ ಇಲ್ಲ. ಮೊದಲು ಕದಡಿದ ಮನಸ್ಸಿಗೆ ಶಾಂತಿಯನ್ನು ಪಡೆದುಕೊಂಡರೆ ಮುಂದಿನ ವಿಚಾರ ಹೆಚ್ಚಿನದಲ್ಲ.''

''ಅಂತಹ.....''

ಸತ್ಯಭಾಮ ನಡುವೆ ಬಾಯಿ ಹಾಕಿದಳು,

''ನಿನ್ನೊಂದಿಗೆ ಪ್ರಮಾಣಪೂರ್ವಕವಾಗಿ ಹೇಳುವುದೆಂದರೆ ನಾನಿಂದು ಬದುಕಿರುವುದು ಅಮ್ಮನಿಗಾಗಿ. ನಾನು ಎಷ್ಟೇ ಅಶಾಂತಿಯಿಂದ ನರಳಿದರೂ ಸಹ ಅವರ ಮನಸ್ಸಿಗೆ ಕ್ಲೇಶ ಉಂಟುಮಾಡಲು ಮನಸ್ಸು ಬರುವುದಿಲ್ಲ..... ಈಚೀಚೆಗಂತೂ ಬದುಕಿನ ಮೋಜು ಕ್ಷಣ ಕ್ಷಣಕ್ಕೂ ಕಡಿಮೆಯಾಗುತ್ತಿದೆ'' ವ್ಯಥಿತ ಕಂಠದಿಂದ ಹೊಮ್ಮಿದ ದನಿ ವಿಜಾತೀಯವಾಗಿತ್ತು.

ನಾನು ಉದ್ರೇಕದಿಂದ ಹೇಳಿದೆ,

''ನಾವು ಪಯಣಿಸುವ ರಸ್ತೆಯಲ್ಲಿ ಕಲ್ಲುಮುಳ್ಳುಗಳಿರುವುದು ಸಹಜ. ಹಾಗೆಂದು ಪಯಣವನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಕಷ್ಟನಷ್ಟಗಳಿಲ್ಲದ ಪಯಣ ಇಲ್ಲವೇ ಇಲ್ಲ ಸತ್ಯಭಾಮಾ!''

''ಗೊತ್ತು.....''

''ಮತ್ತೆಲ್ಲಿಯ ಕ್ಲೇಶ?''

ಅವಳು ಮಾತಾಡದೆ 'ದೇವರಿಗೇ ಗೊತ್ತು' ಎಂಬಂತೆ ಬೆರಳನ್ನುಗಗನದೆಡೆಗೆ ತೋರಿದಳು.

''ಒಂದು ವೇಳೆ ನೀನು ಮನಃಪೂರ್ವಕವಾಗಿ ಬಯಸಿದ ವ್ಯಕ್ತಿ ನಿರಾಕರಿಸಿ ನಿನಗೇನಾದರೂ ನೋವುಂಟುಮಾಡಿರಬಹುದೇ....? ಆದರೆ ! ಈ ಪ್ರಶ್ನೆಯನ್ನು ಹಾಕಲು ನನಗೆ ಲಜ್ಜೆಯೆನಿಸುತ್ತದೆ. ನಿನ್ನನ್ನು ನಿರಾಕರಿಸಬಹುದಾದಂತಹ ಕಠಿಣಾತ್ಮ ಈ ಭುವಿಯಲ್ಲಿ ಹುಟ್ಟಲಿಲ್ಲ ಬಿಡು!''

ಅತ್ಯಂತ ಸರಳವೂ, ವಿಕಟವೂ ಆದ ನಗುವನ್ನು ನಕ್ಕು ''ನಾನು ಅಂತಹ ಬುದ್ಧಿಹೀನ ಕೆಲಸ ಎಂದೂ ಮಾಡಲಿಲ್ಲ...... ಮುಂದೆಯೂ ಮಾಡುವುದಿಲ್ಲ ಎಂದರೆ ನಂಬುವೆಯಷ್ಟೆ?'' ಎಂದಳು ಸತ್ಯಭಾಮಾ.

''ಅಂದರೆ ನಿನ್ನ ಚೇತನಕ್ಕೆ ನಿಲುಕುವ ನಾಯಕ ನಿನಗೆ ಸಿಗಲಿಲ್ಲವೆಂದೆ?''

''ನಿನ್ನ ವಿಚಾರ ಸರಣಿ ನನಗೆ ಅರ್ಥವಾಗಲಿಲ್ಲ. ಸ್ವಲ್ಪ ಬಿಡಿಸಿಹೇಳು.''

''ನಿನ್ನೆತ್ತರಕ್ಕೇರಬಲ್ಲ ಸದ್ಗುಣಿ-ಕಲಿ-ಕಲಾವಿದ-ಗಾಯಕ ಅಥವಾ ದೇವತಾ ಪ್ರಸಾದವೋ ಎಂಬಂತೆ ಮಾನವತಾಗುಣಗಳನ್ನು ಮೀರಿದ ವ್ಯಕ್ತಿಯು ಬಯಕೆಯಾಗಿದ್ದಲ್ಲಿ ಕೆಲವು ಕಾಲ ಕಾದು ನೋಡಬಹುದು. ಈಗಾಗಲೇ ಎಷ್ಟೋಕಾಲ ಏಕನಿಷ್ಠೆಯಿಂದ ಕಳೆದಿರುವ ನಿನಗೆ ಅದೇನೂ ಹೆಚ್ಚು ತೊಂದರೆಯಾಗದು.''

ಆ ಮುಹೂರ್ತದಲ್ಲಿ ತಟ್ಟನೆ ತಲೆಯೆತ್ತಿ ಪ್ರಶ್ನಾರ್ಥಕ ದೃಷ್ಟಿ ಬೀರಿದಳು ಸತ್ಯಭಾಮಾ. ತುಟಿಗಳು ಮಾತ್ರ ಬಿರಿಯಲಿಲ್ಲ. ಅರಳುಗಂಗಳ ಭಾವಾರ್ಥ 'ಆಗಲೇ ಉತ್ತರಿಸಿದ್ದಾಗಿದೆ; ಇದು ಮುಚ್ಚಿದ ಅಧ್ಯಾಯ' ಎನ್ನುವಂತಿತ್ತು. ಮುಖಮುದ್ರೆ ಗಂಭೀರ ಶಾಂತಿಯಿಂದ ಕೂಡಿತ್ತು.

''ನಿನ್ನ ಕಥೆಗಳಲ್ಲಿನ ಕಥಾನಾಯಕ ನಾಯಕಿಯರ ಆದರ್ಶ ಜೀವನವನ್ನು ಸವಿದಿರುವುದರಿಂದಲೇ ನನ್ನ ವಿಚಾರ ಸರಣಿಯನ್ನು ನಿನ್ನ ಮುಂದಿಡುತ್ತಿರುವೆ.'' ನಾನು ಒತ್ತಿ ಹೇಳಿದೆ.

ಅವಳು ಸ್ವಲ್ಪ ಹೊತ್ತು ಮಾತಾಡಲಿಲ್ಲ. ನೆಟ್ಟನೋಟ ಪುಷ್ಪಕುಂಡಗಳ ಮೇಲೆ ಹರಿದಿತ್ತು. ಗಾಳಿಗಲೆಯುವ ಕಾರಿರುಳನ್ನಣಕಿಸುವ ಮುಂಗುರುಳು, ದೈನ್ಯತೆಯನ್ನೊಸರುವ ನಿಮೀಲಿತ ನೇತ್ರಗಳು, ಅಭಿರಾಮ ಭಂಗಿ, ಆತ್ಮ ವಿಸ್ಮೃತ

ಗಾಂಭೀರ್ಯ ನನ್ನನ್ನು ಮಂತ್ರ ಮುಗ್ಧಳನ್ನಾಗಿಸಿತು. ನಿಶ್ಚಲಳಾಗಿ ಕುಳಿತೆ, ಎದೆಯಾಳದಲ್ಲಿ ಬಿಸಿಯುಸಿರು ಎಣೆಯಿಲ್ಲದೆ ಹರಿದಾಡುತಿತ್ತು.

ಸ್ವಲ್ಪ ಹೊತ್ತಿನ ನಂತರ ಅವಳ ಮನೋ ನಿಶ್ಚಯವೆಲ್ಲಾ ದೃಢವಾದ ಸ್ವರದಲ್ಲಿ ಹೊರಬಿತ್ತು.

''ಶುಭೆ! ನಿನ್ನದು ತಪ್ಪು ತಿಳಿವಳಿಕೆ..... ಶುದ್ಧ ಕಲ್ಪಿತ.''

''ಇರಬಹುದು. ಆದರೆ.......''

ಸತ್ಯಭಾಮ ನಡುವೆ ಬಾಯಿ ಹಾಕಿದಳು. ಅವಳ ಕಂಠದಲ್ಲಿ ಅನಿರೀಕ್ಷಿತವಾಗಿ ಕಾಠಿಣ್ಯ ಸ್ಫುರಿಸಿತು.

''ಆದರೆ ಗೀದರೆಯಿಂದ ಏನೂ ಪ್ರಯೋಜನವಿಲ್ಲ.''

''ಹಾಗಲ್ಲ ಸತ್ಯಭಾಮಾ...! ನೀನು ಕಂಡ ಕನಸಿಗೂ-ನಿನ್ನ ಭವ್ಯ ಊಹಾಲೋಕಕ್ಕೂ-ಈ ವಾಸ್ತವ ಜಗತ್ತಿಗೂ ಇರಬಹುದಾದ ತಾರತಮ್ಯ ನಿನ್ನ ಧೃತಿಗೆಡಿಸಿರಬಹುದು. ನೀನು ಬಯಸಿದಂತಹ 'ಒಳ್ಳೆಯ'ತನ ಈ ಲೋಕದಲ್ಲಿ ಅಪ್ರತ್ಯಕ್ಷವಾಗಿರಬಹುದು. ಹಾಗೆಂದು ಯಾವುಯಾವುದೋ ಕಾರಣಕ್ಕಾಗಿ ನಿನ್ನ ಭವ್ಯ ಜೀವನ ಕುಸುಮವನ್ನು ಕೈಯಾರೆ ನಲುಗಿಸುವುದು ಸರಿಯಲ್ಲ. ಯೋಚಿಸಿ ನೋಡು, ನಿನಗೆ ಸಾಕಷ್ಟು ಸಮಯವಿದೆ; ಅಪಾರವಾದ ಅನುಭವವಿದೆ; ಮೇಲಾಗಿ ಭವ್ಯ ಜೀವನದಲ್ಲಿ ಆಸ್ಥೆಯಿದೆ. ಇದಕ್ಕಿಂತ ಇನ್ನೇನು ಬೇಕು? ನೀನು ನಿನ್ನ ಬಗ್ಗೆ ಯೋಚಿಸುವಾಗ ಕ್ಷುದ್ರ ಜೀವನದಲ್ಲಿ ತೊಳಲಿ ಬಳಲುವ-ಕ್ರಿಮಿಕೀಟಗಳಿಗಿಂತಲೂ ಕೀಳಾದ ಸ್ತ್ರೀಕೋಟಿಯನ್ನು ನಿನಗೆ ಹೋಲಿಸಿಕೋ.... ಆಗ ನಿನ್ನಲ್ಲಿರಬಹುದಾದ ಆತ್ಮಜ್ಯೋತಿ ಏನೆಂಬುದು ನಿನಗರ್ಥವಾದೀತು. ವೃಥಾ ಚಿಂತನೆಯಲ್ಲಿ ತೊಳಲುವುದು ಸರಿಯಲ್ಲ.'' ನನ್ನ ಧ್ವನಿ ಭಾವೋದ್ವೇಗದಿಂದ ಕಂಪಾಯಮಾನವಾಗಿದ್ದುದನ್ನು ಬಹುಶಃ ಅವಳು ಗಮನಿಸಿಯೂ ಇರಬಹುದು. ಒಂದೆರಡು ಕ್ಷಣ ತಡೆದು ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡು ಮುಂದುವರಿದೆ ''ಜ್ಞಾಪಿಸಿಕೊ...... ನೀನು ಆಗೆಲ್ಲಾ ಎಷ್ಟೊಂದು ಚುರುಕು ಹುಡುಗಿಯಾಗಿದ್ದೆ. ನಿನ್ನ ರೂಪ ಚಟುವಟಿಕೆ ಬುದ್ಧಿ ಒಂದೊಂದೂ ಜೀವವಾಹಿನಿಯ ದಿವ್ಯ ಶ್ರೋತವಾಗಿತ್ತು. ಈಗ ನೋಡಿದರೆ.... ನನಗೆ ಅರ್ಥವೇ ಆಗುತ್ತಿಲ್ಲ.''

ವ್ಯಥಿತವಾಣಿಯಲ್ಲಿ ನನ್ನ ಕಂಠ ಶೋಷಣೆಗೈದಿದ್ದೆ. ಪ್ರಸಂಗವಶಾತ್ ಹೊಮ್ಮಿದ ವಾಕ್ಸರಣಿಯಲ್ಲಿ ಯಾವಯಾವ ವಿಚಾರಗಳು ಹೊಮ್ಮಿದುವು ಎಂಬುದು ಸ್ಮರಣೆಯ

ಹಾದಿಯಿಂದ ಆಗಲೇ ಅಳಿಸಿ ಹೋಗಿ ಸ್ನೇಹಮೇದುರ ಹೃದಯದಾಳದಲ್ಲಿ ಯಾವುದೋ ಕೀಟ ಕೊರೆಯುತ್ತಿದ್ದಂತೆ ಭಾಸವಾಯಿತು.

ಸತ್ಯಭಾಮಾ ವಿನೀತಬಾವದಿಂದ ಸಜಲನಯನಳಾಗಿ ನುಡಿದಳು,

''ಆ ದಿನಗಳೇ ಬೇರೆ ಪದ್ಮಾ! ಎಳೆ ವಯಸ್ಸಿನ ಆಸೆ-ಆಕಾಂಕ್ಷೆಗಳಿಂದ ಕೂಡಿ ಪುಟಿಪುಟಿಯುವ ಜೀವ. ಘನವಾದ ವಿದ್ಯೆಯನ್ನು ಕಲಿತು, ಪದವಿಗಳನ್ನು ಪಡೆದು, ಸಮಾಜವನ್ನು ಸಂಸ್ಕರಣಗೊಳಿಸಿ, ಗೊಡ್ಡು ಸಂಪ್ರದಾಯಗಳನ್ನು ನಿರ್ಮೂಲನಗೈದು, ಭವ್ಯ ಭವಿಷ್ಯದಲ್ಲಿ ಆದರ್ಶ ಜೀವನ ನಡೆಸುವ ಹೊಂಗನಸುಗಳನ್ನು ನೆಯ್ಯುತ್ತ ಪ್ರತಿ ಅಂಶಅಂಶದಲ್ಲೂ ಸಾರವನ್ನು ಬಸಿಯುತ್ತಿದ್ದೆವು..... ಅದು ನಿನಗೂ ಗೊತ್ತು. ಪುನರಪಿ ಹೇಳಬೇಕಾಗಿಲ್ಲ. ಆದರೆ ಈಗ ಏನೋ ಒಂದು ರೀತಿಯ ಗ್ಲಾನಿ.... ಯೋಚಿಸಿದರೂ ಅರ್ಥವಾಗದ ಕ್ಲಿಷ್ಟ.... ಬಯಸಿದರೂ ಬಾರದ ಶಾಂತಿ....ಅಂಶ ಅಂಶದಲ್ಲೂ ಕಾಣಸಿಗುವ ಕ್ಷುದ್ರತೆಗಿರುವ ಮಹತ್ವ....ಜೀವನೀಶಕ್ತಿಯ ಅಪವ್ಯಯ....ಇಂತಿಂತಹ ಕರುಣಕಾತರತೆಯಿಂದ ಘೂರ್ಣ ಉದ್ಭ್ರಾಂತತೆ ಮೂಡಿ ಮಂಡಿಯೂರಿ ನಿಲ್ಲುತ್ತದೆ.''

ಆ ಹೊಳೆ ಹೊಳೆಯುವ ಕಣ್ಣುಗಳಲ್ಲಿ ಫಳಕ್ಕನೆ ಸಣ್ಣಗೆ ನೀರಾಡಿತು.

ನನ್ನ ಸೂಕ್ಷ್ಮನೋಟ ಅವಳನ್ನು ಒಂದು ಕ್ಷಣ ಧರ್ಶಿಸಿ ಹಿಮ್ಮರಳಿತು.

ಅದ್ಭುತವೂ ಅನಂತವೂ ಆದ ಜೀವನವಾಹಿನಿಯಲ್ಲಿ ತೇಲುವ ನಮಗೆ ಅಲೌಕಿಕವಾಗಿ ಯೋಚಿಸುವ ಸಮಯವಾದರೂ ಎಲ್ಲಿದೆ? ಜೀವನ ಸಮಸ್ಯೆ ತಲೆಯ ತುಂಬ ತುಂಬಿ ಹೋಗಿರುವಾಗ ಅರ್ಥರಹಿತ ಪ್ರಶ್ನೆಗಳನ್ನು ಬೆದಕುತ್ತ ಕೂಡುವಷ್ಟು ಸಹನೆಯಂತೂ ಇಲ್ಲವೇ ಇಲ್ಲ....ಈ ಜೀವನ ಪರ್ಯಂತ ದೊರಕುವ ಸಂಭವವೂ ಇಲ್ಲ...ನಾನು ಒಂದು ಘಳಿಗೆ ಯೋಚಿಸಿ ಸುಮ್ಮನಾದೆ. ಎದೆಯಾಳದಿಂದ ದೀರ್ಘವಾದ ನಿಟ್ಟುಸಿರು ಹರಿದು ಬಂತು. ಏನು ಹೇಳಬೇಕೋ ಬಗೆ ಹರಿಯಲಿಲ್ಲ. ಹೇಗೆ ಸಮಾಧಾನಗೊಳಿಸಬೇಕೋ ತಿಳಿಯಲಿಲ್ಲ.

ಅವಳ ಕಣ್ಣುಗಳಲ್ಲಿ ಅಸ್ವಾಭಾವಿಕ ಗುರುತ್ವವಿತ್ತು. ನಿಮ್ನೋನ್ನತ ಶರೀರದಲ್ಲಿ ಹರಿದಾಡುವ ಭಾವನಾಲಹರಿಯ ಆವೇಗದಿಂದ ಒಮ್ಮೊಮ್ಮೆ ಮುಖ ಮಂಡಲದಲ್ಲಿ ಪ್ರಸನ್ನಭಾವ ಮಿನುಗಿ ಮಾಯವಾಗುತಿತ್ತು. ಪ್ರಾಯಶಃ ನನ್ನ ತರ್ಕವನ್ನು ಅವಳು ಬಹಳ ಲಘುವಾಗಿ ಭಾವಿಸುತಿದ್ದಳೇನೋ....ಆ ಯೋಚನೆ ಬಂದಾಗ ನನ್ನನ್ನೇ ನಾನು ತುಲನೆ ಮಾಡಿಕೊಂಡೆ....

ಆಗ ಕಂಡ ರಹಸ್ಯವೇನು?

ಅರಣ್ಯ, ಪರ್ವತಗಳಿಗಿರುವಂತೆಯೇ ಜೀವನ ಪ್ರಕೃತಿಗೂ ಪ್ರತ್ಯೇಕವೂ ಭವ್ಯವೂ ಆದ ಸ್ವರೂಪವಿದೆ- ಅದನ್ನು ಭಕ್ತಿಯಿಂದ ಆರಾಧಿಸುವವರಿಗಿಂತ ಕಲಂಕಪ್ರಾಯವಾಗಿ ಅವಮಾನಗೊಳಿಸುವವರಿಗೆ ತನ್ನ ದಿವ್ಯದರ್ಶನ ಮಾಡಿಸುವುದೇನೋ....

ಆದರೂ, ಜೀವನೀಶಕ್ತಿಯನ್ನು ಕಡೆಗಣಿಸಿ ಜೀವನ ಕ್ಷೇತ್ರಕ್ಕೆ ಹೊರತಾಗಿ ಬದುಕುತ್ತಿರುವವಳಿಗೆ ಈ ಪ್ರಶ್ನೆಗಳು ಏಕೆ ಬಾಧಿಸುತ್ತಿವೆಯೋ ಅರ್ಥವಾಗಲಿಲ್ಲ. ಅನುಚಿತವೂ, ಅಮಾಯಕವೂ ಆದ ಅದೃಶ್ಯ ಆತ್ಮವಿಪ್ಲವ ಉಂಟಾಗಿರಬಹುದು. ಅಥವಾ ಎಲ್ಲೋ ಅಲಕ್ಷಿತ ಅಲಸಿಕೆ ಅವಳಲ್ಲಿ ಆವಾಹನೆಯಾಗಿರಬಹುದು.....ಎಂದೆಲ್ಲ ಚಿಂತಿಸಿತು ಚಿತ್ತ. ಕುತೂಹಲ-ಕಾತರತೆಗಳಿಂದ ಹೃದಯ ತುಂಬಿ ಹೋಗಿತ್ತು. ಅವಳಿಗೆ ನನ್ನ ರುದ್ರಮೌನ ವಿಚಿತ್ರತರವಾಗಿ-ಅಸಹನೀಯವಾಗಿ ತೋರಿತೋ ಏನೋ.....ಪ್ರಶ್ನಾರ್ಥಕವಾಗಿ ನನ್ನತ್ತ ನೋಟವನ್ನು ಹರಿಸಿದಳು, ಅವುಗಳಲ್ಲಿ ಉಜ್ವಲ ಕಾಂತಿಯುಕ್ಕುತಿತ್ತು.

''ಕೇಳು ಸತ್ಯಾ! ನನ್ನ ಸ್ವಂತ ಅನುಭವವನ್ನು ಕುರಿತು ಒತ್ತಿ ಹೇಳುವೆ. ದಿನವೂ ನಿನ್ನಂತೆಯೇ ನಾನು ಕೊರಗಬಹುದಾಗಿದ್ದರೆ ನಿನಗೆ ಇರಬಹುದಾದ ಮನಃಕ್ಲೇಶದ ಹತ್ತರಷ್ಟು ಹೊಂದಿರುವ ನಾನು ಇಷ್ಟರೊಳಗಾಗಿ ನಿರ್ನಾಮವೇ ಆಗಿರುತ್ತಿದ್ದೆ, ಎಂದರೆ ನೀನು ಒಪ್ಪಿಕೊಳ್ಳುತ್ತಿ ತಾನೆ?''

''ಹೌದು'' ಎಂಬಂತೆ ಅವಳು ತಲೆಯಾಡಿಸಿದಳು, ಮಾತಾಡಲಿಲ್ಲ. ಮನೋಹರವಾಗಿ ಕಂಡಳು. ಸ್ವಲ್ಪ ಹೊತ್ತು ದೃಷ್ಟಿಯನ್ನು ಆವಳಿಂದ ಹಿಂತೆಗೆಯಲಾಗಲಿಲ್ಲ.

''ನಿನಗೆ ಜೀವನಕ್ಕೆ ಹೊಂದಿಕೊಳ್ಳುವ ಮನೋಭಾವವಿದೆ. ಖಂಡಿತ ಮದುವೆಯಾಗು. ನಿನ್ನ ಮನಸ್ಸಿಗೆ ಅಂಟಿರುವ ಭೂತ ವಿಶೇಷ ಹಾರಿ ಹೋಗುತ್ತದೆ! ತಕ್ಷಣ ನಿನ್ನ ಚಿತ್ತ ನೂರಾರು ಕಾರಸ್ಥಾನಗಳ ಬೀಡಾಗಿ ಉತ್ಸಾಹ ತಾನೇ ತಾನಾಗಿ ಮೂಡುತ್ತದೆ. ಅಲ್ಲದ ಸಲ್ಲದ ಆಲೋಚನೆಗಳಿಗೆ ಅವಕಾಶ ದೊರೆಯುವುದಿಲ್ಲ. ಅನಂತರ ನನ್ನಂತೆ ಅಥವಾ ಎಲ್ಲರಂತೆ ಹರಕು ಮುರುಕು ಜೀವನಕ್ಕೂ ಹೊಂದಿಕೊಳ್ಳವಂತಹ ಧೈರ್ಯ-ಆಸ್ಥೆ ಎರಡನ್ನೂ ಸುಲಭವಾಗಿ ಪಡೆಯುತ್ತಿ!''

''ನೀನು ನಿಜವಾಗಿಯೂ ನನ್ನನ್ನು ಅರ್ಥಮಾಡಿಕೊಂಡಿಲ್ಲ ಶುಭೆ!''

''ಪರವಾಗಿಲ್ಲ! ಕ್ಷಮಿಸಿ ಬಿಡು. ಅಥವಾ ಅರ್ಥವಾಗುವ ರೀತಿಯಲ್ಲಿ ಸರಳವಾಗಿ ವಿವರಿಸು. ನಾನು ಖಂಡಿತ ಸಹಕರಿಸುವೆ. ನೀನೂ ಸಹ ನನ್ನ ಸಲಹೆಯನ್ನು ಮನಃಪೂರ್ವಕವಾಗಿ ವಿಮರ್ಶೆಮಾಡು.''

ಸತ್ಯಭಾಮಾ ನಿಧಾನವಾಗಿ ತಲೆಯಾಡಿಸಿದಳು. ತುಟಿಗಳಲ್ಲಿ ನೀರಸನಗೆ ಮಿನುಗಿ ಮಾಯವಾಯಿತು. ಮುಖಭಾವದಲ್ಲಿ ಕಿಂಚಿತ್ತೂ ಬದಲಾಗಲಿಲ್ಲ. ಹೃದಯ ಮಸ್ತಿಷ್ಕಗಳೆರಡೂ ನಿಷ್ಕ್ರಿಯವಾದಂತೆ ನಿಶ್ಚೇಷ್ಟತೆ ಕಾಣಿಸುತಿತ್ತು. ದೂರ ದಿಗಂತದಲ್ಲಿ ನೆಟ್ಟ ನೋಟ ಔತ್ಸುಕ್ಯದಿಂದ ತುಂಬಿದ್ದರೂ ಚಲಿಸುತ್ತಿರಲಿಲ್ಲ.

ಘಳಿಗೆ ಘಳಿಗೆಗಳಿಗೆ ನಿರಾತಂಕವಾಗಿ ಉರುಳುತಿದ್ದುವು. ನನ್ನ ಸಹನೆ ಕ್ಷಣಕ್ಷಣಕ್ಕೂ ಮೀರುತಿತ್ತು. ನಾನು ಮೌನ ಮುರಿದೆ.

''ಹೋಗಲಿ, ಬಿಡು. ಸುಪ್ರಸಿದ್ಧ ಕವಯಿತ್ರಿಯಾಗುವ ಗುರಿಯನ್ನಾದರೂ ಇರಿಸಿಕೊ. ಆ ಮೂಲಕವಾದರೂ ನಿನ್ನ ಕದಡಿದ ಮನಸ್ಸಿಗೆ ಶಾಂತಿಯನ್ನು ಪಡೆಯಬಹುದು.''

''ಇಷ್ಟೊಂದು ವಿದ್ಯೆ ಕಲಿತು ಪ್ರಸಿದ್ಧಿಯಾಗುವುದು ವಿಶೇಷವಲ್ಲ. ಕ್ಷಣಿಕಾನಂದವನ್ನು ಪಡೆಯುವುದಕ್ಕಾಗಿ ಈ ಜೀವನವನ್ನು ಬಲಿ ತೆಗೆದುಕೊಳ್ಳಲು ಇಷ್ಟ ಬರುವುದಿಲ್ಲ. ಆಗ ಮನದಲ್ಲಿ ಉತ್ಸಾಹವಿತ್ತು. ಏನೇನೋ ಗೀಚುತಿದ್ದೆ; ಸಾಹಿತ್ಯ ಸೃಷ್ಟಿಯಾಗುತಿತ್ತು. ಈಗ ಅದಕ್ಕಿಂತಲೂ ಉತ್ತಮವಾದುದು ವಿಚಾರ ಸಾಹಿತ್ಯ ಎಂದು ಅಂತರಂಗ ಹೇಳುತ್ತದೆ.''

''ಸರಿ; ಅದನ್ನೇ ಕೈಕೊಳ್ಳು. ಅದೇ ನಿನಗೆ ಶಾಂತಿವಾಚನ ಮಾಡಬಹುದು.''

''ಅದೇ ಈಗ ಕಷ್ಟಕ್ಕೆ ಬಂದಿದೆ. ಮನಸ್ಸಿಗೆ ಶಾಂತಿ ಇಲ್ಲದೆ ಏಕಾಗ್ರತೆ ಬರುವುದಿಲ್ಲ.''

''ಸಂಗೀತ......?''

''ಅದೆಷ್ಟೋ ಮೇಲು. ಅದರಿಂದ ಸ್ತುತಿಸಬಹುದು. ಅಂತರಂಗವನ್ನು ತೋಡಿಕೊಳ್ಳುವುದರಿಂದ ಮನಸ್ಸಿಗೆ ಎಷ್ಟೋ ಹಿತವೆನಿಸುತ್ತದೆ. ಆದರೆ ಅದೂ ಸಹ ಕ್ಷಣಿಕ ಅನಂತರ ಇದೇ ಪಾಡು.''

''ನಿನಗೆ ಹಿತವಾದುದನ್ನೇ ಆರಿಸಿಕೊ. ಯಾವುದಾದರೊಂದು ಗಮ್ಯ ವಿರಿಸಿಕೊಂಡರೆ ಇಷ್ಟೊಂದು ನಿರಾಸೆಯ ಕುಂಡದಲ್ಲಿ ಬೇಯಬೇಕಾಗಿಲ್ಲ. ಖಂಡಿತ ಯಾವುದಾದರೊಂದು ಕ್ರಮ ಕೈಕೊಳ್ಳುವುದು ಲೇಸು.''

''ಎಲ್ಲಿಂದ, ಹೇಗೆ ಪ್ರಾರಂಭಿಸಿದರೂ ಕಣ್ಣಿಗೆ ಕಾಣಸಿಗುವುದು ಮಿಥ್ಯ ಪರಂಪರೆ. ಈ ಜೀವನದಲ್ಲಿ ನನಗಿನ್ನು ಯಾವ ಆಸೆಯೂ ಉಳಿದಿಲ್ಲ ಪದ್ಮಾ!'' ಎಂದಳು ಸತ್ಯಾ. ದನಿ ಅತ್ಯಂತ ಭಾರವಾಗಿತ್ತು. ಮುಖಮಂಡಲ ಗಂಭೀರ ಶಾಂತಿಯಿಂದ ಕೂಡಿತ್ತು.

''ಎಲ್ಲಿಯಾದರುಂಟೇ? ನಿನ್ನಂತಹ ಭಾವಜೀವಿ ಈ ಮಾತು ಹೇಳಬಾರದು. ನೀನು ನಮ್ಮಂತಹವರಿಗೆ ತಿಳಿವಳಿಕೆ ಹೇಳಬೇಕಾದವಳು. ಈ ರೀತಿ ನಿರಾಶೆಯ ಕುಂಡದಲ್ಲಿ ಬೇಯುವುದೆಂದರೆ ಬಹಳ ವಿಶಾದಕರ!''

ಅತ್ಯಂತ ಬೇಗುದಿಯಿಂದ ನಾನು ಚೀರಿದೆ. ಹೃದಯ ಭಾರವಾಗಿತ್ತು.

''ಇರಲಿ, ಏನೇನು ಆಗುತ್ತೋ ನೋಡೋಣ. ನನ್ನೊಂದಿಗೆ ನೀನೂ ಏಕೆ ತಲೆ ಕೆಡಿಸಿಕೊಳ್ಳುತ್ತಿ?''

ಅದು ಸೂಕ್ತವೆನಿಸಿತು ನನಗೆ.

ಅವಳು ಜಿಜ್ಞಾಸಾಪೂರ್ಣ ದೃಷ್ಟಿಯಿಂದ ನೋಡುತ್ತ ಹೇಳಿದಳು,

''ಸಂಧ್ಯಾದೀಪ್ತಿಯಲ್ಲಿ ಹರಿದಾಡುವ ಶಾಂತಿಕಿರಣಗಳನ್ನು ನೋಡುವಾಗ ಹೃದಯ ಕುಂಡಲಿನಿ ಆನಂದದಿಂದ ಉಕ್ಕೇರುವುದು, ಅಲ್ಲವೇ? ಅಂತಹ ಒಂದು ಶಾಂತಿ ಬಿಂದು ನಮ್ಮ ಜೀವನದಲ್ಲೂ ಒದಗಬೇಕು. ಅದಕ್ಕಿಂತ ಹೆಚ್ಚಿನದೇನೂ ಈ ಜಗತ್ತಿನಲ್ಲಿ ಇಲ್ಲ.''

''ಭಗವಂತ ಖಂಡಿತ ನಿನಗೆ ಶಾಂತಿಯನ್ನು ದಯಪಾಲಿಸುತ್ತಾನೆ.''

ಅನಂತರ ಗಮನವನ್ನು ಅವಳ ಸಂಸಾರದ ಕಡೆಗೆ ಹರಿಯಬಿಟ್ಟೆ. ಅವಳ ಸಂಸಾರವೆಂದರೆ ತಾಯಿ, ತಮ್ಮ, ತಂಗಿ. ಮನೋರಮ ಅತ್ತೆ ಮನೆಗೆ ಹೋಗಿದ್ದಾಳೆ. ನಾನು ಕಳೆದ ತಿಂಗಳು ಅವಳ ಮನೆಗೆ ಹೋಗಿದ್ದಾಗ ಶಾರದಾದೇವಿಯಾಗಲೀ ಕುಮಾರನೇ ಆಗಲಿ ಇರಲಿಲ್ಲ, ಅವರ ವಿಚಾರ ಪ್ರಸ್ತಾಪಿಸುವ ಅಗತ್ಯವೂ ಇತ್ತು. ಅಂತಲೇ ವಿಷಯದಿಂದ ವಿಷಯಕ್ಕೆ ಸ್ನೇಹಪೂರ್ವಕವಾಗಿ ಜಾರಿದೆ.

''ನಿನ್ನ ತಮ್ಮನ ಕೋರ್ಸ್ ಮುಗಿಯಿತೇ ಸತ್ಯಾ?''

''ಮುಗಿಯಿತು........ ಅಷ್ಟರೊಳಗಾಗಿ ಕೆಲಸವೂ ದೊರಕಿದೆ!'

''ಪರವಾಯಿಲ್ಲ; ತುಂಬ ಅದೃಷ್ಟವಂತ!''

ಸತ್ಯಭಾಮೆಯ ಮುಖಮಂಡಲ ಅನಿರೀಕ್ಷಿತವಾಗಿ ಪ್ರಸನ್ನವಾಯಿತು. ಏನೋ ಒಂದು ರೀತಿಯ ಸಮಾಧಾನ ವಿಶೇಷದಿಂದ ''ನಿಜ....!'' ಎಂದಳು. ಒಂದು ಘಳಿಗೆ ತಡೆದು ಮುಂದುವರಿಯುತ್ತ ''ನಾವು ಚಿಕ್ಕಂದಿನಲ್ಲಿ ತಂದೆಯನ್ನು ಕಳೆದುಕೊಂಡಾಗ ಮಕ್ಕಳಮೇಲಿನ ಹತೋಟಿ ತಪ್ಪಿ ಎಲ್ಲಿ ಅಡ್ಡ ಹಾದಿ ಹಿಡಿಯುವರೋ ಎಂದು ನಮ್ಮ ಅಮ್ಮ ಎಷ್ಟು ಯೋಚನೆಗೊಳಗಾಗಿದ್ದರೋ.... ಆಗ ನಾವು ನಮ್ಮ ಅಭಿಲಾಷೆ ಇಷ್ಟು ಸರಾಗವಾಗಿ ಪೂರೈಸುತ್ತೆ ಎಂದುಕೊಂಡಿರಲಿಲ್ಲ. ದೇವರು ದೊಡ್ಡವನು. ಕಡ ಹಾಯಿಸುತಿದ್ದಾನೆ. ಅಮ್ಮನ ಆರ್ತಮೊರೆ ಅವನಿಗೆ ಮುಟ್ಟಿರಲೇಬೇಕು!''

ಎದೆಯ ಭಾರವನ್ನೆಲ್ಲಾ ಒಂದೇಬಾರಿಗೆ ಇಳಿಸಿದಂತೆ ಭಾರವಾದ ಉಸಿರನ್ನು ಹೊರಹಾಕಿದಳು ಅವಳು.

.... ನಿಜವಾಗಿಯೂ ಸತ್ಯಭಾಮ ತನ್ನ ತಮ್ಮ ತಂಗಿಯರಿಗಾಗಿ ವಿಶೇಷ ಆಸ್ಥೆ ವಹಿಸಿದ್ದಾಳೆ. ತಂಗಿ ಬಿ.ಎ., ಮುಗಿಸಿದನಂತರ ಅಂತರ್ನಿಹಿತ ಪ್ರೇಮಜ್ವಾಲೆಯಲ್ಲಿ ಬೆಂದು ಅಂತರ್ಜಾತಿ ವ್ಯಕ್ತಿಯನ್ನು ವಿವಾಹವಾಗುತ್ತೇನೆಂದಾಗ ಸಮಸ್ಯೆಯನ್ನು ನಿರ್ವಿಘ್ನವಾಗಿ ಬಗೆಹರಿಸಿ ಅವಳನ್ನು ಸಂಸಾರಸ್ಥೆಯನ್ನಾಗಿಸಿ ಅವಳ ಅಪಾರವಾದ ಸಂತಸದಲ್ಲಿ ಪಾಲ್ಗೊಂಡಿದ್ದಾಳೆ. ತಾಯಿಯಲ್ಲಿ ಅಪಾರವಾದ ಪ್ರೀತಿ- ಗೌರವ, ಭಗವಂತನಲ್ಲಿ ಅನನ್ಯ ಅನುಮಪ ಭಕ್ತಿ ಅಂದಮೇಲೆ ಈ ನಿರಾಸೆ- ವೈರಾಗ್ಯಗಳಿಗೆ ಅರ್ಥವೇ ಇಲ್ಲ. ಸಂತೋಷವಾಗಿರುವುದಕ್ಕೂ ಪಡೆದುಕೊಂಡು ಬಂದಿರಬೇಕು, ಅಲ್ಲವೇ? ಎಂದು ನನ್ನಂತರಂಗವನ್ನೇ ನಾನು ಪ್ರಶ್ನಿಸಿಕೊಂಡೆ. ಅನಂತರ ಒಂದೆರಡು ಘಳಿಗೆ ಸುಮ್ಮನಿದ್ದು ನಾನು ನುಡಿದೆ,

''ನೋಡು, ಭಗವಂತ ನಿನ್ನ ಎಲ್ಲಾ ಆಶೋತ್ತರಗಳಲ್ಲೂ ಪೂರ್ಣ ಸಹಾಯ ಮಾಡಿದ್ದಾನೆ. ನಿನ್ನ ಬಗೆಗೆ ಖಂಡಿತ ಅನಿಗೆ ಅದ್ಭುತ ಆಸ್ಥೆ ಇದೆ. ಅವನಲ್ಲಿ ನಂಬಿಕೆಯಿಟ್ಟು ನಿನಗೆ ತೃಪ್ತಿಕರವಾದ ರೀತಿಯಲ್ಲೇ ನಿನ್ನ ಬಾಳನ್ನು ರೂಪಿಸಿಕೋ. ನಿನ್ನ ಚಿತ್ತಸ್ಥೈರ್ಯಕ್ಕೆ ನಿಜವಾದ ಕಾರಸ್ಥಾನ ದೊರೆಕಿತೆಂದರೆ ನೀನು ನಿಜವಾಗಿಯೂ ಸುಖಿಯಾಗುವೆ.''

ಸತ್ಯಭಾಮಳ ತುಟಿಗಳಲ್ಲಿ ನೀರಸ ನಗೆ ಹೊಮ್ಮಿತು. ಅನಂತರ ನಿಧಾನವಾಗಿ ನುಡಿದಳು,

''ಇರಲಿ, ಇನ್ನೂ ಬೇಕಾದಷ್ಟು ಸಮಯವಿದೆ. ನಿಧಾನವಾಗಿ ನಿರ್ಧರಿಸುವೆ.''

ಬಹುಶಃ ನಮ್ಮ ಚರ್ಚೆಯಲ್ಲಿ ಹೊತ್ತು ಉರುಳಿದುದರ ಪರಿವೆಯೇ ಅವಳಿಗಿರಲಿಲ್ಲ. ಇಲ್ಲವಾಗಿದ್ದಲ್ಲಿ ಅವಳು ಇಷ್ಟು ಹೊತ್ತು ಇಲ್ಲಿ ಕೂಡುತ್ತಿರಲಿಲ್ಲ. ಹೊತ್ತಿನ ಕಡೆ ಗಮನ ಹರಿದಾಗ ತಟ್ಟನೆ ಎದ್ದು ನಿಂತು ''ನೀನು ಒಳ್ಳೆಯವಳು! ನನ್ನನ್ನು ಬಹಳ ಹೊತ್ತು ಇಲ್ಲಿ ಹಿಡಿದಿಟ್ಟಿದ್ದಿ!'' ಎಂದಳು. ಕಣ್ಣುಗಳಲ್ಲಿ ಆಶ್ಚರ್ಯ-ಆತಂಕಗಳ ನೆರೆ ಉಕ್ಕಿ ಹರಿಯಿತು.

''ಒಳ್ಳೆಯದೇ ಆಯಿತಲ್ಲ! ನೀನು ಮನೆಯಲ್ಲಿದ್ದಿದ್ದರೆ ಎಲ್ಲೋ ಒಂದೆಡೆ ಕೊರಗುತ್ತ ಕುಳಿತಿರುತಿದ್ದೆ. ಇಲ್ಲಿ ಸಾಕಷ್ಟು ವಿಚಾರ ಮಂಥನ ನಡೆಸಿದ್ದೇವೆ.''

''ವ್ಯರ್ಥಸಾಹಸ!''

''ನೀನಿನ್ನೂ ಎಳೆ ನಿಂಬೆಕಾಯಿ!''

ಈ ಸಲ ಅವಳು ಗಟ್ಟಿಯಾಗಿ ನಕ್ಕುಬಿಟ್ಟಳು.

ಆ ನಗುವಿನ ವ್ಯಂಗ್ಯಾರ್ಥವನ್ನು ನಾನು ಗ್ರಹಿಸಲಿಲ್ಲ. ನಗುತ್ತ ಎದ್ದು ನಿಂತೆ. ಅವಳ ನಿವಾಸ ನಮ್ಮಲ್ಲಿಂದ ನಾಲ್ಕಾರು ಮೈಲಿಗಳ ಮೇಲಾಗುವುದು. ರವೀಂದ್ರಕಲಾಕ್ಷೇತ್ರದ ಬಳಿ ಬಸ್ಸನ್ನು ಬದಲಿಸಬೇಕು. ಮನೆ ಮುಟ್ಟುವ ವೇಳೆಗೆ ರಾತ್ರಿ ಎಂಟು ಗಂಟೆಯಾಗುವುದರಲ್ಲಿ ಸಂದೇಹವೇ ಇಲ್ಲ. ಅಂತಲೇ ಅವಳನ್ನು ಬಸ್ಸಿನ ನಿಲ್ದಾಣದವರೆಗೆ ಕಳುಹಿಸಿ ಬರಲು ನಾನೂ ಹೊರಟೆ.

''ಬೇಡ ಪದ್ಮಾ! ಬಹಳ ಹೊತ್ತಾಗಿದೆ, ನಾನೇ ಹೋಗುವೆ.''

ಎನ್ನುತ್ತಾ ಸತ್ಯಭಾಮಾ ಹೆಜ್ಜೆ ತೆಗೆದಳು. ಆ ಅಭಿಶಪ್ತ ಹೆಜ್ಜೆಗಳ ಗತಿ ತಾಳಲಯ ಬದ್ಧವಾಗಿ ಗಮನೀಯವಾಗಿತ್ತು. ನೋಡು ನೋಡುತ್ತ ನಾನೆಂದೆ,

''ಇರಲಿ, ಪರವಾಯಿಲ್ಲ. ನನಗೆ ಐದು ನಿಮಿಷಗಳ ಹಾದಿ.''

''ಆಗಲಿ, ಅಷ್ಟಾದರೂ ಏಕೆ ವ್ಯರ್ಥವಾಗಬೇಕು?''

ಅವಳ ಮಾತಿಗೆ ಇನಿತು ಗಮನವನ್ನು ಕೊಡದೆ ನಾನು ಒಂದುಗೂಡಿ ಹೆಜ್ಜೆ ಹಾಕಿದೆ. ಹಾದಿಯಲ್ಲಿ ಇತರ ಪಾಂಥರ ಕಡೆ ಗಮನ ಹರಿಸದೆ ತಲೆ ಬಾಗಿ ಹೆಜ್ಜೆ ಹಾಕುತ್ತ ಅವಳೆಂದಳು,

''ನೀನು ವೃಥಾ ತೊಂದರೆ ತೆಗೆದುಕೊಳ್ಳುತ್ತಿ. ಅನಂತರ ಇಲ್ಲಿಂದ ನೀನೊಬ್ಬಳೇ ಹಿಂದಿರುಗಬೇಕು. ಇದುವರೆಗೂ ನಿನ್ನ ವೇಳೆ ನನ್ನೊಂದಿಗೆ ಬಹಳಷ್ಟು ವ್ಯರ್ಥವಾಗಿದೆ. ಮತ್ತೇಕೆ ಪರಿಶ್ರಮ? ನೀನು ಇಲ್ಲಿಂದಲೇ ಹಿಂದಿರುಗು. ನಾನು ಹೋಗುವೆ.''

''ಆಗಲಿ ಪರವಾಯಿಲ್ಲ; ನಿನಗೇಕಷ್ಟು ಆತಂಕ? ಬಸ್ಸು ಬರುವತನಕ ಇನ್ನಷ್ಟು ಚರ್ಚಿಸಬಹುದಲ್ಲ?''

''ಆಗಲೇ ಬೇಸರ ಹಿಡಿಸಿದ್ದಿ!'' ನಕ್ಕು ನುಡಿದಳು ಅವಳು. ಮೃದು ಮಂದ ವಾಣಿಯಲ್ಲಿ ಮಾಧುರ್ಯವಿತ್ತು.

''ಹಿಡಿಸುತ್ತಿಲ್ಲ ಓಡಿಸುತ್ತಿರುವೆ!''

''ಸಧ್ಯ, ನನಗೆ ಹುಚ್ಚು ಹಿಡಿಸದಿದ್ದರೆ ಸಾಕು!''

ಇಬ್ಬರ ತುಟಿಗಳಲ್ಲೂ ನಗುವಿನ ಲಹರಿ ಉಕ್ಕಿ ಹರಿಯಿತು. ಸಾಂಧ್ಯ ದೀಪ್ತಿಯಲ್ಲಿ ಅವಳ ಕಣ್ಣುಗಳು ಜ್ವಲಂತ ಗ್ರಹಗಳೋಪಾದಿಯಲ್ಲಿ ಮಿನುಗುತಿದ್ದುವು. ವಿಚಾರವಾಹಿನಿಯ ಗಂಭೀರ ತೇಜ ಮುಖಮುದ್ರೆಯಲ್ಲಿತ್ತು.

ಹಾದಿ ಸ್ವಲ್ಪ ದೂರ ನಿಶ್ಶಬ್ದವಾಗಿ ಸಾಗಿತು.

ನಮ್ಮ ಮನೆಯಿಂದ ಒಂದು ಫರ್ಲಾಂಗಿನಷ್ಟು ದೂರದಲ್ಲಿ ಬಸ್ಸಿನ ನಿಲ್ದಾಣ. ನಾವು ದಿನಕ್ಕೆ ಒಂದೆರಡು ಬಾರಿಯಾದರೂ ಆ ಹಾದಿಯನ್ನು ತುಳಿಯುವುದುಂಟು. ಕಣ್ಮುಚ್ಚಿ ನಡೆದರೂ ಎಡವಲಾರದಷ್ಟು ಪರಿಚಯ ಕಾಲುಗಳಿಗೆ.

ಅವಳು ಕೊನೆಯದಾಗಿ ಹೇಳಿದಳು,

"ನಾನು ಯಾವ ನಿರ್ಧಾರ ಕೈಕೊಳ್ಳಬೇಕಾದರೂ ಅವಸರಿಸುವುದಿಲ್ಲ. ಅಲ್ಲದೆ ನನ್ನ ಹಾದಿ ಅಷ್ಟೊಂದು ಸುಗಮವಾಗಿಯೂ ಇಲ್ಲ. ಬಾಳಿನ ಸಂಜೆಯಲ್ಲಿ ಆತ್ಮ ಶಾಂತಿಗಾಗಿ ಘೀಳಿಡುತ್ತಿರುವ ತಾಯಿ ಇದ್ದಾರೆ. ಅವರ ಸಮ್ಮತಿ ಇಲ್ಲದೆ ನಾನು ಏನನ್ನೂ ಮಾಡಲಾರೆ."

ಧ್ವನಿ ಹೃತ್ಪೂರ್ವಕವಾಗಿ ಹರಿದು ಬಂತು ವಿಮಲ ವಿಶಾಲ ನಯನಗಳಲ್ಲಿ ಭಾವುಕತೆ ತುಂಬಿತ್ತು. ನಾನು ಅವಳನ್ನೊಮ್ಮೆ ಹುಬ್ಬೆತ್ತಿ ನೋಡಿದೆ. ಅವಳ ಸಮಾಧಾನಕರ ಉತ್ತರದಿಂದ ನರನಾಡಿಗಳಲ್ಲಿ ವಿನೂತನ ಶಕ್ತಿಯ ಸ್ಫುರಿ ಹರಿದಾಡಿತು. ಮನೋದಧಿಯಲ್ಲಿ ಯೋಚನಾ ತರಂಗಗಳು ಅಲ್ಲೋಲಕಲ್ಲೋಲವಾಗಿದ್ದಂತೆ ಭಾಸವಾಯಿತು.

ಅನಂತರ,

ಅವಳೊಡನೆ ಪುನರ್ಭೇಟಿಯಾದುದು ಆಸ್ಪತ್ರೆಯಲ್ಲಿ. ತಾಯಿ-ಶಾರದಾದೇವಿಯ ಚಿಕಿತ್ಸೆ ಆಸ್ಪತ್ರೆಯಲ್ಲಿ ನಡೆದಿತ್ತು. ಅಂತರಾಳವರ್ತಿದಾರುಣ ರುಜೆ ದೇಹದ ಶಕ್ತಿಯ ಕಣಕಣವನ್ನೂ ಕಬಳಿಸುತ್ತಲಿತ್ತು. ದೇಹ ಬಳಲಿ ಬೆಂಡಾಗಿ ಒಣಗಿದ ಕಾಷ್ಠದಂತೆ ಪಲ್ಲಂಕದ ಮೇಲೆ ಒರಗಿತ್ತು. ದೂರ ದೂರ ಪಯಣಕ್ಕೆ ಸಿದ್ಧಳಾಗುತಿದ್ದ ಜನನಿಯ ಸೇವೆಯನ್ನು ಮನಮುಟ್ಟಿ ಮಾಡುತಿದ್ದ ಮಗಳನ್ನು ಸೂಕ್ಷ್ಮವಾಗಿ ಗಮನಿಸಿತು ನನ್ನ ಚಿತ್ತ. ಹಿಂದಿನಂತೆ ನಿರಾಸೆಯ ಕುಂಡದಲ್ಲಿ ಅವಳು ಬೇಯುತ್ತಿರಲಿಲ್ಲ. ಕ್ಷಣಕ್ಷಣಗಳು ಕಾತರತೆಯ ಮುಳ್ಳಿನ ಮೇಲೆಯೇ ಉರುಳುತಿದ್ದರೂ ಚಿತ್ತಪ್ರವೃತ್ತಿ ಗಂಭೀರ ಶಾಂತಿಯಿಂದ ಕೂಡಿತ್ತು. ತಾಸು ತಾಸುಗಳನ್ನು ಎಣಿಸುತ್ತಿದ್ದರೂ ದುಃಖ-ಕಳವಳ ಅವಳ ಬಳಿ ಸುಳಿದಿರಲಿಲ್ಲ. ಬಹುಶಃ ಜೀವನದಲ್ಲಿ ಇದೇ ಮೊದಲನೆಯ ಬಾರಿ ದಾರುಣ ಪ್ರಸಂಗವನ್ನು ಎದುರಿಸುತಿದ್ದಾಳೆ, ಎಂದೆನಿಸಿತು. ಸಮಯೋಚಿತವಾಗಿ ಅತ್ಯಂತ ಅನುತಾಪವನ್ನು ನಾನು ಸೂಚಿಸಿದೆ. ಅವಳು ಯಾಂತ್ರಿಕವಾಗಿ ಉತ್ತರಿಸಿದಳು, ಅದರಲ್ಲಿ ಯಾವ ವಿಶೇಷವೂ ಇರಲಿಲ್ಲ.

ಅಂತೂ, ನಿರೀಕ್ಷಿತ ಸಮಯಕ್ಕಿಂತ ನಾಲ್ಕಾರು ದಿನಗಳಿಗೆ ಮುಂಚಿತವಾಗಿಯೇ ಜನನಿಯು ಜೀವನ್ಮುಕ್ತಿ ಪಡೆದುದು ಒಂದು ರೀತಿಯಿಂದ ಸತ್ಯಭಾಮೆಗೆ ಸಮಾಧಾನ ನೀಡಿರಬಹುದು..... ಏಕೆಂದರೆ ಆ ಮರಣ ಸಂಕಟ ಅಷ್ಟೊಂದು ದಾರುಣವಾಗಿತ್ತು.

ಅದಾದ ಒಂದೆರಡುವಾರ ಕಳೆಯುವ ಮುನ್ನ ಮನೋರಮ ಗಂಡು ಮಗುವಿಗೆ ಜನ್ಮವಿತ್ತುದರಿಂದ ಸತ್ಯಭಾಮೆಯ ಕಾರ್ಯ ಚಟುವಟಿಕೆ ಇಮ್ಮಡಿಯಾಗಿ ಎಂದಿಗಿಂತ

ತುಂಬ ಲವಲವಿಕೆಯಾಗಿ ಕಂಡಳು. ಪರಮ ಸೌಭಾಗ್ಯದಿಂದ ಜೀವನ ರಂಗಕ್ಕೆ ಪಾದಾರ್ಪಣೆ ಮಾಡಿದ ನವಶಿಶು ಅವಳ ಮನೋಮಂದಿರದ ಮೇಲೆ ಮಾಂಗಲ್ಯದ ಮಳೆಗರೆದಿತ್ತು. ನಾನು ಆನಂದೋತ್ಸಾಹದಿಂದ ನುಡಿದೆ,

''ಶುಭೆ! ಇಂದು ನನ್ನ ಮನಸ್ಸಿಗೆ ತುಂಬ ಸಮಾಧಾನವಾಯಿತು!''

''ಜನ್ಮ ಸಾರ್ಥಕತೆಯ ಅನುಭವ ಪ್ರಪ್ರಥಮವಾಗಿ ಆಯಿತು!''

ಹವಳದ ಕುಡಿಯಂತಹ ತುಟಿಗಳಲ್ಲಿ ರಜತಧಾರೆ ಹರಿದಾಡಿದಂತೆ ಎಳೆ ನಗುವಿನ ಲಹರಿ ಹರಿದಾಡಿತು. ಅಶಾಂತಿಯ ಭೂತ ಅವಳ ಬಳಿ ಸುಳಿದರಲಿಲ್ಲ. ಅತ್ಯಂತ ಸಂಭ್ರಮ ವಿಶೇಷದಿಂದ ತಾಯಿ ಮಗುವಿನ ಆರೈಕೆ ನಡೆಸಿದ್ದಳು. ಸ್ನೇಹ ಮೃದು ಹೃದಯಗಳಲ್ಲಿ ಹೆಜ್ಜೇನಿನ ಧಾರೆ ಹರಿಯುತಿದ್ದುದನ್ನು ಕಂಡಾಗ ನನ್ನ ಮನಸ್ಸು ಸಂತೋಷಾಮೃತವುಂಡು ಹಗುರವಾಯಿತು. ಅವಳಿಗೆ ದೇವರು ಹೀಗೊಂದು ಜವಾಬ್ದಾರಿಯುತ ಆನಂದೋಲ್ಲಾಸವನ್ನು ನೀಡಿದುದು ತುಂಬ ಒಳ್ಳೆಯದಾಯಿತೆಂದುಕೊಂಡು ನಾನೆಂದೆ,

''ನಿನ್ನ ಮನೋಜನ್ಯವಾದ ಕಾಲ್ಪನಿಕ ಆಶಂಕೆ ದೂರವಾಯಿತಲ್ಲ, ಅಷ್ಟೇ ಸಾಕು. ದೇವರು ಇದೇ ರೀತಿಯಲ್ಲಿ ನಿನ್ನ ಮನಸ್ಸಿಗೆ ಶಾಂತಿಯನ್ನು ಮುಂದೆಯೂ ನೀಡಲಿ.''

ಮಗುವಿನೊಡನೆ ಲಲ್ಲೆಗೈಯ್ಯುತಿದ್ದ ಅವಳು ನನ್ನೆಡೆಗೆ ಅಪಾಂಗವನ್ನು ಹರಿಸಿ ಸಮಾಧಾನ ಶೋಭೆಯಿಂದ ಎಳೆನಗು ಬೀರಿದಳು. ಬಾಯಿ ತೆರೆದು ಏನೂ ಹೇಳಲಿಲ್ಲ.

''ನಿನ್ನ ಹರಿತವಾದ ಮನಸ್ಸಿಗೆ ಸಾಕಷ್ಟು 'ವೇಗ' ಸಾಲದೆ ನೀನು ಇಷ್ಟು ದಿನ ನರಳುತಿದ್ದೆ. ಈಗ ಕೈತುಂಬ ಕೆಲಸ; ಹಾಳು ಚಿಂತೆಗಳಿಗೆ ಅವಕಾಶವೇ ಇಲ್ಲ. ಇಲ್ಲಿ ಮುಗಿಸಿ ಕಾಲೇಜಿಗೆ ಓಡಬೇಕು! ಅದಕ್ಕೇ ನಾನು ಅಂದದ್ದು ಸಂಸಾರ ಕಟ್ಟಿಕೊ ಎಂದು!''

ನನ್ನ ಮುಖಭಾವದಲ್ಲಿ ಹರಿದಾಡುತಿದ್ದ ತುಂಟತನವನ್ನು ಗಮನಿಸಿ ಅವಳೆಂದಳು, ''ನೋಡುತ್ತಿರು!''

''ನೋಡುವುದೊಂದೇ ಅಲ್ಲ. ಈಗಲೇ ಶುಭವನ್ನೂ ಹಾರೈಸುವೆ!''

ಅವಳು ಕಿಲಕಿಲನೆ ನಕ್ಕು ಬಿಟ್ಟಳು.

ನಾನು ಸವಿನಗೆಯಲ್ಲಿ ಪಾಲ್ಗೊಂಡೆ. ಕಿಲಕಿಲ ನಿನಾದ ತಂಗಾಳಿಯಲ್ಲಿ ತೇಲಿ ಹೋಯಿತು.

ಆನಂತರ ಸತ್ಯಭಾಮ ಏನೋ ಒಂದು ರೀತಿಯ ಗಂಭೀರ ವಿಶೇಷದಿಂದ ಮಧುರ ಕಂಠವನ್ನು ಹರಿಯ ಬಿಟ್ಟಳು,

''ಮೊದಲಿನಿಂದಲೂ ನಿನಗೆ ಅಳತೆ ಮೀರಿ ಮಾತಾಡುವ ಅಭ್ಯಾಸ ಬಲದಿಂದ ಮನದ ದುಗುಡವನ್ನು ಸುಲಭವಾಗಿ ಸೂರೆಗೊಳ್ಳುತ್ತಿ; ಶರೀರ ಲವಲವಿಕೆಗೊಳ್ಳುತ್ತದೆ. ಆದರೆ ನನ್ನದು ಹಾಗಲ್ಲ, ಹೆಚ್ಚು ಮಾತಾಡುವ ಅಭ್ಯಾಸವಿಲ್ಲ. ಸೂಕ್ತಾಸೂಕ್ತತೆಗಳ ತುಲನೆಯಲ್ಲಿ ಹೊತ್ತು ಜೀರ್ಣವಾಗುತ್ತದೆ.''

ಅವಳ ವಾಕ್ಸರಣಿಯ ಸಜೀವ ಸತ್ಯವನ್ನು ಗಮನಿಸಿದಾಗ 'ನಿಜ' ಎನಿಸಿದರೂ ಅದರಿಂದ ಅವಳು ಯಾವ ಸುಖ ಪಟ್ಟಿದ್ದಾಳೆ ಎಂಬ ಪ್ರಶ್ನೆ ತಟ್ಟನೆ ಸಂಭವಿಸಿತು. ಏನಾದರೂ ಹೇಳೋಣವೆಂದರೆ ಮನಸ್ಸು ಬರಲಿಲ್ಲ. ನನ್ನ ಅಭ್ಯಾಸ ದೋಷ ನನಗೆ ಗೊತ್ತು. ಆದರೆ ಅದೊಂದು ರೀತಿಯಲ್ಲಿ ಹೊತ್ತು ಕಳೆಯಲು ನನಗೆ ಸಹಾಯ ಮಾಡುತ್ತದೆ. ಎಂ.ಎ., ಓದಿ ನಾಲ್ಕು ಗೋಡೆಯ ಮಧ್ಯೆ ದೇಹವನ್ನು ಸವೆಸುವ ಅಸಹಾಯಕತೆಗೆ ಅದೊಂದು ಊರುಗೋಲು. ಅಂತಲೇ ನನ್ನ ದೋಷವನ್ನು ಗಮನಿಸಿದರೂ ಗಮನಿಸದಂತಿರುವುದು ಪರಮಲೇಸು. ನಾನು ಜೀವನದಲ್ಲಿ ಸುಖಿಯಾಗಿಲ್ಲ ಎಂಬುದನ್ನು ಸತ್ಯಭಾಮಾ ಮನಗಂಡಿದ್ದಾಳೆ. ಅವಳಿಗೆ ಹೊಸದಾಗಿ ಹೇಳುವುದೇನೂ ಉಳಿದಿಲ್ಲ. ನಾನು ಸುಮ್ಮನಾದೆ.

ಅನಂತರ ನಾಲ್ಕು ತಿಂಗಳು ನಿರಾತಂಕವಾಗಿ ಉರುಳಿದುವು. ನನ್ನ ಸಂಸಾರ ತಾಪತ್ರಯಗಳಿಂದ ಸತ್ಯಭಾಮಳ ಮನೆಯ ಕಡೆ ಹೋಗಲಾಗಲಿಲ್ಲ. ಅವಳೂ ಈ ಕಡೆ ಬರಲಿಲ್ಲ. ಅವಳು ಬರುವುದು ಅತ್ಯಂತ ಅಪರೂಪವೇ ಆದ್ದರಿಂದ ಆ ಬಗ್ಗೆ ಚಿಂತೆ ಹಚ್ಚಿಕೊಳ್ಳುವ ಪ್ರಸಂಗ ಸಹ ಬರಲಿಲ್ಲ. ಅವಳ ನೆನಪು ಚಿತ್ತ ಪ್ರಾಕಾರದಲ್ಲಿ ಮೂಡಿದಾಗಲೆಲ್ಲ ತರ್ಕವಿತರ್ಕಗಳೇಳುತ್ತಿದ್ದುವು. ಸಿಂಹಾವಲೋಕದಲ್ಲಿ ಮೈಮರೆಯುತಿದ್ದೆ. ಒಡಲು ನೂರಾರು ಆಶಯಗಳ ಬೀಡಾಗುತಿತ್ತು.

ಇಂದು ಅನಿರೀಕ್ಷಿತವಾಗಿ ನನ್ನ ತಂಗಿ ಮದರಾಸಿನಿಂದ ಬಂದಿಳಿದಳು. ಅವಳನ್ನು ಆದರದಿಂದ ಸ್ವಾಗತಿಸುವಾಗ ಮನಃಪ್ರಾಣಗಳು ಉಲ್ಲಸಿತವಾದುವು. ಬೆಳಗಿನ ಗಡಿಬಿಡಿಯ ಸಮಯ ಕಳೆದ ನಂತರ ಅವಳು ಅತ್ಯಂತ ಆಸ್ಥೆಯಿಂದ ಕೇಳಿದಳು,

''ಸತ್ಯಭಾಮೆಯ ಮನೆಗೆ ಹೋಗಿ ಬರೋಣವೇ? ಅವಳನ್ನು ನೋಡದೆ ತುಂಬ ದಿನಗಳಾದುವು.''

ಈ ನಡುವೆ ನಮ್ಮ ನಮ್ಮ ಭೇಟಿ ನಡೆದಿರಲಿಲ್ಲವಾದುದರಿಂದ ನನಗೂ ಉತ್ಸಾಹ ಮೂಡಿತು.

ಪಶ್ಚಿಮ ದಿಗ್ದೇಶದಲ್ಲಿ ಸಂಧ್ಯಾ ಸೂರ್ಯ ಮಾಂಗಲ್ಯದ ಮಳೆಗರೆಯುತಿದ್ದ. ಆಕಾಶ ಸ್ವರ್ಣಗೆಂಪಾಗಿ - ಹಳದಿಗೆಂಪಾಗಿ - ನೀಲಿಗೆಂಪಾಗಿ ಬಣ್ಣಬದಲಿಸುತಿತ್ತು. ಶೀತಲ ವಾತಾವರಣ ತನಿಗಂಪಾಗಿದ್ದರೂ ನಗರ ವಲಯದ ಗದ್ದಲದಿಂದ ಹಾದಿ ಸಾಗುತ್ತಲೇ ಇಲ್ಲ. ಇಪ್ಪತ್ತು ನಿಮಿಷಗಳ ಹಾದಿ ನಿಧಾನಗತಿಯಲ್ಲಿ ಕಳೆಯಿತು. ಅವಳ ಮನೆಯನ್ನು ಮುಟ್ಟಿದಾಗ ಬಾಗಿಲಲ್ಲಿ ಬೀಗ ಜೋಲಾಡುತ್ತಿದ್ದುದನ್ನು ಕಂಡು ಉತ್ಸಾಹವೆಲ್ಲ ಜರ್ರನೆ ಇಳಿದು ಹೋಯಿತು. ಹಾಗೇ ಹಿಂದಿರುಗಿದೆವು.

''ಬಹುಶಃ ಮನೋರಮೆಯನ್ನು ಮದರಾಸಿಗೆ ಬಿಟ್ಟು ಬರಲು ಹೋಗಿರಬಹುದು'' ಎಂದೆ ನಾನು.

''ಇರಬಹುದು....'' ಅನುಮೋದಿಸಿದಳು ಶಾಂತ.

''ಶಾರದಾದೇವಿ ಕಾಹಿಲೆ ಬಿದ್ದಾಗಿನಿಂದ ಈಚೆಗೆ ಸತ್ಯಭಾಮ ಎಷ್ಟೋ ಸುಧಾರಿಸಿಕೊಂಡಿದ್ದಳು ಎನ್ನಬಹುದು. ಅದರ ಮೊದಲು ಏನೋ ಒಂದು ರೀತಿಯ ಮಾನಸಿಕ ವೇದನೆ ಬಲಿತು ಅಶಾಂತಿಯಿಂದ ನರಳುತಿದ್ದಳು. ಈಚೆಗೆ ಪರವಾಯಿಲ್ಲ.''

''ಅವಳು ಮೊದಲಿಂದಲೂ ಸ್ವಲ್ಪ ಹಾಗೆಯೇ ತಾನೆ?''

''ಮೊದಲಿನಂತಿಲ್ಲವೇ ಇಲ್ಲ. ಈಚೆಗೆ ತುಂಬ ಜಾಸ್ತಿ.''

''ಸ್ವತಂತ್ರ ಜೀವಿ ಮತ್ತೇಕೆ ಚಿಂತೆ?''

''ಅದೇ ಆಶ್ಚರ್ಯ!''

ಮರುದಿನ ಬೆಳಿಗ್ಗೆ ಮನೆಕೆಲಸ ಮುಗಿಸಿ ಹೊರ ಬಂದಾಗ ಮುಂಬಾಗಿಲಿನಲ್ಲಿ ಟಪ್ಪಾಲಿನವನ ದರ್ಶನವಾಯಿತು. ಅವನು ಕೆಲವು ಕಾಗದಗಳನ್ನು ಕೈಗಿಟ್ಟು ಹೋದ. ನಾನು ವಂದನೆಯನ್ನರ್ಪಿಸಿ ಒಳ ಬಂದೆ. ಶಾಂತ ಪತ್ರಿಕಾವಲೋಕನದಲ್ಲಿ ನಿಮಗ್ನಳಾಗಿದ್ದಳು. ನನ್ನ ಹೆಸರಿಗೆ ಬಂದಿದ್ದ ಹಸಿರು ಲಕೋಟೆಯನ್ನು ಅತ್ಯಂತ ಆಸ್ಥೆಯಿಂದ ಒಡೆದೆ,

....ನಾನು ಬೆಂಗಳೂರನ್ನು ಬಿಡುವ ಮುನ್ನ ನಿನ್ನನ್ನೊಮ್ಮೆ ನೋಡಬೇಕೆಂದು ಎರಡು ಮೂರು ಬಾರಿ ಯೋಚಿಸಿದೆ. ಆದರೆ ಸಮಯವೇ ದೊರೆಯಲಿಲ್ಲ. ಬಹುಶಃ ನಾನೂ ಸಹ ಸ್ವಲ್ಪ ಅವಸರ ಪಟ್ಟಿರಬಹುದು. ಕಾರಣವೇನೇ ಇರಲಿ, ನಿನ್ನನ್ನು ನೋಡದೆ ಬಂದುದಕ್ಕೆ ಕ್ಷಮೆ ಕೋರುವೆ....

ತಂಗಿಯ ಜೀವನ ತುಂಬಿತು. ತಮ್ಮನಿಗೆ ಕೆಲಸವಾಯಿತು. ಅಮ್ಮ ಹೊರಟು ಹೋದರು. ಇನ್ನು ನಾನು ಮಾಡಬೇಕಾದ ಕೆಲಸವೇನೂ ಅಲ್ಲಿ ಉಳಿಯಲಿಲ್ಲ. ಆತ್ಮ ಸಂತೃಪ್ತಿಯಿಂದ ಕೆಲಸಕ್ಕೆ ರಾಜೀನಾಮೆ ಕೊಟ್ಟೆ. ವೃತ್ತಿಯಿಂದಾಗಲಿ, ಹಣದಿಂದಾಗಲಿ,

ಸ್ವಜನರಿಂದಾಗಲೀ ಜೀವನ ಶಾಂತಿ ಪಡೆಯುತ್ತೇವೆಂಬುದು ಕನಸಿನ ಮಾತು. ಅಂತಲೇ ಶಾಂತಿಯನ್ನರಸುತ್ತ ಇಷ್ಟುದೂರ ಬಂದಿರುವೆ. ಈ ಅತೃಪ್ತ ಆತ್ಮಕ್ಕೆ ಶಾಂತಿಯನ್ನು ಒದಗಿಸಲಾರದೆ ಹೋದೆನೆಂದರೆ ಹುಚ್ಚಾಗಿ ಬಿಡಬಹುದು; ಅಥವಾ ಅದ್ಭುತ ರೋಗಕ್ಕೆ ಒಳಗಾಗಬಹುದು.... ಎಂದರೆ ನೀನು ಖಂಡಿತ ನನ್ನನ್ನು 'ಹೇಡಿ' ಎನ್ನುತ್ತಿ ನನಗೊತ್ತು. ಆದರೆ ಆ ಹೇಡಿತನವೇ ನನ್ನನ್ನು ಅನೇಕ ದುರ್ಭರ ಪ್ರಸಂಗಗಳಲ್ಲಿ ಅತ್ಯುತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬಂದಿದೆ. ಅಂತಲೇ ಭಗವಂತನನ್ನು ಪ್ರಾರ್ಥಿಸುವಾಗಲೆಲ್ಲ ನನ್ನನ್ನು 'ಹೇಡಿ' ಯಾಗಿಯೇ ಇಟ್ಟಿರೆಂದು ಪ್ರಾರ್ಥಿಸುವುದನ್ನು ಮರೆಯುವುದಿಲ್ಲ.

ಇರಲಿ, ಈ ಪುರಾಣವನ್ನೇ ಮುಂದುವರಿಸಿ ನಿನ್ನ ಮನಸ್ಸಿಗೆ ಬೇಸರ ಮೂಡಿಸುವುದು ನನಗೆ ಇಷ್ಟವಿಲ್ಲ. ನಿನ್ನ ಸಂಸಾರವನ್ನು ಉದ್ಧರಿಸಬೇಕಾದ ಗೃಹಿಣಿ ನೀನು.... ನಿನ್ನ ದೈಹಿಕ ಆರೋಗ್ಯ ಮಾನಸಿಕ ಆರೋಗ್ಯ ಉತ್ತಮವಾಗಿದ್ದಲ್ಲಿ ನಿನ್ನ ಜೀವನ ಜಹಜು ಸುಖವಾಗಿ ಕಡೆ ಹಾಯುತ್ತದೆ. ಆದ್ದರಿಂದ ನೀನು ನನ್ನಂತೆ ಮನಸ್ಸಿಗೆ ಯಾವ ಚಿಂತೆಯನ್ನೂ ಹಚ್ಚಿಕೊಳ್ಳಬೇಡ. ನಿನ್ನ ಕ್ಷೇಮಕ್ಕಾಗಿ ಪ್ರಾರ್ಥಿಸುವೆ.

ಜೀವನದಲ್ಲಿ ಶಾಂತಿಯನ್ನು ಪಡೆಯಲಾಗದೆ ತೊಳಲಿ ಬಳಲಿ ಇಲ್ಲಿಗೆ ಯಾತ್ರಾರ್ಥಿಯಾಗಿ ಬಂದೆ. ಒಂದು ವಿಧವಾದ ಅವಶ ಜಡಿಮೆಯಿಂದ ಭಾರಾಕ್ರಾಂತವಾಗಿದ್ದ ಶರೀರ ಈಗ ಹಗುರವಾಗುತ್ತಿದೆ. ಕದಡಿ ಬಗ್ಗಡವಾಗಿದ್ದ ಮನಸ್ಸು ಈಗೀಗ ತಿಳಿಯಾಗುತ್ತಿದೆ. ಏನೋ ಒಂದು ರೀತಿಯ ಸ್ವಪ್ನಾವೇಶದ ಮಾಯೆ ಹೆಜ್ಜೆ ಹೆಜ್ಜೆಯನ್ನೂ ಪ್ರಕ್ಷುಬ್ಧಗೊಳಿಸುತಿತ್ತು. ಎದೆಯನ್ನು ಗಾಣಕ್ಕೆ ಕೊಟ್ಟು ಕಬ್ಬಿನಂತೆ ಹಿಂಡುತಿತ್ತು. ಈಗ ಆ ಮಾಯೆಯಿಂದ ಬಿಡುಗಡೆ ಹೊಂದಿ ಶಾಂತಿಯ ಸುಖ ಸಂಪತ್ತಿನ ಮೇಲೆ ಮನಃಪ್ರಾಣಗಳಿಗೆ ವಿಶ್ರಾಂತಿ ಪಡೆಯುತ್ತಿರುವೆ.

ಈಗ ನಾನಿರುವುದೆಲ್ಲಿ? ಎಲ್ಲಿಗೆ ಬಂದಿರುವೆ ಎಂದು ನಿನ್ನನ್ನು ಕೇಳಿದರೆ ನೀನು ಖಂಡಿತ ಊಹಿಸಲಾರೆ. ಬೆಂಗಳೂರಿಂದ ನೇರವಾಗಿ ಹೃಷಿಕೇಶಕ್ಕೆ ಬಂದೆ. ಅಲ್ಲಿ ಒಂದು ತಿಂಗಳು ಇದ್ದೆ. ಈಗ ಬುದ್ಧಗಯಾದಲ್ಲಿರವೆ! ಭಗವಾನ್ ಬುದ್ಧ ದೇವ ಚೆಲ್ಲಿ, ಸಿಂಪಡಿಸಿ ಹೋದ ಅಪರಿಮಿತ ಧರ್ಮಪರಿಮಳ ತನುಮನಗಳನ್ನು ಪುಷ್ಪಸೌರಭ ಮುತ್ತುವಂತೆ ಮುತ್ತುತ್ತದೆ. ಆತನ ಭಾವಧಾರೆ-ವಾಕ್ಸರಣಿ ಹರಡಿದ ನವುರಾದ ನರತಂತುಗಳಿಂದ ಮನೋಲ್ಲಾಸ ಪಡೆಯುತ್ತಿರುವೆ.... ಆತನ ಸೌಮ್ಯಮೂರ್ತಿ ಅಕ್ಷಿಪಟಲದಲ್ಲಿ ನೆಲೆನಿಂತಿದೆ. ನಾನು ಆತ್ಮಪೂರ್ವಕವಾಗಿ ಬಯಸಿದ ಶಾಂತಿಯನ್ನು

ಸುಲಭವಾಗಿ ಪಡೆಯುವ ಸಾಧನೆ ಇಲ್ಲಿದೆ. ನಾನಂತೂ ಈಗ ಪೂರ್ಣ ಸುಖಿ. ನಾನು ಎಲ್ಲೇ ಇದ್ದರೂ ನಿನ್ನನ್ನು ಆಗಾಗ ನೆನೆಸಿಕೊಳ್ಳುವೆ. ನಿನ್ನ ತಂಗಿ ಶಾಂತಳಿಗೆ ನನ್ನ ಶುಭಾಶಯಗಳನ್ನು ತಿಳಿಸು....

ಕಾಗದವನ್ನು ಓದಿದೆ; ಮತ್ತೆ ಮತ್ತೆ ಓದಿದೆ. ಪುನಃ ಪುನಃ ವಿಷಯ ತಲೆಯಲ್ಲಿ ನರ್ತಿಸತೊಡಗಿತು ಮನಃಪ್ರಾಣಗಳು ಅಚ್ಚರಿಯ ಬೀಡಾದುವು. ಮೂರ್ತಿಮತ್ತಾಗಿ ಅಲುಗದೆ ನಿಂತುಬಿಟ್ಟೆ.... ಈ ಕಾಲದಲ್ಲಿ ಕೆಲಸ ಸಿಗುವುದೇ ಕಷ್ಟ. ಅಂತಹದರಲ್ಲಿ ಸಕಲ ವಿಧದಲ್ಲೂ ಸುಖವಾಗಿದ್ದ ಅವಳು ತನ್ನ ಹಾದಿಗೆ ಮುಳ್ಳು ನೆಟ್ಟುದುದು ತುಂಬ ಖೇದವುಂಟಾಯಿತು. ಪತ್ರದ ಸಾರಾಂಶವನ್ನು ತಿಳಿದು ಓದುತ್ತಿದ್ದ ಪತ್ರಿಕೆಯನ್ನು ಅಲ್ಲೆ ಬಿಟ್ಟು ಆಶ್ಚರ್ಯಾವೇಗದಿಂದ ಎದ್ದು ಬಂದು ಶಾಂತಿ ಕೇಳಿದಳು,

''ಏನಮ್ಮ ಅದು?''

ನಾನು ಕಾಗದವನ್ನು ಅವಳ ಕೈಗಿಟ್ಟೆ, ಪ್ರತಿಯಾಗಿ ಏನು ಹೇಳಲೂ ಮನಸ್ಸು ಬರಲಿಲ್ಲ. ಅಕ್ಷಿಪಟಲದ ಮೇಲೆ ಅವಳ ಮನಮೋಹಕ ನಿಲುವು ಮೂರ್ತಿಮತ್ತಾಗಿ ಲಾಸ್ಯವಾಡಿತು. ಹಲವಾರು ವರ್ಷಗಳ ಅವಳ ಒಡನಾಟ ಅವಳ ವಿಚಾರಧಾರೆ- ಅವಳ ಸತ್ಯಾನ್ವೇಷಣೆ ಗರಿಗೂಡಿ ಮೈವೆತ್ತು ಸ್ಮರಣೆಯ ಹಾದಿಯಲ್ಲಿ ಸಾಗಿ ಹೋದುವು. ಎದೆಯಾಳದಲ್ಲಿ ಬಿಸಿಯುಸಿರು ಸದ್ದಿಲ್ಲದೆ ಹರಿದಾಡಿತು.

ಶಾಂತಿ ಮೈಮರವಟ್ಟಂತೆ ನಿಶ್ಚಲವಾದ ಭಂಗಿಯಲ್ಲಿ ನಿಂತು ಕಾಗದವನ್ನು ಓದಿಕೊಂಡು ತನ್ನ ಅಭಿಪ್ರಾಯವನ್ನೆಲ್ಲಾ ಒಂದೇ ಬಾರಿಗೆ ಹೊರ ಹಾಕಿದಳು ''ಹೇಡಿ.... ಶುದ್ಧ ಹೇಡಿ!''

''ಒಮ್ಮೆಲೇ ಆ ತೀರ್ಮಾನ ಸರಿಯಲ್ಲ. ಮೊದಲು ಅವಳ ಎತ್ತರಕ್ಕೆ ನಾವೂ ಏರಬೇಕು!''

''ಆಗಲಿ, ಅವಳು ಬುದ್ಧಗಯಾಕ್ಕೆ ಹೋದುದನ್ನು ನಾನು ತಪ್ಪೆನ್ನುವುದಿಲ್ಲ. ಮೊಟ್ಟಮೊದಲೇ ಪ್ರಾಪಂಚಿಕ ಸಂಬಂಧವನ್ನು ಸಂಪೂರ್ಣಕಡಿದುಕೊಂಡು ಹೋದುದರಲ್ಲಿ ಅರ್ಥವಿಲ್ಲ!''

ನನ್ನ ಚಿತ್ತ ಯೋಚನೆಯಲೆಗಳ ಸುಳಿಯಲ್ಲಿ ಸಿಕ್ಕಿಕೊಂಡಿತ್ತು; ತುಟಿಗಳು ಬಿರಿಯಲಿಲ್ಲ?''

''ಅದನ್ನೆಲ್ಲಾ ಯೋಚಿಸಲಾರದಷ್ಟು ಮೂರ್ಖಳಲ್ಲ ಸತ್ಯಭಾಮಾ.''

''ಮೂರ್ಖಳಲ್ಲದೆ ಇರಬಹುದು. ಆದರೆ ಆತುರದ ಕ್ರಮ ಕೈಕೊಂಡಿದ್ದಾಳೆ ಎಂದರೆ ತಪ್ಪಲ್ಲ!'' ಎಂದಳು ಶಾಂತಿ. ಉತ್ತರ ಖಡಾಖಂಡಿತವಾಗಿ ಹೊಮ್ಮಿದಾಗ ಭಾವೋದ್ವೇಗಭರಿತ ನಯನಗಳಲ್ಲಿ ಮಿಂಚಿನಂತಹ ಹೊಳಪು ಮೂಡಿತು.

''ಅದನ್ನು ಅವಳು ಆಗಲೇ ಹೇಳಿಕೊಂಡಿದ್ದಾಳೆ. ನೀನು ಅಷ್ಟೊಂದು ಸುಲಭವಾಗಿ ಅರ್ಥೈಸಬೇಡ. ಅವಳದು ವಿಕಸಿತ ಆತ್ಮ!''

''ಹಾಗಿದ್ದರೆ.....'' ಮಾತನ್ನು ಅಷ್ಟಕ್ಕೇ ತುಂಡುಗಡಿದು ಬಾಯಿಗೆ ಬೆರಳನ್ನಿಟ್ಟುಕೊಂಡಳು ಶಾಂತಿ. ಅರಳುಗಂಗಳಲ್ಲಿ ತುಂಟತನ ನಲಿಯುತ್ತಿತ್ತು.

''ಅದೇನು ಅಂತಾದ್ದು?... ಏಕಷ್ಟು ವ್ಯಂಗ್ಯ?''

''ನಿನ್ನ ಸ್ಥಿತಿ ನೋಡಿದರೆ ನೀನು ಅವಳ ಹಾದಿ ಹಿಡಿಯುವಂತೆ ತೋರುತ್ತೆ!''

''ಸರಿ ಬಿಡು; ನೀನು ನಾನೂ ಪ್ರಯತ್ನಿಸಿದರೂ ನಮ್ಮಿಂದಾಗುವುದಿಲ್ಲ. ಅಂತಹ ಮಾನಸಿಕ ದೃಢತೆ ಇದ್ದಿದ್ದರೆ ಈ ಸಂಸಾರದಲ್ಲಿ ನಾನು ಕೀಟದಂತೆ ನರಳುತ್ತಿರಲಿಲ್ಲ. ಯಾರಾದರೂ ಬಾಗಿಲು ತೆರೆದು ಹೊರಬಿದ್ದರೂ ಮಾನಸಿಕ ದೌರ್ಬಲ್ಯ ಕಾಲಿಗೆ ತೊಡರುತ್ತದೆ. ಬುದ್ಧಿಯ ಸಂಪುಟ ಕಳಚಿ ಬೀಳುತ್ತದೆ ಮುಖ್ಯವಾಗಿ ಸಾಮಾನ್ಯರಿಗೆ ಆ ಮಹತ್ತರ ಶಕ್ತಿ ಬರುವುದಿಲ್ಲ.''

''ಬಿಡು, ಬಿಡು! ನೀನಿನ್ನೂ ಚಿಗುರಿಗಿಂತ ಚಿಗುರು! ಯಾವುದನ್ನೂ ಈಗಾಗಲೇ 'ಮಹತ್ತರ' ಎಂದು ನಿರ್ಣಯಿಸುವುದು ಸರಿಯಲ್ಲ. ರಣಹೇಡಿತನಕ್ಕೆ ಗಂಭೀರನಾಮ ಅಷ್ಟೆ. ಯೋಚಿಸಿ ನೋಡು! ನೀನು ಆತುರ ಪಡಬೇಡ. ಕೈಯಲ್ಲಿ ಸಾಗದೆ ಯಾವುದೋ ಊಹಾಲೋಕವನ್ನುಕಲ್ಪಿಸಿಕೊಂಡು ಜೀವನದ ಪರಿಸರದಿಂದ ಓಡಿ ಹೋದರೆ ಒಮ್ಮೆಲೇ ಅಮರತ್ವವನ್ನು ಪಡೆಯಲಾಗುವುದಿಲ್ಲ. ಬಯಕೆ ಸುಲಭ; ಸಾಧನೆ ಸುಲಭವೇ?.... ಹಾಗೇ ಯೋಚಿಸಿ ನೋಡಿದರೆ ಈ ಮನುಷ್ಯತ್ವದಿಂದಲೇ ನಾವು ಕೈಗೆಟುಕಿಸಿಕೊಳ್ಳಬಹುದಾದ ಆತ್ಮಾನಂದ ಉಂಟೇ ಉಂಟು! ಅದಕ್ಕೆ ಬುದ್ಧಗಯಾಕ್ಕೆ ಹೋಗಬೇಕೆ?'' ಅತ್ಯಂತ ದೃಢಕಂಠದಿಂದ ಹೇಳಿದಳು ಶಾಂತ.

ನನಗೆ ಏನು ಹೇಳಬೇಕೋ ಹೊಳೆಯಲಿಲ್ಲ. ''ನೀನು ಚಿಗುರಿಗಿಂತ ಚಿಗುರು!'' ಎಂಬ ವಾಗ್ಬಾಣ ಮನಃಕುಟ್ಮಲಕ್ಕೆ ಚೆನ್ನಾಗಿ ನಾಟಿತ್ತು. ತೆರೆದ ಗವಾಕ್ಷಿಯಲ್ಲಿ ತೂರಿದ ದೃಷ್ಟಿ ದೂರ ದಿಗಂತದಲ್ಲಿ ನೆಟ್ಟಿತು. ಹಾಗೇ ನಿಂತೆ. ವರ್ಣವರ್ಣಾಂಕಿತ ದಿಗಂತದಲ್ಲಿ ಏಕಾಂಗಿಯಾಗಿ ಹಾರುತ್ತಿದ್ದ ಕಾಮಳ್ಳಿಯಂತಹ ಕಪ್ಪುಪಕ್ಷಿ ದೃಷ್ಟಿಗೆ ಬಿತ್ತು. ರೆಕ್ಕೆ ಬಿಚ್ಚಿ ವರ್ತುಲಾಕಾರವಾಗಿ ಗಾಳಿಯಲ್ಲಿ ತೇಲುತ್ತಿರುವ ಅದರ ಎಣೆಯಿಲ್ಲದ ಸಾಹಸದಲ್ಲಿ

ಯಾವ ಉದ್ದೇಶವಿತ್ತು? ಅದೂ ಸಹ ಊಹಾಲೋಕದ ಅಮರತ್ವವನ್ನು ಅರಸುತ್ತಿರಬಹುದೇ? ಅಥವಾ..... ಇರಲಿರಲಿ, ಜನ್ಮ ಜನ್ಮಾಂತರಗಳ ಸಂಸ್ಕಾರವೆಲ್ಲ ಒಂದುಗೂಡಿ ಬಂದಾಗ ಯಾವ ಅಭಿಲಾಷೆ ಯಾವ ಬಣ್ಣದಲ್ಲಿ, ಮೂಡುವುದೋ.... ಯಾವ ರೂಪದಲ್ಲಿ ಮೈ ತಳೆಯುವುದೋ....... ಯಾವ ಬಣ್ಣದ ಕನ್ನಡಿಯಿಂದ ನೋಡಿದರೆ ಆ ಬಣ್ಣವಾಗಿ ಕಾಣುವ ಈ ಜಗತ್ತಿನಲ್ಲಿ ಸಂಸ್ಕಾರ ಬುದ್ಧಿಗಳ ಸೂತ್ರ ಯಾವ ದಿಕ್ಕಿಗೆ ಎಳೆಯುತ್ತದೆ ಎಂಬುದನ್ನು ಊಹಿಸುವುದು ಕಷ್ಟ.

ಮನೋಮಂದಿರದಲ್ಲಿ ವಿಷಯ ಮಂಥನ ನಡೆಯುವಾಗ ವಿನೂತನ ಶಕ್ತಿಯಲಹರಿ ಹರಿದಾಡುತಿದ್ದಂತೆ ಭಾಸವಾದರೂ ಆತ್ಮೀಯ ಗೆಳತಿ ಸತ್ಯಭಾಮೆಯನ್ನು ಕಾಡುತಿದ್ದ ಆ 'ಅಶಾಂತಿ' ಎಂಬ ಪರಿತಾಪಕಾರೀ ವಸ್ತು ನನ್ನ ಕಿವಿಗಳ ಪರಿಸರದಲ್ಲಿ ತನ್ನಿರುವನ್ನು ಸಾರಿ ಸಾರಿ ಹೇಳುವಂತೆ ಝೇಂಕರಿಸುತಿತ್ತು.

ದೃಷ್ಟಿ ದೃಗ್ವಿಷಯದಾಚೆ ಮೆಲ್ಲಮೆಲ್ಲನೆ ಚಲಿಸಹತ್ತಿತು.

ಆದರೆ......!

ಮಹಮ್ಮದನ ಉಯಿಲು

ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲೇ ಶಾಂತಿವಾಡದ ಸುಂದರ ಉಡಿ....

ನಿಮ್ನೋನ್ನತ ಗಿರಿಶೃಂಗಗಳ ಹಚ್ಚ ಹಸುರಾಂತ ಪಾವನ ಚರಣ ತಲ....

ಅಸ್ತಮಿತ ರವಿಯ ರಾಗಾರುಣ ಛಾಯೆ ಪಶ್ಚಿಮ ದಿಗ್ದೇಶದಲ್ಲಿ ಓಕುಳಿ ಯೆರೆಚಿದಂತೆ ಸುಮನೋಹರ ವೈಖರಿಯಲ್ಲಿ ಜಾಲಜಾಲವಾಗಿ ಹರಡಿತ್ತು.

ದಿನಚರಿಯಿಂದ ಮುಕ್ತರಾದ ಪರಿಸರದ ರೈತರೆಲ್ಲ ಅರಳೀವೃಕ್ಷದ ಕಟ್ಟೆಯ ಮೇಲೆ ಕಲೆತು ಲೋಕಾಭಿರಾಮವಾಗಿ ಮಾತುಕತೆಯಲ್ಲಿ ತೊಡಗಿದ್ದರು. ಒಮ್ಮೆ ನಗೆ ಚಾಟಿಕೆಯ ಕಿಡಿಗಳು ಸಿಡಿದರೆ ಇನ್ನೊಮ್ಮೆ ಗಂಭೀರ ಸಂಭಾಷಣೆ ನಡೆಯುತಿತ್ತು. ಬೀಡಿ ಭಕ್ತರ ಕೈಯ್ಯಲ್ಲಿ ಬೀಡಿಗಳಿದ್ದುವು. ವೀಳೆಯದೆಲೆ ಭಕ್ತರ ಬಾಯಲ್ಲಿ ತುಂಬುಲದ ರಂಗು ಒಸರುತಿತ್ತು.

ದೂರದಲ್ಲಿ-ತನ್ನ ಜಮೀನಿನ ಕಡೆಯಿಂದ ತಾಟಗಾಲು ಹಾಕುತ್ತ ಬರುತಿದ್ದ ಮಹಮ್ಮದನ್ನು ಕಂಡು ಹಿರಿಯ ವ್ಯಕ್ತಿ ವ್ಯಂಗ್ಯವಾಗಿ ಅತ್ಯಂತ ನಿರ್ದಯತೆಯಿಂದ ಅಂದ,

''ಬಂದ ಕುಲಗೇಡಿ! ಇನ್ನೂ ಎಷ್ಟು ಮಂದಿಯ ಕತ್ತು ಹಿಸುಗಬೇಕೋದುಷ್ಟ!''

''ಆದರೂ ಎಷ್ಟು ಧೈರ್ಯದಿಂದ 'ನಾನು ಕೊಂದಿಲ್ಲ' ಅಂದ! ಅಬ್ಬಬ್ಬಾ! ಎಷ್ಟು ಸುಲಭವಾಗಿ ತಪ್ಪಿಸಿಕೊಂಡ!''

''ಅದೇ ಆಶ್ಚರ್ಯ! ಪೋಲೀಸರಿಗೆ ಚೆನ್ನಾಗಿ ತಿನ್ನಿಸಿದ್ದಾನೆ!''

''ಪಾಪ! ಅನ್ಯಾಯವಾಗಿ ಅವಳನ್ನು ಕೊಂದ!''

''ಧೂರ್ತ....!''

ಈ ಪ್ರಕಾರ ಮುಖರಿತ 'ಗುಸು ಗುಸು' ಆರಂಭವಾಯಿತು. ಕೆಲವರು 'ಥೂ' ಎಂದು ಅತ್ತ ಉಗುಳಿದರು. ಇನ್ನು ಕೆಲವರು ವ್ಯಂಗ್ಯ ನಗೆ ಬೀರಿ ಮೊಗ ತಿರುವಿದರು. ಕೆಲವರು ವಿನೋದವಾಗಿ ಕುಲುಕುಲು ನಗೆ ಹರಿಸಿದರು.ಕಣ್ಣುಗಳಲ್ಲಿ ತುಂಟಭಾವ ನಲಿಯುತಿತ್ತು.

ಮಹಮ್ಮದ ಅಲ್ಲಿಂದಲೇ ರೈತರ ಕೂಟವನ್ನು ಗಮನಿಸಿದ. ಒಮ್ಮಿಂದಮ್ಮೆಲೇ ಮನೋಮಂದಿರದಲ್ಲಿ ಹಲವಾರು ಆನೆಗಳು ನುಗ್ಗಿ ಬಂದಂತಾಯಿತು. ಅಪಾದ ಮಸ್ತಕವೂ ನವಿರು ನಿಮಿರಿನಿಂತುವು. ಒಡನೆ ದಶಕ ದಶಕಗಳ ಜೀವನ ಚರಿತ್ರೆಯೆಲ್ಲಾ ಚಿತ್ತಭಿತ್ತಿಯ ಮೇಲೆ ತಳಕ್ಕನೆ ಸುಳಿದಳಿಯಹತ್ತಿತು. ಅತ್ಯಂತ ದುರದೃಷ್ಟಕರವಾದ ಆ ಒಂದೊಂದು ಚಿತ್ರ ಫಲಕಗಳು ಹೃದಯವನ್ನು ಗಾಣಕ್ಕೆ ಕೊಟ್ಟಂತೆ ಹಿಂಡಿದುವು. ಶೋಕ ಭಾರದಿಂದ ತಲೆಬಾಗಿ ಹೆಜ್ಜೆಹಾಕಿದ. ಒಂದೊಂದು ಹೆಜ್ಜೆ ತೆಗೆಯುವಾಗಲೂ ಕಾಲಡಿಯ ಭೂಮಿ ಜರುಗಿ ಹೋಗುತ್ತಿರುವಂತೆ ಭಾಸವಾಯಿತು. ಮುಂದಿನ ಹಾದಿ ಯಾಂತ್ರಿಕವಾಗಿ ಸಾಗಿದಾಗ ಅರಳೀವೃಕ್ಷದೆಡೆಗೆ ಕಣ್ಣು ಹೊರಳಿಸದಂತೆ ಎಚ್ಚರಿಕೆ ವಹಿಸಿ ಮನೆಯ ಬಾಗಲ ಕೀಲಿಯನ್ನು ತೆರೆದು ಒಳಹೋದ. ಒಳಗಿನ ಕತ್ತಲು ಮೈಮೇಲೆ ಧಾಳಿ ಮಾಡಿತು. ಒಂದು ಕಾಲದಲ್ಲಿ ಮಡದಿ ಜೈನಾಬಿಯ ಮುಗುಳುನಗೆ ಅಲ್ಲಿ ಸ್ವಾಗತ ನೀಡುತಿತ್ತು. ಎಂಟು-ಹತ್ತು ವರ್ಷಗಳ ಫಾತೀಮಾ-ಲತೀಫಾ ಇವರ ಮಾತಿನ ಮಳೆ ಕರ್ಣದೇಶವನ್ನು ತುಂಬುತಿತ್ತು. ಇಂದು ವಸ್ತು ವಸ್ತುವೂ ಮೊಗ ತಿರುವುತ್ತಿವೆ. ಮನೆ ಒಡಲುರಿಸುವಂತೆ ಬಣಬಣ ಎನ್ನುತ್ತಿದೆ. ಯಾಂತ್ರಿಕವಾಗಿ ಟೋಪಿಗಳಚಿ, ಯಾಂತ್ರಿಕವಾಗಿ ಒಳಗಡೆ ನಡೆದ. ಪಾತ್ರೆ ಪಗಡಿಗಳು ಗೌರವ ಭೂತಳಾದ ಮಡದಿಯ ಚಿತ್ತಾರವನ್ನು ಪ್ರತಿಬಿಂಬಿಸಿದುವು. ಬೇಡ ಬೇಡವೆಂದರೂ ಚಂಚಲ ಚಿತ್ತ ಸುತ್ತಮುತ್ತ ಹರಿದಾಡಿತು. ನೋಟ ನೀರಸವಾಗಿ ಅತೀ ದೈನ್ಯತೆಯಿಂದ ವಸ್ತು ಸಮಸ್ತವನ್ನೂ ನಿಟ್ಟಿಸಿ ಹಿಮ್ಮರಳಿತು. ಪೀರ್‌ಸಾಬಿ ಅಡಿಗೆ ಮಾಡಿಟ್ಟು ಹೋಗುವುದಾಗಿ ಹೇಳಿದ್ದ. ಅವನು ಅಂತಹ ಆತ್ಮೀಯನೇನೂ ಅಲ್ಲ; ಸದ್ಗುಣಿಯೂ ಅಲ್ಲ; ನಿಷ್ಠಾವಂತನೂ ಅಲ್ಲ. ಜೈನಾಬಿ ಸ್ವರ್ಗವಾಸಿಯಾದಾಗಿನಿಂದ ಪ್ರಾಸಂಗಿಕವಾಗಿ ಅವನನ್ನು ನೇಮಿಸಿಕೊಂಡಿದ್ದ. ಅಂತರಾತ್ಮ ಒಲ್ಲದಿದ್ದರೂ ಪರಿಸ್ಥಿತಿಗೆ ತಲೆಬಾಗದೆ ವಿಧಿ ಇರಲಿಲ್ಲ. ನಡೆಯುವಷ್ಟು ದಿನ ನಡೆಯಲಿ ಎಂಬ ಭಾವನೆಯಲ್ಲಿ ದಿನಗಳು ಉರುಳುತಿದ್ದುವು. ಆ ಮನೆ ಭದ್ರವಾದುದೂ ಅಲ್ಲ. ಆಧುನಿಕವಾದುದೂ ಅಲ್ಲ. ಕತ್ತಲೆಯ ಜಾಲ, ಕಿಷ್ಕಿಂದಾ ಪಟ್ಟಣ, ಸೊಟ್ಟಪಟ್ಟ ಗೋಡೆ, ಹೆಂಚಿನ ಮಾಡು ಒಂದಕ್ಕೊಂದು ಪೂರಕವಾಗಿದ್ದುವು.

ಜೈನಾಬಿಯನ್ನು ಗೋರಿ ಮಾಡಿದನಂತರ ಹೆಣ್ಣುಮಕ್ಕಳಿಬ್ಬರನ್ನೂ ತಮ್ಮಲ್ಲಿಗೆ ಕರೆದುಕೊಡು ಹೋಗಲು ಸಿದ್ಧರಾದ ದುಃಖಿತ ಅತ್ತೆ ಮಾವಂದಿರು ಮಕ್ಕಳಿಗಾಗಿ ಜೈನಾಬಿಯ ನಗನಾಣ್ಯಗಳನ್ನು ಕೊಡಲು ಸ್ವತಃ ಬಾಯಿಬಿಟ್ಟು ಕೇಳಿದ್ದುಂಟು. ಸ್ನೇಹಿತರು, ಹಿರಿಯರು, ಸಮಕಾಲೀನರು ಮಕ್ಕಳಿಗೆ 'ಉಯಿಲು' ಬರೆದು ಬಿಡು

ಎಂದು ಬುದ್ಧಿವಾದ ಹೇಳಿದ್ದುಂಟು. ಆ ಎಲ್ಲಕ್ಕೂ ದೂರ್ಥತನದಿಂದ ಮಹಮ್ಮದ ಮೊಗ ತಿರಿವಿದ್ದ. ಅನಂತರ ಆ ಪ್ರಸ್ತಾಪವನ್ನು ಇನ್ನಾರು ಮಾಡಿರಲಿಲ್ಲವೇನೋ...... ಆದರೂ ಬೆನ್ನಹಿಂದೆ ಆತನ ಹೀನ ಚರಿತ್ರೆ ಪ್ರಸಂಗವಶಾತ್ ಬಾಯಿಂದ ಬಾಯಿಗೆ ನಗೆಪಾಟಲಾಗಿ ಹರಿಯುತಿತ್ತು; ಅಸಹ್ಯವಾಗಿ ಮೊಳಗುತಿತ್ತು.

ಜೈನಾಬಿ ಅಕಾಲ ಮರಣಕ್ಕೆ ತುತ್ತಾಗಿ ಆರು ತಿಂಗಳ ಮೇಲಾಗಿತ್ತು.

ಆತನ ಶಿಲಾಕಾಠಿಣ್ಯ ಹೃದಯದಲ್ಲಿ ತುಂಬಿದ ನಿರ್ದಯತೆ ಎಣೆಯಿಲ್ಲದ ದುರ್ಗುಣ ಮಡದಿಯನ್ನು ಸ್ವತಃ ಕೊಲೆಗೈದಿದ್ದಾನೆ ಎಂಬುದಕ್ಕೆ ಜೀವಂತ ಸಾಕ್ಷೀಭೂತವಾಗಿದ್ದುವು.

★ ★ ★ ★ ★

ಮಹಮ್ಮದ ಒಳಕೋಣೆಯಲ್ಲಿ ಪಲ್ಲಂಕದ ಮೇಲೆ ಬಿದ್ದುಕೊಂಡ. ಅದರ ಮೇಲೆ ಅವನ ಸುಖದುಃಖಗಳೆಲ್ಲ ನಲಿದಾಡಿದ್ದುವು - ಎಷ್ಟೆಷ್ಟು ವಿಶ್ರಾಂತಿಯನ್ನು ನೀಡಿತ್ತೋ ಅಷ್ಟೇ ವಿಷಮ ಫಲವನ್ನೂ ನೀಡಿತ್ತು. ಆ ಬಿದಿರಿನ ಮಂಚವನ್ನು ಜೈನಾಬಿಯ ತಂದೆ ಮಗಳಿಗಾಗಿ ಕೊಂಡುಕೊಟ್ಟಿದ್ದ. ಕೊನೆಯ ದಿನ ಅವಳು ಅದರ ಮೇಲೆಯೇ ಉಸಿರೆಳೆದಿದ್ದಳು. ಅಂದಿಂದಿಗೂ ಅದನ್ನು ಬದಲಿಸುವ ಗೋಜಿಗೆ ಹೋಗಿರಲಿಲ್ಲ. ಹಾಸಿಗೆ ಮುಗ್ಗುಲು ಹಿಡಿದಂತೆ ವಾಸನೆ ಬಡಿಯುತಿತ್ತು ಯಾವಾಗಲೂ ಕದ ಮುಚ್ಚಿರುತ್ತಿದ್ದುದರಿಂದ ಎಲ್ಲೆಡೆಯು ಅದೇ ದುರ್ಗಂಧ. ಒಗೆಯದ ಬಟ್ಟೆಗಳು ಅಶುಚಿಯಾದ ನೆಲ, ತೊಳೆಯದ ಪಾತ್ರೆಗಳು ಕಣ್ಣು ಹೊರಳಿಸಿದರೆ ಅಣಕಿಸುತ್ತವೆ.

ಜೈನಾಬಿ ಇರುವಂದು ಪ್ರದೋಷಕಾಲದಲ್ಲಿ ಏಳುತಿದ್ದಳು. ಕೆಲಸ ಕಾರ್ಯಗಳು ಸರಾಗವಾಗಿ ನಡೆಯುತ್ತಿದ್ದುವು. ಶ್ರಮ ಬಿಂದುಗಳಿಂದ ನಿಮಜ್ಜಿತವಾದ ಸ್ವಚ್ಛ ಹಣೆಯಮೇಲೆ ಎಂದೂ ಸೋಲದ ದೃಢ ನಿಶ್ಚಯ ಫಲಕ ಕಾಣಿಸುತಿತ್ತು. ಹೃದಯಬನದಲ್ಲಿ ಕೊನೆತನಕ ಸೆಣಸಿ ಸಾಯುವ ಅಭಿಲಾಷೆ ಘನೀಭೂತವಾಗಿತ್ತು. ಅಂತಲೇ ಆತನ ದುರ್ಗುಣಗಳ ಜೋಳಿಗೆಯನ್ನು ಕಿತ್ತೊಗೆಯಲು ಆತ್ಮಪೂರ್ವಕವಾಗಿ ಆಕೆ ಪ್ರಯತ್ನಿಸುತ್ತಿದ್ದಳು. ಅದರ ಪ್ರತಿಫಲ ಹೊಡೆತ-ಬಡಿತ. ಅವಳ ಸಮ ವಯಸ್ಕಳಾದ ಸುಲ್ತಾನ ಬೇಗಂ ಒಮ್ಮೆ ಅತ್ಯಂತ ವಿಶಾದವಾಣಿಯಲ್ಲಿ ಅಂದಿದ್ದಳು,

''ನೀನು ಬಹಳ ಗಟ್ಟಿ ಮನಸ್ಸಿನವಳು ಕಣೆ! ನಾನಾಗಿದ್ದಿದ್ದರೆ ಅದರ ರೀತಿಯೇ ಬೇರೆಯಾಗಿರುತಿತ್ತು.''

''ಅವನಿಗೆ ಬದಲಾಗಿ ನೀನೇ ತಲಾಕ್ ಕೊಟ್ಟು ಬಿಡುತಿದ್ದೆ!'' ತುಂಟ ನಗೆ ಬೀರಿದಳು ಜೈನಾಬಿ. ಹುಬ್ಬುಗಳು ಏರಿ ಇಳಿದುವು.

ಆ ಪ್ರಸಂಗ ಇಬ್ಬರ ತುಟಿಗಳಲ್ಲೂ ಹೂ ನಗೆಯನ್ನು ಅರಳಿಸಿತು.

ಇಂತಹ ಘಟನೆಗಳು ಆಕೆಯ ಜೀವಿತದಲ್ಲಿ ಎಷ್ಟು ಬಂದು ಹೋದುವೋ .... ಅವಕ್ಕೆ ಕೊನೆ ಮೊದಲೇ ಇಲ್ಲ. ಕೆಲವೊಮ್ಮೆ ವಿಚಿತ್ರ ರೋಗರುಜಿನಗಳಿಗೆ ತುತ್ತಾದಾಗ ಅಥವಾ ಇನ್ನಾವುದೇ ಅನಿವಾರ್ಯ ಪ್ರಸಂಗದಲ್ಲಿ ಇತರರ ಸಹಾಯ ಹಸ್ತವನ್ನು ಅವಳು ಬೇಡಿದ್ದುಂಟು. ಆದರೆ ಅದನ್ನು ದೊರಕಿಸುವಷ್ಟು ಉದಾರತೆ ಮಹಮ್ಮದನಲ್ಲಿರಬೇಕಲ್ಲ? ಅವಳು ನರಳುತ್ತಲೇ ಕೆಲಸ ಪೂರೈಸುವುದನ್ನು ನೋಡಿ ಬುರುಕ ಸಮೇತಳಾಗಿ ಸುಲ್ತಾನ ಬೇಗಂ ಬಂದು ನೆರವು ನೀಡುವಳು. ಆದರೆ ಆ ಬುರುಕದೊಳಗೆ ಇರುವುದು ಸ್ತ್ರೀಯೋ ಪುರುಷನೋ ಎಂಬ ಸಂಶಯ ಪಿಶಾಚಿ ಮನವನ್ನು ಆವರಿಸಿ ಮಹಮ್ಮದ ಹುಚ್ಚಾಗಿ ಬಿಡುವ. ಅಂತಹ....ನಾನಾ ಬಗೆಯ ಕಹಿ ಪ್ರಸಂಗಗಳು ಅಕ್ಷಿಪಟಲ್ಲದ ಮೇಲೆ ಸುಳಿದು ಹೋದುವು,

ಮಹಮ್ಮದ ನೀಳವಾದ ನಿಟ್ಟುಸಿರ್ಗರೆದ. ಮುಖಮಂಡಲದಲ್ಲಿ ಸ್ವೇದ ಬಿದಂಗಳು ತುಂತುರು ತುಂತುರಾಗಿ ಮೂಡಿದುವು. ಒರೆಸಿಕೊಳ್ಳಲೆಂದು ಕೈ ಹಸ್ತಗಳು ಯಾಂತ್ರಿಕವಾಗಿ ಚಲಿಸುವಾಗ ಹೃದಯ ಗಾರೆದ್ದು ಸಿಡಿಯುವಂತೆ ದಡದಡನೆ ಮಿಡಿಯುತಿತ್ತು. ಚಿಂತಾವಲಯದಲ್ಲಿ ಸ್ವರ್ಗೀಯ ಮಡದಿಯ ವ್ಯಕ್ತಿತ್ವ ಅಚ್ಚಳಿಯದಂತೆ ಒಡೆದು ಮೂಡಿ, ಆ ಅರಳುಗಂಗಳಲ್ಲಿ ಮಿನುಗುತಿದ್ದ ಹೊಳಪು ಅಂತರಂಗದ ಮಾಲಿನ್ಯವನ್ನು ಕೊಕ್ಕೆಯಂತೆ ಎಳೆಯಿತು. ಮಹಮ್ಮದ ಜಡೀಭೂತನಂತೆ ಬಿದ್ದುಕೊಂಡಿದ್ದು ವೇದನಾಪೂರ್ವಕವಾಗಿ ಸತೀ ಮಣಿಯನ್ನು ಬೇಡಿದ, ''ನನ್ನನ್ನು ಕ್ಷಮಿಸಿ ಬಿಡು. ನಾನು ಈ ಸಂಕಟ ನೋವು ಆಪಾದನೆಗಳನ್ನು ತಾಳಲಾರೆ!''

ಹಿ ಹಿ ಹಿ ಹ್ಹಿ ಹ್ಹೀ!

ಅರೆ! ಯಾರದು?

''ಯಾರಿರಬಹುದು ಹೇಳು?''

''ಜೈನಾಬಿ! ಎಲ್ಲೋ ಇದ್ದು ನನ್ನನ್ನೇಕೆ ಸುಡುತ್ತಿರುವೆ? ಬಾ.... ಈಗಲೇ ಬಂದು ಬಿಡು!''

''ನಾನು ಬಳಿಯಲ್ಲಿದ್ದಾಗ ಸ್ವಲ್ಪವಾದರೂ ತಿಳಿಯುತಿತ್ತೆ?''

''ಹೌದು, ನಾನಾಗ ಬಹಳ ತಪ್ಪು ಮಾಡಿರುವೆ.''

''ಮಡದಿಯ ಬೆಲೆ ಇಲ್ಲವಾದಾಗ ಮಾತ್ರ ತಿಳಿಯುತ್ತೆ!''

''ಆದುದು ಆಗಿ ಹೋಯಿತು. ಈಗ....''

''ಜೀವನ ಅಷ್ಟೊಂದು ಸುಲಭವಲ್ಲ.... ಇನ್ನಾದರೂ....''

''ನೀನು ಅಷ್ಟೊಂದು ಉಪಕಾರ ಮಾಡು!''

''ಮಿಂಚಿ ಹೋದ ಕಾರ್ಯಕ್ಕಾಗಿ ಚಿಂತಿಸಿ ಫಲವೇನು?''

''ಹಾಗಾದರೆ....?''

ಹಿ ಹಿ ಹಿ ಹ್ಹೀ!

''ನೀನು ಖಂಡಿತವಾಗಿಯೂ ನನಗೆ ದೊರಕಲಾರೆಯಾ?''

''ಇಲ್ಲ, ಇಲ್ಲವೇ ಇಲ್ಲ!''

''ಹಾಗಿದ್ದರೆ ಹೋಗು! ಹೊರಟು ಹೋಗು! ಇನ್ನು ನನ್ನನ್ನು ಕಾಡಬೇಡ!''

ಯಾವುದೋ ಕಾಣದ ಕೈ ಗಂಟಲನ್ನು ಅದುಮಿ ಹಿಡಿದಂತೆ ಉಸಿರು ಕಟ್ಟಿತು. ಕೊಸರಾಡಿ ಎದ್ದು ಕುಳಿತ. ಏನೋ ಒಂದು ಬಗೆಯ ಮೌನಶೋಕ ....ಇನ್ನೇನೋ ಒಂದು ರೀತಿಯ ಅಪರಿಮಿತ ಗ್ಲಾನಿ....ಮತ್ತೇನೋ ಒಂದು ಬಗೆಯ ರುದ್ರ ಗಂಭೀರ ಶಾಂತಿ....ತಲೆ ಛಿದ್ರ ಛಿದ್ರವಾಗುತ್ತಿರುವಂತೆ ತೋರುತಿತ್ತು. ಚಿಂತೆಯಾಳದಲ್ಲಿ ಮುಳುಗಿ ನಿಶ್ಚಲ ಭಂಗಿಯಲ್ಲಿ ಕುಳಿತ. ಹೃದಯ ಕಲ್ಲು ಹೊತ್ತಂತೆ ಭಾರವಾಗಿತ್ತು.

ಒಳಗಡೆ ಮಸುಕು ಬೆಳಕು ಮಾಯವಾಗಿ ಕತ್ತಲೆ ಕವಿದಿತ್ತು. ಎದ್ದು ಕಡ್ಡಿ ಗಿರಿದ. ಮೇಜಿನ ಮೇಲಿದ್ದ ಲ್ಯಾಂಪು ಗೋಚರಿಸಿತು. ಮಸಿ ಹಿಡಿದ ಅದರ ಗಾಜು ಕಗ್ಗತ್ತಲೆಯನ್ನು ಅಣಕಿಸುವಂತಿತ್ತು. ಹೊತ್ತಿಸಲಾರದೆ ಅದನ್ನು ಹೊತ್ತಿಸಿದ. ಮಿಣುಕು ದೀಪ ಮುಸುಗಾಂತಿ ಬೀರಿ ಉರಿಯಹತ್ತಿತು. ಅದರ ಶಾಂತ ಸ್ನಿಗ್ಧ ಕ್ಷೀಣಿತ ಕಿರಣಗಳನ್ನು ಇನ್ನಷ್ಟು ಪ್ರಕಾಶಿತಗೊಳಿಸಲು ಬತ್ತಿಯನ್ನು ಸ್ವಲ್ಪ ಎತ್ತರಿಸಿ ಕಿಟಿಕಿಯ ಬಳಿಗೆ ಹೋದ. ಹೊರಗಡೆ ಅರಳೀ ಕಟ್ಟೆ ಮೇಲೆ ಆ ಹುಂಬರು ಇನ್ನೂ ಮಾತುಕತೆಯಲ್ಲಿ ಪೂರ್ಣ ನಿಮಗ್ನರಾಗಿ ಕುಳಿತಿರುವುದು ಕಂಡುಬಂತು. ಬೀಡಿಗಳ ತುದಿಯಲ್ಲಿ ಉರಿಯುತಿದ್ದ ಬೆಂಕಿ ಕತ್ತಲೆಯಲ್ಲಿ ಮಿನುಗುತಿದ್ದುದು ಸ್ಪಷ್ಟವಾಗಿ ಕಾಣಿಸಿತು. ಮಹಮ್ಮದ ತಟ್ಟನೆ ಹಿಂಜರಿದ. ಮನಸ್ಸಿಗೆ ಒಮ್ಮೆಲೇ ನೂರು ಸುಡುಬೀಡಿಗಳು ಮುದ್ರೆಯೊತ್ತಿದಂತಾಯಿತು.

★ ★ ★ ★ ★

ಮರು ಬೆಳಗಿನ ಝಾವ ಎಚ್ಚರಗೊಂಡಾಗ ಕ್ಷೀಣಕಾಂತಿಯ ದೀಪ ಉರಿಯುತ್ತಲೇ ಇತ್ತು.

ಕಣ್ಣಿಗೆ ನಿದ್ದೆ ಬಾರದಿದ್ದರೂ ಹಾಗೇ ವಿಶ್ರಾಂತಿ ಪಡೆಯುವ ಇಚ್ಛೆ. ಆದರೆ ಮಾನಸಿಕ ದೌರ್ಬಲ್ಯ ಅವಕಾಶ ಕೊಡುತ್ತಲೇ ಇಲ್ಲ. ತಲೆಯ ತುಂಬ ಕಿನಿಸಿಗೆ ತುಂಬಿ ತೀರ ಸೋತು ಹೋದಂತೆ ಜೀವನಾಡಿ ಮಿಳ್‌ಮಿಳ್ಳನೆ ಮಿಡಿಯುತಿತ್ತು. ಮಾನವ

ಸಮಾಜ ಎಂದ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ತಪ್ಪು ಮಾಡಿಯೇ ತೀರುತ್ತೆ. ಜೀವನ ಪಥದಲ್ಲಿ ಉಲ್ಲಾಸ ಉನ್ಮಾದಗಳು ಜೋಡಿ ಜೋಡಿಯಾಗಿಯೇ ಪಯಣಿಸುತ್ತವೆ. ಸರ್ವೇ ಸಾಮಾನ್ಯವಾಗಿ ಪಡದಿಯರಲ್ಲಿ ಪ್ರೇಮಾಭಿಸಾರದೊಂದಿಗೆ ಪ್ರಚ್ಛನ್ನ ಅಧಿಕಾರ ವ್ಯಾಪ್ತಿಯನ್ನೂ ಹೊಂದಿರುವುದು ಗಂಡಸಿಗೆ ಅಭ್ಯಾಸಬಲದಿಂದ ರಕ್ತಗತವಾಗಿದೆ. ಆ ಎಲ್ಲೆಯನ್ನು ಮೀರಿಯೂ ಅನೇಕ ವೇಳೆ ನಡೆದಿದ್ದ ಮಹಮ್ಮದ್. ಆ ಒಂದೊಂದು ಚಿತ್ತಾರವೂ ಅವನನ್ನು ಗಾಣಕ್ಕೆ ಕೊಟ್ಟಂತೆ ಹಿಂಡತೊಡಗಿದುವು. ಅಷ್ಟು ಮುಂಚೆ ಏಳುವ ಮನಸ್ಸಿಲ್ಲದಿದ್ದರೂ ಮುಳ್ಳಿನಂತೆ ಮೈಗೊತ್ತುವ ತಡಿಯಿಂದ ಎದ್ದರೇನೇ ಚಿತ್ತಶಾಂತಿ. ಅಂತಲೇ ಎದ್ದು ಪ್ರಾತಃರ್ವಿಧಿಗಳನ್ನು ಮುಗಿಸಿ ಒಲೆ ಹಚ್ಚಲು ಒಳ ಹೋದರೆ, ಒಳಗಡೆ ಒಂದಾದರೂ ಸೌದೆ ಇರಲಿಲ್ಲ. ಹಿಂದಿನ ದಿನ ಅಡುಗೆ ಮಾಡಿಕೊಳ್ಳಲಿಲ್ಲವಾದುದರಿಂದ ಒಡಲಲ್ಲಿ ಹಸಿವು ಅವ್ಯಾಹತವಾಗಿ ಕಾಡುತಿತ್ತು. ನೀರಿನ ಬಿಂದಿಗೆಗಳೂ ಖಾಲಿ. ಕಸ, ಮುಸುರೆ ಹಳೆಯ ಬೂದಿ ಒಂದೊಂದೂ ಹಂಗಿಸುವಂತೆ ಮೈದೋರಿದುವು. ಹಾಗೇ ಹಿಂದಿರುಗಿ ಬಂದು ಮೇಜಿನ ಮುಂದೆ ಕುಳಿತು ಅದರ ಡ್ರಾ ಎಳೆದ. ಒಳಗಡೆ ಯಾವುಯಾವುದೋ ಪುಸ್ತಕಗಳು ಹಳೆಯ ಕಡತಗಳು ಕಣ್ಗೋಚರಿಸಿದುವು. ಕೆಲವನ್ನು ತಿರಿವಿ ಹಾಕಿದ. ಒಂದರಲ್ಲಿದ್ದ ಮಡದಿಯ ಹಸ್ತಾಕ್ಷರ ಗಮನವನ್ನು ಸೆಳೆಯಿತು. ಅತ್ಯಂತ ಕುತೂಹಲದಿಂದ ಪುಟಪುಟವನ್ನೂ ತಿರಿವಿ ಹಾಕಿದ. ಅನುದಿನದ ಘಟನೆಯನ್ನು ಪುಟಪುಟದಲ್ಲೂ ಕರುಳು ಹರಿಯುವಂತೆ ನಿವೇದಿಸಿಕೊಂಡಿದ್ದಾಳೆ. ಮುದ್ದಾದ ಅಕ್ಷರಗಳಲ್ಲಿ ಹರಿದ ವಿಷಯ ನಿರೂಪಣೆ ಅತ್ಯಂತ ಕಟುವಾಗಿತ್ತು. ಕೆಲವು ಕಡೆ ಅಶ್ರುಸಿಕ್ತ ಅಕ್ಷರಗಳು ಕದಡಿಹೋಗಿವೆ. ನೋಡಿದೊಡನೆ ಒಡಲ ಸಂಕಟ ಇನ್ನಷ್ಟು ಬುಗ್ಗೆಬುಗ್ಗೆಯಾಗಿ ಉಕ್ಕೇರಿ ಬಂತು; ಮೂರ್ತಿಮತ್ತಾಗಿ ಕುಳಿತ. ಅವಳು ಪ್ರೈಮರಿ ಶಾಲೆಯಲ್ಲಿ ಮಾತ್ರ ಕಲಿತವಳು ಆದರೆ ವಿಷಯ ನಿರೂಪಣೆ ಸಮಂಜಸವಾಗಿಯೆ ಇತ್ತು. ಬಹುಶಃ ಅವಳ ಬುದ್ಧಿಬಾವದ ಮೌಲ್ಯ ಇಷ್ಟು ಮಹತ್ತರವಾಗಿದ್ದುದರ ಅರಿವು ಮೂಡಿದುದು ಈಗಲೇ.... ಎಷ್ಟೋ ಹೊತ್ತು ಚಿಂತಾಲಯದಲ್ಲಿ ಏಕಾಂಗಿಯಾಗಿ ಅಡ್ಡಾಡಿದ. ಅದನ್ನಿಟ್ಟುಕೊಳ್ಳುವುದರಿಂದ ತನ್ನ ಮೇಲಿನ ಕಳಂಕ ಇನ್ನೂ ಪೃಥಗೊಳ್ಳುವುದೆಂಬುದು ಸ್ಪಷ್ಟವಾದಾಗ ಒಲೆಯೊಳಗೆ ಹಾಕಿ ಅಗ್ನಿ ಸಂಸ್ಕಾರ ಮಾಡುವುದು ಒಳ್ಳೆಯದೆಂಬ ಯೋಚನೆಗೆ ಶರಣಾಗಿ, ಒಳಗೊಯ್ದು ಒಲೆಯಲ್ಲಿ ಹಾಕಿ, ಹಿತ್ತಿಲ ಬಾಗಿಲು ತೆಗೆದು ಸೌದೆಗಳನ್ನು ತಂದು ಬೆಂಕಿ ಹಚ್ಚುವುದರಲ್ಲಿದ್ದ ಸಮಯದಲ್ಲಿ ಹಿಂಬಾಗಿಲಿಂದ ಒಳ ಬಂದ ಪೀರ್ ಸಾಬಿ ವಿಭ್ರಮೆಯಿಂದ ನೋಡುತ್ತ ಅಂದ,

''ಅದೇಕೆ ಸುಡುತ್ತೀರಿ? ಗತಿಸಿದವರ ಕೈ ಬರಹವನ್ನು ಉಳಿಸಿಕೊಳ್ಳಬೇಕು!''

ಮಹಮ್ಮದ ಮುಳ್ಳು ತುಳಿದವನಂತೆ ಮಿಡುಕಿ ಬಿದ್ದು ಕೇಳಿದ ''ನಿನಗೆ ಹೇಗೆ ಗೊತ್ತು.?''

''ಅದನ್ನು ಗೂಡಿನಿಂದ ಒಯ್ದು ಡ್ರಾದಲ್ಲಿಟ್ಟವನು ನಾನೆ!''

''ನೀನು....?'

''ಹೌದು. ಕೆಂಪು ಬಟ್ಟೆಯಲ್ಲಿ ಸುತ್ತಿ ಬೀಬಿ ಗೂಡಿನಲ್ಲಿಟ್ಟಿದ್ದಳು. ಅದನ್ನು ಇಲ್ಲಿರುವವರನೇಕರು ನೋಡಿದ್ದಾರೆ!''

ನಿಜವಾಗಿಯೂ....?''

''ಹೌದು. ಬೀಬಿ ಸ್ವತಃ ತೋರಿದ್ದಾಳೆಂದು ಮೂಲೆ ಮನೆಯ ಅಜ್ಜಿ ಹೇಳುತ್ತಿದ್ದಳು.''

''ಓ ದೇವರೇ! ಅವಳ ಕಿವಿಗೆ ಬಿದ್ದಮೇಲೆ ಮುಗಿದೇ ಹೋಯಿತು!'' ಎಂದು ತನ್ನಲ್ಲಿಯೇ ಹೇಳಿಕೊಂಡ. ತುಟಿಗಳು ಬಿರಿಯಲಿಲ್ಲ. ಮೈಗೆ ಬಿಸಿ ನೀರು ಎರಚಿದಂತಾಗಿ ಸ್ವಲ್ಪ ಹೊತ್ತು ಸುಮ್ಮನೆ ಕುಳಿತ. ಇನ್ನು ಪುಸ್ತಕವನ್ನು ಸುಡುವುದರಿಂದ ಯಾವ ಪ್ರಯೋಜನವೂ ಇಲ್ಲ; ಎಂಬ ಯೋಚನೆಯೊಂದಾದರೆ ಹೇಗೂ ಒಲೆಯಲ್ಲಿಟ್ಟಾಗಿದೆ, ಮತ್ತೇಕೆ ಉಳಿಸಿಕೊಳ್ಳುವ ಲೋಭ? ಎಂಬ ತರ್ಕ. ಯೋಚಿಸಿ ಯೋಚಿಸಿ ಕಡೆಗೆ ಅಗ್ನಿ ಸ್ಪರ್ಶ ಮಾಡಿಸಿದ. ಪೀರ್‌ಸಾಬಿ ಅದು ಉರಿದು ಹೋಗುವವರೆಗೂ ಸುಮ್ಮನಿದ್ದು ಅನಂತರ ಅಂದ,

''ನೀನವಳನ್ನು ಕೊಲೆ ಮಾಡಿದ್ದಿ ಎಂದು ಊರೆಲ್ಲ ಸುದ್ದಿ ಹಬ್ಬಿದೆ!''

''ನಿಜವಾಗಿಯೂ......?''

''ನಾನು ಸುಳ್ಳು ಹೇಳುತ್ತೇನೆಯೇ?''

''ಇರಲಿ, ಖಂಡಿತವಾಗಿಯೂ ಹೇಳು ಪೀರ್?''

''ಹಾಗಾದರೆ ನಿನಗೆ ಗೊತ್ತೇ ಇರಲಿಲ್ಲವೇ?''

''ಇಲ್ಲ......!''

''ನೀನು ಕೈಯ್ಯಾರೆ ಕೊದಿದ್ದಿ ಎಂದು ಊರಿಗೆ ಊರೇ ಹೇಳುತ್ತದೆ?''

''ಓ....... ಅಲ್ಲಾ!''

★ ★ ★ ★ ★

ಜೈನಾಬಿ ಆರ್ತಳಾಗಿ ಅಶ್ರುಲೋಚನೆಯಾಗಿ ಒಮ್ಮೆ ಕೇಳಿಕೊಂಡಳು,

‘‘ನನಗೆ ನಾಲ್ಕು ಗೋಡೆಯ ಜೀವನ ಬೇಸತ್ತು ಹೋಗಿದೆ. ಇಂದು ಎಲ್ಲಾದರೂ ಹೊರಗಡೆ ಹೋಗಿ ಬರೋಣ. ನೀನೇ ಬಂದು ಕರೆದುಕೊಂಡು ಹೋಗು.’’

‘‘ನಿನ್ನ ಜೊತೆ ಮೆರವಣಿಗೆ ಹೊರಟರೆ ನನ್ನ ಕೆಲಸ ಏನಾಗಬೇಕು?’’ ಉತ್ತರ ಗಡುಸು ದನಿಯಲ್ಲಿ ಅತ್ಯಂತ ಕಟುವಾಗಿ ಹೊರಬಿತ್ತು.

ಜೈನಾಬಿ ತುಸು ಪೆಚ್ಚಾದರೂ ದುಗುಡವನ್ನು ತಾಳಿಕೊಳ್ಳಲಾಗದೆ ನುಡಿಯನ್ನು ಬೇಗುದಿಯಿಂದ ಹೊರಹಾಕಿದಳು ಕಣ್ಣಂಚಿನಲ್ಲಿ ಮಿನುಗುತ್ತಿದ್ದ ಹನಿಗಳು ಕಪೋಲದ ಮೇಲೆ ಜಾರಿದುವು.

‘‘ನಿನಗೇನು ಹೇಳು? ನೀನು ಹೆಣ್ಣಾಗಿ ಹುಟ್ಟಿದ್ದರೆ ಈ ಕಷ್ಟ ನಿನಗೆ ಅರಿವಾಗುತಿತ್ತು!’’

ಅಲ್ಲಗೆ ಮಹಮ್ಮದ ಸುಮ್ಮನಾಗಲಿಲ್ಲ. ಕಟುವಾಗಿ ಅಸಹ್ಯವಾಗಿ ಪಚ ಪಚ ನುಡಿದು ನಾಲಿಗೆಯನ್ನು ಕಳಂಕಗೊಳಿಸಿದ. ಕಣ್ಣುಗಳಲ್ಲಿ ಕೋಪದ ಕಿಡಿಗಳು ಮೂಡಿದುವು

‘‘ನೀನು ಯಾವಾಗಲೂ ಇಷ್ಟೆ.... ತಾನು ಏನು ಮಾಡಿದರೂ ಸರಿಯೆ, ನನಗೆ ಇಲ್ಲದ ನಿರ್ಬಂಧ!’’

‘‘ನಾನು ಗಂಡಸು! ನೀನು....?’’

‘‘ಸರಿ, ಗಂಡಸಿನಲ್ಲಿ ಏನು ವಿಶೇಷ?’’

ಅವನು ಅಲ್ಲಿಗೆ ಸುಮ್ಮನಾಗುವನೆ? ಮುಖ ಮೈಯೆನ್ನದೆ ಚೆನ್ನಾಗಿ ಗುದ್ದಿ, ಕೋಣೆಗೆ ದಬ್ಬಿ, ‘ಗಂಡಸಿ’ನ ವಿಶೇಷವನ್ನು ತೋರಿ ಹೊರಹೋದ. ಅದು ದಿನ ನಿತ್ಯದ ವ್ಯವಹಾರ. ಘೋಷಾ ಪದ್ಧತಿ, ಗಾಳಿ ಬೆಳಕುಗಳ ಅಭಾವ, ಮೇಲಾಗಿ ಹೊರ ಜಗತ್ತಿನ ಸಂಸ್ರವವೇ ಆಗಲಿ, ಪುಷ್ಕಳವಾದ ಆಹಾರವೇ ಆಗಲಿ ಇದ್ದರಷ್ಟೆ? ಮಡದಿ ಬಾಳಿನ ಕತ್ತಲೆ ಗವಿಯಲ್ಲಿ ಪಡುತಿದ್ದ ಗೋಳು ಅಂತರಾತ್ಮ ಮಾತ್ರಬಲ್ಲುದು. ಒಂದೆರಡು ಬಾರಿ ತಾಯಿ ಮನೆಗೆ ಹೋದ ಅವಳು ಅಲ್ಲೆ ನಾಲ್ಕಾರು ತಿಂಗಳು ಪಟ್ಟು ಹಿಡಿದು ಉಳಿದುದರಿಂದ ಮುಂದೆ ಆ ಹಾದಿಗೂ ಕಲ್ಲು ಬಿತ್ತು. ಅನಂತರ ಕಂಬನಿಯ ಕೋಡಿ ಎಷ್ಟು ಹರಿಯಿತೋ ಆ ನಿಗಮ ಗೋಚರ ಮಾತ್ರ ಬಲ್ಲ.

ಆ ಏಕಟ ಕರುಣಾಜನಕ ದೃಶ್ಯ ನೆರೆಹೊರೆಯವರ ಮನದಲ್ಲಿ ಕರುಣೆಯನ್ನು ಮೂಡಿಸಿತು.

ಅವನು ಹೊರಹೋದ ಮೇಲೆ ನೆರೆಹೊರೆಯವರು ಅವಳನ್ನು ಒಮ್ಮೊಮ್ಮೆ ಬರಮಾಡಿಕೊಳ್ಳುವರು. ಅನಿರೀಕ್ಷಿತವಾಗಿ ಅದೇ ಸಮಯಕ್ಕೆ ಮಹಮ್ಮದ

ಹಿಂದಿರುಗಬೇಕೆ? ಆಗ ಅದು ಮತ್ತೊಂದು ಪ್ರಕಾಂಡಕ್ಕೆ ನಾಂದಿ ಹಾಡುತಿತ್ತು. ಎಳೆ ಮೈಯ್ಯಿನ ಮೂಳೆ ಮೂಳೆಗಳೂ ನಿಟಿನಿಟಿ ಎನ್ನುತ್ತಿದ್ದುವು. ಹಾಗೆಂದು ಮಹಮ್ಮದನ ಭಾಗಕ್ಕೆ ಅವಳು ಏಕಮಾತ್ರಳೇ? ಆದನ ಕಾಮನೆಗಳಿಗೆ ಇತಿ ಮಿತಿ ಇದೆಯೆ? ಈ ಜೀವಮಾನದಲ್ಲಿ ಆತ ಎಂದಾದರೂ ನೇರ ಹಾದಿಗೆ ಬಂದಾನೆಯೆ?

ಆ ಪ್ರಶ್ನೆಗಳಿಗೆಲ್ಲಾ ಸರಿಯುತ್ತರ ಜೈನಾಬಿಯ ಮಾನಸ ಸಂಪುಟದಲ್ಲಿ ಇಲ್ಲ ಎಂದೇನಿಲ್ಲ. ಒಡಲ ಸಂಕಟವೆಲ್ಲಾ ಕಂಬನಿಯ ರೂಪದಲ್ಲಿ ನಿತ್ಯ ಪ್ರವಹಿಸುವುದು. ಮೌನಶೋಕದ ಕಾಳಪನ್ನಗದೊಡನೆ ಸತತ ಹೆಣಗುವಾಗಲೂ ನಾಲ್ಕು ಬಾರಿ ತಾಯಿಯಾಗಿ ನೆತ್ತರನ್ನು ಬಸಿಯಬೇಕಾಯಿತು. ಎರಡು ಮಕ್ಕಳು ಎಳೆಯತನದಲ್ಲೇ ಅಸುನೀಗಿ ಹೆತ್ತೊಡಲಿಗೆ ಸಂಕಟವನ್ನೂಡಿಸಿದುವು.

★ ★ ★ ★ ★

ಸುಣ್ಣ ಬಣ್ಣಗಳನ್ನು ಕಾಣದ ಶೀರ್ಣಿತ ಗೃಹ.

ಬದುಕಿನ ಮಾಲಿನ್ಯವನ್ನು ನಿವಾರಿಸಲಾಗದ ಜೀವನ ಪಥ.

ಹೊರ ಜಗತ್ತಿನ ಸಂಸ್ರವವನ್ನುಸಂಪೂರ್ಣ ಕಡಿದುಕೊಳ್ಳಲೆಂದು ಹೊರಬಾಗಿಲುಗಳೆರಡನ್ನೂ ಮುಚ್ಚಿಧನಂತರ ಮಹಮ್ಮದ ಒಳಗೆಲ್ಲಾ ಒಂದು ಸುತ್ತು ಹಾಕಿ ಕುರ್ಚಿಯ ಮೇಲೆ ಯಾಂತ್ರಿಕವಾಗಿ ಕುಳಿತ. ಹೊತ್ತು ಕಳೆಯುವ ವ್ಯವಧಾನಕ್ಕಾಗಿ ಚಿತ್ತ ಕಾತರಿಸುತಿತ್ತು. ಆಸ್ತಿಯ ವ್ಯವಸ್ಥೆಗೆ ಗುಮಾಸ್ತನಿದ್ದುದರಿಂದ ಆ ಬಗ್ಗೆ ಯೋಚಿಸಬೇಕಾಗಿರಲಿಲ್ಲ. ತಾನು ಕೊಲೆಗಾರನೆಂದು ಊರೆಲ್ಲ ಜನಜನಿತ ಸುದ್ದಿಯಿಂದಾಗಿ. ಹೊರಗಡೆ ತಲೆ ಹಾಕಲು ಮನಸ್ಸು ಬರುತ್ತಿಲ್ಲ.

ಬೇಸರ-ಕಿನಸಿಗೆ.

ಕಿನಸಿಗೆ-ಬೇಸರ.

ಬೀರುವಿನಲ್ಲಿ ಕೈಯ್ಯಾಡಿಸಿ ಕೆಲವು ಪುಸ್ತಕಗಳನ್ನುತಿರಿವಿ ಹಾಕಿದ. ವಿದ್ಯಾರ್ಥಿಜೀವನದಲ್ಲಿ ಅನೇಕ ಕಥಾ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ. ಆ ಸಂದರ್ಭಗಳಲ್ಲಿ ಕೆಲವು ಕತೆಗಳು ಬೆಳಕು ಕಂಡಿದ್ದುವು. ಜೀವನ ಕ್ಷೇತ್ರಕ್ಕೆ ಕಾಲಿಟ್ಟನಂತರ ಬದಿಗಿಟ್ಟ ಲೇಖನಿಯನ್ನು ಮತ್ತೆ ಸಾಹಿತ್ಯಕ್ಕಾಗಿ ಬಳಸಿರದೆ ಆ ಸಾಹಿತ್ಯ ಬಳ್ಳಿ ಹಾಗೇ ಮುರಟಿಹೋಗಿತ್ತು. ಈಗ ಅದನ್ನಾದರೂ ಅಭಿವೃದ್ಧಿಗೊಳಿಸಿಕೊಳ್ಳುವುದು ಸಾಧ್ಯವಾದರೆ ಹೊತ್ತು ಕಳೆಯಲು ಸುಲಭವಾಗಬಹುದೆಂಬ ಯೋಚನೆಯು ಆ ಪುಸ್ತಕಾವಲೋಕನದಿಂದ ಮೂಡಿತು. ಭಾರವಾದ ಹೃದಯದಿಂದ ಪಲ್ಲಂಕದ ಮೇಲೆ ಕುಳಿತ. ಮಡದಿಯನ್ನುಸುಖವಾಗಿಡದಿದ್ದುದಕ್ಕೂ ಉಳಿಸಿಕೊಳ್ಳಲಾಗದುದಕ್ಕೂ

ಮನಸ್ಸಿಗೆ ಹತ್ತಿದ ಚಿಂತೆಯ ಕೀಟ ಎಡೆಬಿಡದೆ ಕೊರೆಯುತಿತ್ತು. ಅದರಿಂದ ತಪ್ಪಿಸಿಕೊಳ್ಳುವುದಕ್ಕಾಗಿಯಾದರೂ ಗಮನವನ್ನು ಬೇರೆಡೆಗೆ ಹರಿಸುವುದು ಸೂಕ್ತ ಎಂಬ ಯೋಚನೆ ಎದೆಯಾಳದಲ್ಲಿ ಮೊಳೆಯಿತು.

ನಿಜಕ್ಕೂ ಹೇಳುವುದಾದರೆ ಜೀವನದಲ್ಲಿ ಆತನಿಗೆ ಅಂತಹ ಪರಮೋದ್ದೇಶವೇನೂ ಇರಲಿಲ್ಲ. ಜ್ಞಾನದಾರಿದ್ರ್ಯ ಕಾರುಣ್ಯದಾರಿದ್ರ್ಯಗಳಿಂದ ಆತ್ಮವಿಕಾಸವು ಉಂಟಾಗಲಿಲ್ಲ. ಮದಮೋದಾದಿಗಳಿಂದ ಮರಳಿನ ಮೇಲೆ ಮನೆ ಕಟ್ಟುವುದರಲ್ಲೇ ಮೂರು ನಾಲ್ಕು ದಶಕಗಳು ಉರುಳಿಹೋಗಿದ್ದುವು. ಈಗೀಗ ಏನೋ ಒಂದು ರೀತಿ.... ತನ್ನ ತಪ್ಪನ್ನು ತಿದ್ದಿಕೊಳ್ಳಲು ಯಾವುಯಾವುದೋ ಕ್ಷೇತ್ರದಲ್ಲಿ ಅಡ್ಡಾಡಿದರೂ ಎಲ್ಲಿಯೂ ಅಸ್ತಿತ್ವ ಪಡೆಯಲಾಗದೆ ಪರಿತಪಿಸುವುದೇ ಆಗಿದೆ. ಹೇಗಾದರೂ ಈ ದುಃಖಭರಿತ ಜೀವನಕ್ಕೆ ಒಂದು ಹೊಸ ರೂಪು ಕೊಡಬೇಕೆಂಬ ಅಭಿಲಾಷೆಯಿಂದ ವಿಚಾರ ವೇದಿಕೆಯಲ್ಲಿ ಏಕಾಂಗಿಯಾಗಿ ಅಡ್ಡಾಡುವಾಗ ಕಟ್ಟು ಬೀಡಿಗಳು ಉರಿದು ಹೋಗುವುವು. ವೈದ್ಯಕೀಯ ಸಲಹೆ ಅದಕ್ಕೆ ತೀವ್ರ ನಿಷೇಧ, ಸಾವಿನ ಭಯಕ್ಕಿಂತಲೂ ನರಳುವ ಭಯ ಒಮ್ಮೊಮ್ಮೆ ಬಂಡೇಳುತ್ತದೆ. ಆಗ ಅರೆಹುಚ್ಚನಂತೆ ಹೊರಹೋಗಿ ಅಡ್ಡಾಡಿ ಬರುವ. ನಾಗರಿಕ ವಲಯದಲ್ಲಿ ರೂಪ-ಲಾವಣ್ಯ, ಹಾವ-ಭಾವ-ಲೀಲಾ-ವಿಲಾಸಗಳು ಸನ್ಮಾನಿತವಾಗುವ ದೈನಂದಿನ ಘಟನೆಗಳೊಂದಿಗೆ ದುಃಖ-ದಾರಿದ್ರ್ಯ-ಅಜ್ಞಾನ-ಕುಸಂಸ್ಕಾರಗಳು ಅಕ್ಷಿಪಟಲದ ಮೇಲೆ ಲಾಸ್ಯವಾಡುತ್ತವೆ. ವಿಭ್ರಮ-ವಿಚ್ಛಿತ್ತಿಯಲ್ಲಿ ಶರೀರ ಸೀಳಿ ಹೋಗುತ್ತಿರುವಂತೆ ಭಾಸವಾಗುವುದು. ಕರ್ತವ್ಯಾಕರ್ತವ್ಯಗಳ ಒರೆಗಲ್ಲಿನ ಮೇಲೆ ಪರಿಸ್ಥಿತಿಯನ್ನು ಒರೆಹಚ್ಚಿದಾಗ 'ನೀನು ತಪಿತಸ್ಥ' ಒಂದು ನರನರಗಳೂ ಕೂಗಿ ಹೇಳುತ್ತವೆ. ಶೋಕತಪ್ತ ನೆತ್ತರಿನ ಝರಿ ದೇಹದಾದ್ಯಂತ ವಿದ್ಯುಲ್ಲಹರಿಯಂತೆ ಹರಿದಾಡುತ್ತದೆ. ಕ್ಷಣೇಕ್ಷಣೇ ವರ್ಧಿಸುವ ಅಂತರ್ವಿಕಾರ ಜಡವನ್ನೂ ಜಡಗೊಳಿಸುವುದು.... ತಾಸುಗಟ್ಟಲೆ ಕದ ಮುಚ್ಚಿ ಕುಳಿತುಬಿಡುವ. ಪೀರ್ ಬಂದು ಬಾಗಿಲು ತಟ್ಟಿದಾಗಲೇ ಇತ್ತಗಮನ.

''ಏನಪ್ಪ....?''

''ಅಡುಗೆ ಆಗಿದೆ.''

''ಬಂದೆ.''

ಪೀರ್ ಕೆಳಗಡೆ ಬಿದ್ದಿದ್ದ ಮಾಸಿಕವೊಂದನ್ನು ಮೇಜಿನ ಮೇಲೆ ಎತ್ತಿಟ್ಟು ಸಯ-ಪಿನಯಗಳ ವಶೀಭೂತನಾಗಿ ನುಡಿದ ''ನಾನಿಂದು ಊರಿಗೆ ಹೋಗುವುದಿದೆ. ನಾಳೆ ಇಲ್ಲಿಗೆ ಬರಲಾಗುವುದಿಲ್ಲ.''

ಮಹಮ್ಮದ ಮಾತಾಡದೆ ಸ್ವಲ್ಪಹೊತ್ತು ಯೋಚಿಸಿದ ನಂತರ,

''ನಾಡಿದ್ದಾದರೂ ಬರುತ್ತೀಯಷ್ಟೆ?''

''ಪ್ರಯತ್ನಿಸುವೆ''

''ಅಂದರೆ....?''

''ನನ್ನ ಮಡದಿ ತೌರಿಗೆ ಹೋಗಬೇಕೆನ್ನುತ್ತಾಳೆ. ಅಲ್ಲಿ ಅವಳೊಂದಿಗೆ ಒಂದು ದಿನವೂ ನಿಲ್ಲದೆ ಬಂದರೆ ಅವಳಿಗೆ ಬೇಸರವಾಗಬಹುದು. ಅವಳು ಒಪ್ಪಿದರೆ ನಾಡಿದ್ದು ಬರುವೆ.''

ಅವನ ಸತೀಪ್ರೇಮ ಮನವನ್ನು ಮುಳ್ಳಿನಂತೆ ಇರಿಯಿತು. ಯೋಚನೆಯ ಸುಳಿಯಲ್ಲಿ ಸಿಕ್ಕಿ ಒಪ್ಪಿಗೆ ನೀಡಿದ ''ಸರಿ.... ಹೋಗು.''

ಪೀರ್‌ಸಾಬಿ ಮತ್ತೇನೂ ಹೇಳದೆ ಅಲ್ಲಿಂದ ನಿರ್ಗಮಿಸಿದ. ಹಿಂದಿಲಿಂದ ಜೋಡಿ ನಯನಗಳು ಅವನು ಕಣ್ಮರೆಯಾಗುವವರೆಗೂ ನಿಟ್ಟಿಸಿದುವು.

★ ★ ★ ★ ★

....ಅಸ್ತಗಿರಿಯ ಮಸ್ತಕಮೇಲೆ ಹೊನ್ನರಾಜಿಯಲ್ಲಿ ರಂಜಿತ ರವಿ ಸೌಮ್ಯಭಾವ ತಳೆದಿದ್ದ.

ಪಕ್ಷಿಗಳ ಇನಿಗೊರಳಲ್ಲಿ ಸಂಧ್ಯಾರಾಗ ಸರಾಗವಾಗಿ ಹರಿಯುತಿತ್ತು.

ಪೀರ್‌ಸಾಬಿ ಮೂರು-ನಾಲ್ಕುದಿನಗಳಾದರೂ ಹಿಮ್ಮರಳದಿದ್ದಾಗ ಅವನ ಜೀವನ ಶ್ರದ್ಧೆಯನ್ನು ಮೆಲುಕು ಹಾಕಿತು ಮನಸ್ಸು. ಅದೇ ನೇರಕ್ಕೆ ತನ್ನ ತಪ್ಪುಗಳು ರಾಕ್ಷಸಾಕಾರ ತಳೆದು ಹಲ್ಲು ಕಿರಿದುವು. ತನ್ನನ್ನು ತಾನೇ ಶಪಿಸಿಕೊಳ್ಳುತ್ತ ತನ್ನ ಮಾವನ ಮನೆಗೆ ಹೊರಟ. ಪ್ರಕೃತಿಯ ವಾತಾವರಣ ಹಿತಕರವಾಗಿದ್ದರೂ ಚಿತ್ತ ಪ್ರವೃತ್ತಿಯ ವಾತಾವರಣ ಹಿತಕರವಾಗಿರಲಿಲ್ಲ. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ಮಾವನ ಮನೆಯನ್ನು ಮುಟ್ಟಿದಾಗ ವಾಯುಮಂಡಲದಲ್ಲಿ ಶೈತ್ಯ ಸಂಚರಿಸುತಿತ್ತು. ದಿಙ್ಮಂಡಲಗಳಲ್ಲಿ ಅಂಧಕಾರ ಕವಿಯುತಿತ್ತು. ಅಂಗಳದಲ್ಲಿ ಆಡುತಿದ್ದ ಮಕ್ಕಳು ತಂದೆಯನ್ನು ನೋಡುತ್ತಲೂ ಆನಂದಿತರಾಗುವ ಬದಲು ಭೀತಭಾವದಿಂದ ಒಳಗಡೆ ಓಡಿಹೋದರು. ಒಡನೆ ಮಹಮ್ಮದ ತನ್ನ ಹೃದಯ ಮಸ್ತಿಷ್ಕಗಳೆರಡೂ ನಿಷ್ಕ್ರಿಯವಾದಂತೆ ಮರವಟ್ಟು ನಿಂತಾಗ ಸ್ವಾಗತಿಸುವ ಬದಲಾಗಿ ಅತ್ತೆಮಾವಂದಿರೂ, ಭಾವ ಮೈದುನರೂ, ನೆರೆಹೊರೆಯವರೂ ಕೂಡಿ ಛೀಮಾರಿ ಹಾಕಿ ಅವನನ್ನು ಅವಮಾನಗೊಳಿಸಿದರು. ಮಹಮ್ಮದ ತನ್ನ ಅಂತರಂಗವನ್ನು ಶೋಕಪೂರ್ವಕವಾಗಿ

ತೋಡಿಕೊಂಡು ತಾನವಳನ್ನು ಕೊಲೆ ಮಾಡಿಲ್ಲವೆಂದು ಹೇಳಲು ಪ್ರಯತ್ನಿಸಿ ಸುಮ್ಮನಾದ. ಹೃದಯ ಕುಂಡಲಿಯಲ್ಲಿ ನೆತ್ತರು ಕುದಿಯುತಿತ್ತು. ಇನ್ನಾವುದೇ ಸಹೃದಯವಾಗಿದ್ದರೆ ಅವಸನ್ನತೆಯಿಂದ ಕುಸಿಯುತಿತ್ತೇನೋ....ಮಹಮ್ಮದ ತನ್ನನ್ನು ತಾನು ಸಾವರಿಸಿಕೊಳ್ಳುತ್ತ ಹಿಂದಿರುಗಿದ. ಕತ್ತಲಲ್ಲಿ ಹಾದಿಗಾಣದಿದ್ದರೂ ವಿಧಿ ಇರಲಿಲ್ಲ. ಹೇಗೆ ಆ ಮಿಥ್ಯಾಕಥನದಿಂದ ಪಾರಾಗಬೇಕೋ ತಿಳಿಯಲಿಲ್ಲ. ತಲೆ ಸಿಡಿದು ಸಹಸ್ರ ಹೋಳಾಗುವಂತೆ ತೋರುತಿತ್ತು. ಮನೆ. ಕೀಲಿಯನ್ನು ತೆರೆದು ಕದವನ್ನು ತಳ್ಳಿದಾಗ ಒಳಗಿನ ಕಗ್ಗತ್ತಲು ಮೈಮೇಲೆ ನಿಷ್ಕರುಣೆಯಿಂದ ಧಾಳಿ ನಡೆಸಿತು. ಲ್ಯಾಂಪನ್ನು ತಡುಕಿ ಕಡ್ಡಿಗೀರಿ ಉರಿಸಿ ಹೊರಬಾಗಿಲನ್ನು ಮುಚ್ಚಿದ. ರುದ್ರಭೀಷಣ ಮೌನ ಸತಿ ಜೈನಾಬಿಯ ಅಳಲನ್ನು ಸ್ಪಷ್ಟವಾಗಿ ಮಾರ್ನುಡಿಸಿತು ''ನೀನು ಹೆಣ್ಣಾಗಿದ್ದರೆ ನಮ್ಮ ಕಷ್ಟ ನಿನಗೆ ತಿಳಿಯುತಿತ್ತು!''

ನುಡಿಯಲ್ಲಿನ ಸತ್ವ ಹೃದಯ ತಂತುಗಳ ಮೇಲೆ ಗರಗಸದಂತೆ ಹರಿದಾಡಿತು.

ಹೋಗಿ ಪಲ್ಲಂಕದ ಮೇಲೆ ಬಿದ್ದುಕೊಂಡ. ನೂರಾರು ಚಿಂತೆಗಳು ತಲೆಯನ್ನು ಮುತ್ತಿದುವು. ಕಣ್ಣುಗಳಲ್ಲಿ ಸಣ್ಣಗೆ ನೀರಾಡಿತು. ಎಷ್ಟೇ ಪ್ರಯತ್ನಿಸಿದರೂ ಮನಸ್ಸಿಗೆ ಸ್ವಾಸ್ಥ್ಯವನ್ನು ಪಡೆದುಕೊಳ್ಳಲಾಗಲಿಲ್ಲ. ಸಂಕಷ್ಟದ ಭೂತ ಸುತ್ತಮುತ್ತ ಹಲ್ಕಿರಿಯ ತೊಡಗಿತು. ಒಂದಕ್ಕೆ, ಹತ್ತಾಗಿ, ನೂರಾಗಿ!

ಭೀಷಣ ಕರಾಳರಾತ್ರಿ ಹೇಗೆ ಉರುಳಿತೋ ತಾನರಿಯ. ಕಣ್ದೆರೆದಾಗ ಮೂಡಣ ದಿಗ್ದೇಶದಲ್ಲಿ ಮುಂಬೆಳಕು ಪ್ರದೀಪ್ತವಾಗಿತ್ತು. ಗವಾಕ್ಷಿಯಲ್ಲಿ ನುಗ್ಗಿ ಬಂದ ಶೀತಲವಾಯುವನ್ನು ಉಪಭೋಗಿಸುತ್ತ ವಕ್ಷಸ್ಥಲದ ಮೇಲೆ ಕೈಕಟ್ಟಿದ. ಹಾಸಿಗೆ ಬಿಟ್ಟೇಳಲು ಮನಸ್ಸಾಗಲಿಲ್ಲ. ಸ್ವಲ್ಪ ಹೊತ್ತಿನೊಳಗಾಗಿ ಮುಂಬೆಳಕು ಧವಳಾಮೃತದಂತೆ ಜಗತ್ತನ್ನು ಆವರಿಸಿತು. ಏಳಲಾರದೇ ಎದ್ದು ಪ್ರಾತಃರ್ವಿಧಿಗಳನ್ನು ಮುಗಿಸಿ ಯಾಂತ್ರಿಕವಾಗಿ ಹೊರಬಿದ್ದ. ಆಗ ಇನ್ನೂ ನೆರೆಹೊರೆಯವರು ಮುಖ ಹೊರಗೆ ಹಾಕಿರಲಿಲ್ಲ. ಕಾರ್ಯಭಾರವಿಲ್ಲದ ಶರೀರವನ್ನು ಶೀತಲ ವಾತಾವರಣ ತಣ್ಣಗೆ ಮುದ್ದಿಡುತಿತ್ತು. ಎಲ್ಲಿಗೆ ಹೋಗುವೆ, ಏನು ಮಾಡಬೇಕು? ಎಂಬ ಪ್ರಶ್ನೆ ಮೂಡಿರಲಿಲ್ಲವಾದುದರಿಂದ ಹಾದಿಯನ್ನರಸುವ ಗೋಜೂ ಇರಲಿಲ್ಲ. ಹೆಜ್ಜೆ ನಡೆದತ್ತ ಶರೀರ ಸಾಗುತಿತ್ತು. ಕದಡಿ ಬಗ್ಗಡವಾದ ಮನಸ್ಸಿಗೆ ಶಾಂತಿಯನ್ನೀಡಬೇಕಾದರೆ ವಿನೂತನ ಕಾರಾಗಾರವನ್ನು ಸೃಜಿಸಿಕೊಳ್ಳದಿದ್ದಲ್ಲಿ ಹುಚ್ಚಾಗಿ ಬಿಡುವೆನೇನೋ ಎಂಬ ಪರಿತಾಪ ಕೊರೆಯುತಿತ್ತು. ತನ್ನ ಮುಂದಿರುವ ದಾರಿಯೆಂದರೆ ಒಂದಾನೊಂದು ಕಾಲದಲ್ಲಿ ಪ್ರಾಪ್ತವಾಗಿದ್ದ ಸಾಹಿತ್ಯವನ್ನು ಪುನಃ ಕರಗತ ಮಾಡಿಕೊಳ್ಳುವುದು.... ಅದು ಹೊರತು ಬೇರೆ ದಾರಿಯೇ ಇಲ್ಲ.

"ಜೀವನ ಕ್ಷೇತ್ರದಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳದ ವ್ಯಕ್ತಿ ಸಾಹಿತ್ಯ ಕ್ಷೇತ್ರಕ್ಕೆ ಕಾಲಿಟ್ಟಲ್ಲಿ ಅದೂ ಮಲಿನವಾಗುವುದೇ ಸೈ!" ಎಂದು ಯಾವುದೋ ಅಶರೀರವಾಣಿ ಕಿವಿಯ ಸನಿಹದಲ್ಲಿಯೇ ಕೂಗಿ ಹೇಳಿತು.

ಆದರೆ......!

ನಾನಾ ಕ್ಷೇತ್ರಗಳಲ್ಲಿ ಅಂಡಲೆದ ಮನಃಭ್ರಮರಕ್ಕೆ ಸಾಹಿತ್ಯರಂಗ ವಿನಾ ಇನ್ನೆಲ್ಲಿಯೂ ಸಾಂತ್ವನ ಪೂರ್ವಕವಾದ ಅಸ್ತಿತ್ವ ಪಡೆಯಲಾಗಲಿಲ್ಲ. ಅಂತಲೇ ಅತ್ಯುತ್ತಮ ಕಥಾವಸ್ತುವಿಗಾಗಿ ಸುತ್ತಮುತ್ತಲಿನ ಜೀವನ ಚರಿತ್ರೆಗಳನ್ನೆಲ್ಲಾ ತನ್ನಲ್ಲೇ ಮೆಲುಕು ಹಾಕಿದ. ಅದರಲ್ಲಿ ತನ್ನ ಜೀವನ ಚಿತ್ರವೂ ಬಾರದಿರಲಿಲ್ಲ. ಅವಳನ್ನು ಹೃತ್ಪೂರ್ವಕವಾಗಿ ಪ್ರೀತಿಸಿದುದೇ ಮಿತಿ ಮೀರಿದ ಅಧಿಕಾರವನ್ನು ನಡೆಸಲು ಕಾರಣವಾಗಿರಬಹುದು.... ಉಪ್ಪು ಖಾರ ಉಂಡ ಒಡಲಿನ ಕಾಮ ಕ್ರೋಧಾದಿಗಳು ನೂರು ಶ್ರೋತಗಳಲ್ಲಿ ಹೊಮ್ಮಿದುದರಲ್ಲಿ ವಿಶೇಷವೇನಿಲ್ಲ.... ಆದರೆ ಜಗತ್ತು ತಿಳಿದುಕೊಂಡಂತೆ ಅವಳನ್ನು ನಾನು ಖಂಡಿತ ಕೊಲೆ ಮಾಡಲಿಲ್ಲ.... ಈ ಜನ ಎಂತಹ ಕೆಟ್ಟ ಕತೆ ಕಟ್ಟಿದ್ದಾರೆ?

ಹಾ......!

ನನ್ನ ಪ್ರೀತಿಯ ಜೈನಾಬಿ! ಇಂದು ನೀನು ಎಲ್ಲಿದ್ದೀಯೋ....? ಈಗ ನಿನ್ನ ಕುರಿತು ಮಾತಾಡಿದರೆ ಮೊಸಳೆ ಕಣ್ಣೀರಿಟ್ಟಿತು ಎಂದೀತು ಈ ಜಗತ್ತು! ಎಷ್ಟೆಂದರೂ ಈ ಪಾಪಲಿಪ್ತ ಜೀವನದಲ್ಲಿ ನೀನು ಇಲ್ಲದಿರುವುದೇ ಲೇಸು. ಆಗ ಎಂದಾದರೂ ಹಾಗೆನಿಸಿದ್ದರೆ ಅದರ ರೀತಿಯೇ ಬೇರೆಯಾಗುತಿತ್ತು. ಇಷ್ಟು ಬೇಗನೆ ಇಷ್ಟು ಸುಲಭದಲ್ಲಿ ನಿನ್ನನ್ನು ಕಳೆದುಕೊಳ್ಳುವೆ ಎಂದು ತಿಳಿದುಕೊಂಡಿರಲಿಲ್ಲ. ಖಂಡಿತ ಹೆಜ್ಜೆ ಹೆಜ್ಜೆಯಲ್ಲಿಯೂ ನಾನು ತಪ್ಪು ಮಾಡಿರುವೆ ಎಂಬುದನ್ನು ಅಲ್ಲಾನ ಮುಂದೆ ಕೈಮುಗಿದು ಒಪ್ಪಿಕೊಳ್ಳುವೆ. ಆದರೆ, ಕೊಲೆ ಮಾಡಲಿಲ್ಲ....

ಅಕ್ಷರ ಅಕ್ಷರವೂ ಶೋಕ ವ್ಯಾಕುಲತೆ ತುಂಬಿದ ಹೃದಯ ಕುಂಡಲಿನಿಯಿಂದ ಹರಿದು ಬಂದುವು; ಮೆಲ್ಲನೆ-ಬಹುಮೆಲ್ಲನೆ ತಲೆ ಸುತ್ತುತ್ತಿರುವಂತೆ ಭಾಸವಾಯಿತು. ಭಾರವಾದ ಉಸಿರು, ಭಾರವಾದ ಮೈ, ಭಾರಭಾರವಾದ ಹೆಜ್ಜೆಗಳು....

★ ★ ★ ★ ★

....ರವಿಯ ಸ್ವರ್ಣರಥ ಪಡುವಣ ಪ್ರಾಂತಕ್ಕೆ ಆಗಲೇ ಪಯಣಿಸಿತ್ತು.

....ಭುವನಮಂಡಲ ಸಿಂದೂರ ರಾಗದಿಂದ ರಂಜಿತವಾಗಿತ್ತು.

ಬಂಧು-ಜೀವವಲಯವನ್ನು ತೊರೆದು 'ಶಾಂತಿ' ಎಂಬ ವಸ್ತುವಿಗಾಗಿ ಮನಃಪ್ರಾಣಗಳು ಪರದಾಡುತಿದ್ದುವು. ಪರಿಚಯಸ್ಥರಿಂದ ದೂರವಾಗಿ ಅಡ್ಡಾಡಿ ಬರುವುದು ಲೇಸು ಎನಿಸಿತೇನೋ....ಮಹಮ್ಮದ ಹೊರವಲಯದ ಹೋಟೆಲೊಂದಕ್ಕೆ ಹೋದ. ಅಲ್ಲಿ ಸಂಧ್ಯಾವಿಹಾರಿಗಳ ದುಂಡು ನೆರೆದಿತ್ತು. ಉಡಿಗೆ ತೊಡಿಗೆಗಳ ವೈಖರಿ, ಜಾತಿ ಮತಗಳ ಪ್ರಭೇದ, ನಾನಾ ಭಾಷೆಗಳ ಮರ್ಮರ, ನಗು ಮುಖಗಳ ಶೋಭೆ ದರ್ಶನೀಯವಾಗಿತ್ತು. ರುಚಿಕರವಾದ ಖಾದ್ಯಗಳನ್ನು ಮೋದಪ್ರದವಾಗಿ ಮೆಲ್ಲುವುದರಲ್ಲಿ ಜನರಾಶಿ ಉದ್ಯುಕ್ತವಾಗಿತ್ತು. ಮಹಮ್ಮದ ತನ್ನ ಜಿಹ್ವಾ ಚಾಪಲ್ಯಕ್ಕೆ ಎಟುಕಿದ ಖಾದ್ಯ ವಿಶೇಷಕ್ಕೆ ಆರ್ಡರು ಕೊಟ್ಟ.

ಬರುವರು ಬರುತಿದ್ದಾರೆ, ಹೋಗುವವರು ಹೋಗುತಿದ್ದಾರೆ.

ಹರಟೆ-ತಮಾಷೆ-ಮಾತುಕತೆ ಅವ್ಯಾಹತವಾಗಿ ನಡೆಯುತ್ತಿದ್ದುವು. ಮಹಮ್ಮದ ಎಲ್ಲರನ್ನೂ ಒಮ್ಮೆ ಸೂಕ್ಷ್ಮವಾಗಿ ಗಮನಿಸಿದ. ಆನಂದವನ್ನೂ ಆನಂದಿತಗೊಳಿಸುವಂತಹ ಸಂತಸ ಎಲ್ಲರ ಮುಖದ ಮೇಲೂ ಹರಿದಾಡುತಿತ್ತು. ಭಗವಂತ ವರದ ಹಸ್ತದಿಂದ ಸಾಕಷ್ಟು ಅನುಕೂಲವನ್ನು ಪ್ರಾಸಾದಿಸಿದ್ದ. ಆದರೆ ಅದನ್ನು ಅನನ್ಯ ಭಕ್ತಿಯಿಂದ ಬಳಸಿಕೊಳ್ಳದ ಹೃದಯವನ್ನೂ ಸಹ ನೀಡಬೇಕೆ? ಆ ಪ್ರಶ್ನೆ ಎದ್ದಾಗ ಎದೆಯಾಳದಿಂದ ನಿಟ್ಟುಸಿರೊಂದು ಹರಿದು ಬಂತು. ಅತ್ಯಂತ ಸೂಕ್ಷ್ಮಗ್ರಾಹಿಯಾದ ದೃಷ್ಟಿ ಜನವಾರಿಧಿಯ ಮೇಲೆ ಮತ್ತೆ ಹರಿಯಿತು. ಅಲ್ಲಿ ನೆರೆದವರು ಅಂತಹ ಪ್ರತಿಭಾವವಂತರೇನಲ್ಲ. ಅವರು ಪಡೆದುಕೊಂಡ ಆತ್ಮಪೂರ್ಣ ಸಂತೋಷ ಒಂದು ವಿಶೇಷವೇ! ಸ್ತ್ರೀ ಪುರುಷರ ಅನ್ಯೋನ್ಯ ಚರಿತ್ರೆ ಪ್ರದರ್ಶನಕ್ಕಿಟ್ಟಂತೆ ಅಲ್ಲಿ ಪ್ರದರ್ಶಿತವಾಗಿತ್ತು. ಅಲ್ಪ ವಿಚಾರಗಳು ಅವರಲ್ಲಿ ಚರ್ವಣಚರ್ವಿತವಾಗುತಿದ್ದುವು. ಅವುಗಳ ಸಾರಾಸಾರಾ ರಸವತ್ತಾಗಿ ಜಯಧ್ವನಿಗೈಯ್ಯುತಿತ್ತು!

ಗಮನ ಅಲ್ಲಿಂದ ತನ್ನೆಡೆಗೆ ಸೂಕ್ಷ್ಮಾತಿಸೂಕ್ಷ್ಮವಾಗಿ ಹರಿಯಿತು.... ತಾನೂ ಮಡದಿಗೆ ಸ್ವಾತಂತ್ರ್ಯ ನೀಡಿ ಅವಳ ಅನನ್ಯ ಆನಂದ ಸುಧೆಯಲ್ಲಿ ಪಾಲ್ಗೊಂಡಿದ್ದಿದ್ದರೆ? ಜೀವನದ ಮಹತ್ತನ್ನು ಅರಿತುಕೊಂಡಿದ್ದಿದ್ದರೆ....?

ಹಾ.......!

ಈ ಸಲ ಬಂದ ಗಿರಾಕಿಗಳಿಬ್ಬರು ಅವನ ಮೇಜಿಗೆ ಬಂದು ಕುಳಿತರು. ಐವತ್ತು ವಂಸತಗಳ ರಸಾನ್ನವನ್ನು ಜೀರ್ಣಿಸಿಕೊಂಡ ವ್ಯಕ್ತಿ.... ಇಪ್ಪತ್ತೈದರ ಅಂಚನ್ನು ದಾಟದ ರಮಣಿ. ಯಾವುದೋ ಅಂತರ್ನಿಹಿತ ತೀವ್ರಬೇನೆಯಿಂದ ಹೆಣ್ಣಿನ ಶರೀರ

ಶೀರ್ಣವಾಗಿತ್ತು. ರೂಪವತಿಯಾದರೂ ತಾರುಣ್ಯ ಸಹಜವಾದ ರಕ್ತಮಾಂಸಾದಿಗಳ ಅಭಾವವುಂಟಾಗಿ ಅದರ ಹುಟ್ಟಳಿದು ಹೋಗಿತ್ತು. ತಂದೆಯ ದೈಹಿಕ ಸ್ಥಿತಿಯೂ ಅಷ್ಟಕ್ಕಷ್ಟೆ. ಅವನ ಮುಖಭಾವ ಒಂದು ಬಗೆಯ ವಿಚಿತ್ರ ಆನಂದಜ್ಯೋತಿಯಿಂದ ಪ್ರದೀಪ್ತವಾಗಿದ್ದರೂ ನೂರು ಸಂಕಟಗಳನ್ನು ಸಾರಿ ಹೇಳುವಂತಿತ್ತು. ಯಜಮಾನ ಮಗಳ ಇಚ್ಛೆಯ ಪ್ರಕಾರ ದೋಸೆಗಳಿಗೆ ಆರ್ಡರ್ ಕೊಟ್ಟ. ಅವಳು ಎರಡು ಕೈಗಳಿಗೂ ಬ್ಯಾಂಡೇಜ್‌ಸುತ್ತಿ ಕೈ ಚೀಲಗಳನ್ನು ತೊಟ್ಟಿದ್ದಳು. ದೋಸೆ ಬಂದನಂತರ ಅವನ್ನು ಕಳಚದೆಯೇ ಕೈ ಹಚ್ಚಿದಳು. ಚಂಚವನ್ನು ಹಿಡಿದುಕೊಳ್ಳಲಾರದಷ್ಟು ಕೈಗಳು ಕಂಪಿಸುತ್ತಿದ್ದುವು. ಆ ಸ್ಥಿತಿಯಲ್ಲಿ ಇಲ್ಲಿಗೇಕೆ ಬಂದಳೋ ಎನ್ನಿಸಿತು ಮಹಮ್ಮದನಿಗೆ. ಒಮ್ಮೆ ಹೊರ ಹೋಗುವ ಯೋಚನೆ-ಆದರೆ ಅವರೊಂದಿಗೆ ಅಸಭ್ಯತೆಯನ್ನು ತೋರಿಸುವ ಮನಸ್ಸಾಗಲಿಲ್ಲ. ನಿಧಾನಗತಿಯಲ್ಲಿ ಅವರ ಉಪಹಾರ ಮುಗಿದನಂತರ ಮಹಮ್ಮದ್ ಎದ್ದ. ಅವರೂ ಹಿಂದೆಯೇ ಎದ್ದರು.

ಹೋಟೆಲಿನ ಎದುರುಗಡೆ ವಿಶಾಲವಾದ ಉದ್ಯಾನ. ಸಂಜೆಯ ಹೊತ್ತಿನಲ್ಲಿ ಪರಿಸರದ ಹಿರಿಯರೂ ಮಕ್ಕಳೂ ಅಲ್ಲಿ ಕೂಡುತ್ತಾರೆ. ಬೆಂಚುಗಳು ಜನರಿಂದ ತುಂಬಿ ಹೋಗಿದ್ದುವು. ಮಹಮ್ಮದ ಹೋಟೆಲಿನ ಸಂಗಾತಿಗಳಿಗಾಗಿ ಅಲ್ಲೆಲ್ಲಾ ಸುತ್ತಾಡಿ ಒಂದು ಖಾಲಿ ಬೆಂಚಿದ್ದೆಡೆಗೆ ಅವರನ್ನು ಕರೆದುಕೊಂಡು ಹೋದ. ಅವರು ಕುಳಿತ ನಂತರ ಹಿಂದಿರುಗಲಿದ್ದ ಅವನನ್ನು ನೋಡಿ ಯಜಮಾನ ಸೌಜನ್ಯಪೂರ್ವಕವಾಗಿ ಅಂದ,

''ತುಂಬ ಥ್ಯಾಂಕ್ಸ್!.... ನಮಗಾಗಿ ತೊಂದರೆ ತೆಗೆದುಕೊಂಡಿದ್ದೀರಿ.''

''ಇದೆಂತಹ ತೊಂದರೆ....?''

''ಇಲ್ಲೇ ಕುಳಿತುಕೊಳ್ಳಿ, ಮತ್ತೇಕೆ ನಿಮಗೆ ಬೇರೆ ಬೆಂಚು ಹುಡುಕುವ ತೊಂದರೆ?'' ಎಂದಳು ತರುಣಿ.

ಅತ್ಯಂತ ನಿಶ್ಶಕ್ತ ಸ್ಥಿತಿಯಲ್ಲಿ ಉಸಿರಾಡುತ್ತ ನುಡಿದ ಅವಳ ಮಾತಿಗೆ ಮನ್ನಣೆ ಕೊಡದಿರಲಾಗಲಿಲ್ಲ. ಮಹಮ್ಮದ ಅಲ್ಲಿಯೇ ಕುಳಿತ. ಅವರ ಬಗ್ಗೆ ಕರುಣೆ ಮೂಡಿ ಬಂತು. ವಿನಯಪೂರ್ವಕವಾಗಿ ಕೇಳಿದ,

''ಈ ತಂಡಿ ಹವೆ ನಿಮಗೆ ಒಗ್ಗುತ್ತದೆಯೇ? ನಿಮ್ಮ ಆರೋಗ್ಯ ಸರಿಯಾಗಿದ್ದಂತಿಲ್ಲ?''

''ತುಂಬ ಹಿಡಿಸುತ್ತೆ.... ಈ ಹವೆಗೋಸುಗವೇ ನಿತ್ಯ ಹೊರ ಹೊರಡುತ್ತೇವೆ.'' ಉದ್ಯಾನದಲ್ಲಿ ಜಿಗಿದಾಡುವ ಚೆಂಗೆನ್ನೆಗಳ ಮಕ್ಕಳ ಮೇಲೆ ದೃಷ್ಟಿಯನ್ನು ಹಾಯಿಸಿದ ಅವಳು ಸಂತುಷ್ಟಳಾದಳು. ವೃದ್ಧ ಮಹಾಶಯ ಲೋಕಾಭಿರಾಮವಾಗಿ ಅಂದ,

''ದಯವಿಟ್ಟು ಕ್ಷಮಿಸಿ, ನಮ್ಮಿಂದ ನಿಮಗೆ ತೊಂದರೆಯಾಯಿತು.''

''ಛೆಃ! ಛೇಃ! ಎಲ್ಲಿಯಾದರುಂಟೇ?''

''ನೀವೊಬ್ಬರೇ ಇಲ್ಲಿ ಆರಾಮವಾಗಿ ಕುಳಿತುಕೊಳ್ಳುತಿದ್ದಿರೇನೋ.... ನಮ್ಮಿಂದ ಕಿನಿಸಿಗೆ.''

''ಇದು ಸಾರ್ವಜನಿಕ ಸ್ಥಳ. ಇಲ್ಲಿ ಎಲ್ಲರಿಗೂ ಸಮಾನಾವಕಾಶವಿದೆ.''

ಮರುಕ್ಷಣದಲ್ಲಿ ಜೈನಾಬಿ ಅಂತಃಪಟಲದಲ್ಲಿ ಮೂಡಿ ನಿಂತಳು.

ಗಾಳಿ ಬೆಳಕುಗಳಿಲ್ಲದೆ ಬಿಳಚಿಕೊಂಡ ಮುಖ.... ದೀನ ನೋಟ.... ಆಶಾಬಾವ. ಒಂದೊಂದೂ ಯಥಾ ಪ್ರಕಾರ ಗೋಚರಿಸಿದುವು. ಅವಳ ದೀನ ವಾಣಿಯ ಬೇಡಿಕೆ ಕರ್ಣಪಟಲದ ಮೇಲೆ ನವೋನವವಾಗಿ ಝೇಂಕರಿಸಿತು. ''ಮನೆಯಲ್ಲಿ ಒಬ್ಬಳೇ ಇದ್ದೂ ಇದ್ದೂ ಬೇಸರವಾಗಿ ಬಿಟ್ಟಿದೆ. ಸಂಜೆಯಾದರೂ ಹೊರಗೆ ಹೋಗಿ ಬರೋಣ. ನೀನೇ ಬಂದು ಕರೆದುಕೊಂಡು ಹೋಗು.''

ಆ ಕರಿಯ ಮಾಸಲು ಬುರ್ಕಾ ಪ್ರೇತದೋಪಾದಿಯಲ್ಲಿ ಚಿತ್ತಭಿತ್ತಿಯಲ್ಲಿ ಸುಳಿದಳಿಯಿತು. ಸ್ತ್ರೀ ಸೌಜನ್ಯಕ್ಕೆ ಪುರುಷ ಮತಿಯ ಕಲ್ಪನೆಯ ಆವರಣ! ವಿಷಯ ಮನವರಿಕೆಯಾದಾಗ ಹೃದಯ ವ್ಯಾಪ್ತಿಗೆ ಮೀರಿಮಿಡಿಯಿತು. ಅವರ್ಣನೀಯವಾದ ಸಂಕಟದ ಝರಿ ನರನಾಡಿಗಳಲ್ಲಿ ಆರೋಹಣ ಅವರೋಹಣ ನಡೆಸಿತು.

★ ★ ★ ★ ★

ವೃದ್ಧ ಮಹಾಶಯ ಮಕ್ಕಳ ಮನಮೋಹನೀಯ ಚಿತ್ರವನ್ನು ಕಣ್ತುಂಬ ನೋಡುತ್ತ ಅತ್ಯಂತ ವಿಜಾತೀಯವಾದ ಧ್ವನಿಯಲ್ಲಿ ನುಡಿದ,

''ಒಂದುಕಾಲದಲ್ಲಿ ನನ್ನ ಜೀವನವೂ ಇಷ್ಟೇ ಅಹ್ಲಾದಪೂರ್ಣವಾಗಿತ್ತು. ಈ ಜೀವನ ಯಾರಿಗೂ ಸುಖವನ್ನೇ ಪ್ರಸಾದಿಸುವುದಿಲ್ಲ. ಸುಖವಿದ್ದಾಗ ಮೈಮರೆತು ಬಿಡುತ್ತೇವೆ. ಅನಂತರ ಎಲ್ಲಾ ಸಪ್ಪೆ.''

ಆ ನುಡಿ ಎದೆಯಾಳಕ್ಕೆ ಕಾದರಸದಂತೆ ಇಳಿಯಿತು. ಯಾಂತ್ರಿಕವಾಗಿ ಉತ್ತರಿಸಿದ ಮಹಮದ್.

''ಈ ಜಗತ್ತು ಇಷ್ಟೆ.''

''ನಿಮ್ಮ ಜೀವನ ಸುಖವಾಗಿರಬಹುದೆಂದು ಭಾವಿಸುವೆ.''

''ಇಲ್ಲ. ನಾನೂ ಬಹಳ ಸಂಕಟದಲ್ಲಿರುವೆ,''

''ಬಹುಶಃ ಅದಕ್ಕೇ ನಮಗೆ ನಿಮಗೆ ಈ ಸ್ನೇಹ ಬೆಳೆಯಿತೇನೋ....''

ಮಹಮ್ಮದ ಮುಗುಳು ನಕ್ಕ.

''ನೋಡಿ, ನಮಗೆ ಆರೋಗ್ಯ ಭಾಗ್ಯವೇ ಇಲ್ಲ. ಬದುಕು ನರಕಮಯವಾಗಿದೆ'' ಎಂದಳು ಅವಳು.

''ಯಾವ ಚಿಕಿತ್ಸೆಯೂ ಸಹಾಯ ಮಾಡಲಿಲ್ಲವೇ?''

''ಡಾಕ್ಟರಿಂದ ಡಾಕ್ಟರಿಗೆ ಅಲೆದು ಸಾಕಾಯಿತು. ದೈವಕ್ಕೆ ಕರುಣೆಯಿಲ್ಲ.'' ಧ್ವನಿ ಕಂಪಾಯಮಾನವಾಗಿತ್ತು. ಯಜಮಾನ ನಸು ಕಂಪಿಸುವ ತನ್ನ ಕೈಗಳನ್ನು ಮುಂದೆ ಮಾಡಿ ''ಈ ಹಸ್ತಗಳಿಂದ ಜೀವನ ನಡೆಸಬೇಕು ನೋಡಿ!'' ಎಂದ.

ಮಹಮ್ಮದ ತರುಣಿಯ ಕೈಗಳೂ ನಡುಗುತ್ತಿದುದನ್ನು ನೋಡಿ ಅಂದ,

''ಬಹುಶಃ ನಿಮ್ಮ ಕಾಹಿಲೆ ಆನುವಂಶಿಕವಾಗಿರಬಹುದೇನೋ....''

''ಆ ದೋಷವೂ ಇಲ್ಲದಿಲ್ಲ.... ಆದರೆ ನನ್ನ ಮಗಳು ಈಗಲೇ ಅನುಭವಿಸುತಿದ್ದಾಳೆ. ಅದೇ ತುಂಬ ಕಷ್ಟಕರವಾಗಿದೆ. ನನ್ನ ನಂತರ ಅವಳನ್ನು ನೋಡಿಕೊಳ್ಳುವವರಿಲ್ಲ.''

''ಪಾಪ!''

''ನನಗೆ ಶುರುವಾದುದು ಅಕಸ್ಮಾತ್ ತಗುಲಿದ ಭಾರಿ ಧಕ್ಕೆಯಿಂದ, ಎರಡುಬಾರಿ ತೀವ್ರತರವಾದ ಧಕ್ಕೆಗೆ ಒಳಗಾಗಿರುವೆ!''

''ಹಾಗಾಗದಿದ್ದಲ್ಲಿ ಖಂಡಿತ ಅಪ್ಪ ಇನ್ನೂ ಆರೋಗ್ಯವಾಗಿರುತಿದ್ದರು'' ಎಂದಳು ತರುಣಿ.

''ಹೌದೇ?''

ಹೌದಪ್ಪಾ! ಮೊದಲನೆಯ ಧಕ್ಕೆ ಬಡಿದುದು ನನ್ನ ಪತ್ನಿ ಅಕಸ್ಮಿಕಕ್ಕೆ ಒಳಗಾದಾಗ ಎರಡನೆಯದು ಈ ಮಗಳನ್ನು ಜೀವಂತ ಹೂಳಿದಾಗ!''

ಒಮ್ಮೆಲೇ ಮಹಮ್ಮದ ಮೈಯೆಲ್ಲಾ ಕಿವಿಯಾದ. ತಾನು ಬರೆಯ ಬೇಕೆಂದಿರುವ ಕಾದಂಬರಿಗೆ ರಸವತ್ತಾದ ಕಥಾವಸ್ತು ದೊರಕಿತು ಎಂಬ ಆನಂದಕುತೂಹಲ ಎದೆಯಾಳದಲ್ಲಿ ಮೊಳೆಯಿತು. ಅತ್ಯಂತ ಆಶ್ಚರ್ಯಯುಕ್ತವಾಣಿಯಲ್ಲಿ ಪ್ರಶ್ನಿಸಿದ ''ಛೇ! ಎಂತಹ ಆಶ್ಚರ್ಯ? ಅದು ಹೇಗೆ ಸಾಧ್ಯವಾಯಿತು?''

ಬೆಳ್ಳಿಯಲ್ಲಿ ಕಡೆದ ಬೊಂಬೆಯಂತೆ ಮೂರ್ತಿವೆತ್ತು ಕುಳಿತಿದ್ದ ತರುಣಿ ಆಶ್ಚರ್ಯಸೂಚನಾ ಮಾತ್ರದಿಂದ ನುಡಿದಳು ''ಬಹುಶಃ ನನಗೆ ಸಾಯುವ ಗಡುವೊಂದಿತ್ತೇನೋ.... ಅದು ಕಳೆದು ಹೋಯಿತು!''

''ಹೌದು! ಇನ್ನಾದರೂ ನೀನು ಆರೋಗ್ಯ ಗಳಿಸಿಕೊಂಡರೆ ಸಾಕು.'' ಎಂದು ಹಾರೈಸಿದ ವೃದ್ಧಮಹಾಶಯ. ಮುಖಭಾವ ಸುಖದುಃಖಗಳ ರುದ್ರಗಣೆಯಾಗಿತ್ತು.

ಮಹಮ್ಮದ ಕುತೂಹಲಾವಿಷ್ಟನಾಗಿ ಪ್ರಶ್ನಿಸಿದ ''ಅದು ಹೇಗೆ ಸಂಭವಿಸಿತು ಹೇಳಿ ಸ್ವಾಮಿ?''

''ನನ್ನ ಮಡದಿ ಇರುವ ತನಕ ನಾನು ನನ್ನ ಎಸ್ಟೇಟಿಗೆ ಮುಖ ಹಾಕಿದವನಲ್ಲ. ಅವಳು ಅತ್ಯಂತ ಸಮೃದ್ಧಿಯಾಗಿ ನಡೆಸಿಕೊಂಡು ಹೋಗಬಲ್ಲವಳಾಗಿದ್ದಳು. ದುರದೃಷ್ಟವಾಶಾತ್ ಅವಳು ಅಕಸ್ಮಿಕಕ್ಕೆ ಒಳಗಾದಾಗ ನನಗೆ ತೀವ್ರತರ ಧಕ್ಕೆ ತಾಗಿತು. ಅದರಿಂದ ಇನ್ನೂ ಚೇತರಿಸಿಕೊಳ್ಳದಿರುವಾಗಲೇ ಈ ಜೂಲಿ ಹೃದ್ರೋಗದಿಂದ ಮೃತಪಟ್ಟಳು. ಅದಂತೂ ಎರಡನೆಯ ಭಯಂಕರ ಧಕ್ಕೆ!''

ಮಹಮ್ಮದ್ ತಂದೆ ಮಗಳಿಬ್ಬರನ್ನೂ ಕುತೂಹಲದಿಂದ ನಿಟ್ಟಿಸಿದ.

ಜೂಲಿ ಬಳಲಿದ್ದರೂ ತುಟಿಗಳಲ್ಲಿ ಮೃದುಹಾಸ ಸೂಸಿ ನುಡಿದಳು.

''ನೋಡಿ! ಸತ್ತದ್ದು ಮಾತ್ರವಲ್ಲ; ಸಮಾಧಿಗೆ ಅಣಿ ಮಾಡಲ್ಪಟ್ಟು ಬದುಕಿ ಬಂದಿರುವೆ!''

''ಖಂಡಿತವಾಗಿ....?''

''ಹೌದು! ನಿಮ್ಮ ಮುಂದೆಯೇ ಇದ್ದೇನಲ್ಲ!''

''ನಿಮಗದರಿಂದ ತ್ರಾಸವಾಗದಿದ್ದರೆ ದಯವಿಟ್ಟು ವಿವರಿಸಿರಿ.''

''ಪರವಾಯಿಲ್ಲ; ಹೇಳುವೆ'' ಎಂದ ವೃದ್ಧ ಮಹಾಶಯ.

★ ★ ★ ★ ★

ತರುಣಿ ಕ್ಷೀಣಿತ ಕಂಠಸ್ವನದಿಂದ ನುಡಿದಳು,

''ನನ್ನ ತಾಯಿ ಬದುಕಿದ್ದರೆ ನಮಗೆ ಯಾವ ಕೊರತೆಯೂ ಇರುತ್ತಿರಲಿಲ್ಲ. ಅವಳು ಕಣ್ಮರೆಯಾದನಂತರ ತೀವ್ರತರ ದೌರ್ಭಾಗ್ಯ ನಮಗಂಟಿಕೊಂಡಿತು. ಬಹುಶಃ ಕೆಲವು ವ್ಯಕ್ತಿಗಳು ಬರುವಾಗ ತಂದಷ್ಟೇ ಸೌಭಾಗ್ಯವನ್ನು ಹೋಗುವಾಗ ಕೊಂಡೊಯ್ಯುತ್ತಾರೆಂದು ತೋರುತ್ತದೆ!''

ಮಹಮ್ಮದ ಮುಗುಳು ನಕ್ಕ.

ಜೂಲಿ ಮುಂದುವರಿದಳು ''ಅಮ್ಮ ಬಹುಮೂಲ್ಯವಾದ ಒಡವೆಗಳನ್ನು ಹೊಂದಿದ್ದಳು. ಅವಳು ತೀರಿಕೊಂಡ ತರುಣದಲ್ಲಿ ಪ್ರಾಸಂಗಿಕವಾಗಿ ನಾನು ಅಪ್ಪನಿಗೆ ಹೇಳಿದ್ದೆ, ''ಅಪ್ಪಾ! ಈ ಒಡವೆಗಳಿಂದ ಇನ್ನು ಯಾರಿಗೆ ಪ್ರಯೋಜನ? ಅಮ್ಮನ ಶವಕ್ಕೆ ತೊಡಿಸಿ ಅಲಂಕಾರಯುತವಾಗಿ ಸಮಾಧಿ ಮಾಡಬಹುದಾಗಿತ್ತು'' ಸ್ವಲ್ಪ ಹೊತ್ತು ಸುಮ್ಮನಿದ್ದು ನಂತರ ತಾನೇತಾನಾಗಿ ನುಡಿದಳು ''ಬಹುಶಃ ಆ ಮಾತೇ

ಒಡವೆಗಳನ್ನು ನನ್ನ ಶವಕ್ಕೆ ತೊಡಿಸಲು ಕಾರಣವಾಗಿರಬಹುದು, ಎಂದು ನನಗೆ ಈಗ ಅನಿಸುತ್ತದೆ. ಅವತ್ತು ನಾನು ಹೇಳಿದಾಗ ತಂದೆ ಸ್ವಲ್ಪ ಯೋಚಿಸಿ ''ಎಲ್ಲಿಯ ಮಾತು? ಇರಲಿ, ನಿನಗಾಗುತ್ತವೆ.'' ಎಂದರು.

''ಈ ಕಾಹಿಲೆಯ ಶರೀರಕ್ಕೆ ಒಡವೆ?'' ನಾನು ಹೌಹಾರಿದೆ.

''ಅನಂತರ ಎಷ್ಟೋ ಬಾರಿ ಅಪ್ಪ ನನ್ನನ್ನು ಆ ಒಡವೆಗಳನ್ನು ಧರಿಸಲು ಒತ್ತಾಯಿಸಿದ್ದರು. ಆದರೂ ನಾನು ಧರಿಸಿರಲಿಲ್ಲ. ಕೊನೆಗೆ ಅವೇ ನನ್ನ ಪ್ರಾಣವನ್ನು ಉಳಿಸಿದುವು ನೋಡಿ!''

ಮುಂದಿನ ಪ್ರಸಂಗವನ್ನು ಯಜಮಾನ ಹೇಳತೊಡಗಿದ,

''ಜೂಲಿ ಅವುಗಳನ್ನು ಧರಿಸಲಿಲ್ಲವಾದರೂ ಅವುಗಳಲ್ಲಿ ಆಸೆ ಇಟ್ಟುಕೊಂಡಿದ್ದಳು. ಅವಳು ಮೊದಲಿಂದ ಹೀಗೆಯೆ ತುಂಬ ನಿಶ್ಶಕ್ತಿ. ಚಿಕಿತ್ಸೆಗಾಗಿ ಅಪಾರವಾದ ಹಣ ವ್ಯಯವಾಗಿದೆ. ಆದರೂ ಚೇತರಿಸಿಕೊಳ್ಳಲಿಲ್ಲ. ಕಳೆದ ತಿಂಗಳು ಅಂಗಳದಲ್ಲಿ ಕುಸಿದು ಬಿದ್ದಳು. ಹೋಗಿ ಎತ್ತುವುದರೊಳಗಾಗಿ ಜೀವನಾಡಿ ನಿಂತು ಹೋಗಿತ್ತು! ಓಡಿ ಹೋಗಿ ವೈದ್ಯರನ್ನು ಕರೆತಂದೆ. ಅವರು ಪರೀಕ್ಷಿಸಿ ಪ್ರಾಣ ಹೋಗಿದೆ ಎಂದರು. ನನಗೆ ಅಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಸಂಕಟವಾಯಿತು. ಆದರೆ ಆಸ್ತಿಯನ್ನು ಚಾರಿಟಿಗೆ ಬರೆಯದೆ ಹೋಗುವುದು ಹೇಗೆ? ದುಃಖವನ್ನು ನುಂಗಿ ಮಗಳ ಶವವನ್ನು ಎರಡು ದಿನ ಪರ್ಯಂತ ಮನೆಯಲ್ಲಿಟ್ಟುಕೊಂಡು ಎಲ್ಲಾ ಒಡವೆಗಳನ್ನೂ ತೊಡಿಸಿ ಬಹಳ ಸಂಕಟಪಟ್ಟೆ. ಮೂರನೆಯದಿನ ಒಡವೆಗಳ ಸಹಿತ ಅವಳ ತಾಯಿಯ ಸಮಾಧಿಯ ಪಕ್ಕದಲ್ಲೆ ಸಮಾಧಿಗೆ ಅಣಿ ಮಾಡಲಾಯಿತು. ಅದು ಮನೆಯಿಂದ ಹದಿನೈದು ಮಾರು ದೂರದಲ್ಲಿ ತೋಟದ ಬದಿಯ ಸ್ಥಳ. ಅಂದು ಬಹಳ ಬಿಸಿಲು ಇದ್ದುದರಿಂದ ನಾನು ಒಳಗಡೆಯೇ ಇದ್ದು ವಿಶ್ರಾಂತಿ ತೆಗೆದುಕೊಂಡೆ. ನಾನು ಒಳಗಡೆ ಉಳಿದುದನ್ನು ನೋಡಿ ಮನೆಯ ಆಳು ಒಡವೆಗಳನ್ನು ಕಳವು ಮಾಡಲು ಶವದಾನಿಯನ್ನು ತೆಗೆದು ಅವಳಿಂದ ಎಲ್ಲಾ ಒಡವೆಗಳನ್ನು ತೆಗೆದುಕೊಳ್ಳುವ ಅವಸರದಲ್ಲಿ ಕುತ್ತಿಗೆಗೆ ಕೈಗೆ ಬಹಳ ಪೆಟ್ಟು ಮಾಡಿದ್ದಾನೆ. ಆಗ ಅವಳಿಗೆ ಎಚ್ಚರವಾಗಿ ಕಣ್ತೆರೆದಿದ್ದಾಳೆ. ಒಡನೆ ಆಳು ಹೆದರಿ ಓಟ ಕಿತ್ತಿದ್ದಾನೆ! ಅವಳು ಸಂಪೂರ್ಣಜ್ಞಾನ ಬರುವವರೆಗೆ ಅಲ್ಲೇ ಇದ್ದು ಅನಂತರ ಮನೆಗೆ ಬಂದಿದ್ದಾಳೆ. ಆ ಒಡವೆಗಳನ್ನು ತೊಡಿಸದೆ ಹೋಗಿದ್ದಿದ್ದರೆ ಜೂಲಿ ಅಲ್ಲೇ ಸಮಾಧಿಯಾಗುತ್ತಿದ್ದಳು. ಅಂತೂ ದೇವರು ಈ ರೀತಿಯಲ್ಲಿ ಕಾಪಾಡಿದ!''

"ಅವನನ್ನು ಬಹಳ ಕಾಲದಿಂದ ಸ್ವಂತ ಮನೆಯವನೆಂಬಂತೆ ನೋಡಿ ಕೊಂಡಿದ್ದಾಳೆ ತಾಯಿ. ಇದು ಮಾನವ ಸಮಾಜ!" ಎಂದಳು ಜೂಲಿ ಬ್ಯಾಂಡೇಜು ಸುತ್ತಿದ್ದ ಬೆರಳುಗಳ ಕಡೆ ನೋಡಿಕೊಳ್ಳುತ್ತ.

"ಆಗಲಿ, ಅವನು ದ್ರೋಹ ಬಗೆದರೂ ಅದರಿಂದ ನಿಮ್ಮ ಪ್ರಾಣ ಉಳಿಯಿತಲ್ಲ?"

ವೃದ್ಧ ಮಹಾಶಯ ಉಕ್ಕಿ ಬಂದ ಕಂಬನಿಯನ್ನು ಕರವಸ್ತ್ರದಿಂದ ತೀಡಿಕೊಂಡ. ಮಗಳ ಕಣ್ಣುಗಳಲ್ಲೂ ಪ್ರತಿಹನಿಗಳು ಮೂಡಿದುವು. ಭಾವೋದ್ವೇಗದಿಂದ ಮುಖಮಂಡಲ ನಸುಗೆಂಪು ತಳೆಯಿತು ದೇಹದಾದ್ಯಂತ ನಸುಕಂಪನದ ಅಲೆ ಹರಿದಾಡುತಿತ್ತು.

★ ★ ★ ★ ★

ಅಪೂರ್ವ ಕಥಾವಸ್ತು ದೊರೆಯಿತು. ಜೊತೆಗೆ ಆ ಆಳಿನ ಭಕ್ಷಕ ಮನೋಭಾವವೂ ತಿಳಿದು ಬಂತು. ಮಹಮ್ಮದ್ ಅವರಿಬ್ಬರನ್ನೂ ಅಭಿನಂದಿಸಿ ಮನೆಯ ಕಡೆ ಹೊರಟ. ತಲೆ ಹಲವಾರು ಯೋಚನೆಗಳ ಬೀಡಾದರೆ ಒಡಲು ನೂರಾರು ಸಂಕಟಗಳ ಮಡುವಾಗಿತ್ತು. ಚಿತ್ತಭಿತ್ತಿಯಲ್ಲಿ ಮಡದಿ ಜೈನಾಬಿಯ ಮುಖಶ್ರೀ ಚಲಚಿತ್ರದಂತೆ ಸುಳಿದಳಿಯಿತು. ಅವಳ ಭಾವಭಂಗಿಯಲ್ಲಿನ ಆಶಾಲಹರಿ ತರಂಗತರಂಗವಾಗಿ ಮನವನ್ನು ಮುತ್ತಿತು. ಮಿನುಮಿನುಗುವ ಕಣ್ಣುಗಳಲ್ಲಿನ ವಿನೀತಭಾವ ತನುಮನಗಳನ್ನು ಗಾಣಕ್ಕೆ ಕೊಟ್ಟ ಕಬ್ಬಿನಂತೆ ಹಿಂಡಿತು. ಹೆಜ್ಜೆಗಳು ತತ್ತರಿಸಿದುವು. ಪ್ರಥಮಾಸವವನ್ನು ಕುಡಿದವರಂತೆ ಶರೀರ ಡೋಲಾಯಮಾನವಾಯಿತು. ಅಂತೂ ಆ ದೂರದ ಹಾದಿಯನ್ನು ಕಳೆದು ಮನೆಯನ್ನು ತಲುಪುವಾಗ ಕತ್ತಲು ಕವಿಯುತಿತ್ತು. ಚಿದಾಕಾಶದಲ್ಲಿ ಅಪೂರ್ವವಾದ ನವಜ್ಯೋತಿ ಬೆಳಗುತಿತ್ತು. ಒಳ ಹೋದವನೇ ಪೀರನಿಗೆಂದ.

"ನನಗಿಂದು ಹಸಿವೆಯಿಲ್ಲ. ಒಂದಿಷ್ಟು ಹಣ್ಣು ಹಂಪಲು ಕೊಂಡು ತಾ."

ಅವನು ಹಣದೊಂದಿಗೆ ಹೊರಹೋಗುತ್ತಲೂ ಕದ ಮುಚ್ಚಿ ಅವನ ಪೆಟ್ಟಿಗೆಯ ಪರಿಶೋಧನೆಗೆ ಕೈ ಹಚ್ಚಿದ. ಬಟ್ಟೆಗಳನ್ನೆಲ್ಲಾ ಒಂದೊಂದಾಗಿ ತೆಗೆದರೆ ತಳದಲ್ಲಿ ಹರಿತವಾದ ಚೂರಿ! ಅದನ್ನು ನೋಡಿದೊಡನೆಯೇ ವಿದ್ಯುತ್‌ಸ್ಪರ್ಶವಾದಂತಾಗಿ ಜಂಗಾಬಲವೇ ಬಿದ್ದು ಹೋಯಿತು. ಘಳಿಗೆ ಕಾಲ ಕಣ್ಮುಂದೆ ರುದ್ರ ಭಯಂಕರ ದೃಶ್ಯವೇ ಮೈವೆತ್ತು ನಿಂತಿತು. ಮಕ್ಕಳಿಗೂ ಇಲ್ಲದ, ಸತಿಗೂ ಇಲ್ಲದ ತನ್ನ ಸೊತ್ತು

ಹಲ್ಕಿರಿದು ಅಣಕಿಸಿತು. ಸ್ವಲ್ಪ ಹೊತ್ತು ಮೈಮರವಟ್ಟಂತೆ ನಿಂತ. ಜೈನಾಬಿಯ ಆತಂಕಪೂರ್ಣ ನುಡಿಗಳು ಕಿವಿಯನ್ನು ಕರುಣಾಜನಕವಾಗಿ ಮುತ್ತಿದುವು.

''ಮನೆಗೆಲಸಕ್ಕೆ ಸಹಾಯಕರಿಲ್ಲ. ನಾನೊಬ್ಬಳೇ ಎಲ್ಲಾ ಗೋಳನ್ನು ಹೊತ್ತುಕೊಳ್ಳಬೇಕು!''

''ಸರಿ, ಸರಿ! ಇದಿಷ್ಟು ಏನು ಮಹಾ ಕಷ್ಟ? ನೀನೇನು ಹೊರಹೋಗಿ ದುಡಿಯಬೇಕೆ?''

''ಒಳ್ಳೊಳ್ಳೆಯ ಬಟ್ಟೆ ಬರೆಗಳಿಲ್ಲ....ಹೊರಹೋಗುವಂತಿಲ್ಲ ಈ ಗೋಳು ಯಾರಿಗೆ ಬೇಕು?''

''ತಳುಕಿನ ಬಟ್ಟೆಯುಟ್ಟು ಬೀದಿ ನಾಯಾಗುವುದು ನಿನ್ನ ಇಚ್ಛೆಯೆ?''

''ನಿನ್ನನ್ನು ಕೂಡಿದ್ದಕ್ಕೆ ನಾನು ಪಡೆದದ್ದು ಇಷ್ಟೆ.''

ಕರ್ಣಪಟಲ ಹರಿಯುವಂತೆ ಪ್ರತಿಧ್ವನಿಸುತಿತ್ತು ಚೀರುದನಿ.

ಕೊಳಕು ಉಡುಪಿನ ಶೀರ್ಣಿತ ಶರೀರ ಕರುಣಾಜನಕ ರೀತಿಯಲ್ಲಿ ಕಣ್ಮುಂದೆ ಸುಳಿದಾಡಿತು. ಕಣ್ಣುಗಳಲ್ಲಿ ಸ್ಥೂಲಸ್ಥೂಲ ಹನಿಗಳು ಉರುಳಿದುವು. ಒಂದೆರಡು ಘಳಿಗೆ ಕಣ್ಮುಚ್ಚಿ ಅತೀವ ನೋವನ್ನು ಅನುಭವಿಸಿದ. ನಿಂತ ನೆಲವೇ ಜಾರಿ ಹೋಗಿ ತಾನು ಅಗಾಧವಾದ ಸಮುದ್ರದಲ್ಲಿ ಬಿದ್ದು ತೊಳಲುತ್ತಿರುವಂತೆ ಉದ್ಭಾಸಿತವಾಯಿತು.

ಅನಂತರ ಅವನು ಮೊಟ್ಟಮೊದಲು ಕೈಕೊಂಡ ಕ್ರಮವೆಂದರೆ ತನ್ನ ಮಕ್ಕಳಿಗೆ ಉಯಿಲು ಬರೆದದ್ದು!

ಡಾ॥ ಮೇರಿಲೇನ್

....ಸಂಜೆಯ ಅದ್ಭುತ ಸೊಬಗು ವಿಸ್ವ ವೈಭವವನ್ನು ಮನೋಜ್ಞವಾಗಿ ಮುದ್ದಿಡುತಿತ್ತು.

....ಅಪರ ಪ್ರಾಂತದಲ್ಲಿ ಸುರಸುಂದರಿಯಾದ ದಿಙ್ಮೋಹಿನಿಯು ಕನಕಾಂಬರ-ಧಾರಿಣಿಯಾಗಿದ್ದಾಳೆ.

....ಅಲಿಪ್ತ ವಿಶ್ವ ಮಹಾ ಶೃಂಗದಲ್ಲಿ ರಾಸಲೀಲಾ ಲೋಲುಪ್ತಿಯಿಂದ ಪಯಣಿಸುವ ನಿತ್ಯ ಪಾಂಥ ಶೀತಲಸಿಕ್ತ ಮಂದಮಂದ ಮಾರುತನ ವೈಭವ.

ಡಾ॥ ಮೇರಿಲೇನ್ ವಿಶ್ವಸಂಸ್ಥೆಯ ಆಡಳಿತ ವಿಭಾಗಕ್ಕೆ ನೂತನ ಕಾರ್ಯದರ್ಶಿಣಿಯಾಗಿ ಪದಾರ್ಪಣೆ ಮಾಡಿದಾಗ, ತನಗೂ ಸ್ವರ್ಗಕ್ಕೂ ಮೂರೇ ಗೇಣು ಎಂಬಷ್ಟು ಆನಂದೋತ್ಸಾಹ ಮೂಡಿ ಮಹಾರಾಣಿಯ ಸಾರ್ವಭೌಮಿಕ ತುಲನೆಯಲ್ಲಿ ಕೆಲಸ ಆರಂಭಿಸಿದ್ದಳು. ಹೃದಯ ಮೃದಂಗ ಆಗಾಗ ಮನೋವೇಗದಿಂದ ವ್ಯಾಪ್ತಿಗೆ ಮೀರಿ ಮಿಡಿದು ಹೃದ್ರೋಗವೋ ಎಂಬ ಆಕುಲವನ್ನು ಎಷ್ಟೋ ಬಾರಿ ಮನಸ್ಸಿಗೆ ಮೂಡಿಸಿತ್ತು. ಅನಂತರ ಕ್ರಮಕ್ರಮೇಣ ಉದ್ವೇಗ ಕಡಿಮೆಯಾಗುತ್ತಲೂ ನಿರಂತರ ಪರಿವರ್ತಮಾನ ಬಾಹ್ಯ ಆಚರಣೆಯಲ್ಲಿ ಮುಳುಗಿ ಸ್ತಬ್ಧವಾಗಿ ಪ್ರಕೃತಿಸ್ಥಳಾದಳು.

ಕೆಲಸ, ಕೆಲಸ, ಕೆಲಸ ಮಾಡಿದಷ್ಟೂ ಮುಗಿಯದ ಕೆಲಸ. ಲೆಖ್ಖವಿಲ್ಲದಷ್ಟು ಟೈಪ್‌ರೈಟರ್‌ಗಳ ಕಟಕಟ ಸದ್ದು. ಕೆಲಸಗಾರರ ಗಲಿಬಿಲಿ-ದಸ್ಕತ್ತುಗಳ ಚಿತ್ರವಿಚಿತ್ರ ಪ್ರದರ್ಶನ. ವರ್ತಮಾನ ಯುಗಧರ್ಮದ ಯಂತ್ರಸಜ್ಜಿತ ಇಂದ್ರವೈಭವ ಆಲಯದಲ್ಲಿ-ಸರಸತಿಯ ಮನಮೋಹನೀಯ ಉಡಿಯಲ್ಲಿ ಅಮಿತ ಕಾರ್ಯಭಾರ; ಬುದ್ಧಿಭಾವದ ತುಲಾಭಾರ!

ಬಹುಶಃ,

ನಾಲ್ಕು ವಾರ ಕಳೆದ ಸುಮಾರಿನಲ್ಲಿ ಜನರಲ್ ಅಸೆಂಬ್ಲಿ ಕೂಡಿತು. ರಾಷ್ಟ್ರ ರಾಷ್ಟ್ರಗಳ ಪ್ರತಿನಿಧಿಗಳು ತಮ್ಮತಮ್ಮದೇ ಆದ ವಿಶಿಷ್ಟ ವೈಖರಿಯಲ್ಲಿ ರಾಜವೈಭವವನ್ನು

ಅಣಕಿಸುವಂತೆ ಪೀಠಗಳನ್ನಲಂಕರಿಸಿದರು. ಭಾಷಣಗಳು, ವಾದ-ವಿವಾದಗಳು ಕಿವಿ ಗಡಚಿಕ್ಕುವಂತೆ ಆರಂಭವಾದುವು. ಅಲಿಪ್ತ ನೀತಿ- ಸರ್ವಮಾನ್ಯತೆ-ವಿಶ್ವಶಾಂತಿ-ಯುದ್ಧಸ್ತಂಭನ ಇಂಥಿಂಥ ನಭೋಭೇರಿಯ ವಿಜೃಂಭಣೆ ಪ್ರತಿ ಮೂಲೆ-ಮೂಲೆಯಲ್ಲಿಯೂ ಪ್ರತಿಧ್ವನಿಸಬೇಕಿತ್ತು....ಆದರೆ, ಆದದ್ದೇನು?

ಡಾ|| ಮೇರಿಲೇನ್ ಆಶಿಸಿದ್ದ ವಿದ್ಯಾಧಿದೇವತೆಯ ಸಾಕ್ಷಾತ್ಕಾರ ಅಲ್ಲಿ ಪ್ರಾದುರ್ಭೂತವಾಯಿತೇ?

ನೋಡಿದರೆ ಅರಚುವವರು ಅರಚುತಿದ್ದರು....ಟೀಕಿಸುವವರು ಟೀಕಿಸುತ್ತಿದ್ದರು ....ಛೀಮಾರಿ ಹಾಕುವವರು 'ಛೀಮಾರಿ'ಗಳೇ ಆಗಿದ್ದರು! ಆ ವಾಕ್ಸರಣಿ, ಆ ಕಟು ಟೀಕೆ, ನಿಂದನೆ, ಭರ್ತ್ಸನೆ, ಆರೋಪಣೆ, ಪ್ರತ್ಯಾರೋಪಣೆಗಳು ಅನೇಕ ವೇಳೆ ನೀತಿ ನಿಯಮಗಳನ್ನು ಉಲ್ಲಂಘಿಸಿ ವಿಜೃಂಭಿಸುತ್ತಿದ್ದುವು!

ಒಡನೆ ಕೆಸರಿನಲ್ಲಿ ಮುಳ್ಳು ತುಳಿದಂತಾದಲು ಡಾ|| ಮೇರಿಲೇನ್. ಚಿತ್ತ ಭಾವೋದ್ವೇಗದಿಂದ ವ್ಯಾಕುಲಿತವಾಗಿ ಗತಕಾಲಕ್ಕೆ ಸರ್ರನೆ ಸರಿಯಿತು; ಚಿಕಾಗೊ ನಗರವನ್ನು ಹೊಕ್ಕು 'Mount Carmel Convent' ವಲಯದಲ್ಲಿ ಸುಲಲಿತವಾಗಿ ಸಂಚರಿಸಿತು. ಆ ಸಹಸ್ರ ಸಹಸ್ರ ಮಕ್ಕಳ ಹಾಲ್ಗೆನ್ನೆಗಳಲ್ಲಿ ಚಿಮ್ಮಿ ಬರುವ ಎಳೆನಗುವಿನ ವಿಮಲಧಾರೆ, ಮುಗ್ಧ ಮನದ ಮೃದು ಮಧುರ ಭಾವಧಾರೆ ಚಿತ್ತಭಿತ್ತಿಯಲ್ಲಿ ಚಲನ ಚಿತ್ರದಂತೆ ಸುಳಿಸುಳಿದಳಿಯಿತು. ಮನಃಪ್ರಾಣಗಳು ಆಲೋಚನಾ ತರಂಗಗಳಲ್ಲಿ ತೇಲಿದುವು.

ದಿನಚರಿ ಅಂತ್ಯಗೊಂಡಾಗ ಉಸಿರನ್ನು ಬಿಗಿಹಿಡಿದು ಬೃಹದ್ ಪ್ರಾಂಗಣವನ್ನು ದಾಟಿದಳು ಡಾ|| ಮೇರಿಲೇನ್. ನೆತ್ತರಿನ ಕಣಕಣವೂ ಹೆಪ್ಪುಗಟ್ಟಿದಂತೆ ರೋಮರೋಮವೂ ಉದ್ಬುದ್ಧವಾದುವು. ಹೃದಯಕುಂಡ ಪಶ್ಚಾತ್ತಾಪದಿಂದ ಕುದಿಯುತ್ತ ಮುಕ್ತಿಯ ಘೋಷಣೆ ಮಾಡುತಿತ್ತು. ಮನೋರಂಗದಲ್ಲಿ ಭಾವವಿಭಾವಗಳ ಅಕಾಂಡತಾಂಡವ ನೃತ್ಯ ಆರಂಭವಾಯಿತು. ದೃಷ್ಟಿ ಹಾದಿಯ ನೇರಕ್ಕೆ ಹರಿದರೂ ಏನನ್ನೂ ನೋಡುತ್ತಿರಲಿಲ್ಲವೇನೋ......ವರಾಂಡದ ಸಾಲು ಮೆಟ್ಟಲುಗಳನ್ನು ಇಳಿದು ನೀರಿನ ಕಾರಂಜಿಯ ಬಳಿಗೆ ಬರುತ್ತಲೂ ಡಾ|| ಎಡ್ವರ್ಡ್ ಎದುರಾದ. ಇಬ್ಬರ ಮುಖದಲ್ಲೂ ಮುಗುಳ್ನಗೆ ಮೂಡಿತು.

''ಗುಡ್ ಈವ್ನಿಂಗ್ ಡಾಕ್ಟರ್!''

''ಗುಡ್ ಈವ್ನಿಂಗ್ ಡಾಕ್ಟರ್!''

ಪರಸ್ಪರ ಆತ್ಮೀಯತೆಯಿಂದ ಕೈಕುಲುಕಿದರು. ಮುಖಭಾವ ಪ್ರಸನ್ನ ಮನೋಹರವಾಯಿತು.

''ಯಾವ ಕಡೆ ಹೊರಟಿರುವಿ?'' ಡಾ॥ಎಡ್ವರ್ಡ್ ಕೇಳಿದ.

''ನಾನಿನ್ನೂ ಯೋಚಿಸಿಯೇ ಇಲ್ಲ.''

''ಇದೀಗ ಚೆನ್ನಾಗಿದೆ!''

ಇಬ್ಬರೂ ನಕ್ಕುಬಿಟ್ಟರು.

ಕೆಲಸ ಮುಗಿಸಿ ಹೊರ ಹೋಗುವವರ ಅಪಾರವಾದ ಒತ್ತಡವಿದ್ದುದರಿಂದ ಹಾದಿಯಿಂದ ಸರಿದು ಇಬ್ಬರೂ ಬದಿಗೆ ನಿಂತರು. ಡಾ॥ ಮೇರಿಲೇನ್ ಮುಖವನ್ನು ಕರವಸ್ತ್ರದಿಂದ ಒರಿಸಿಕೊಳ್ಳುತ್ತ ಉತ್ತರಿಸಿದಳು,

''ಹೌದಪ್ಪಾ! ಇದುವರೆಗೆ ಸ್ವಂತ ವಿಚಾರ ಯೋಚಿಸುವಷ್ಟು ಸಮಯವಾದರೂ ಎಲ್ಲಿತ್ತು? ಏನಿದ್ದರೂ ಇನ್ನು ಅದನ್ನು ಯೋಚಿಸತಕ್ಕದ್ದು!''

''ವಾಸ್ತವ್ಯ'' ಎಂದ ಡಾ॥ ಎಡ್ವರ್ಡ್ ಒಂದು ಕ್ಷಣ ತಡೆದು ಪುನಃ ಕೇಳಿದ ''ಸರಿ ಇನ್ನು?''

''ತಲೆ ಚಿಟ್ಟು ಹಿಡಿದು ಹೋಗಿದೆ, ಸ್ವಲ್ಪ ವಿಶ್ರಾಂತಿ ಬೇಕು, ಹೋಟೆಲಿಗೆ ಹೋದರೆ ಒಳ್ಳೆಯದು.''

''ನಡೆ; ನಾನು ಹೊರಟಿರುವುದೂ ಅಲ್ಲಿಗೆ......''

''ನಿನ್ನೊಂದಿಗೆ ಇನ್ನಾರಿದ್ದಾರೆ?''

''ಯಾರೂ ಇಲ್ಲ.''

''ನನಗೆ ತಣ್ಣಗಿರೋಣ ಎನ್ನಿಸಿದೆ. ಸದ್ದುಗದ್ದಲದಿಂದ ದೂರವಾಗದ ಹೊರತು ಮನಸ್ಸಿಗೆ ಹಿತ ಬರುವುದಿಲ್ಲ; ಅಂತಲೇ ಕೇಳಿದೆ.''

''ಯಾರೂ ಇಲ್ಲ. ಎಷ್ಟು ಬೇಕಾದರೂ ತಣ್ಣಗಿರಬಹುದು.''

''ದಿನಕ್ಕೆ ಒಂದೆರಡು ಗಂಟೆಯಾದರೂ ಏಕಾಂಗಿಯಾಗಿಲ್ಲದಿದ್ದರೆ ಕಷ್ಟ. ತಲೆ ಅಷ್ಟೊಂದು ರಕ್ತ ಒತ್ತಡವನ್ನು ಸಹಿಸಲಾರದು.''

''ನೀನು ಸುಮ್ಮಸುಮ್ಮನೆ ತಲೆ ಕೆಡಿಸಿಕೊಳ್ಳುತ್ತಿ....ಎಲ್ಲವನ್ನೂ ಸುಲಭದರಲ್ಲಿ ಜೀರ್ಣಸಿಕೊಳ್ಳಬೇಕು.''

''ನನ್ನ ಸ್ವಭಾವವೇ ಹಾಗೆ. ಯಾವುದನ್ನೇ ಹಿಡಿದರೂ ಅದರಲ್ಲಿ ಸಂಪೂರ್ಣ ಮುಳುಗಿ ಬಿಡುವೆ.''

''ಅದೇ ತಪ್ಪು! ಇಲ್ಲದ ಸಲ್ಲದ ಚಿಂತೆಗೆ ಕಾರಣ.''

ಡಾ॥ ಮೇರಿಲೇನ್ 'ಹೌದು' ಎಂಬಂತೆ ತಲೆದೂಗಿದಳು. ಮಾತಾಡಲಿಲ್ಲ.

ಡಾ॥ ಎಡ್ವರ್ಡ್ ಕಾರಿನ ಸ್ವಿಚ್ ಕೀಯನ್ನು ಕೈಯಲ್ಲಿ ಗರಗರ ತಿರುಗಿಸುತ್ತ ಅಂದ,

''ನಡೆ, ನಿನ್ನನ್ನು ಹೋಟೆಲಿಗೆ ಮುಟ್ಟಿಸುವೆ.''

ಇಬ್ಬರೂ ಕಾರನ್ನು ನಿಲ್ಲಿಸಿದ್ದ ಕಡೆಗೆ ಹೊರಟರು. ಹೂದೋಟದ ಆಚೆ ಮರದ ಬಳಿಯಲ್ಲಿ ನಿಲ್ಲಿಸಿದ್ದ ನೀಲಿ ಕಾರನ್ನು ಸ್ಟಾರ್ಟ್ ಮಾಡಿ ಎಡ್ವರ್ಡ್ ಕೇಳಿದ,

''ನಿನ್ನ ಹಿಂದಿನ ಉದ್ಯೋಗಕ್ಕೂ ಈಗಿನದಕ್ಕೂ ಏನೆನಿಸುತ್ತೆ?''

''ಅದನ್ನು ಈಗಲೇ ಹೇಳುವುದು ಕಷ್ಟ ಎಡ್ವರ್ಡ್.''

''ಆದರೂ ಎಲ್ಲಿಂದ ಎಲ್ಲಿಗೆ? ಎಂತಹ ಅದ್ಭುತ ಬಡ್ತಿ? ನೀನು ತುಂಬ ಅದೃಷ್ಟಶಾಲಿನಿ!''

ಡಾ॥ ಎಡ್ವರ್ಡ್ ಆನಂದ ವಿಶೇಷದಿಂದ ಆ ನುಡಿಯನ್ನು ಹೊರ ಹಾಕಿದುದನ್ನು ಡಾ॥ ಮೇರಿಲೇನ್ ಸ್ವಾಗತಿಸಿದರೂ ವೈಚಾರಿಕವಾಗಿ ಒಂದೆರಡು ಘಳಿಗೆ ತನ್ನಲ್ಲೇ ತರ್ಕಿಸಿದಳು. ಮನೋಹರ ಮುಖಮಂಡಲದಲ್ಲಿ ವಿಚಾರಧಾರೆ ಅಲೆಯಲೆಯಾಗಿ ಹರಿದಾಡುವುದನ್ನು ಎಡ್ವರ್ಡ್ ಸೂಕ್ಷ್ಮವಾಗಿ ಗಮನಿಸಿದ. ಪ್ರಶಸ್ತವಾದ ಲಲಾಟದ ಮೇಲೆ ತುಂತುರು ತುಂತುರಾಗಿ ಮೂಡಿದ ಬೆವರಿನ ಹನಿಗಳನ್ನು ಕರವಸ್ತ್ರದಿಂದ ಒರಿಸಿಕೊಂಡು ಕಾರನ್ನು ಮುನ್ನಡೆಸಿದ. ಹೆದ್ದಾರಿಯಲ್ಲಿ ಹರಿದಾಡುವ ನಾನಾ ವರ್ಣರಂಜಿತ ಕಾರುಗಳೊಡನೆ ಬೆರೆತುಕೊಂಡು ತ್ವರಿತಗತಿಯಲ್ಲಿ ಮುಂದೋಡಹತ್ತಿತು ನೀಲಿ ಮೈಯ್ಯಾಂತ ಕಾರು. ಡಾ॥ ಮೇರಿಲೇನ್ ಕಪ್ಪು ಕನ್ನಡಕದ ಕನ್ನಡಿಯನ್ನು ಕರವಸ್ತ್ರದಿಂದ ಒರೆಸಿ ಕಣ್ಣಿಗೆ ಅಳವಡಿಸಿಕೊಂಡು ದೀಪ್ತ ಕಂಠದಿಂದ ನುಡಿದಳು,

''ಇಸ್ರೇಲ್-ಅರಬ್ ಸಮರದಲ್ಲಿ ವಿಶ್ವಸಂಸ್ಥೆಯು ವಹಿಸಿದ ಮಧ್ಯಸ್ಥಿಕೆ ಪರಿಣಾಮಕಾರಿಯಾಗಿದ್ದಿದ್ದರೆ ಅದರ ರೀತಿಯೇ ಬೇರೆಯಾಗಿರುತಿತ್ತು. ವಿಶ್ವಸಂಸ್ತೆ ಎಂದೂ ಕಾರ್ಯವೈಫಲ್ಯಕ್ಕೆಡೆ ಕೊಡಬಾರದಷ್ಟು ದಕ್ಷತೆ ಬೆಳೆಸಿಕೊಳ್ಳಬೇಕು.''

''ರಾಷ್ಟ್ರ ರಾಷ್ಟ್ರವೂ ತನ್ನದೇ ಆದ ರೀತಿ-ನೀತಿಯನ್ನು ಹೊಂದಿರುವುದರಿಂದ ಭಿನ್ನಾಭಿಪ್ರಾಯಗಳು ಮೂಡುತ್ತವೆ. ಪ್ರತಿಯೊಂದು, ವಿಚಾರದಲ್ಲೂ ಒಮ್ಮತ ಬರುವುದು ಕಷ್ಟ ಡಾಕ್ಟರ್!''

''ವಿಶ್ವಸಂಸ್ಥೆ ಎಂದೆಂದೂ ವಿಶ್ವಕ್ಕೆ ಮಾದರಿಯಾಗಿರಲೇಬೇಕು.''

''ನಿಜ......''

''ಬೃಹದ್ ಶಕ್ತಿ ರಾಷ್ಟ್ರಗಳು ತಮ್ಮದೇ ಆದ ಜಾಗತಿಕ ನೀತಿಗಳನ್ನು ದುರ್ಬಲರ ಮೇಲೆ ಹೇರುವುದನ್ನು ನೋಡುತ್ತ ಕೂಡುವುದು ಸರಿಯಲ್ಲ.''

''ಶಕ್ತಿಶಾಲೀ ರಾಷ್ಟ್ರಗಳ ಹಿಡಿತದಲ್ಲಿರುವುದರಿಂದಲೇ ವಿಶ್ವಸಂಸ್ಥೆಗೆ ಪ್ರಾಣಸಂಕಟ.''

"ಇಂದು...." ಎಂದ ಡಾ॥ ಮೇರಿಲೇನ್ ಭಾವಪರವಶಳಾಗಿ ಮಾತನ್ನು ಅಷ್ಟಕ್ಕೇ ತುಂಡುಗಡಿದು ಒಂದೆರಡು ಘಳಿಗೆ ಯೋಚಿಸಿದನಂತರ ಸ್ನೇಹಭಾವ ಸ್ಫುರಿತ ದೃಷ್ಟಿ ಬೀರಿ "ಇಂದು, ಜಗತ್ತು ಎದುರಿಸುತ್ತಿರುವ ಅಗಾಧವಾದ ಸಮಸ್ಯೆಗಳ ಬಗ್ಗೆ ಪ್ರಗತಿಶೀಲ- ಧ್ಯೇಯಪೂರ್ಣ ಧೋರಣೆಯನ್ನು ಧೈರ್ಯದಿಂದ ಚಲಾಯಿಸುವಂತಿದ್ದಲ್ಲಿ ಹೆಸರಿಗೆ ಸರಿಯಾದ ಮಾನ್ಯತೆ ಪಡೆಯುತ್ತದೆ. ....ಪಡೆಯಲೇ ಬೇಕು. ಏನು ಹೇಳುತ್ತಿ?"

.....ಏನು ಹೇಳುತ್ತಿ.....?

ಪ್ರಶ್ನೆ ಮನವನ್ನು ಗುಂಗೆ ಹುಳುವಿನಂತೆ ಹೊಕ್ಕಿತು. ಡಾ॥ ಎಡ್ವರ್ಡ್ ವಿಚಾರಗಳ ಅಲೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದ. ಅವಳ ವಿಚಾರಧಾರೆಯ ಅಕ್ಷರ ಅಕ್ಷರವೂ ಸರ್ವತೋಮುಖವಾಗಿ ಹರಿದಿತ್ತು. ಆಳವಾಗಿ ಯೋಚಿಸಿ ನೋಡಿದಾಗ ನೂರ ಇಪ್ಪತ್ತೈದು ರಾಷ್ಟ್ರಗಳ ಪ್ರಾತಿನಿಧ್ಯ, ಅವುಗಳ ಪಕ್ಷಪಾತೀಧೋರಣೆ, ಗುಂಪುಗಾರಿಕೆ ಸ್ಮರಣೆಯ ಹಾದಿಯಲ್ಲಿ ಸಾಗಿಹೋಯಿತು. ನೀಳವಾದ ಉಸಿರ್ಗರೆದು "ನಿಜ, ಡಾಕ್ಟರ್!"

ಅಷ್ಟರಲ್ಲಿ ಕಾರು ಹೋಟೆಲಿನ ಮುಂಭಾಗದಲ್ಲಿ ನಿಂತಿತು. ಇಬ್ಬರೂ ಇಳಿದರು.

★ ★ ★ ★ ★

ಹೊತ್ತು ಮಧ್ಯರಾತ್ರಿಯಂಚನ್ನು ದಾಟುತ್ತಿರುವಾಗಲೇ ತಲೆಬಾಗಿಲ ಕರೆಗಂಟೆ ಕರೆ ನೀಡಿತು.

ಡಾ॥ ಮೇರಿಲೇನ್ ಎದ್ದು ಕದ ತೆರೆದು ತಂಗಿಯನ್ನು ಕಂಡು ಆದರದಿಂದ ಬರಮಾಡಿಕೊಳ್ಳುತ್ತ ಕೇಳಿದಳು, "ಏನು ಹೀಗೆ? ಒಬ್ಬಳೇ ಬಂದಿದ್ದೀಯಲ್ಲಾ?"

"ವಾಷಿಂಗ್‌ಟನ್-ಗೆ ಹೋಗುವ ಮಾರ್ಗದಲ್ಲಿ ನಿನ್ನನ್ನು ನೋಡುವ ಸಲುವಾಗಿ ಬಂದೆ."

ಅರ್ಧ ಓದಿದ ಪುಸ್ತಕಕ್ಕೆ ಕಾಗದದ ಚೂರಿನ ಗುರುತಿಟ್ಟು, ಮುಚ್ಚಿ ಸಾನಂದದಿಂದ ನುಡಿದಳು,

"ನಿನ್ನನ್ನು ನೋಡಿ ತುಂಬ ದಿನಗಳಾಗಿದ್ದುವು. ನೀನು ಬಂದಿದ್ದು ಒಳ್ಳೆಯದಾಯಿತು."

"ಈಗ ನಿನಗೆ ಹೇಗೆನಿಸುತ್ತೆ? ವಿಶ್ವಸಂಸ್ಥೆಯ ಕಾರ್ಯದರ್ಶಿನಿ. ವಿಶೇಷ ಜವಾಬ್ದಾರಿ....!"

''ಕೈತುಂಬ ಕೆಲಸ ಇದೆ. ವಿಶೇಷ ಜವಾಬ್ದಾರಿಯೂ ಇದೆ. ಆದರೆ ಹೆಚ್ಚಿನ ಸಾರ್ಥಕ್ಯ ಇನ್ನೂ ಕಂಡು ಬರಲಿಲ್ಲ. ಸ್ವಲ್ಪಕಾಲ ಕಾದು ನೋಡಬೇಕು.''

''ಚಿಕಾಗೊದಲ್ಲಿನ ಮಕ್ಕಳ ಗಲಾಟೆ-ಗದ್ದಲ ಚಿಟ್ಟು ಹಿಡಿಸುವ ಕೆಲಸ ಆ ಎಲ್ಲಕ್ಕೂ ಇದು ಹಿತವಲ್ಲವೇ?''

ಡಾ॥ ಮೇರಿಲೇನ್ ಮಂದಸ್ಮಿತಳಾಗಿ ಸಾಧುವಾದವನ್ನೀಯುತ್ತ ನುಡಿದಳು,

''ಒಮ್ಮೆಲೇ ಹಾಗೆನ್ನುವುದಕ್ಕಾಗುವುದಿಲ್ಲ. ಆ ಮಕ್ಕಳ ಜೊತೆ ಹೆಣಗುವುದರಲ್ಲಿ ಒಂದು ಬಗೆಯ ಅಪೂರ್ವ ಭಾವ ಸಂಯೋಜನೆ ಉಂಟಾಗುತಿತ್ತು. ಈಗ ದೊರೆಯುವುದು ನೂರು ಬಗೆಯ ಕಿರಿಕಿರಿ!''

ಇಬ್ಬರ ಮುಖದಲ್ಲೂ ಸರಳ ಸ್ನಿಗ್ಧಹಾಸ ಮೂಡಿ ಮಾಯವಾಯಿತು.

''ಎಷ್ಟು ಮಾಡಿದರೂ ಮುಗಿಯದ ಕೆಲಸ. ಆದರೂ ಮನಸ್ಸಿಗೆ ನಿರೀಕ್ಷಿತ ಶಾಂತಿ ಬರುವುದಿಲ್ಲ. ಏನೋ ಒಂದು ರೀತಿಯಲ್ಲಿ ಸರ್ವೇಸಾಮಾನ್ಯವಾಗಿ ಹೊತ್ತು ಕಳೆಯುತ್ತದೆ. ನನಗಿಲ್ಲಿ ಹೆಚ್ಚಿನ ವಿಶೇಷವೇನೂ ತೋರುತ್ತಿಲ್ಲ.''

''ಈ ಕೆಲಸ ಸಿಕ್ಕೀತೇ ಎಂದು ಕಾಯುವವರು ಎಷ್ಟು ಮಂದಿಯೋ! ನಿನ್ನ ಕೇಳಿದರೆ ಹೀಗೆ!''

ಇಬ್ಬರ ತುಟಿಗಳಲ್ಲೂ ನಗುವಿನ ಲಹರಿ ಉಕ್ಕಿ ಹರಿಯಿತು.

''ವಿಚಾರಾತ್ಮಕ ಶ್ರದ್ಧೆ ಇಲ್ಲದವರಿಗೆ ಇದೆಲ್ಲ ಅರ್ಥವಾಗುವುದಿಲ್ಲ ಸುಸೀ!''

''ನಿಜ....ನಿಜ.''

''೧೯೪೬ರಲ್ಲಿ ವಿಶ್ವಸಂಸ್ಥೆ ಹುಟ್ಟಿದಾಗ ಅದರ ಪ್ರತಿಭೆ ಹೇಗಿತ್ತು?''

ಮಾತಾಡದೆ ತಲೆದೂಗಿದಳು ಸುಸಾನ್. ಮುಖಮುದ್ರೆಯಲ್ಲಿ ಶ್ರದ್ಧಾ ಭಾವಸ್ಫುರಿತ ಛಾಯೆಯೊಂದಿಗೆ ನಸುಬಿರಿದ ತುಟಿಗಳಲ್ಲಿ ಶುಷ್ಕನಗೆ ಅರಳಿ ಮಾಯವಾಯಿತು.

''ಈ ಅಣ್ವಸ್ತ್ರಗಳ ಯುಗದಲ್ಲಿ ವಿಶ್ವಸಂಸ್ಥೆ ತನ್ನ ಧ್ಯೇಯಾದರ್ಶಗಳ ಸಾಧನೆಯಲ್ಲಿ ಯಶಸ್ವಿಯಾಗದಿದ್ದರೆ ವಿಶ್ವಶಾಂತಿಯನ್ನು ಕಾಪಾಡುವುದರಲ್ಲಿ ಅಸಮರ್ಥವಾಗುತ್ತದೆ. ಯಾವ ಘಳಿಗೆಯಲ್ಲಿ ಪ್ರಪಂಚದ ಮೂರನೇ ಯುದ್ಧ ಆರಂಭವಾಗುವುದೋ ಹೇಳುವುದು ಕಷ್ಟ. ಒಂದು ವೇಳೆ ಈ ತೀವ್ರ ಪೈಪೋಟಿಯಲ್ಲಿ ಪ್ರಪಂಚದ ಮೂರನೇ ಮಹಾ ಯುದ್ಧ ಆರಂಭವಾಯಿತು ಅಂದರೆ ಇಡೀ ಮನುಕುಲವೇ ವಿನಾಶ ಹೊಂದುತ್ತದೆ!''

''ಖಂಡಿತ....!''

“ವಿಶ್ವಸಂಸ್ಥೆಯ ಪ್ರತಿಷ್ಠೆ ಕುಗ್ಗುತ್ತಿರುವ ಈ ಸಂಧಿ ಕಾಲದಲ್ಲಿ ಇಂತಹ ಸಂಭಾವ್ಯ ದುರಂತವನ್ನು ತಪ್ಪಿಸುವುದು ಸಾಧ್ಯವಾದೀತೆ? ಎಂಬುದೇ ಈಗಿರುವ ಹಿರಿಯ ಪ್ರಶ್ನೆ.”

“ಅದರ ಮೊದಲಿನ ಪ್ರತಿಷ್ಠೆ-ಕೀರ್ತಿ ಪುನಃ ಪ್ರಾಪ್ತವಾಗದಿದ್ದಲ್ಲಿ ಕಷ್ಟ.”

“ವಿಶ್ವಸಂಸ್ಥೆಯ ‘ಪರಾಭವ’ ಆಕ್ರಮಣಕೋರ ರಾಷ್ಟ್ರಕ್ಕೆ ಪ್ರಚೋದನೆ! ದುಷ್ಟಶಕ್ತಿಗೆ ಉದ್ದೀಪನೆ! ಶ್ರೇಷ್ಠಮಟ್ಟದಲ್ಲಿ ಹುಟ್ಟಿ, ವಿದ್ಯಾಪಾರಂಗತರನ್ನು ಒಳಗೊಂಡು ಸ್ವಾರ್ಥದ ಪ್ರಲೋಭನೆಗೆ ಒಳಗಾಗುವುದೆಂದರೆ ಖಂಡಿತ ಕರ್ತವ್ಯಲೋಪದ ದೋಷ ಹೊತ್ತುಕೊಳ್ಳುವುದು ಮಾತ್ರವಲ್ಲ; ತನ್ನ ಅಸ್ತಿತ್ವವನ್ನು ಸಹ ಕಳೆದುಕೊಳ್ಳುತ್ತದೆ.”

ಅತ್ಯಂತ ವಿಶಾದಪೂರ್ಣ ವಾಣಿಯಲ್ಲಿ ನುಡಿದ ಡಾ॥ ಮೇರಿಲೇನ್ ಪತ್ರಿಕೆಯೊಂದನ್ನು ಅವಳ ಕೈಗೆ ನೀಡಿ, “ಇದರಲ್ಲಿ ಕಾಲಿನ್ಸ್ ಎಂಬ ವಿಚಾರವಾದಿಯೊಬ್ಬ ಬೃಹತ್ ಶಕ್ತಿ ರಾಷ್ಟ್ರಗಳ ಜಾಗತಿಕ ನೀತಿಯನ್ನೂ ದುರ್ಬಲ ರಾಷ್ಟ್ರಗಳು ಎದುರಿಸುತ್ತಿರುವ ನಾನಾ ಸಮಸ್ಯೆಗಳನ್ನೂ ತುಲನಾತ್ಮಕವಾಗಿ ವಿಚಾರಮಾಡಿ ವಿಶ್ವಸಂಸ್ಥೆಯ ಜವಾಬ್ದಾರಿಯನ್ನು ಒತ್ತಿ ಹೇಳಿದ್ದಾನೆ. ಅದೆಷ್ಟು ಹೃದಯಂಗಮವಾಗಿದೆ ನೋಡು!”

ಸುಸಾನ್ ಪತ್ರಿಕೆಯನ್ನು ತಿರಿವಿ ಹಾಕಿದಳು. ಎರಡನೆಯ ಮಹಾಯುದ್ಧದ ದುರಂತವನ್ನು ಸ್ಪಷ್ಟವಾಗಿ ನೆನಪುಮಾಡಿ ಕೊಟ್ಟಿತು- ಆ ವಿಚಾರವಾದಿಯ ವಿವರಾತ್ಮಕ ಲೇಖನ.

ಹೊತ್ತು ಒಂದರ ಅಂಚನ್ನು ದಾಟಿ ಸದ್ದಿಲ್ಲದ ಶಾಂತಿಯಲ್ಲಿ ವಿರಮಿಸಿತು.

★ ★ ★ ★ ★

ವರ್ಣರಂಜಿತ ಮಿನುಮಿನುಗುವ ಉಜ್ವಲ ದೀಪಾಲೋಕ!

ಭವ್ಯ ವಿಶ್ವವೆತ್ತ ಮಾನವ ನಿರ್ಮಿತ ನ್ಯೂಯಾರ್ಕ್ ನಗರಿ!

ಕೃಷ್ಣಪಕ್ಷದ ಕಂದಿದ ಚಂದ್ರಕಾಂತಿ ತೀರ ಬಳಲಿದಂತೆ ಮಂದಮಂದವಾಗಿ ಹರಿದಿತ್ತು, ಡಾ॥ ಮೇರಿಲೇನ್ ಕಿಟಕಿಯಲ್ಲಿ ಕತ್ತು ಆನಿಸಿ ಮಂತ್ರ ಮುಗ್ಧಳಂತೆ, ಅಭಿಭೂತಳಂತೆ ಹೊರಲೋಕದಲ್ಲಿ ದೃಷ್ಟಿಯನ್ನು ಚೆಲ್ಲಿಕೊಟ್ಟಳು. ಎಲ್ಲಿಂದ ಎಲ್ಲಿಯವರೆಗೂ ಹಬ್ಬಿದ ಸದ್ದಿಲ್ಲದ ಶಾಂತಿಯಲ್ಲಿ ಶ್ರಾಂತನಗರಿ ಸುಖನಿದ್ರೆಯಲ್ಲಿತ್ತು. ಎಲ್ಲೋ ಒಮ್ಮೊಮ್ಮೆ ರಸ್ತೆಯಲ್ಲಿ ಕಾಣಬರುವ ಕುಡಿದು ಅಮಲೇರಿದ ಮಂದಿ ವಿನಾ ವಾಹನಗಳ ಸದ್ದೇ ಇರಲಿಲ್ಲ. ನೋಟವನ್ನು ಕೈಗಡಿಯಾರದ ಕಡೆ ಹರಿಸಿದಳು. ಹೊತ್ತು ಎರಡರ ಅಂಚನ್ನು ಮುಟ್ಟಿತ್ತು. ಇನ್ನು ದಾಟುವುದೊಂದು ಬಾಕಿ.

ಅತೀವ ಕಾರ್ಯಕಲಾಪಗಳಲ್ಲಿ ಬಿಡುವಿಲ್ಲದೆ ದುಡಿದು ದಣಿದ ಶರೀರ, ಕ್ಲಾಂತಕರುಣಚಿತ್ತ ಬಹುತೇಕವಾಗಿ ವಿಶ್ರಾಂತಿಯನ್ನು ಬಯಸುತಿದ್ದುವು. ಆದರೆ ನಿದ್ರಾದೇವಿಯ ಸುಳಿವೇ ಇಲ್ಲ. ಪ್ರಪುಲ್ಲ ಕಮಲ ಮುಖಬಿಂಬ ನಸು ಬಾಡಿ, ಕಣ್ಣುಗಳಿಗೆ ರಕ್ತ ಲಾಲಿಮೆಯೊತ್ತಿ ಅವಿಶ್ರಾಂತತಾ ಅಭಿವ್ಯಕ್ತಿಯ ಅವಿರ್ಭಾವವಾಗಿತ್ತು. ಬೀಸುಗಾಳಿಗಡರಿ ಬಂದ ಕೆಂಗೂದಲನ್ನು ಹಿಂದಕ್ಕೆ ತಳ್ಳಿ ಒಂದೆರಡು ಘಳಿಗೆ ನಿಶ್ಚಲ ಭಂಗಿಯಲ್ಲಿ ನಿಂತಳು ಮೇರಿ.

ಇಂತಹ ಅಮೋಘವಾದ ವಿಶ್ವದಲ್ಲಿ, ಈ ಅಮೋಗವಾದ ವಾತಾವರಣದಲ್ಲಿ, ಈ ಅಮೋಘವಾದ ಮನುಕುಲದಲ್ಲಿ ಅಮೋಘ ಭಾವನೆ ಇಲ್ಲದೆ ಹೋದರೆ....?

ಹಾಯ್!

ಒಂದೆರಡು ಘಳಿಗೆ ಕಣ್ಣುಗಳನ್ನು ಮುಚ್ಚಿ ತದೇಕ ಚಿಂತನೆಯಲ್ಲಿ ನಿಮಗ್ನಳಾದಳು. ತಾನು ಎಲ್ಲೋ ಯಾವುದೋ ಲೋಕದಲ್ಲಿ ತೇಲುತ್ತಿರುವಂತೆ ಉದ್ಭಾಸಿತವಾಯಿತು. ಆ ಅಪೂರ್ವ ಸಮಾಧಿಯಲ್ಲಿ ಅದೆಷ್ಟು ಹೊತ್ತು ಉರುಳಿತೋ ಗಮನಕ್ಕೆ ಬರಲಿಲ್ಲ. ಕಡಲೆಲರು ಕಿಟಿಕಿಯಲ್ಲಿ ಭರ್ರನೆ ತೂರಿ ಮುಖವನ್ನು ಮುದ್ದಿಟ್ಟಾಗ ಭಾವಸಮಾಧಿ-ಯಿಂದ ಬಹಿರ್ಮುಖಿಯಾಗಿ ಕಣ್ತೆರೆದಳು. ವಿದ್ಯುತ್‌ಲೋಕದ ಮಿಂಚಿನ ಜಗತ್ತು ಕಣ್ಮನಗಳನ್ನು ತಟ್ಟನೆ ಮುತ್ತಿತು. ಮತ್ತೆ ಕಣ್ಮುಚ್ಚಿ ತೆಗೆದು ನಕ್ಷತ್ರಲೋಕದಲ್ಲಿ ದೃಷ್ಟಿಯನ್ನು ನೆಟ್ಟಳು. ಒಂದೆರಡುಕ್ಷಣ ಜಗತ್ತೇ ಮಧುಮಯವಾಗಿ ತೋರಿತು.

ಆದರೆ....!

ಈ ವಿಚಿತ್ರ ವಿಶ್ವದಲ್ಲಿ ಚಿತ್ರವಿಚಿತ್ರ ಮನುಕುಲ ಕೋಟಿ!

ಕಿಟಿಕಿಯಿಂದ ಸರಿದು ಪಲ್ಲಂಕದ ಮೇಲೆ ಕುಳಿತುಕೊಂಡಳು. ಚಿತ್ತ ಗತಕಾಲಕ್ಕೆ ಸರಿದು ಬೃಹದ್ ಚಿಕಾಗೊ ನಗರದ ಬರ್ಟನ್‌ಲೇನ್‌ನಲ್ಲಿನ Mount Carmel Conventನಲ್ಲಿ ಸ್ವಚ್ಛಂದವಾಗಿ ವಿಹರಿಸಿತು. ಆ ಹಾಲ್ಗಲ್ಲದ ಮಕ್ಕಳು, ಟೊಮೆಟೋ ಹಣ್ಣುಗಳನ್ನು ಅಣಕಿಸುವ ಕದಪು, ಸ್ವರ್ಣರೇಕುಗಳನ್ನು ಬದಿಗೊತ್ತುವ ಹೊಂಗೂದಲು, ಸಮವಸ್ತ್ರ-ಸಮಹಿತ-ಸಹಚಿಂತನ ಒಂದೊಂದೂ ಅತ್ಯಂತ ಆಕರ್ಷಣೀಯವಾಗಿ, ಅಪಾರ ತೇಜೋರಾಶಿಯಾಗಿ ತೋರಿದುವು. ಅಂದು ಕೃಪಾಚಂದ್ರಶೇಖರ್ ಅಂದದ್ದೇನು? ನೋಡಿದರೆ ಇನ್ನೂ ಹದಿನೈದರ ಬಾಲೆ. ಭಾರತದ ಮುಗ್ಧ ಮನಸ್ಸಿನ ಎಳೆಗುವರಿ; ಅರಳುಗಣ್ಣುಗಳಿಂದ ನೋಡುತ್ತ ಎಂತಹ ಗಂಭೀರ ಪ್ರಶ್ನೆ ಹಾಕಿದಳು?

''ಡಾಕ್ಟರ್, ಇಂದಿನ ಪರಿಸ್ಥಿತಿಗೆ ವಿಶ್ವಸಂಸ್ಥೆಯ ನಿಲುವು ಸರ್ವಥಾ ಸರಿಯಲ್ಲ! ಅದರ ಧ್ಯೇಯೋದ್ದೇಶ ಪ್ರಗತಿಶೀಲವಾಗಿದೆ ಎನ್ನುವಂತಿಲ್ಲ ಎಂದರೆ ಖಂಡಿತ ತಪ್ಪಲ್ಲ.

ಅದು ಬಾಂಗ್ಲಾದೇಶದ ಬಗ್ಗೆ ವರ್ತಿಸಿದ ವಿಚಾರವನ್ನು ನೀವು ನಿಷ್ಪಕ್ಷಪಾತವಾಗಿ ಪರಿಶೀಲಿಸಿರಿ, ಸಂಯುಕ್ತ ಪಾಕಿಸ್ತಾನದ ಚೌಕಟ್ಟಿನಲ್ಲಿಯೇ ಬಂಗಾಳದಲ್ಲಿ ಪ್ರಜಾಸತ್ತೆ ಜಾರಿಗೆ ಬರಬೇಕೆಂಬ ಸ್ಪಷ್ಟ ನಿಲುವನ್ನು ತಾಳಿದ್ದಿದ್ದರೆ ಭಾರತ-ಪಾಕಿಸ್ತಾನದ ಯುದ್ಧವನ್ನು ಖಂಡಿತ ತಪ್ಪಿಸಬಹುದಾಗಿತ್ತು!''

ಬಾಂಗ್ಲಾ ದೇಶದಲ್ಲಿ ನರಮೇಧ ಯಜ್ಞ....!

೧೯೭೧ರ ಭಾರತ-ಪಾಕಿಸ್ತಾನದ ಸಮರ....!

ಆ ಹೆಂಗಸರು....ಆ ಮಕ್ಕಳು....ಆ ಬುದ್ಧಿ ಜೀವಿಗಳು....ಆ ಲಕ್ಷೋಪಲಕ್ಷ ಹುತಾತ್ಮರು ಸ್ಮರಣೆಯ ಹಾದಿಯಲ್ಲಿ ಸಾಲುಗಟ್ಟಿ ಫೇರಿ ನಡೆಸಿದರು. ದೇಹದಾದ್ಯಂತ ಬೆಂಕಿಯ ಝುರಿ ಮೆಲ್ಲನೆ ಹರಿದಾಡಿ ಹೋಯಿತು. ಯೋಚನೆಯ ಅಲೆಯಲ್ಲಿ ಸಿಕ್ಕಿ ದುಃಖಭರಿತ ಮನಃಪ್ರಾಣಗಳು ನಲುಗಿ ಗಾಣಕ್ಕೆ ಕೊಟ್ಟ ಕಬ್ಬಿನಂತಾದುವು. ಭಾರವಾದ ಹೃದಯವನ್ನು ಹೊರಲಾರದೆ ಹೊತ್ತು ಕುಳಿತಳು.

ಕೃಪಾ ಚಂದ್ರಶೇಖರ್ ದೀಪ್ತ ಕಂಠದಿಂದ ಖಡಾಖಂಡಿತವಾಗಿ ಕೊನೆಗೆ ಅಂದದ್ದೇನು?

''ವಿಶ್ವಸಂಸ್ಥೆಯ ಧೋರಣೆ ಪಕ್ಷಪಾತೀ ಹಾಗೂ ಪ್ರತಿಗಾಮೀ ನಿಲುವಿಗೆ ಸ್ಪಷ್ಟ ನಿದರ್ಶನ!''

ಅವಳ ದೃಢ ನಿಲುವಿಗೆ-ಸ್ಥಿರ ಋಜುವಿಗೆ ಶಾಲೆಯ ಅಧ್ಯಾಪಕ ವರ್ಗ ತಲೆದೂಗಿತ್ತು. ಸ್ವತಃ ಡಾ॥ ಮೇರಿಲೇನ್ ಅಭಿನಂದಿಸಿದ್ದಳು ಕೂಡ.

ಆದರೆ....!

★ ★ ★ ★ ★

ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಕಾರ್ಯದರ್ಶಿನಿಯಾಗಿ ಕೆಲಸ ಮಾಡಲು ಆಹ್ವಾನ ಬಂದಾಗ ಅದೆಷ್ಟು ಸಂತೋಷ?....ಅದೆಷ್ಟು ಉತ್ಸಾಹ? ಎಷ್ಟು ಜನ ಸ್ನೇಹಿತರು, ಬಂಧು ವರ್ಗದವರು, ಅಧ್ಯಾಪಕ ವರ್ಗದವರು ಬಂದು ಹೃತ್ಪೂರ್ವಕವಾಗಿ ಅಭಿನಂದಿಸಿದರು!

ಆದರೆ....!

ಆ ಮಕ್ಕಳು?

ಆ ಸಹಸ್ರಾರು ಮಂದಿಯಲ್ಲಿ ಯಾರಿಗಾದರೂ ಹಿತವೆನಿಸಿತ್ತೆ? ಯಾಂತ್ರಿಕವಾಗಿ ''ಕಂಗ್ರ್ಯಾಟ್ಸ್....ಡಾಕ್ಟರ್!'' ಎನ್ನುವಾಗ ಹರಿದ ಒಡಕು ಸ್ತುತಿಯಾದರೂ ಎಂತಾದ್ದು?

"ನಮ್ಮನ್ನು ಬಿಟ್ಟು ಹೋಗುವುದರಲ್ಲಿ ನಿಮಗೆ ಖಂಡಿತ ಆತ್ಮಸಂತೋಷವಿದೆಯೆ?"

-ಹಾಗೆಂದದ್ದು ಯಾರು?

ಹಾ....!

ಎಲಿಜ ಓಡಿ ಬಂದು ಎರಡು ಕೈಗಳನ್ನೂ ಅತ್ಯಂತ ಆತ್ಮೀಯವಾಗಿ ಅದುಮಿ ಹಿಡಿದುಕೊಂಡು "ಹೇಳಿ ಡಾಕ್ಟರ್! ನಮ್ಮನ್ನು ಬಿಟ್ಟು ಹೋಗುವುದರಲ್ಲಿ, ನಿಮಗೆ ಖಂಡಿತ ಆತ್ಮ ಸಂತೋಷವಿದೆಯೆ?" ಎಂದಳಲ್ಲವೇ? ಆಗ ಆ ಕಣ್ಣುಗಳಲ್ಲಿ ಒಡೆದು ಮೂಡಿದ ಹೊಳಪು. ಮುಖದ ಮೇಲೆ ಅಚ್ಚೊತ್ತಿದ ಮ್ಲಾನತೆ ಅವಳ ಆತ್ಮದರ್ಶನವನ್ನೇ ಮಾಡಿಸಿದುವಲ್ಲಾ....! ಆಗ....?

....ಆಗ....?

ಹೃದಯವನ್ನು ಭೈರಿಗೆಯಿಂದ ಕೊರೆದಂತಾಯಿತು. ಅವಳನ್ನು ಅಪ್ಪಿ ಹಿಡಿದು ಹೃದಯಕ್ಕೆ ಹೃದಯವನ್ನೊತ್ತಿ ಹೂಮುತ್ತನ್ನಿಟ್ಟು "ಇಲ್ಲ ಎಲಿಜ, ಈ ಜೀವಮಾನದಲ್ಲಿ ನಿಮ್ಮನ್ನು ಬಿಟ್ಟು ಹೋಗುವುದರಲ್ಲಿ ಖಂಡಿತ ಆತ್ಮ ಸಂತೋಷ ಬರುವುದಿಲ್ಲ. ನಾನು ಎಲ್ಲಿದ್ದರೂ ನಿಮ್ಮವಳೇ! ನಿಮ್ಮ ನೆನಪಾದಾಗಲೆಲ್ಲ ಇಲ್ಲಿಗೆ ಓಡಿ ಬರುವೆ. ಈ ಸ್ಥಳಾಂತರ ಹೆಚ್ಚಿನ ಅನುಭವ ನೀಡಬಹುದು. ಅಷ್ಟೆ; ಅಥವಾ ಅಪಾರವಾದ ಮಾನವ ಸೇವೆಗೆ ಅವಕಾಶ ಕೊಡಬಹುದು, ಎರಡರಲ್ಲೂ ಪ್ರಯೋಜನವಿದೆ. ಏನಾಗುತ್ತೋ ನೋಡೋಣ. ಭವಿಷ್ಯ ಯಾರ ಕೈಯಲ್ಲೂ ಇಲ್ಲ."

-ಕೃಪಾ ಚಂದ್ರಶೇಖರ್ ಅಂದದ್ದೇನು?

"ಇರಲಿ ಡಾಕ್ಟರ್! ಇಲ್ಲಿ ನೀವು ಸಲ್ಲಿಸುವ ಸೇವೆ ನಮಗೆ ಮಾತ್ರ ಸಲ್ಲುತ್ತದೆ. ಅಲ್ಲಿ ನೀವು ಸಲ್ಲಿಸುವ ಸೇವೆ ಜಗದ್ವಲಯದಾದ್ಯಂತ ಕಸ್ತೂರಿ ಪ್ರಭೆಯನ್ನು ಬೀರಬಹುದು. ಭಗವಂತ ನಿಮಗೆ ಒಳ್ಳೆಯದನ್ನು ಮಾಡಲಿ. ನಾನು ದೇವರನ್ನು ನಿಮಗಾಗಿ ಪ್ರಾರ್ಥಿಸುವೆ!"

-ಜಾನ್‌ಸನ್ ಅಂದದ್ದೇನು?

"ಡಾಕ್ಟರ್! ಹಾರ್ಟೀ....ಕಾಂಗ್ರಾಟ್ಸ್! ನೀವು ಎಲ್ಲಿ ಸೇವೆ ಸಲ್ಲಿಸಿದರೂ ಅದು ಇಲ್ಲಿ ಸಲ್ಲುತ್ತದೆ. ಖಂಡಿತ ನಮಗೆ ನಿಮ್ಮ ಕೊರತೆ ಬೀಳುವುದಿಲ್ಲ! ನಿಮ್ಮ ನಿಷ್ಪಕ್ಷಪಾತ, ವಿಶಾಲಭಾವನೆ, ವಿದ್ಯಾಪ್ರಭೆ ಎಲ್ಲಿದ್ದರೂ ಅಲ್ಲಿ ಕಲ್ಮಷವನ್ನು ತೊಡೆಯಬಲ್ಲುದು. ನಿಮ್ಮಂತಹವರು ಇಲ್ಲಿರುವುದಕ್ಕಿಂತ ಅಲ್ಲಿರುವುದು ಲೇಸು!"

-ಮೈಕೇಲ್ ಅಂದದ್ದೇನು?

‘‘ಈ ಅಪೂರ್ವ ಯೋಗ ಎಲ್ಲರಿಗೂ ದೊರೆಯುವುದಿಲ್ಲ, ಖಂಡಿತ ಇದು ದೇವರು ನಿಮ್ಮ ಸೇವೆಗೆ ಪ್ರಾಸಾದಿಸಿದ ದಿವ್ಯವರ!’’

-ಉಷಾ ಭಾರತಿ ಅಂದದ್ದೇನು?

‘‘ಡಾಕ್ಟರ್, ನೀವು ಹೊರಟು ಹೋಗುವುದರಿಂದ ಅಪಾರವಾದ ಕೊರತೆ ನಮಗೆ ಬೀಳುತ್ತದೆ ನಿಜ; ಆದರೆ ನಿಮ್ಮಿಂದ ಅಷ್ಟೇ ನಿವ್ವಳ ಲಾಭವನ್ನು ವಿಶ್ವಸಂಸ್ಥೆ ಪಡೆಯಲಿದೆ. ಅದೊಂದು ನಮಗೆ ಎಲ್ಲಿಲ್ಲದ ಸಂತೋಷ. ನಿಮ್ಮ ಕೊರತೆಯ ದುಃಖವನ್ನೆಲ್ಲಾ ಖಂಡಿತ ಅದು ಮರೆಸುತ್ತದೆ. ದೇವರಲ್ಲಿ ನಿಮಗಾಗಿ ಬೇಡುವೆ.’’

ಸಹ ಅಧ್ಯಾಪಕ ಡಾ॥ ಆಲೆನ್ ಅಂದದ್ದೇನು?

‘‘ಡಾಕ್ಟರ್! ನೀವು ಪುಣ್ಯಜೀವಿ! ಅಂತಲೇ ಭಗವಂತ ನಿಮ್ಮನ್ನು ಆಶೀರ್ವದಿಸಿದ್ದಾನೆ. ನಿಮ್ಮ ಜನ್ಮ ಇಂದು ಪುನೀತವಾಯಿತು!’’

-ಹೊಸ ಪ್ರಿನ್ಸಿಪಲ್ ಅಂದದ್ದೇನು?

‘‘ನಾನು ನಿಮ್ಮ ಪೀಠವನ್ನು ಅಲಂಕರಿಸುವುದು ನನಗೆ ಬಹಳೇ ದುಃಖವನ್ನುಂಟು ಮಾಡಿದೆ. ನನ್ನದೇನಿದ್ದರೂ ತಾತ್ಕಾಲಿಕ. ನೀವು ಎಂದಾದರೂ ಅಲ್ಲಿಂದ ಹಿಂತಿರುಗಿದೊಡನೆಯೇ ಇದನ್ನು ತೆರವು ಮಾಡುವೆ. ದೇವರು ನಿಮ್ಮನ್ನು ಮುಕ್ತಹಸ್ತದಿಂದ ಆಶೀರ್ವದಿಸಿ ಲೋಕಾಲಯದಲ್ಲಿ ಬಹುಕಾಲ ಸೇವೆ ಮಾಡುವಂತೆ ಮಾಡಲಿ!’’

ಆ ಸ್ನೇಹ-ಪ್ರೇಮ-ಸುಖ-ದುಃಖಗಳ ಸುರಿಮಳೆ....ಆತ್ಮೀಯ ಬೀಳ್ಕೊಡಿಗೆ ಚಿತ್ತಭಿತ್ತಿಯಲ್ಲಿ ಚಲನಚಿತ್ರದಂತೆ ಸುಳಿದಳಿದುವು, ಮನಃಪ್ರಾಣಗಳು ಸುಖದುಃಖಗಳ ನೆಲೆವೀಡಾದುವು. ಪಲ್ಲಂಕದ ಮೇಲೆ ಹೊರಲಾರದ ಹೃದಯವನ್ನು ಹೊತ್ತು ಬಿದ್ದುಕೊಂಡಳು.

★ ★ ★ ★ ★

....ಚಂಡ ಪ್ರಚಂಡ ಸಮುದ್ರ ರಾಜ....!

....ಅಟ್ಲಾಂಟಿಕ್ ಮಹಾ ಸಾಗರ....!

....ಭೋರ್ಗರೆದು ಮುನ್ನುಗ್ಗಿ ಬರುವ ಬೃಹದ್ ಅಲೆಗಳ ಜುಳು ಜುಳು ಜುಳು ಜುಳು ಮಂಜುಳಗಾನ!

....ಕಡಲತೀರದಲ್ಲಿ ಹೊಂಬಿಸಿಲ ಸ್ನಾನದ ಮೋಜಿನಲ್ಲಿ ಮೈಮರೆತ ಜನವಾರ್ಧಿ!

ಪಶ್ಚಿಮ ದಿಕ್ತಟಕ್ಕೆ ಪಯಣಿಸಿದ್ದ ನೇಸರು ಅರುಣ ಕಿರಣಗಳನ್ನು ಎರಚಿ ಜನಮನವನ್ನು ರಾಗಮಯವಾಗಿಸಿದ್ದ. ಆನಂದ ಸುಧೆಯನ್ನು ಸವಿಯ ಬಲ್ಲ ಜನವಾರ್ಧಿ ನಗೆಯ ಹೊನಲನ್ನು ಹರಿಸುತಿತ್ತು, ರಕ್ತದ ಪ್ರತಿ ಕಣವೂ ತುಳುಕುವಂತೆ. ಎಡ್ವರ್ಡ್ ಮಡದಿಯೊಡನೆ ಮರಳ ತಡಿಯ ಮೇಲೆ ಮಂಡಿಸಿದ್ದ. ಬಿಡುವಿನ ವೇಳೆಯ ಪ್ರತಿ ಕ್ಷಣವನ್ನೂ ಆನಂದೋತ್ಸಾಹದಿಂದ ಕಳೆಯಲು ಆಶಿಸಿದ್ದ ಮಡದಿ ಅಂದಳು,

''ಇಂದು ಕಡಲು ಪ್ರಸನ್ನವಾಗಿದ್ದಂತೆ, ಶಾಂತವಾಗಿದ್ದಂತೆ ತೋರುತ್ತೆ ಅಲ್ಲವೇ?''

ಅದೇ ಸಮಯಕ್ಕೆ ಅನಿರೀಕ್ಷಿತವಾಗಿ ಅಲ್ಲಿಗೆ ಆಗಮಿಸಿದ ಡಾ॥ ಮೇರಿಲೇನ್ 'ಹೌದು' ಎಂಬಂತೆ ಹಸನ್ಮುಖಿಯಾದಳು. ಎಡ್ವರ್ಡ್ ಮಡದಿಗೆ ಹೊಸ ಕಾರ್ಯದರ್ಶಿನಿಯೂ, ತನ್ನ ಸಹ ಕೆಲಸಗಾರರೂ ಆದ ಅವಳನ್ನು ಪರಿಚಯ ಮಾಡಿಸುತ್ತ ಅವಳ ಪೂರ್ವೋತ್ತರಗಳನ್ನು ಹೊಗಳಿ ಹಾಡಿ ''ತುಂಬ ದಕ್ಷ ಕಾರ್ಯದರ್ಶಿನಿ'' ಎಂದ.

ಇಬ್ಬರೂ ಆತ್ಮೀಯವಾಗಿ ಕೈ ಕುಲುಕಿದರು. ಕೆಂದುಟಿಗಳಲ್ಲಿ ಹೂ ನಗೆ ಸೂಸಿತು.

ಡಾ॥ ಮೇರಿಲೇನ್ ತನ್ನ ದುಪ್ಪಟ್ಟಿಯನ್ನು ಅಲ್ಲೆ ಹಾಸಿಕೊಂಡು ಮೇಲಂಗಿಯನ್ನು ಕಳಚಿ ಕುಳಿತುಕೊಂಡಳು. ನೋಟಕ್ಕೆದುರಾಗಿ ದೂರ ದಿಗಂತದಲ್ಲಿ ನೀಲಸಾಗರದ ಮೇಗಡೆ ಉಜ್ವಲ ತೇಜೋಮಯೀ ಶಾಂತ ಸೂರ್ಯ ಥಳಥಳಿಸುತ್ತಿದ್ದ; ಹೊನ್ನಿನ ರಂಗು ಜಲರಾಶಿಗೆ ಓಕುಳಿ ಕದಡಿತ್ತು.

ನೋಡಿದಷ್ಟೂ ಮನಮೋಹಕ; ಜಾನಿಸಿದಷ್ಟೂ ಹೃದಯಾಕರ್ಷಕ.

ಆ ಮುಹೂರ್ತದಲ್ಲಿ ವಿಚಿತ್ರವಿಶ್ವ ಮಧುರಮಯವಾಗಿ ತೋರಿತು.

ಡಾ॥ ಮೇರಿಲೇನ್ ವೈಚಾರಿಕವಾಗಿ-ತಾರ್ಕಿಕವಾಗಿ-ಸಾತ್ವಿಕವಾಗಿ ಯೋಚಿಸುತ್ತ ನುಡಿದಳು.

''ಡಾ॥ ಎಡ್ವರ್ಡ್! ಈ ತೇಜೋರಾಶಿಯಲ್ಲಿ ಎಂತಹ ಸತ್ವವಡಗಿದೆ....? ಮಾನವ ಅದನ್ನರಿಯದಷ್ಟು ಅಪ್ರಬುದ್ಧನಾಗಿ ಇನ್ನೂ ಉಳಿದಿದ್ದಾನೆ! ಅದೇ ಆಶ್ಚರ್ಯ!''

''ನಿನ್ನ ತರ್ಕ ಎಷ್ಟು ವಿಚಾರಬದ್ಧವೋ ಅಷ್ಟು ಪ್ರಾಕೃತವಲ್ಲ!'' ತುಂಟನಗೆ ಬೀರಿದ ಎಡ್ವರ್ಡ್.

''ಹಾಗೆನ್ನಬೇಡ. ವಿಚಾರ ಮಾಡು!''

ಅರ್ಧ ಶಯನಾವಸ್ಥೆಯಲ್ಲಿ ಬಿದ್ದುಕೊಂಡಿದ್ದ ಎಡ್ವರ್ಡ್ ಎದ್ದು ನೇರವಾಗಿ ಕುಳಿತು ನುಡಿದ,

''ನಾವಿಂದು ಶಕ್ತಿಯುತ ಜೂಜಿನ ಕುದುರೆಗಳು! ಅಖಾಡಕ್ಕೆ ಇಳಿದಿದ್ದೇವೆ. ಜೂಜು ಅವ್ಯಾಹತವಾಗಿ ನಡೆಯಲೇ ಬೇಕು....! ಹೇಗೇ ಇರಲಿ, ಏನೇ ಇರಲಿ ಗೆಲ್ಲುವುದೇ ಗುರಿ!''

ಡಾ॥ ಮೇರಿ ಆಶಿಸಿದ ರೀತಿಯೇ ಬೇರೆ! ಅವನು ಬಿತ್ತರಿಸಿದ ಭಾವವೇ ಬೇರೆ! ಒಂದೆರಡು ಘಳಿಗೆ ವಿಚಾರಮಗ್ನಳಾಗಿದ್ದು ಅನಂತರ ದೀರ್ಘವಾದ ಉಸಿರನ್ನು ಹೊರಹಾಕಿ ನುಡಿದಳು.

''ಆಳವಾಗಿ ಯೋಚಿಸಿ ನೋಡು! ಈ ಜಾಗತಿಕ ಸತ್ಯಕ್ಕನುಗುಣವಾಗಿ ವಿಶ್ವಶಾಂತಿಯನ್ನು ಮೂಡಿಸಬೇಕಾದರೆ....ಶಕ್ತಿ ಸಮೃದ್ಧ ರಾಷ್ಟ್ರಗಳಿಗೆ 'ಏನು ಬೇಕು' ಎಂಬುದನ್ನು ಹೇಳು!''

ಎಡ್ವರ್ಡ್ ಮಾತಾಡದೆ ಮುಗುಳುನಕ್ಕ.

ಮೇರಿಯ ತುಟಿಗಳು ಬಿರಿಯದಿದ್ದರೂ ನೋಡಿದ ಆ ಕುಡಿನೋಟ ಪುನಃ ಕೇಳಿತು 'ಹೇಳು!'

ಎಡ್ವರ್ಡ್ ಯೋಚಿಸಿದ. ಯೋಚನಾ ತರಂಗಗಳು ಸಾಗರದ ತರಂಗಗಳಂತೆಯೇ ಭುಗಿಲೆದ್ದುವು.

ಈ ವಿಚಿತ್ರ ವಿಶ್ವದಲ್ಲಿ ಕಲಿತವರೂ - ಕಲಿಯದವರೂ, ಸಬಲರೂ-ದುರ್ಬಲರೂ ಹೇಳುವುದೊಂದಾದರೆ ಮಾಡುವುದು ಇನ್ನೊಂದು!

★ ★ ★ ★ ★

''ಜಗತ್ತಿನ ಸರ್ವ ಶ್ರೇಷ್ಠವೂ ಬಹು ಮೂಲ್ಯವೂ ಆದ 'ವಸ್ತು' ಇಂದು ಅಪಮಾನಿತವಾಗಿ ತೊಳಲಾಡುತ್ತಿರುವುದನ್ನು ಹಿರಿಯ ರಾಷ್ಟ್ರಗಳು ಸಾನಂದದಿಂದ ನೋಡುತ್ತಿಲ್ಲವೇ?''

ಹಾ....! ಎಂತಹ ಪ್ರಶ್ನೆ?

ಅಂತರಂಗವನ್ನೇ ಕೊಕ್ಕೆಯಂತೆ ಎಳೆಯುತ್ತಿರುವಂತೆ ಭಾಸವಾಯಿತು. ಎಡ್ವರ್ಡ್ ಮೂರ್ತಿಮತ್ತಾದ.

ಡಾ॥ ಮೇರಿಲೇನ್-ಳ ಶ್ರೀಕಂಠ ಮೊಳಗಿತು.

''ಎಲ್ಲಿಯವರೆಗೆ ರಾಷ್ಟ್ರಗಳಿರುವುವೋ, ಸೈನ್ಯ ಸಂಘಟನೆ-ಅಣ್ವಸ್ತ್ರಗಳ ಉತ್ಪಾದನೆಯಲ್ಲಿ ಪೈಪೋಟಿ ಇರುವುದೋ ಪೌರುಷ-ದರ್ಪಗಳ

ಪ್ರಾಚುರ್ಯವಿರುವುದೋ ಅಲ್ಲಿಯವರೆಗೆ ಈ ವಿಕಟ-ವಿಪ್ಲವ ತಾಂಡವ ನಡೆಯುತ್ತಲೇ ಇರುತ್ತದೆ. ಅದರಲ್ಲಿ ಸೋಜಿಗವಿಲ್ಲ. ಆದರೆ ಈ ಯುಗಧರ್ಮದಲ್ಲಿ-ಪ್ರಚಲಿತ ಮಾನವ ಸಮಾಜದಲ್ಲಿ ರಾಜ್ಯಗಳೇ ಇಲ್ಲದಿರುವುದು ಸೈನ್ಯ ಸಂಘಟನೆಯೇ ಇಲ್ಲದಿರುವುದು ಸಂಪತ್ತಿ ಮೋಹ-ಶಕ್ತಿ ಮೋಹಗಳೇ ಇಲ್ಲದಿರುವುದು ಎಂದಾದರೂ ಸಾಧ್ಯವುಂಟೇ? ಈ ಪ್ರಶ್ನೆಗೆ ಇದುವರೆಗೆ ನನಗೆ ಉತ್ತರ ಸಿಕ್ಕಿಲ್ಲ, ಮುಂದೆಯೂ ಸಿಕ್ಕುವುದಿಲ್ಲ. ಆದರೂ ಸಹ....''

ಎಡ್ವರ್ಡ್ ನಡುವೆ ಬಾಯಿ ಹಾಕಿದ.

''ನಿನ್ನ ದೃಷ್ಟಿಯಲ್ಲಿ ಭ್ರಾತೃಭಾವ-ಜೀವದಯೆ-ಜಾಗತಿಕ ಸತ್ಯ ಎಷ್ಟು ಪ್ರಾಮುಖ್ಯ ಪಡೆದಿವೆ ಎಂಬುದು ನನಗೆ ಗೊತ್ತು! ಕೆಲವು ಸಮಯ ಯಾವುದು ನಡೆಯಬಾರದು ಎಂದು ನಾವು ಆಶಿಸುತ್ತೇವೋ ಅದೇ ವಿಧಿವತ್ತಾಗಿ ನಡೆದು ಹೋಗುತ್ತೆ....ನಾವು ನೋಡುತ್ತಲಿದ್ದರೂ ಆಗ ಏನೂ ಮಾಡಲಿಕ್ಕಾಗುವುದಿಲ್ಲ.''

''ಅಂತಹ ಸಂದರ್ಭದಲ್ಲಿ ಬಿಡು; ಆದರೆ ಉದ್ದೇಶಪೂರ್ವಕವಾಗಿ ನಡೆಯುವುದನ್ನು ನೋಡುತ್ತ ಕೂಡುವುದು ಸರಿಯಲ್ಲ.''

''ಏನು ಮಾಡು ಅನ್ನುತ್ತಿ?'' ಎಡ್ವರ್ಡ್ ಹಾಸ್ಯಪ್ರಧಾನವಾಗಿ ನಕ್ಕ.

ಡಾ|| ಮೇರಿ ಅದಕ್ಕೆ ಪ್ರತಿಹಾಸವನ್ನು ತೋರದೆ ತನ್ನ ಕಂಠವನ್ನು ಹರಿಯಬಿಟ್ಟಳು,

''ಉದಾಹರಣೆಗಾಗಿ ನಮ್ಮ ಪಕ್ಕದ ರಾಜ್ಯ 'ಹೈಟಿ'ಯನ್ನು ತೆಗೆದುಕೊ. ಅಲ್ಲಿನ ಸರ್ವಾಧಿಕಾರಿ ಪಾಪಾ ಡುವಾಲಿಯರ್-ಗೆ ಅಮೆರಿಕ ತಿಳಿದೂ ತಿಳಿದು ಸಹಾಯ ಹಸ್ತ ನೀಡುವುದೆಂದರೆ....? ಅಜ್ಞಾನದ ಅಂಧಕಾರದಲ್ಲಿ ನರಳುವ ಜನತೆಯ ಮೇಲೆ ನಿರಂಕುಶ ಕ್ರೌರ್ಯ ನಡೆಯುವುದನ್ನು ಕಣ್ಣಿಂದ ನೋಡಿಯೂ ಸಹ....? ಹೋಗಲಿ ಅವನು ಸತ್ತ ಎಂದರೆ ಅವನ ಮಗನನ್ನು ಸರ್ವಾಧಿಕಾರಕ್ಕೇರಿಸಿ ಸೈನ್ಯಬಲ-ಪೋಲೀಸ್ ದಳ ಪುಷ್ಟಿಗೊಳಿಸುವಂತಹ ಹೀನ ಕೆಲಸ ಮಾಡುವುದೇ?'' ಎಂದಳು ಮೇರಿ. ಅಕ್ಷರ ಅಕ್ಷರಗಳು ಅಸಮಾಧಾನಪೂರ್ವಕವಾಗಿ ಹರಿದು ಬಂದಾಗ ಕಂಠಸ್ವರ ಅತ್ಯಂತ ವಿಜಾತೀಯವಾಗಿತ್ತು. ಕೆನ್ನೆಗಳು ರಂಗೊರೆದಂತೆ ಕೆಂಪು ತಳೆದುವು.

ಡಾ|| ಎಡ್ವರ್ಡ್ ಹೌದು ಎಂಬಂತೆ ತಲೆದೂಗಿದ, ಮಾತಾಡಲಿಲ್ಲ.

''ವಿಯಟ್ನಾಮಿನ ಯುದ್ಧ ಮುಗಿಸುವ ಇರಾದೆಯ ಮೇಲೆ ಅಧಿಕಾರಕ್ಕೆ ಬಂದ ಈಗಿನ ಸರ್ಕಾರ ಮಿಲಿಯನ್‌ಗಟ್ಟಲೆ ಸುಡುಮದ್ದು ಹಾಕಿರುವುದನ್ನು ಜಗತ್ತು ನೋಡುತ್ತಿಲ್ಲವೇ? ನಿರಪರಾಧೀ ನಾಗರಿಕರ ಕಗ್ಗೊಲೆ; ಸ್ತ್ರೀಯರ ಮಕ್ಕಳ ಮಾರಣ ಹೋಮ; ಅಣುತೃಣಗಳ ಬೇರನ್ನೂ ಬಿಡದಂತಹ ಸಮಗ್ರ ಜೀವಾಜೀವಕೋಟಿಯ

ಸ್ರೋತಸ್ಸನ್ನು ನಿರ್ನಾಮ ಮಾಡಿರುವ ಭಯಂಕರ ಬಾಂಬ್ ಧಾಳಿಗೆ ವಿಶ್ವಸಂಸ್ಥೆ ಏನುತ್ತರ ಹೇಳುತ್ತದೆ? ತಾನಿಂತಹ ಪಾಪಕೂಪದಲ್ಲಿ ಕಾಲೂರಿದ್ದರೂ 'ಕೆಲವೆಡೆ ಪಾಕಿಸ್ತಾನದ ನಾಗರಿಕರನ್ನು ಭಾರತ ಕೊಲೆಗೈದಿದೆ' ಎಂದು ರೋದಿಸುವುದರಲ್ಲಿ ಅರ್ಥವಿದೆಯೆ?''

ಇಬ್ಬರ ಮುಖದಲ್ಲೂ ತಿರಸ್ಕಾರದ ಸಣ್ಣನಗೆ ಅರಳಿ ಮಾಯವಾಯಿತು.

ಏನೋ ಒಂದು ರೀತಿಯಲ್ಲಿ ಮಂತ್ರಿತನಂತೆ, ಅಭಿಭೂತನಂತೆ ಸ್ವಲ್ಪ ಹೊತ್ತು ಕುಳಿತಿದ್ದ ಎಡ್ವರ್ಡ್ ಅನಂತರ ಲೋಕಾಭಿರಾಮವಾಗಿ ನುಡಿದ, ''ಎಲ್ಲಾ ಕಡೆಯೂ ಇಂತಹ ಲೋಪದೋಷಗಳು ಇರುವುದು ಅನಿವಾರ್ಯ. ಕಾರ್ಯದರ್ಶಿನಿಯಾಗಿ ನೀನು ಅದನ್ನೆಲ್ಲ ಬೆದಕುತ್ತಿದ್ದಲ್ಲಿ ಅಭಾಸವೆನಿಸುತ್ತದೆ. ಬ್ರಿಟನ್, ಫ್ರಾನ್ಸ್‌ಗಳ ತಟಸ್ಥ ಧೋರಣೆ, ಭಾರತದ ಅಲಿಪ್ತ ನೀತಿ ಅನುಸರಿಸುವುದು ಲೇಸು!''

ಡಾ॥ ಮೇರಿಲೇನ್ ಬಾಯ್ದೆರೆದು ಗಟ್ಟಿಯಾಗಿ ನಕ್ಕುಬಿಟ್ಟಳು.

ಡಾ॥ ಎಡ್ವರ್ಡನೂ ನಗುವಿನ ಲಹರಿಯನ್ನು ಹರಿಯಬಿಟ್ಟ.

★ ★ ★ ★ ★

ಹೊತ್ತು ಮೇಲೇರುತಿದ್ದರೂ ಡಾ॥ ಮೇರಿಲೇನ್ ಹಾಸಿಗೆ ಬಿಟ್ಟದ್ದಿರಲಿಲ್ಲ. ಕೈತುಂಬ ಕೆಲಸವಿದ್ದರೂ ಮಾಡುವ ಉತ್ಸುಕತೆಯೇ ಇಲ್ಲ. ಏನೋ ಒಂದು ರೀತಿಯ ಅನಿಚ್ಛೆ....ಇನ್ನೇನೋ ಒಂದು ರೀತಿಯ ಗ್ಲಾನಿ....ಮತ್ತೇನೋ ಒಂದು ರೀತಿಯ ದುಃಖ ಯೋಚಿಸಿದರೂ ಏನೆಂಬುದು ಅರ್ಥವಾಗದು....ಕೆಲಸ ಮಾಡುತ್ತೇನೆಂದರೂ ಸಾಧ್ಯವಾಗದು. ಕಾಷ್ಠ ಪ್ರತಿಮೆಯಂತೆ ಹಾಗೇ ಬಿದ್ದುಕೊಂಡಿದ್ದಾಳೆ. ಎದ್ದು ಚಹ ಮಾಡಿಕೊಳ್ಳುವ ಮನಸ್ಸೂ ಮೂಡಿರಲಿಲ್ಲ. ಕಛೇರಿಗೆ ಹೋಗುತ್ತ ಹಾದಿಯಲ್ಲಿ ಹೋಟೆಲಿಗೆ ಹೋದರೆ ಸರಿ ಎಂಬಷ್ಟು ಆಲಸ್ಯ....ಏನಾದರಾಗಲಿ ಇಂದಿಷ್ಟು ವಿಶ್ರಾಂತಿ ಬೇಕು ಎಂಬಷ್ಟು ವಿವೇಚನೆ....ಹೃದಯ ಮೃದಂಗ ತೀವ್ರಗತಿಯಲ್ಲಿ ಮಿಡಿಯುತಿತ್ತು....

ಒಮ್ಮೆ ಕೆಲಸಕ್ಕೆ ರಾಜೀನಾಮೆ ಕೊಟ್ಟು ಚಿಕಾಗೊ-ಗೆ ಹೋಗಿಬಿಡಲೇ ಎಂಬ ಯೋಚನೆ ಮೂಡಿದರೆ ಇನ್ನೊಮ್ಮೆ ಈಗಲೇ ಏಕಷ್ಟು ಅವಸರ....? ಕೆಲವು ಕಾಲ ಕಾದು ನೋಡುವ ಎಂಬ ಸಹಾನುಭೂತಿ. ಭಾವವಿಭಾವಗಳ ಅಕಾಂಡತಾಂಡವ ನೃತ್ಯವೈಖರಿಯಲ್ಲಿ ಹೃದಯ ದಣಿಯಿತು. ಚಿದಾಕಾಶದಲ್ಲಿ ದಟ್ಟ ಕಾರ್ಮೋಡಗಳು ಕವಿದುವು....ಯೋಚಿಸಲೂ ಮನಸಿಲ್ಲ. ಏನಾದರೂ ಆಗಲಿ ಎಂಬ ವಿಳಂಬ

ಮನೋಭಾವಕ್ಕೆ ಶರಣಾಗಿ ಹಾಗೇ ಬಿದ್ದುಕೊಂಡಿದ್ದಾಳೆ. ಹಾಗೆ ಅದೆಷ್ಟು ಹೊತ್ತು ಉರುಳಿತೋ. ಕಿಟಕಿಯಲ್ಲಿ ಸೂರ್ಯ ರಶ್ಮಿಗಳು ಮೈಚಾಚಿ ಬೆಚ್ಚನ್ನ ಮುದ್ದಿಟ್ಟುವು.

ತಲೆಬಾಗಿಲ ಕರೆಗಂಟೆ ಗಂಭೀರ ದನಿಯಲ್ಲಿ ಕರೆನೀಡಿತು.

ಎದ್ದು ಹೋಗಿ ಕದ ತೆರೆದಳು. ಬಾಗಿಲ ಬಳಿ ಮುದ್ದು ಮುದ್ದಾಗಿ ನಿಂತವಳು ಅಚ್ಚ ಕಪ್ಪು ಕಣ್ಣಿನ ಹುಡುಗಿ ಕೃಪಾಚಂದ್ರಶೇಖರ್. ಅವಳ ತಲೆಯ ಮೇಲೆ ಮುಕ್ತ ಹಸ್ತವನ್ನಿಟ್ಟು ''ಅಹಾ! ಎಂತಹ ಅನಿರೀಕ್ಷಿತ?' ಎಂದಳು ಡಾ|| ಮೇರಿಲೇನ್. ಹೃದಯ ಅರಳಿ ಹೂವಾಯಿತು. ಹವಳದ ಕುಡಿಯಂತಹ ತುಟಿಗಳಲ್ಲಿ ಮಂದಸ್ಮಿತ ನಲಿದಾಡಿತು. ಅತ್ಯಂತ ಆತ್ಮೀಯತೆಯಿಂದ ಒಳಬರಮಾಡಿಕೊಳ್ಳುತ್ತ ಕೇಳಿದಳು ''ಹೇಗಿದೆ ನಿನ್ನ ಓದುಗಾರಿಕೆ?''

''ಸಾಮಾನ್ಯ ಡಾಕ್ಟರ್! ನೀವಿಲ್ಲದೆ ಎಲ್ಲಾ ಸಪ್ಪೆ....ಸಪ್ಪೆ!''

''ಹಾ! ನಿಜವಾಗಿ?''

''ಹೌದು, ಎಲ್ಲಾ ವಿದ್ಯಾರ್ಥಿಗಳೂ ನೀವಿಲ್ಲದೆ ವ್ಯವಸ್ಥೆ ಹದಗೆಡುತ್ತಿದೆ ಎಂದು ದೂರಿಡುತಿದ್ದಾರೆ.''

''......''

ಡಾ|| ಮೇರಿಲೇನ್ ಒಂದು ಘಳಿಗೆ ಮರವಟ್ಟಂತೆ ಸುಮ್ಮನಾದಳು. ಮುಖಮಂಡಲ ಬಾಡಿ ಹೋಯಿತು.

''ನೀವಿನ್ನೂ ಮುಖಮಜ್ಜನ ಮಾಡಿದಂತಿಲ್ಲ, ಹೌದೆ?''

''ಹೌದಮ್ಮ; ಯಾಕೋ ತುಂಬ ಆಲಸ್ಯ....ಏಳಲು ಮನಸ್ಸೇ ಆಗಿರಲಿಲ್ಲ.''

''ನೀವು ತೊಳೆದುಕೊಳ್ಳಿ, ನಾನಿಷ್ಟು ಒಳಗೆ ನೋಡಿಕೊಳ್ಳುವೆ.''

ಡಾ|| ಮೇರಿಲೇನ್ ಶೌಚದ ಮನೆಗೆ ಹೋಗುತ್ತಲೂ ಅಲ್ಲಿ ಇಲ್ಲಿ ಕೈಯ್ಯಾಡಿಸಿದಳು ಕೃಪಾ. ಮೇಜಿನ ಮೇಲೆ ಹರಡಿ ಬಿದ್ದಿದ್ದ ಮಾಸಿಕ ದೈನಿಕಗಳು ಓರಣವಾಗಿ ಕುಳಿತುವು. ಹಾಸಿಗೆಯ ಮೇಲಿನ ದುಪ್ಪಟಿ ಕಳಚಿದ ಬಟ್ಟೆಗಳು, ಟವಲ್ಲುಗಳು ಬುಟ್ಟಿಯನ್ನು ಕಂಡುವು. ಮನೆಯೆಲ್ಲಾ ಅರೆತಾಸಿನಲ್ಲಿ ಮೈಕೊಡವಿ ಮಡಿಯುಟ್ಟಿತು. ಡಾ|| ಮೇರಿಲೇನ್ ಹೊರಬಂದವಳೇ ಕಣ್ಣರಳಿಸಿ,

''ಹಾ....! ಬಹಳ ಉಪಕಾರವಾಯ್ತು! ನೀನು ತುಂಬ ಜಾಣೆ! ನನಗೆ ನಿನ್ನಂತಹ ಒಬ್ಬ ಮಗಳಿದ್ದಿದ್ದರೆ ಎನಿಸುತ್ತೆ ಈಗ!''

ತನ್ನ ಓರಗೆಯವರಿಗಾಗಿದ್ದರೆ ''ಮದುವೆಯಾಗಿ ಬಿಡಿ'' ಎನ್ನುತ್ತಿದ್ದಳೇನೋ ಕೃಪಾ. ಆದರೆ....ಆ ದೊಡ್ಡವರ ಮುಂದೆ ಹಾಗೆನ್ನಲು ಮನಸ್ಸು ಮುಂದಾಗಲಿಲ್ಲ.

ನುಡಿ ನಾಲಿಗೆಯಲ್ಲಿಯೇ ಉಳಿಯಿತು. ಅರಳು ಕಣ್ಣುಗಳ ಭಾವವನ್ನು ಚಿಂತಾಮಗ್ನೆಯಾಗಿದ್ದ ಅವಳು ಗ್ರಹಿಸಲಿಲ್ಲವೇನೋ....

''ನಿಮಗೆ ಚಹ ಮಾಡಲೇ ಡಾಕ್ಟರ್?''

''ನಿನಗೆ?''

''ನನ್ನದಾಗಿದೆ.''

''ಮಾಡು....ನಿನ್ನ ಕೈರುಚಿಯನ್ನೂ ಸ್ವಲ್ಪ ನೋಡುವುದಿದೆ.''

ಕೃಪಾ ತನ್ನೆಲ್ಲ ಹಲ್ಲುಗಳನ್ನೂ ಪ್ರದರ್ಶನ ಮಾಡಿ ''ಬಹುಶಃ ಇಂದಿಗೆ ನನ್ನ ಚಹ 'ಸಾಕು' ಎನ್ನಿಸಲೂ ಬಹುದು ನಿಮಗೆ!'' ಎಂದಳು. ಪ್ರಫುಲ್ಲ ವದನದಲ್ಲಿ ತುಂಟತನ ನಲಿಯಿತು.

ಡಾ॥ ಮೇರಿಲೇನಳ ಮುಖಬಿಂಬ ಸಾನುರಾಗದಿಂದ ವರ್ಣರಂಜಿತವಾಯಿತು.

★ ★ ★ ★ ★

ಟೆಲಿವಿಷನ್ ಪ್ರಸಾರ....ರಾಜಕೀಯ ಧುರೀಣನೊಬ್ಬ ಕಂಠಶೋಷಣೆ ನಡೆಸಿದ್ದ. ಅಧ್ಯಕ್ಷರ ಚೀನಾ ಪ್ರವಾಸ ಕಟು ಟೀಕೆಗೊಳಗಾಗಿತ್ತು. ೧೯೭೨ ಫೆಬ್ರವರಿ ೨೧ರಿಂದ ೨೮ರವರೆಗಿನ ದಿನಗಳಲ್ಲಿ ಪೀಕಿಂಗ್, ಹ್ಯಾಂಗ್‌ಚೋ ಮತ್ತು ಷಾಂಗೈಗಳಲ್ಲಿ ಚೀಣದ ಮುಖಂಡರೊಡನೆ ನಡೆಸಿದ ಭೇಟಿ, ಮಾತುಕತೆ ಮತ್ತು ಎರಡೂ ಕಡೆಯ ರಾಷ್ಟ್ರಾಧ್ಯಕ್ಷರ ಜಂಟಿ ಹೇಳಿಕೆಗಳ ವಿಶ್ಲೇಷಣೆ ಗಂಭೀರವಾಗಿ ನಡೆದಿತ್ತು.

ಡಾ॥ ಮೇರಿಲೇನ್ ಕೃಪಾ ಚಂದ್ರಶೇಖರಳೊಂದಿಗೆ ಕುಳಿತು ತುಟಿ ಪಿಟಿಕ್ಕೆನ್ನದೆ ಕೇಳುತಿದ್ದಳು. ಮುಖಬಿಂಬದಲ್ಲಿ ಭಾವವಿಭಾವಗಳ ಅಲೆ ತರಂಗ ತರಂಗವಾಗಿ ಹರಿದಾಡುತ್ತಿದ್ದುದನ್ನು ಸೂಕ್ಷ್ಮಮತಿ ಕೃಪಾ ಅವಲೋಕಿಸಿದರೂ ಬಾಯ್ದೆರೆಯಲು ಮನಸ್ಸಾಗದೆ ಸುಮ್ಮನೆ ಕುಳಿತಿದ್ದಳು. ಹೃದಯ ಮಸ್ತಿಷ್ಕಗಳು ಗಂಭೀರಗತಿಯಲ್ಲಿ ಚಿಂತಾಸ್ನಾನ ಮಾಡುತ್ತಿದ್ದುವು.

ಆ ಕಾರ್ಯಕಲಾಪ ಕೊನೆಗೊಂಡನಂತರ ಸ್ವಿಚ್ಛ್ ತೆಗೆದು ಡಾ॥ ಮೇರಿಲೇನ್ ನುಡಿದಳು,

''ನಾನು ವಿಶ್ವಸಂಸ್ಥೆಗೆ ಕಾಲಿಟ್ಟು ಆರು ಮಾಸಗಳು ಕಳೆದುವೇನೋ....ಆದರೆ ಆರು ಸಂವತ್ಸರಗಳು ಕಳೆದಂತಾಗಿದೆ''

ಕೃಪಾ ಮಾತಾಡಲಿಲ್ಲ. ಅವಳ ಕುತೂಹಲತೃಷಿತ ನೋಟವೇ ಕೇಳಿತು ''ಅಂದರೆ?''

''ನಾನು ಜನರಲ್ ಅಸೆಂಬ್ಲಿಯನ್ನು ಮೊಟ್ಟಮೊದಲು ನೋಡಿದಾಗ ಒಂದೆರಡು ದಿನ ಆಕರ್ಷಿತಳಾದೆ ಎನ್ನಬಹುದು.... ಅನಂತರ ತುಂಬ ನಿರಾಶಾದಾಯಕ ಎನಿಸಿತು. ರಾಷ್ಟ್ರ ರಾಷ್ಟ್ರಗಳ ಪ್ರತಿನಿಧಿಗಳು-ಅವರ ಧೋರಣೆ ಮನುಕುಲದಿಂದ 'ದೂರ' ಇಡಬಹುದು ಎಂಬಷ್ಟು 'ಜುಗುಪ್ಸೆ'ಯನ್ನು ಮನಸ್ಸಿಗೆ ಮೂಡಿಸುತ್ತದೆ. ಮೇಲಾಗಿ ನಮಗೆ ವಾಕ್ ಸ್ವಾತಂತ್ರ್ಯವಿಲ್ಲ. ಯಾಂತ್ರಿಕವಾಗಿ ದುಡಿದು ಯಾಂತ್ರಿಕವಾಗಿ ಹೊರಬೀಳುತ್ತೇವೆ! ಚಿಕಾಗೊ-ದಲ್ಲಿನ ಸ್ನೇಹ-ಪ್ರೇಮ-ವಿಶ್ವಾಸಗಳ ಒಂದಂಶವೂ ಇಲ್ಲಿ ದೊರೆಯುವುದಿಲ್ಲ. ಅಲ್ಲಿ ವರ್ಷೇ ವರ್ಷೇ ಮನುಕುಲದ ಮಾನಸಿಕ-ಬೌದ್ಧಿಕ ದೈಹಿಕ ಸಂಪತ್ಸಮೃದ್ಧಿಗಾಗಿ ದುಡಿದು ಕಸ್ತೂರಿ ಪರಿಮಳವನ್ನು ಪೂಸಿ ಕಸ್ತೂರಿ ಪರಿಮಳವನ್ನು ಪಡೆಯುತ್ತೇವೆ! ಇಲ್ಲಿ....?

....ಇಲ್ಲಿ....?

ಆ ಪ್ರಶ್ನೆ ಮನೋಗಾರವನ್ನು ಕೂರಿಗೆಯಂತೆ ಹೊಕ್ಕಿತು. ಒಂದೆರಡು ಕ್ಷಣ ತಬ್ಬಿಬ್ಬಾದರೂ ಕೃಪಾ ಒಂದೇ ಬಾರಿಗೆ ತನ್ನ ಅಭಿಪ್ರಾಯವನ್ನು ಹೊರಹಾಕಿದಳು,

''ಹಾಗಿದ್ದರೆ ಇಂದೇ ಹೊರಡಿ ಡಾಕ್ಟರ್!''

ಡಾ॥ ಮೇರಿಲೇನ್ ಪ್ರೇಮಾನಂದದಿಂದ ಅವಳ ಸ್ನೇಹ ಹಸ್ತವನು ಅದುಮಿ ಹಿಡಿದಳು.

- ಮಂಗಳಂ -

★ ಇದನ್ನು ೨-೩-೧೯೭೨ರಲ್ಲಿ ಬರೆಯಲಾಯಿತು.

ಮಲ್ಲಿಕಾ ಕೃತಿಗಳು (ಕಾದಂಬರಿಗಳು)

೧. ಜೀವನಗಂಗಾ
೨. ಡಾ|| ಅಘೋರ
೩. ಡಾ|| ಕಮಲೇಶ್
೪. ವಂದೇಮಾತರಂ
೫. ಅನಂತಾನಂತದಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ
೯. ಪದ್ಮಾಲಯ
೧೦. ಶ್ರದ್ಧಾಲಯ
೧೧. ಕಮಲಾನಿ ಕಥಾ
(ಕಥಾ ಸಂಕಲನ)
೧೨. ಬಹುರತ್ನಾವಸುಂಧರಾ
೧೩. ರತ್ನಗರ್ಭಾವಸುಂಧರಾ
೧೪. ಸುಧಾಮಣಿ
೧೫. ರಮಣೀಮಣಿ
೧೬. ಲಿಯೋನಾ
೧೭. ಶ್ರೀಮುಖಿ
೧೮. ಶ್ರೀಹರ್ಷಲಾ
೧೯. ವೈಶಾಖೀಪರ್ವ
೨೦. ಫಾಲ್ಗುಣೀಪರ್ವ
೨೧. ಮಣಿಮೇಖಲಾ
೨೨. ಮಣಿಕರ್ಣಿಕಾ
(ಕವಿತಾ ಸಂಕಲನ)
೨೩. ಪೂಜಾವಸಾನ ಸಮಯೇ......!
೨೪. ಧ್ಯಾನಾವಸಾನ ಸಮಯೇ......!
೨೫. ಗಗನ ಕುಸುಮ
೨೬. ಜೀವನ ಕುಸುಮ
೨೭. ಚಂಪಕರಾಜಿ
೨೮. ಬಕುಳ ರಾಜಿ
೨೯. ಕಸ್ತೂರಿ ಮಾಲಿಕಾ
೩೦. ಮಂದಾರ ಮಾಲಿಕಾ
೩೧. ವಿಜಯ ಗಾಥಾ
೩೨. ಗಾನ ತೀರ್ಥ
೩೩. ನಾದ ಬಿಂದು
೩೪. ಕಾವ್ಯಾನಂದ
೩೫. ಭಾವಾನಂದ ನಂದಿನಿ
೩೬. ಸಂಗೀತ ಪುಷ್ಪಾಂಜಲಿ
೩೭. ಆತ್ಮ ಗೀತಾಂಜಲಿ
(ಸಂಜೀವನ ಕಾವ್ಯ)
೩೮. ಮಂಗಳ ಭಾರತಿ
೩೯. ಕಲ್ಯಾಣ ಭಾರತಿ
೪೦. ಉತ್ತರೋತ್ತರಣಿ
೪೧. ರಾಗಾನುರಾಗಿಣಿ
೪೨. ಪ್ರಫುಲ್ಲ ಭಾರತ
(ಪೌರಾಣಿಕ ನಾಟಕ)
೪೩. ಪುಣ್ಯಾಭಿಸಾರ
೪೪. ಪುಣ್ಯಪಯೋನಿಧಿ
(ಸಾನೆಟ್‌ಗಳು)
೪೫. ತರಂಗಿಣಿ
(ಗದ್ಯಕಾವ್ಯ)
೪೬. ಐಂದ್ರ ಕೀರ್ತಿ ಕೇತನಂ
(ಉಪನಿಷತ್ಕಥಾ)
೪೭. ಕೃತಂ ಸ್ಮರ ಕ್ರತುಂ ಸ್ಮರ
(ಶಿಶುಸಾಹಿತ್ಯ)
೪೮. ದೂರ ದೇಶದಲ್ಲಿ
೪೯. ಬೆಳದಿಂಗಳ ರಾತ್ರಿ
೫೦. ರಂಗನ ಸಾಹಸ
೫೧. ಓಹಿಯೋಜ ಸರೋವರ
೫೨. ಕೌಶಿಕನ ಗೊಂಬೆ
೫೩. ವಿಶೇಷ ಸುದ್ದಿ
೫೪. ಕಲ್ಯಾಣಿ ರಾಗಿಣಿ
(ಮಹಾಕಾವ್ಯ)
೫೫. ಶ್ರೀ ವಿವೇಕಾನಂದ ವಿಜಯಂ